ಅರ್ಥ ಮಾಡಿಕೊಂಡು ತಮ್ಮ ಭಾಷಣದ ಸಮಯದ ಮಿತಿಯನ್ನು ಜ್ಞಾಪಿಸಿಕೊಂಡು ತಮ್ಮ ಮೇಲೆ ತಮ್ಮ ಸಮಯದ ನಿಯಂತ್ರಣವನ್ನು ಮಾಡಿಕೊಂಡು ನನಗೆ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೆ, ನಾವು ಮಾತನಾಡುವಾಗ ಕಾಲ ಮಿತಿಯ ಬಗ್ಗೆ ಗಮನ ಇಟ್ಟು ಮಾತನಾಡುತ್ತೇವೆ ಆದರೆ ಸಭೆಯು ಹೊಸ ಸದಸ್ಯರಿಗೆ ಸ್ವಲ್ಪ ವಿನಾಯಿತಿಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಆಯಿತು, ಮೈಡನ್ ಸ್ಪೀಚ್‌ಗೆ ಸ್ವಲ್ಪ ವಿನಾಯಿತಿ ಇರುತ್ತದೆ.

ಶ್ರೀ ಕೆ. ಎಂ. ಶಿವಕುಮಾರ್.—ಯುವ ಸದಸ್ಯರಿಗೆ ಸ್ವಲ್ಪ ಕಾಲಾವಕಾಶ ಹೆಚ್ಚಿಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ವಿತ್ತೀಯ ಕಾರ್ಯಕಲಾಪಗಳು

೧೯೯೦–೯೧ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ

ಅಧ್ಯಕ್ಷರು.—ಶ್ರೀ ಬಿ. ಎಸ್. ಯಡಿಯೂರಪ್ಪ ತಮ್ಮ ಭಾಷಣವನ್ನು ಪ್ರಾರಂಭಿಸಿ.

† ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು ೧೯೯೦–೯೧ ನೇ ಸಾಲಿನ ಆಯವ್ಯಯ ಪತ್ರವನ್ನು ಮಂಡಿಸಿರತಕ್ಕಂಥ ಸಂದರ್ಭದಲ್ಲಿ ಅದರ ಮೇಲಿನ ಚರ್ಚೆಯಲ್ಲಿ ಭಾಗವಹಿಸಿದಂಥ ಅನೇಕ ಜನ ಮಾನ್ಯ ಸದಸ್ಯರುಗಳು, ಹಿರಿಯ ಸದಸ್ಯರುಗಳು ಈ ಒಂದು ಆಯವ್ಯಯದಲ್ಲಿರುವಂಥ ಲೋಪದೋಷಗಳನ್ನು ಎತ್ತಿ ಹಿಡಿಯುವಂಥ ಪ್ರಯತ್ನವನ್ನು ಮಾಡಿದ್ದಾರೆ. ಅಂತೆಯೇ ಅದರಲ್ಲಿರುವಂಥ ಒಳ್ಳೆಯ ಕಾರ್ಯಕ್ರಮಗಳ ಬಗ್ಗೆ ಪ್ರಶಂಸಿಸಿ ಅನೇಕ ಹಿರಿಯ ಸದಸ್ಯರು ಮಾತನಾಡಿದ್ದಾರೆ. ನಾನಾದರೂ ಈ ರಾಜ್ಯದಲ್ಲಿ ಜನರು ಬದಲಾವಣೆಯನ್ನು ಬಯಸಿ ಹೊಸ ಸರಕಾರವನ್ನು ಅಧಿಕಾರಕ್ಕೆ ತಂದಮೇಲೆ ಜನಪರ ಕಾರ್ಯಕ್ರಮಗಳನ್ನು ನೂತನ ಸರಕಾರ ರೂಪಿಸುತ್ತದೆ ಎಂದು ಭಾವಿಸಿದ್ದೆ. ಆದರೆ ಹಾಗೆ ಆಗಿಲ್ಲ. ಹಳ್ಳಿಗಳಲ್ಲಿರುವ ಬಡ ಕೂಲಿಗಾರರನ್ನು, ಕೃಷಿ ಕಾರ್ಮಿಕರನ್ನು ಹರಿಜನ-ಗಿರಿಜನರನ್ನು ಮೇಲೆ ತರುವಂಥ ಯಾವುದಾದರೂ ಹೊಸ ಕಾರ್ಯಕ್ರಮಗಳನ್ನು ಈ ಬಜೆಟ್‌ನಲ್ಲಿ ಕಾಣಬಹುದು ಎಂದು ನಿರೀಕ್ಷೆ ಮಾಡಿದ್ದೆ. ಆದರೆ ಈ ರಾಜ್ಯದ ರೈತ ಕಾರ್ಮಿಕರಿಗೆ, ಹರಿಜನ–ಗಿರಿಜನರಿಗೆ, ಕೂಲಿಗಾರರಿಗೆ ಮಹಿಳೆಯರಿಗೆ, ನಿರುದ್ಯೋಗಿ ಯುವಕರಿಗೆ ಅವರ ನೆಮ್ಮದಿಯ ಜೀವನಕ್ಕೆ ದಾರಿ ಮಾಡಿಕೊಡುವಂಥ ಯಾವುದೇ ಕಾರ್ಯಕ್ರಮ ಈ ಬಜೆಟ್‌ನಲ್ಲಿ ಇಲ್ಲವಲ್ಲ ಎಂದು ತಿಳಿಸುವುದಕ್ಕೆ ನನಗೆ ತುಂಬಾ ನೋವು ಆಗುತ್ತಾ ಇದೆ.

ಬಜೆಟ್ ಭಾಷಣದ ೬ನೇ ಪುಟದಲ್ಲಿ ಹೇಳಿರುವಂತೆ,

> “ಪಟ್ಟಣ ಮತ್ತು ನಗರ ಪ್ರದೇಶಗಳಿಗೆ ಹೆಚ್ಚು ಜನರು ವಲಸೆ ಹೋಗುತ್ತಿರುವ ಕಾರಣ ನಗರ ಗ್ರಾಮೀಣ ಕ್ಷೇತ್ರದಲ್ಲಿ ತೀವ್ರ ಬದಲಾವಣೆ ಉಂಟಾಗುತ್ತಿದೆ. ಇದಕ್ಕೆ ಬೆಂಗಳೂರು ನಗರವೇ ಒಂದು ಉತ್ತಮ ನಿದರ್ಶನ. ಗ್ರಾಮೀಣ ಪ್ರದೇಶಗಳಿಗೆ ವಿಶೇಷ ಗಮನ ನೀಡುವುದರ ಜೊತೆಗೆ ಪಟ್ಟಣ ಮತ್ತು ನಗರಗಳ ಪರಿಸರ ಹದಗೆಡದಂತೆ ನೋಡಿಕೊಳ್ಳುವುದು ಅತ್ಯಗತ್ಯ''

ಎಂದು ಹೇಳಿದ್ದಾರೆ.

ಅಂದರೆ ಸರಕಾರದ ದೃಷ್ಟಿಯಲ್ಲಿ ಗ್ರಾಮೀಣ ಜನತೆಯು ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಾ ಇದ್ದಾರೆ, ಅವರು ಅಲ್ಲಿ ನೆಮ್ಮದಿಯಿಂದ ಇಲ್ಲ ಎಂದು ಸ್ಪಷ್ಟಪಡಿಸಿದ ಮೇಲೆ ಈ ಬಜೆಟ್‌ನಲ್ಲಿ ಗ್ರಾಮೀಣ ಜನತೆಯ ಬಗ್ಗೆ ಏನಾದರೂ ಕಾರ್ಯಕ್ರಮಗಳನ್ನು ಇಡಬೇಕಾಗಿತ್ತು ರಾಜ್ಯದ ಮುಂಗಡ ಪತ್ರ ಅಂದರೆ, ಅದರಲ್ಲಿ ಮೂರು ವಿಷಯಗಳು ಪ್ರಾಮುಖ್ಯವಾಗಿ ಇರಬೇಕು ಮುಂಗಡ ಪತ್ರವು ಯಾರನ್ನು ಉದ್ದೇಶಿಸಿ ಇರುತ್ತದೆ ಎನ್ನುವುದು ಮುಖ್ಯ. ಇದರಲ್ಲಿ ಹೆಚ್ಚಿನ ಅವಕಾಶವನ್ನು ಸವಲತ್ತುಗಳನ್ನು, ಶೇಕಡಾ ೮೦ರಷ್ಟು ಕೃಷಿ ಕ್ಷೇತ್ರದಲ್ಲಿರುವ ಅದರಲ್ಲಿ ಶ್ರಮಿಸುತ್ತಿರುವವರ ಏಳಿಗೆಗೋಸ್ಕರವಾಗಿ ಏನು ಕಾರ್ಯಕ್ರಮಗಳು ಇವೆ ಎಂದು ನೋಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಹಿನ್ನೆಲೆಯಲ್ಲಿ ಮುಂಗಡಪತ್ರದ ದಿಕ್ಕು ಏನಿರಬೇಕು ಎಂದು ಸ್ಪಷ್ಟನೆ ಮಾಡುವಂತಹ ಕೆಲಸವನ್ನು ಅವರು ಮಾಡಬೇಕಾಗಿತ್ತು. ನಾನು ಅಂದುಕೊಂಡಂತೆ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸದಿದ್ದರೆ ರಾಜ್ಯದ ಅಭಿವೃದ್ಧಿ ಸಾಧ್ಯವಿಲ್ಲ. ಕೃಷಿ ಕ್ಷೇತ್ರವನ್ನು

ದಾರಿದ್ರ್ಯದಲ್ಲಿಟ್ಟು ಅಭಿವೃದ್ಧಿ ಸಾಧಿಸುತ್ತೇವೆಂದು ಹೇಳುವುದು ಸುಳ್ಳಾಗುತ್ತದೆ. ಅಂಥ ಪರಿವರ್ತನೆಯ ಯಾವ ಶಬ್ದವೂ ಇಲ್ಲಿ ಕಾಣುವುದಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಮೊದಲನೆಯ ದಿವಸ ಮಾತನಾಡುವಾಗ ಈ ಸರ್ಕಾರಿ ಕಛೇರಿಗಳಲ್ಲಿ ಕೆಲಸ ಮಾಡುತ್ತಿರುವ ಅಧಿಕಾರಿಗಳ ವೈಫಲ್ಯವನ್ನು ಕುರಿತು ಮಾತನಾಡುತ್ತಿದ್ದರು ಎಲ್ಲಕಡೆ ಭ್ರಷ್ಟಾಚಾರ ತಾಂಡವವಾಡುತ್ತಿದೆಯೆಂದು ಹೇಳುತ್ತಿದ್ದರು. ಆ [illegible] ಯದಲ್ಲಿ ಶೇಕಡ ೬೦ ರಷ್ಟು ಭಾಗ ಅವರಿಗಾಗಿ ಖರ್ಚು ಮಾಡುತ್ತೇವೆಂದು ಹೇಳುತ್ತಿದ್ದರು. ಸರ್ಕಾರಿ ಸಿಬ್ಬಂದಿ ವೆಚ್ಚದಲ್ಲಿ ಕನಿಷ್ಟ ೧೦ ಪರ್ಸೆಂಟ್ ಉಳಿಸುವ ಪ್ರಯತ್ನ ಮಾಡಿರುವುದು ಇಲ್ಲಿ ಎಲ್ಲಿಯೂ ಕಾಣುತ್ತಿಲ್ಲ ಪಟ್ಟಣ ಪ್ರದೇಶದಿಂದ ಹಳ್ಳಿಗಳಿಗೆ ವಲಸೆ ಹೋಗುತ್ತಾರೆಂದು ಹೇಳಿದ್ದಾರೆ. ಒಂದು ಮಾತನ್ನು ಹೇಳುತ್ತೇನೆ. ಯಾವ ಜಿಲ್ಲೆಯಲ್ಲೂ ಅಲ್ಲಿರುವ ಜಿಲ್ಲಾಧಿಕಾರಿ, ಅಲ್ಲಿರುವ ಸೂಪರಿಂಟೆಂಡೆಂಟ್ ಜನರ ಅಭಿವೃದ್ಧಿಗೋಸ್ಕರ ೨೪ ಗಂಟೆ ಕಾಲ ಏನು ಕೆಲಸ ಮಾಡಬೇಕಾಗಿದೆಯೋ ಅದರ ಬದಲಿಗೆ ಸಂಸಾರವನ್ನು ಬೇರೆ ಕಡೆ ಬಿಟ್ಟು ವಾಸ ಮಾಡುವ ಸ್ಥಿತಿಗೆ ಬಂದಿದ್ದಾರೆ. ವಾರದಲ್ಲಿ ಐದಾರು ದಿವಸ ಅಲ್ಲಿದ್ದು ಎರಡು ದಿವಸ ಇಲ್ಲಿಗೆ ಬರುವಂತಹ ಪರಿಪಾಠ ಇಟ್ಟುಕೊಂಡಿದ್ದಾರೆ. ಅದೇರೀತಿ ತಾಲ್ಲೂಕ್‌ನಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ ಬಿ. ಡಿ. ಓ ತಹಸೀಲ್ದಾರ್ ಮುಂತಾದವರು ಜಿಲ್ಲಾ ಕೇಂದ್ರಗಳಲ್ಲಿ ಸೌಲಭ್ಯಗಳಿರುವುದರಿಂದ ಪ್ರತಿನಿತ್ಯ ತಾಲ್ಲೂಕಿನಿಂದ ಓಡಾಡುತ್ತಿರುವುದನ್ನು ಕಾಣುತ್ತೇವೆ. ಅದೇ ರೀತಿ ಗ್ರಾಮೀಣ ಪ್ರದೇಶಗಳಲ್ಲಿರಬೇಕಾದ ನರ್ಸ್ ವಿಲೇಜ್ ಅಕೌಂಟೆಂಟ್‌ಗಳು ಅನಿವಾರ್ಯವಾಗಿ ತಾಲ್ಲೂಕ್ ಕೇಂದ್ರಗಳಲ್ಲಿ ಇರುತ್ತಿದ್ದಾರೆಯೇ ವಿನಃ ಹಳ್ಳಿಗಳಲ್ಲಿ ವಾಸಮಾಡುತ್ತಿಲ್ಲ. ಕಾರಣ ಗ್ರಾಮೀಣ ಪ್ರದೇಶಗಳಲ್ಲಿ ವಾಸಿಸುವುದಕ್ಕೆ ಬೇಕಾದ ಕನಿಷ್ಟ ಸೌಲಭ್ಯಗಳು ಇಲ್ಲದ ಕಾರಣ ಮನೆಮಂದಿಯ ಚಿಂತೆಯಿಂದ ನಗರ ಪ್ರದೇಶದಲ್ಲಿ ತನ್ನ ಬಂಧು ಬಳಗವನ್ನು ಇಟ್ಟುಕೊಳ್ಳುವಂತಹ ಪ್ರಯತ್ನ ಮಾಡಿರುತ್ತಾರೆ. ಈ ವಾತಾವರಣದಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರುವ ರೈತನ ಮಕ್ಕಳಿಗೆ ಉದ್ಯೋಗ ಸಿಗದಂಥ ಸಂದರ್ಭ ಉಂಟಾಗಿರುವುದರಿಂದ ಅವರ ಬದುಕಿಗೆ ದಾರಿಮಾಡಿಕೊಡುವ ಯಾವುದೇ ಪ್ರಯತ್ನವನ್ನು ಈ ಬಜೆಟ್‌ನಲ್ಲಿ ನಾವು ಕಾಣುತ್ತಿಲ್ಲ ಸನ್ಮಾನ್ಯ ಅಧ್ಯಕ್ಷರೇ ಅನೇಕ ಸಾರಿ ನಾನು ಈ ಸದನದಲ್ಲಿ ರೈತರ ಬಗ್ಗೆ ಹೇಳಲಿಕ್ಕೆ ಪ್ರಯತ್ನ ಮಾಡಿದ್ದೇನೆ ಅದಕ್ಕೆ ಸರಿಯಾದ ಉತ್ತರವನ್ನು ನಿರೀಕ್ಷಿಸುತ್ತಿದ್ದರೂ ಸರ್ಕಾರದಿಂದ ಸೂಕ್ತ ಉತ್ತರ ಸಿಗುತ್ತಿಲ್ಲ. ಗ್ರಾಮೀಣ ರೈತ ಇವತ್ತು ಬಡವನಾಗಿರುವುದು ದುಡಿಮೆ ಮಾಡಲಿಲ್ಲ ಎಂದು ಅಲ್ಲ ಬೆಳೆದಿದ್ದು ಕಡಿಮೆ ಎಂದಲ್ಲ. ಹಸಿರು ಕ್ರಾಂತಿಯ ಹೆಸರಿನಲ್ಲಿ ಆಹಾರದ ಸ್ವಾವಲಂಬನೆ ಮಾಡುವಂತಹ ಕ್ರಾಂತಿಕಾರಿ ಕೆಲಸವನ್ನು ಏನು ಮಾಡದೆ ಅಮೇರಿಕಾ, ರಷ್ಯಗಳಿಂದ ಗೋಧಿ ತರಿಸುವ ಕೆಲಸವನ್ನು ತಪ್ಪಿಸಿದಂಥ ಕೆಲಸವನ್ನು ಏನು ಮಾಡಿದ, ಅಂಥ ರೈತನಿಗೆ ಈ ಸದನದಲ್ಲಿ ಸಾಲ ಮನ್ನಾ ಆಗಬೇಕು ಅವನ ಜೀವನಕ್ಕೆ ದಾರಿಯಾಗಬೇಕು, ಬೆಳೆದಿದ್ದಕ್ಕೆ ಯೋಗ್ಯ ಬೆಲೆ ಸಿಗಬೇಕೆಂದು ಒತ್ತಾಯಮಾಡುತ್ತಿರುವಾಗ ತಾವು ಸಾಲಮನ್ನಾ ಮಾಡುವುದಕ್ಕೆ ರಾಜ್ಯದ ಆರ್ಥಿಕ ಸ್ಥಿತಿ ಸರಿಯಾಗಿ ಇಲ್ಲವೆಂದು ಹೇಳುತ್ತಿದ್ದೀರಿ. ಸಾಲ ಮನ್ನಾ ಮಾಡುವ ವಿಷಯ ಆರ್ಥಿಕ ಸ್ಥಿತಿ ಅನುಕೂಲವಾಗಿರುವಾಗ ಯೋಚನೆ ಮಾಡುವಂಥದ್ದಲ್ಲ. ನಾನು ಅನೇಕ ಸಾರಿ ಹೇಳಿದಂತೆ ರೈತನ ಸಾಲ ಮನ್ನಾ ಮಾಡುವುದು ಅಭಿವೃದ್ಧಿ ಕಾರ್ಯವೇ ಆಗುತ್ತದೆ, ಸುಮಾರು ಮುನ್ನೂರು ಅರವತ್ತು ಕೋಟಿ ರೂಪಾಯಿ ಸಾಲ ರೈತರ ಮೇಲೆ ಇದೆ ಎಂದು ಹೇಳಿದ್ದಾರೆ.

ಇದರಲ್ಲಿ ದೊಡ್ಡ ದೊಡ್ಡ ಟ್ರ್ಯಾಕ್ಟರ್ ತೆಗೆದುಕೊಂಡಿರುವಂಥ ದೊಡ್ಡ ದೊಡ್ಡ ರೈತರವು ಆ [illegible] ದರೂ ಇರಬಹುದು. ಆದರೆ ತಾವು ಸರಿಯಾದ ಅಂಕಿ ಅಂಶಗಳನ್ನು ತೆಗೆದುಕೊಳ್ಳುವಂಥ ಪ್ರಯತ್ನ ಮಾಡಿದರೆ ನನಗೆ ಗೊತ್ತಿರುವ ಪ್ರಕಾರ ೨೫೦ ಕೋಟಿ ರೂಪಾಯಿಂದ ೨೭೦ ಕೋಟಿ ರೂಪಾಯಿಯನ್ನು ಇದು ದಾಟುವುದಿಲ್ಲ. ರೈತ ಬೆಳೆದಂಥ ಬೆಳೆಗೆ ಯೋಗ್ಯ ಬೆಲೆಯನ್ನು ಕೊಟ್ಟಿದ್ದರೆ ಇವತ್ತು ಅವನು ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡು ಬಂದು ನಿಮ್ಮನ್ನು ಸಾಲ ಮನ್ನಾ ಮಾಡಿ ಎಂದು ಕೇಳತಕ್ಕಂಥ ದುಸ್ಥಿತಿ ನಮ್ಮ ರಾಜ್ಯದಲ್ಲಿ ಒದಗಿ ಬರುತ್ತಿರಲಿಲ್ಲ. ಇಂಥ ಒಂದು ಸಂದರ್ಭ ನಮ್ಮ ರಾಜ್ಯದ ರೈತನಿಗೆ ಇವತ್ತು ಒಂದಿದೆ. ಯಾವ ರೈತ ಕಬ್ಬು ಬೆಳೆಯುತ್ತಾನೆ, ಅವನಿಗೆ ಯಾವರೀತಿ ವ್ಯವಸ್ಥೆ ಇದೆ ? ಶಿವಮೊಗ್ಗ ಜಿಲ್ಲೆಯಲ್ಲಿ ತುಂಗಭದ್ರ ಷುಗರ್ ಫ್ಯಾಕ್ಟರಿಯಲ್ಲಿ ನಮಗೆ ಸಿಗತಕ್ಕಂಥ ಬೆಲೆ ಒಂದು ಟನ್ ಕಬ್ಬಿಗೆ ೧೩೦ ರೂಪಾಯಿ. ಅದೇ ಬೇರೆ ಜಿಲ್ಲೆಯ ಬಗ್ಗೆ ನೋಡಿದರೆ ಅಂದರೆ ಬೆಳಗಾಂ. ಗುಲ್ಬರ್ಗಾ ಜಿಲ್ಲೆಯದನ್ನು ನೋಡಿದರೆ ನಾಲ್ಕು ನೂರು ರೂಪಾಯಿ ಒಂದು ಟನ್ ಕಬ್ಬಿಗೆ ಬೆಲೆ ಸಿಗುತ್ತದೆ. ಒಂದು ಟನ್ ಕಬ್ಬಿನಿಂದ ಒಂದು ಕ್ವಿಂಟಾಲ್ ಸಕ್ಕರೆ ಆಗುತ್ತದೆ, ಬಹಿರಂಗ ಮಾರುಕಟ್ಟೆಯಲ್ಲಿ ೭೫೦ ರೂಪಾಯಿ ಒಂದು ಕ್ವಿಂಟಾಲ್ ಸಕ್ಕರೆಯನ್ನು ಮಾರುತ್ತಿರುವಂಥ ಈ ಕಾಲದಲ್ಲಿ ಒಂದು ಕಡೆ ನಾಲ್ಕು ನೂರು ರೂಪಾಯಿ, ಇನ್ನೊಂದು ಕಡೆಯಲ್ಲಿ ೧೩೦ ರೂಪಾಯಿಯನ್ನು ಕೊಟ್ಟರೆ ರೈತ ಯಾವ ರೀತಿ ಬದುಕುವುದಕ್ಕೆ ಸಾಧ್ಯ ಎನ್ನುವುದನ್ನು ತಾವು ಯೋಚನೆ ಮಾಡಬೇಕು ಇಡೀ ರಾಜ್ಯದಲ್ಲಿ ಸರಿಯಾದ ಬೆಲೆಯನ್ನು ಕೊಡುವಂಥ ವ್ಯವಸ್ಥೆಯನ್ನು ಮಾಡುವುದಕ್ಕೆ ಸರ್ಕಾರದವರು ಗಮನವನ್ನು ಕೊಟ್ಟಿದ್ದಾರೆಯೇ ? ಕನಿಷ್ಟ ಒಂದು

ಟನ್ ಕಬ್ಬಿಗೆ ೪೫೦ ರೂಪಾಯಿ ಇಡೀ ರಾಜ್ಯದಲ್ಲಿ ಬೆಲೆ ಕೊಟ್ಟರೂ ಸಹಾ ರೈತ ಬದುಕುವುದಕ್ಕೆ ಸಾಧ್ಯವಿಲ್ಲ ಎನ್ನುವಂಥ ಈ ಒಂದು ಸಂದರ್ಭದಲ್ಲಿ ತಮ್ಮ ಒಂದು ಬಜೆಟ್‌ನಲ್ಲಿ ಏನು ಹೇಳಿದ್ದೀರೆಂದರೆ "ಕಬ್ಬಿನ ಮೇಲೆ ತೆರಿಗೆಯನ್ನು ಟನ್‌ಗೆ ಆಧಾರಕ್ಕೆ ಬದಲಾಗಿ ಬೆಲೆ ಆಧಾರಕ್ಕೆ ಬದಲಾಯಿಸಲು ಮತ್ತು ಇದನ್ನು ಶೇಕಡ ೧೦ಕ್ಕೆ ನಿಗದಿಪಡಿಸಲು ಪ್ರಸ್ತಾಪಿಸಿದೆ" ಎನ್ನುವ ಮಾತನ್ನು ತಾವು ಹೇಳಿದ್ದೀರಿ, ಅಂದರೆ ಒಂದು ಟನ್ ಕಬ್ಬು ಬೆಳೆದರೆ ೪೦೦ ರೂಪಾಯಿ ಕೊಟ್ಟರೆ ೪೦ ರೂಪಾಯಿ ತೆರಿಗೆಯನ್ನು ಕೊಡುವಂಥ ಒಂದು ಹೊಸ ಭಾರವನ್ನು ರೈತರ ಮೇಲೆ ಹಾಕುವಂಥ ಪ್ರಯತ್ನವನ್ನು ಇವತ್ತು ತಾವು ಮಾಡುತ್ತಿದ್ದೀರಿ. ಇದರಿಂದಾಗಿ ಈ ರಾಜ್ಯದ ರೈತನ ಬಗ್ಗೆ ತಮಗೇನಾದರೂ ಚಿಂತನೆ ಇದೆಯೇ ಎನ್ನುವ ಮಾತನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಅದಕ್ಕಾಗಿ ನಾನು ಆಗ್ರಹ ಮಾಡುವಂಥಾದ್ದು, ದಯಮಾಡಿ ಈ ಒಂದು ಭಾರವನ್ನು ಹೊಸದಾಗಿ ಏರುವಂಥ ಪ್ರಯತ್ನವನ್ನು ನೀವು ಏನು ಮಾಡುತ್ತಿದ್ದೀರಿ. ಇದನ್ನು ಕೈಬಿಟ್ಟು ಇಡೀ ರಾಜ್ಯದಲ್ಲಿ ಯಾರು ಕಬ್ಬನ್ನು ಕೊಡುತ್ತಾರೆ ಅವರಿಗೆ ಒಂದು ಕನಿಷ್ಟ ಬೆಲೆಯನ್ನು ಒಂದು ಟನ್‌ಗೆ ೪೫೦ ರೂಪಾಯಿಯನ್ನು ಕೊಡದಿದ್ದರೆ ರೈತಾಪಿ ಜನಗಳು ಯಾವ ರೀತಿ ಕೆಲಸವನ್ನು ಮಾಡಲಿಕ್ಕೂ ಸಾಧ್ಯವಾಗದೇ ಇರತಕ್ಕಂಥ ಪರಿಸ್ಥಿತಿ ಬರಬಹುದು. ಆ ರೀತಿ ಒಂದು ಬೆಲೆಯನ್ನು ನಿಗದಿ ಮಾಡುವಂಥ ಒಂದು ತೀರ್ಮಾನವನ್ನು ಸರ್ಕಾರ ಕೈಗೊಳ್ಳಬೇಕು ಎಂದು ಹೇಳಿ ಸರ್ಕಾರವನ್ನು ನಾನು ಒತ್ತಾಯ ಮಾಡುತ್ತೇನೆ. ಇಡೀ ದೇಶದಲ್ಲಿ ರೈತನ ಸಾಲ ಮನ್ನಾ ಮಾಡುವಂಥ ಸಂದರ್ಭದಲ್ಲಿ ಆ ರೀತಿ ರೈತನ ಸಾಲ ಮನ್ನಾ ಮಾಡುವುದರಿಂದ ಮತ್ತೆ ಅವನು ಸಾಲವನ್ನು ಮನ್ನಾ ಮಾಡಿ ಎಂದು ಕೇಳುವಂಥ ಪ್ರಸಂಗ ಬರುವುದಿಲ್ಲವೇ ? ಇದು ಸರಿಯೇ ? ಎನ್ನುವ ಮಾತನ್ನು ಕೇಳತಕ್ಕಂಥ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ. ಕರ್ನಾಟಕ ರಾಜ್ಯದಲ್ಲಿ ಸತತವಾಗಿ ಐದಾರು ವರ್ಷಗಳಿಂದ ಬರಗಾಲಕ್ಕೆ ಮತ್ತು ಅತಿವೃಷ್ಟಿಗೆ ಈ ರಾಜ್ಯದ ರೈತ ಸಿಕ್ಕಿರತಕ್ಕಂಥದ್ದನ್ನು ಸ್ಪಷ್ಟವಾಗಿ ನೋಡಿದ್ದೇವೆ. ಬೆಳೆ ನಾಶವಾದಂಥ ರೈತ ತನ್ನ ಸಾಲವನ್ನು ಯಾವ ರೀತಿ ವಾಪಸ್ಸು ಕೊಡಬೇಕು ಎನ್ನುವುದರ ಬಗ್ಗೆ ಸರ್ಕಾರ ಚಿಂತನೆಯನ್ನು ಮಾಡಬೇಕಾಗಿತ್ತು. ಅದರ ಬದಲಿಗೆ ರೈತನ ಮೇಲೆ ಇವತ್ತು ಸರ್ಕಾರದವರು ಹೆಚ್ಚು ಭಾರವನ್ನು ಹೇರುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ನಿನ್ನೆ ನಮ್ಮ ಬಾಬಗೌಡ ಪಾಟೀಲರು ಮಾತನಾಡುತ್ತಾ ಇಡೀ ನಮ್ಮ ರೈತ ಸಮೂಹವನ್ನೇ ತಾವು ಮರೆತಿದ್ದೀರಿ ಎಂದು ಹೇಳುವುದಕ್ಕೆ ನನಗೆ ಬಹಳ ವಿಷಾದವಾಗುತ್ತದೆ ಎನ್ನುವಂಥ ಮಾತನ್ನು ಹೇಳಿದರು. ನಾನು ಇಡೀ ರಾಜ್ಯದಲ್ಲಿ ಒಂದು ತಿಂಗಳ ಕಾಲ ರೈತನ ದೃಷ್ಟಿಯಿಂದ ಪ್ರವಾಸವನ್ನು ಕೈಗೊಂಡಿದ್ದೆ. ತಿಪಟೂರು ಭಾಗದಲ್ಲಿ ಹೋದರೆ ಕ್ವಿಂಟಾಲ್ ಕೊಬ್ಬರಿಗೆ ೨೮೦೦ ರೂಪಾಯಿ ಬೆಲೆ ಸಿಗತಕ್ಕಂಥದ್ದು ಇವತ್ತು ೧೫೦೦ ರೂಪಾಯಿಯಿಂದ ೧೯೦೦ ರೂಪಾಯಿಯವರೆಗೂ ಕೊಬ್ಬರಿ ಸಿಗುತ್ತಿಲ್ಲ. ಹತ್ತಿಯ ಸ್ಥಿತಿಯೂ ಅದೇ ರೀತಿಯಲ್ಲಿ ಆಗಿದೆ. ಹತ್ತಿಯನ್ನು ಸುಮಾರು ೧೮೦೦ ರೂಪಾಯಿಯಿಂದ ಎರಡು ಸಾವಿರ ರೂಪಾಯಿಗಳವರೆಗೂ ಹಿಂದೆ ಹತ್ತಿಯನ್ನು ಮಾರುತ್ತಿದ್ದಂಥ ರೈತ ಇವತ್ತು ಅವನ ಹತ್ತಿಗೆ ೬೦೦–೭೦೦ ರೂಪಾಯಿಯನ್ನು ಕೇಳುತ್ತಿದ್ದಾರೆ, ಅದರಿಂದ ಹತ್ತಿಯೆಲ್ಲಾ ಯಥೇಚ್ಛವಾಗಿ ಹಾಗೆಯೇ ಬಿದ್ದಿದೆ. ಕೇಳುವಂಥ ವ್ಯಕ್ತಿಗಳು ಇಲ್ಲದೆ ರೈತ ಇವೊತ್ತು ಅಲೆದಾಡುವಂಥ ವಿಚಿತ್ರವಾದ ವಾತಾವರಣ ಬಂದಿದೆ. ಯಾರು ನೇಕಾರ ತಾನು ಪ್ರಾಮಾಣಿಕವಾಗಿ ಬಟ್ಟೆಯನ್ನು ನೇಯುತ್ತಾನೆ, ಜನರ ಮಾನವನ್ನು ಮುಚ್ಚುವಂಥ ಪ್ರಯತ್ನವನ್ನು ಮಾಡುತ್ತಿದ್ದಾನೆ. ಅವನಿಗೆ ಇವತ್ತು ಕೂಲಿ ಸಿಗದೆ ಸಾಯುತಕ್ಕಂಥ ಒಂದು ದುಸ್ಥಿತಿಗೆ ನಮ್ಮ ರೈತ ಬಂದು ತಲುಪಿದ್ದಾನೆ. ಮಂಗಳೂರು ಜಿಲ್ಲೆಯಲ್ಲಿ ಪ್ರವಾಸ ಮಾಡಿದರೆ ಬೀಡಿ ಕಟ್ಟಿಕೊಂಡು ಜೀವನ ನಡೆಸುತ್ತಿದ್ದರು. ಇವತ್ತು ಅವರ ದುಡಿಮೆಗೆ ಬೆಲೆ ಸಿಗದೆ ಅವರಿಗೆ ಬೇಕಾದ ಸಾಮಗ್ರಿಗಳು ದೊರಕದೆ ಅವನು ವಾರದಲ್ಲಿ ಎರಡು ಮೂರು ದಿವಸ ಕೂಲಿ ಸಿಗದೆ ಅಲೆಯುವಂಥ ದುಸ್ಥಿತಿಗೆ ಬಂದಿದ್ದಾನೆ. ಈ ರೀತಿ ಇಡೀ ರಾಜ್ಯದಲ್ಲಿ ಒಂದು ವಾತಾವರಣ ಇರತಕ್ಕಂಥ ಸಂದರ್ಭದಲ್ಲಿ ಈ ರಾಜ್ಯದ ರೈತನನ್ನು ನೆಮ್ಮದಿಯಿಂದ ಜೀವನ ಮಾಡುವಂಥ ವ್ಯವಸ್ಥೆಯನ್ನು ಮಾಡದಿದ್ದರೆ ಬಹುಶಃ ಮುಂದೆ ಬರುವಂಥ ದಿವಸಗಳಲ್ಲಿ ಗ್ರಾಮಾಂತರ ಪ್ರದೇಶದ ಜನ ನಗರದ ಕಡೆ ಬರುವಂಥ ಒಂದು ಸಂದರ್ಭ ಬರುವಂಥದ್ದು ಇದೆ, ಅದಕ್ಕೋಸ್ಕರವಾಗಿ ಆ ರೀತಿ ಒಂದು ವಾತಾವರಣಕ್ಕೆ ಅವಕಾಶ ಮಾಡಿ ಕೊಡದೆ ಈಗಲಾದರೂ ಈ ರಾಜ್ಯದ ರೈತನ ಹಿತದೃಷ್ಟಿಯಿಂದ ತಾವು ಯೋಚನೆಯನ್ನು ಮಾಡಬೇಕು ಎಂದು ಹೇಳಿ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ಇವತ್ತು ತಮ್ಮ ಒಂದು ಬಜೆಟ್‌ನಲ್ಲಿ ರೈತನಿಗೆ ಅತ್ಯಗತ್ಯವಾಗಿರತಕ್ಕಂಥ ನೀರಾವರಿ ಮತ್ತು ವಿದ್ಯುಚ್ಛಕ್ತಿಯ ಬಗ್ಗೆ ಪ್ರಸ್ತಾಪ ಮಾಡಿದರೂ ಸಹಾ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದಕ್ಕೆ ಬೇಕಾದಂಥ ಹಣವನ್ನು ತೆಗೆದಿಡುವಂಥ ಪ್ರಯತ್ನವನ್ನು ತಾವು ಮಾಡಿಲ್ಲ. ಅದೇ ರೀತಿ ವಿದ್ಯುತ್ ಉತ್ಪಾದನೆಗೆ ಬೇಕಾದಂಥ ಸಾಕಷ್ಟು ಹಣವನ್ನು ತೆಗೆದಿಟ್ಟು ರೈತನು ಬದುಕುವುದಕ್ಕೆ ಅವನಿಗೆ ಸಹಾಯ ಮಾಡಬೇಕಾಗಿದೆ, ಇದರ ಬಗ್ಗೆ

ಯಾವುದೇ ಒಂದು ಪ್ರಯತ್ನ ನಡೆಯುತ್ತಿಲ್ಲ ಎಂದು ನಾನು ಹೇಳಬೇಕಾಗಿದೆ, ಇಡೀ ರಾಜ್ಯದಲ್ಲಿ ಎಲ್ಲಿ ನೀರಾವರಿ ಸವಲತ್ತುಗಳು ಇಲ್ಲ, ಅಂಥ ಒಂದು ಸ್ಥಳದಲ್ಲಿ ರೈತರು ಬೋರ್‌ವೆಲ್‌ಗಳನ್ನು ಹಾಕಿಕೊಂಡು ಒಂದೂವರೆ ಎರಡು ವರ್ಷ ಕಳೆದಿದ್ದರೂ ಸಹಾ ಆ ಬೋರ್‌ವೆಲ್‌ಗೆ ವಿದ್ಯುಚ್ಛಕ್ತಿ ಸಂಬರಾಜನ್ನು ಮಾಡದೇ ಅವನು ತೆಗೆದುಕೊಂಡಂಥ ಸಾಲಕ್ಕೆ ಬಡ್ಡಿ ಕೊಡತಕ್ಕಂಥ ಒಂದು ವಿಚಿತ್ರ ವಾತಾವರಣವನ್ನು ನಾವು ಎಲ್ಲಾ ಕಡೆ ಇವತ್ತು ಕಾಣುತ್ತಿದ್ದೇವೆ.

ಅವನು ತೆಗೆದುಕೊಂಡ ಸಾಲಕ್ಕೆ ಬಡ್ಡಿ ಕಟ್ಟಿ ಕಟ್ಟಿ ವಿಚಿತ್ರವಾದ ವಾತಾವರಣವನ್ನು ಹಳ್ಳಿಯ ಕಡೆ ನಾವು ಕಾಣುತ್ತಿದ್ದೇವೆ. ನಿಮ್ಮ ಸರಕಾರದಲ್ಲಿ ನಿಮಗೇನಾದರೂ ರೈತರಿಗೆ ಆದ್ಯತೆ ಕೊಡಬೇಕೆಂದು ಮನಸ್ಸಿನಲ್ಲಿದ್ದರೆ, ಒಂದು ಕಡೆಯಾದರೂ ಈ ರೀತಿ ಬರಗಾಲಕ್ಕೆ ತುತ್ತಾಗಿ ತೊಂದರೆ ಪಡುತ್ತಿರುವ ರೈತನಿಗೆ, ಬೋರ್‌ವೆಲ್ ತೆಗೆದು ನೀರು ಬಿದ್ದಂಥ ಕೆಲವು ದಿವಸದೊಳಗೆ ವಿದ್ಯುತ್ ಸಂಪರ್ಕ ಕೊಟ್ಟು ತನ್ನ ಕಾಲ ಮೇಲೆ ತಾನು ನಿಲ್ಲುವಂತಹ ಕಾರ್ಯಕ್ರಮ ರೂಪಿಸಬೇಕಾಗಿತ್ತು. ಅದಕ್ಕೆ ಬೇಕಾದ ಅನುಕೂಲ ಮಾಡಿಕೊಡುತ್ತೀರಾ ? ಈ ರೀತಿ ಕನಿಷ್ಟ ಸವಲತ್ತುಗಳನ್ನು ನೀಡುವ ವಿಚಾರ ಸಹ ತಮ್ಮ ಬಜೆಟ್‌ನಲ್ಲಿ ಎಲ್ಲೂ ಕಾಣದಿರುವಂತಹದನ್ನು ನಾವು ಇವತ್ತು ಸ್ಪಷ್ಟವಾಗಿ ಕಾಣುತ್ತಿದ್ದೇವೆ. ಅದಕ್ಕೋಸ್ಕರ ನಾನು ಸರಕಾರವನ್ನು ಒತ್ತಾಯ ಮಾಡತಕ್ಕದ್ದು, ರಾಜ್ಯದ ರೈತರ ಹಿತದೃಷ್ಟಿಯಿಂದ ಈಗಲಾದರೂ ಯೋಚನೆ ಮಾಡುವಂತಹ ಪ್ರಾಮಾಣಿಕ ಪ್ರಯತ್ನ ಮಾಡಿ.

ಶ್ರೀ ಬಿ. ಬಸವಲಿಂಗಪ್ಪ —ಅಧ್ಯಕ್ಷರೇ, ಯಡಿಯೂರಪ್ಪನವರಿಗೆ ಮೂರು ತಿಂಗಳಿನಿಂದ ಏನಾಗಿದೆ ಎಂದು ಗೊತ್ತಿಲ್ಲ. ರೈತರು, ರೈತರು ಎನ್ನುತ್ತಿದ್ದಾರೆ. ರೈತರು ಎಂದರೆ ಯಾರು ಹೊಲ ಮಾಡುವವರೆ ? ಹೊಲದಲ್ಲಿ ಕೆಲಸ ಮಾಡುವವರೆ ? ಅಥವಾ ಜಮೀನಿನ ಮಾಲೀಕರಾಗಿರುವವರೆ? ಯಾವ ರೈತರು ಎಂದು ಹೇಳಿದರೆ ಅವರಿಗೆ ಚಿರಋಣಿಯಾಗಿರುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಸ್ವಾಮಿ ಅಧ್ಯಕ್ಷರೇ......

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅವರು ಇನ್ನೂ ಪೂರ್ತಿಯಾಗಿ ಹೇಳಿಲ್ಲ, ಅವರು ಹೇಳುವುದನ್ನು ಕೇಳಿ ?

ಶ್ರೀ ಬಿ. ಬಸವಲಿಂಗಪ್ಪ.—ಅವರು ಏನು ಹೇಳುತ್ತಾರೆ ಎಂದು ನನಗೆ ಗೊತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಅವರು ಏನು ಹೇಳುತ್ತಾರೆ ಎಂದು ನನಗೆ ಗೊತ್ತಿದೆ, ಎಂದು ಹೇಳುತ್ತೀರಲ್ಲಾ, ಗೊತ್ತಿದ್ದ ಮೇಲೆ ಏತಕ್ಕೆ ಕೇಳುತ್ತಿದ್ದೀರಿ ?

ಶ್ರೀ ಬಿ. ಬಸವಲಿಂಗಪ್ಪ.—ಅವರನ್ನು ಚುರುಕು ಮಾಡಬೇಕಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಅವರನ್ನು ಚುರುಕು ಮಾಡುವುದಕ್ಕಲ್ಲ, ಚುಚ್ಚಬೇಕಲ್ಲ, ಅದಕ್ಕೆ.

ಶ್ರೀ ಬಿ. ಬಸವಲಿಂಗಪ್ಪ.—ಜನತೆಯ ಬಗ್ಗೆ ಒಳ್ಳೆಯ ಯೋಚನೆ ಮಾಡುತ್ತಿದ್ದೀರಿ. ರೈತರು ಏನು ಪಂಪ್‌ಗಳನ್ನು ಅಳವಡಿಸಿಕೊಂಡಿದ್ದಾರೆ ಅದಕ್ಕೆ ಅವರಿಗೆ ನಾವು ಎಲೆಕ್ಟ್ರಿಸಿಟಿ ಕೊಡುವುದಕ್ಕೆ ಆಗಲಿಲ್ಲ. ಕಾರಣ ಎಂದರೆ, ವಿದ್ಯುಚ್ಛಕ್ತಿ ಇಲಾಖೆಯವರು ಏನಿದ್ದಾರೆ ಅವರ ಹತ್ತಿರ ಹಣ ಇಲ್ಲ ಎಂದು ಹೇಳುತ್ತಿದ್ದಾರೆ. ಅದಕ್ಕೋಸ್ಕರ ಹಣ ಇಲ್ಲ ಎಂದು ಹೇಳಿದ ಮೇಲೆ ಹಣ ಕೊಡಬೇಕಾಗುತ್ತದೆ. ಸಾಲ ಕೊಡಬೇಕಾಗುತ್ತದೆ. ಇದರ ಬಗ್ಗೆ ಕೂಡ ಗಮನ ಹರಿಸಬೇಕಾಗುತ್ತದೆ. ಯಾವ ರೂಪದಲ್ಲಿ ಅವರಿಗೆ ಹಣವನ್ನು ಒದಗಿಸಬೇಕು ಕೆ.ಇ.ಬಿ.ಯವರಿಗೆ ? ರೈತರಿಗೆ ವಿದ್ಯುತ್ ಒದಗಿಸಬೇಕು, ನಿಜ, ಮಾಡಲೇಬೇಕು. ಆದರೆ ಯಾವ ರೀತಿ ಮಾಡಬೇಕು ಅದರ ಬಗ್ಗೆ ಯೋಚನೆ ಮಾಡಿ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ನಾನು ಒಂದೆರಡು ಸಂಗತಿಗಳನ್ನು ಮಾತ್ರ ಹೇಳುತ್ತೇನೆ. ಹೆಚ್ಚು ಮಾತನಾಡುವುದಕ್ಕೆ ಇಚ್ಛೆ ಪಡುವುದಿಲ್ಲ. ತಾವೇನು ತಮ್ಮ ಬಜೆಟ್ ಭಾಷಣದಲ್ಲಿ ಸ್ಪಷ್ಟವಾಗಿ ಗ್ರಾಮೀಣ ಜನತೆ ನಗರ ಪ್ರದೇಶಗಳಿಗೆ ವಲಸೆ ಹೋಗುವ ವಾತಾವರಣ ಬಂದಿದೆ ಎಂದು ಹೇಳಿದ್ದೀರಲ್ಲ, ಸ್ವಾತಂತ್ರ್ಯ ಬಂದು ೪೩ ವರ್ಷಗಳ ನಂತರವಾದರೂ ಸಹ ಇದಕ್ಕೆ ಕಾರಣ ಹುಡುಕುವ ಪ್ರಯತ್ನವನ್ನು ತಾವು ಮಾಡಬೇಕಾಗಿತ್ತು. ಅಲ್ಲದೆ ತಾವು ಕೈಗಾರಿಕೆಗಳ ಬಗ್ಗೆ ಮಾತನಾಡಿದ್ದೀರಿ. ಅಲ್ಲೆಲ್ಲಾದರೂ ಸ್ಪಷ್ಟವಾದ, ರೀತಿ, ಗ್ರಾಮೀಣ ಜನತೆ ವಲಸೆ ಹೋಗುತ್ತಿರುವ ವಾತಾವರಣ ತಪ್ಪಿಸುವುದಕ್ಕೋಸ್ಕರ ಗ್ರಾಮೀಣ ಪ್ರದೇಶದಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಹೆಚ್ಚು ಆದ್ಯತೆ ಕೊಡುತ್ತೇವೆ, ಸಬ್ಸಿಡಿ ಕೊಡುತ್ತೇವೆ, ಜಿಲ್ಲಾ ಕೇಂದ್ರಗಳಲ್ಲಿ, ದೊಡ್ಡ ದೊಡ್ಡ ನಗರಗಳಲ್ಲಿ ಕೈಗಾರಿಕೆಗಳನ್ನು ಪ್ರಾರಂಭ ಮಾಡುವುದಕ್ಕೆ ಅವಕಾಶ ಮಾಡಿಕೊಡುವುದಿಲ್ಲ ಎಂಬುದನ್ನು ಹೇಳಿದ್ದೀರಾ ? ನಿರುದ್ಯೋಗ ಸಮಸ್ಯೆ ಬಗೆಹರಿಯುವುದಕ್ಕೆ ಪ್ರಯತ್ನ ಮಾಡಿದ್ದೀರಾ ? ತಾವು ಈ ಪುಸ್ತಕದಲ್ಲಿ ಪೇಜ್‌ಗಳನ್ನು ಭರ್ತಿ ಮಾಡು

ವಂತಹ ಬಜೆಟ್‌ಬುಕ್ ಮಾಡಿದ್ದೀರೇ ಹೊರತು ಈ ನಿರುದ್ಯೋಗ ಸಮಸ್ಯೆಯ ಬಗ್ಗೆ ಏನು ಹೇಳಿದ್ದೀರಿ?
ಉದ್ಯೋಗ ಸೃಷ್ಟಿ:- ನಿರುದ್ಯೋಗ ಜನತೆಯ ಪ್ರಥಮ ವೈರಿ ಎಂದು ರಾಜ್ಯ ಸರಕಾರ ಪರಿಗಣಿಸುತ್ತದೆ ಇತ್ತೀಚಿನ ದಶಕಗಳಲ್ಲಿ ಜನಸಂಖ್ಯೆಯ ಅಪರಿಮಿತ ಬೆಳವಣಿಗೆ ಮತ್ತು ಅವರೆಲ್ಲರಿಗೂ ಸಾಕಷ್ಟು ಉದ್ಯೋಗಾವಕಾಶಗಳನ್ನು ಒದಗಿಸುವಲ್ಲಿ ನಮ್ಮ ಅರ್ಥ ವ್ಯವಸ್ಥೆ ಅಸಮರ್ಥವಾಗಿರುವುದರಿಂದ ಈ ಸಮಸ್ಯೆ ಗುರುತರವಾಗಿದೆ ಇವನ್ನು ಹೇಳಿ ತಾವು ಮುಂದೆ ಹೋಗಿ ಏನು ಹೇಳಿದ್ದೀರಿ ಎಂದರೆ, ನಿಮ್ಮ ಲೆಕ್ಕದ ಪ್ರಕಾರವೇ ತಾವು ಹೇಳಿರುವುದು ಏನು ಎಂದರೆ ''೧೯೮೮ರ ಡಿಸೆಂಬರ್ ೩೧ರಂದು ರಾಜ್ಯದಲ್ಲಿನ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಲ್ಪಟ್ಟ ನಿರುದ್ಯೋಗಿಗಳ ಸಂಖ್ಯೆ ೧೨.೩೩.೩೯೭. ಇದರಲ್ಲಿ ೨.೨೯,೪೫೩ ಮಂದಿ ಮಹಿಳಾ ನಿರುದ್ಯೋಗಿಗಳು. ಎಸ್.ಎಸ್.ಎಲ್.ಸಿ. ಅಥವಾ ಹೆಚ್ಚಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ನಿರುದ್ಯೋಗಿಗಳ ಸಂಖ್ಯೆಯು ೬,೮೫,೨೯೭. ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆಯು ಸುಮಾರು ೧,೯೩,೪೭೬ ಹಾಗೂ ಅವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ೧೮,೦೫೩. ನಾನು ನಿಮ್ಮನ್ನು ಕೇಳುತ್ತೇನೆ ಹಳ್ಳಿಯಲ್ಲಿ ವಾಸ ಮಾಡುವಂತಹ ಬಡ ಕೃಷಿ ಕಾರ್ಮಿಕ ಯಾರಿದ್ದಾನೆ. ಅದನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗೆ ಹೋಗಿ ತನ್ನ ಹೆಸರನ್ನು ನೋಂದಾಯಿಸಿಕೊಳ್ಳುತ್ತಾನೆಯೇ, ಇದು ಸಾಧ್ಯವೇ ? ಇವತ್ತು ನಿಮ್ಮ ಅಂಕಿ ಅಂಶಗಳ ಪ್ರಕಾರವೇ ಒಂದೂವರೆ ಕೋಟಿ ಜನ ನಿರುದ್ಯೋಗಿಗಳು ಕೃಷಿ ಕಾರ್ಮಿಕರು ಗ್ರಾಮಾಂತರ ಪ್ರದೇಶದಲ್ಲಿದ್ದಾರೆ ಇದನ್ನು ಹೇಳುತ್ತಾ ಮುಂದೆ ಹೋಗಿ ನೀವು ಹೇಳುತ್ತಿದ್ದೀರಿ, ಇದನ್ನೆಲ್ಲಾ ಸರಿಪಡಿಸುವುದಕ್ಕೆ ಜವಾಹರ್ ರೋಜ್‌ಗಾರ್ ಯೋಜನೆಯನ್ನು ನಾವು ಜಾರಿಗೆ ತರುತ್ತಿದ್ದೇವೆ, ಅತ್ಯಂತ ವ್ಯವಸ್ಥಿತವಾದ ರೀತಿಯಲ್ಲಿ ಇದನ್ನು ಮಾಡುತ್ತೇವೆ, ಎಂದು ಹೇಳಿದ್ದೀರಿ. ೧೯೯೦-೯೧ನೇ ವರ್ಷದಲ್ಲಿ ಸುಮಾರು ೮೨೩ ಲಕ್ಷ ಕೆಲಸದ ದಿನಗಳನ್ನು ಸೃಷ್ಟಿಸಲು ನಿರೀಕ್ಷಿಸಲಾಗಿದೆ ಎಂದು ತಾವು ತಿಳಿಸಿದ್ದೀರಿ.

೮೨೩ ಲಕ್ಷ ಈ ಕೆಲಸದ ದಿನಗಳು ಅಂದರೆ ೩೦೦ ದಿವಸ ವರ್ಷದಲ್ಲಿ ಕೆಲಸ ಕೊಟ್ಟರೆ ಶೇಕಡ ಈ ಭಾಗದಲ್ಲಿ ಸುಮಾರು ೧೫೦ ಕೆಲಸಗಾರರಿಗೆ ನೀವು ಕೆಲಸ ಕೊಡಿಸಬಹುದು. ೧.೫೦ ಗ್ರಾಮೀಣ ಪ್ರದೇಶದಲ್ಲಿರುವಂಥ ಜನರಿಗೆ ನೀವು ಕೆಲಸ ಕೊಡಿಸಬಹುದು. ಆದರೆ ಗ್ರಾಮೀಣ ಪ್ರದೇಶದಲ್ಲಿರುವಂಥ ನಿರುದ್ಯೋಗಿ ಜನರು ಎಷ್ಟು ? ನೀವು ಕೊಟ್ಟಿರುವಂಥ ಒಂದು ಸಣ್ಣ ಬುಕ್‌ಲೆಟ್ ಪ್ರಕಾರ ೨ ಕೋಟಿ ೭೫ ಲಕ್ಷ ಜನ ಇವತ್ತು ಗ್ರಾಮೀಣ ಪ್ರದೇಶದಲ್ಲಿ ಬಡವರು ಇದ್ದಾರೆ, ಇವರಲ್ಲಿ ೨ ಪರ್ಸೆಂಟ್ ಜನರಿಗೆ ಉದ್ಯೋಗ ಒದಗಿಸಿಕೊಡುವುದಕ್ಕೆ ನಿಮಗೆ ಸಾಧ್ಯವಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ಜವಾಹರ್ ರೋಜ್‌ಗಾರ್ ಯೋಜನೆಯಿಂದ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿದೆಯೇ ? ಗ್ರಾಮೀಣ ಜನತೆಯ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಿದೆಯೇನು ? ಇದರ ಬಗ್ಗೆ ಯಾವುದಾದರೂ ಒಂದು ಕಾರ್ಯಕ್ರಮವನ್ನು ಇದರಲ್ಲಿ ಸ್ಪಷ್ಟವಾಗಿ ತಾವು ಹೇಳಿದ್ದೀರೇನು ? ಈ ರೀತಿ ಗ್ರಾಮೀಣ ಜನತೆಗೆ ಯಾವುದೇ ಒಂದು ಅನುಕೂಲ ಮಾಡಿಕೊಡುವಂಥ ಯಾವುದೇ ಒಂದು ಕಾರ್ಯಕ್ರಮದ ಬಗ್ಗೆ ಇವತ್ತು ತಾವು ಯೋಚನೆ ಮಾಡುತ್ತಾ ಇಲ್ಲ. ಗ್ರಾಮೀಣ ಪ್ರದೇ ದಲ್ಲಿ ಸಾವಿರಾರು ಬಡ ಕುಟುಂಬದವರು ಮನೆಗಳಿಲ್ಲದೆ ಸಾಯುವಂಥ ಒಂದು ವಿಚಿತ್ರವಾದಂಥ ವಾತಾವರಣ ಇದೆ. ತಮ್ಮ ಆಯವ್ಯಯ ಭಾಷಣದಲ್ಲಿ ''ಕರ್ನಾಟಕ ಗೃಹ ನಿರ್ಮಾಣ ಮಂಡಳಿಯು ೧೯೯೦-೯೧ರ ಸಾಲಿನಲ್ಲಿ ರಾಜ್ಯದಲ್ಲಿ ೧೨.೦೦೦ ಮನೆಗಳನ್ನು ಕಟ್ಟುವ ಯೋಜನೆಯನ್ನು ಕೈಗೊಂಡಿದೆ'' ಎಂದು ಹೇಳಿದ್ದೀರಿ. ಈ ರೀತಿ ೧೨ ಸಾವಿರ ಮನೆಗಳನ್ನು ಒಂದು ವರ್ಷದಲ್ಲಿ ಕಟ್ಟುವಂಥ ಪ್ರಯತ್ನ ಮಾಡಿದರೆ ಆ ಗ್ರಾಮೀಣ ಪ್ರದೇಶದಲ್ಲಿ ಗುಡಿಸಲಿನಲ್ಲಿ ವಾಸ ಮಾಡುವಂಥ ಬಡವರಿಗೆ ತಾವು ಯಾವತ್ತು ಮನೆಗಳನ್ನು ಕಟ್ಟಿ ಪೂರೈಸುವುದಕ್ಕೆ ಸಾಧ್ಯವಿದೆ ? ಅವನು ನೆಮ್ಮದಿಯಿಂದ ಜೀವನ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ತಮ್ಮಿಂದ ಸಾಧ್ಯವಾಗುತ್ತದೆಯೇ ? ಮೊನ್ನೆ ನಾನು ಪತ್ರಿಕೆಯಲ್ಲಿ ನೋಡಿದೆ ನಿರ್ಮಲ ಗ್ರಾಮ ಯೋಜನೆ ಎಂದು ತಾವು ಒಂದು ಕಾರ್ಯಕ್ರಮ ರೂಪಿಸಿದ್ದೀರಿ. ನಾನು ಏಕೆ ಹೇಳುತ್ತಿದ್ದೇನೆಂದರೆ, ತೋರಿಕೆಗಾಗಿ ಇಂತಹ ಕಾರ್ಯಕ್ರಮದ ಅಗತ್ಯವಿಲ್ಲ ಎನ್ನುವುದಕ್ಕೆ ನಾನು ಈ ಮಾತನ್ನು ಹೇಳುತ್ತಾ ಇದ್ದೇನೆ ಮಾನ್ಯ ಹಣಕಾಸಿನ ಸಚಿವರು ನಿರ್ಮಲ ಗ್ರಾಮ ಯೋಜನೆಯಲ್ಲಿ ಈ ರೀತಿ ಹೇಳಿದ್ದಾರೆ. ಈ ಯೋಜನೆಯ ಮೇರೆಗೆ ಪ್ರತಿ ವರ್ಷ ಒಂದು ಲಕ್ಷ ಕುಟುಂಬಗಳಿಗೆ ನಾಲ್ಕು ನೂರು ರೂಪಾಯಿ ಬೆಲೆಯ ಸಾಮಗ್ರಿಗಳ ರೂಪದಲ್ಲಿ ಸಹಾಯವನ್ನು ಹಾಗೂ ತಾಂತ್ರಿಕ ಮಾರ್ಗದರ್ಶನವನ್ನು ನೀಡಲಾಗುವುದು. ಮಾನ್ಯ ಹಣಕಾಸಿನ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ೪೦೦ ರೂಪಾಯಿಗಳ ಸಾಮಗ್ರಿಗಳನ್ನು ತಾವು ಕೊಡುವುದರಿಂದ ಒಂದು ಶೌಚಾಲಯ ಕಟ್ಟುವಂಥ ಶಕ್ತಿ ಅವನಿಗೆ ಇದೆಯೇ ? ಬಹುಶಃ ನಾನು ಅಂದುಕೊಂಡಿರುವಂತೆ ಈ ಸಾಮಗ್ರಿಗಳನ್ನು ಅವನು ತೆಗೆದುಕೊಂಡು ಪೂಜೆ ಮಾಡಬೇಕೇ ಇದನ್ನು ತೆಗೆದುಕೊಂಡು ಕಟ್ಟಿಸಿಕೊಂಡು ಉಪಯೋಗ ಮಾಡಿಕೊಳ್ಳಬೇಕು ಎಂದು ಇದ್ದರೆ ಲ್ಯಾಟ್ರಿ ಕಟ್ಟಿಕೊಳ್ಳಬೇಕಾದ ದಂಡ್ಡನ್ನು ಕೊಡುವಂಥ ವ್ಯವಸ್ಥೆ

ತಾವು ಮಾಡಿದ್ದೀರಾ ? ಇದರಲ್ಲಿ ನನಗೆ ಅರ್ಥವಾಗುತ್ತಿಲ್ಲ. ಈ ರೀತಿ ಒಂದು ಲಕ್ಷ ಕುಟುಂಬಗಳಿಗೆ ಶೌಚಾಲಯ ಮಾಡುತ್ತೇವೆ, ನಿರ್ಮಲ ಗ್ರಾಮ ಯೋಜನೆ ಮಾಡುತ್ತೇವೆ ಎಂದು ಹೇಳುವಂಥಾದ್ದು ಎಷ್ಟೊಂದು ಹಾಸ್ಯಾಸ್ಪದ ಎನ್ನುವುದಕ್ಕೆ ಈ ಮಾತನ್ನು ತಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ರೈತರ ಬಗ್ಗೆ ತಾವು ಒಂದೇ ಒಂದು ಅನುಕೂಲದ ಮಾತು ಹೇಳಿರುವಂಥಾದ್ದು ಅಂದರೆ "ಸಣ್ಣ ಮತ್ತು ಅತಿ ಸಣ್ಣ ರೈತರು ಪಡೆದುಕೊಂಡಿರುವ ಬೆಳೆ ಸಾಲಕ್ಕೆ ಸಂಬಂಧಿಸಿದಂತೆ ಬಡ್ಡಿ ಸಹಾಯ ಧನ ಒದಗಿಸುವ ಒಂದು ಹೊಸ ಯೋಜನೆಯನ್ನು ೨-೧೦-೯೮ರಿಂದ ಜಾರಿಗೆ ಬರುವಂತೆ ಕಾರ್ಯಗತಗೊಳಿಸಲು ಉದ್ದೇಶಿಸಲಾಗಿದೆ". ಕೇಂದ್ರಸರ್ಕಾರ ಸ್ಪಷ್ಟವಾಗಿ ಈ ರೀತಿ ಸಣ್ಣ ಅತಿ ಸಣ್ಣ ರೈತರು ಮಾತ್ರವಲ್ಲ ಇಡೀ ನಮ್ಮ ರಾಜ್ಯದ ಎಲ್ಲಾ ರೈತರ ಸಾಲ ಮನ್ನಾ ಮಾಡಬೇಕು ಎಂದು ಯೋಚನೆ ಮಾಡತಕ್ಕಂಥ ಸಂದರ್ಭದಲ್ಲಿ ಇಡೀ ದೇಶದಲ್ಲಿ ಚರ್ಚೆಯಾಗುತ್ತಾ ಇರುವಂಥ ಸಂದರ್ಭದಲ್ಲಿ ಕೊನೆಯ ಪಕ್ಷ ನಿಮ್ಮ ಒಂದು ಬಡ್ಜೆಟ್‌ನಲ್ಲಿ ಸಣ್ಣ ಅತಿಸಣ್ಣ ರೈತರ ಸಾಲವನ್ನಾದರೂ ಮನ್ನಾ ಮಾಡಿ ಅವನು ನೆಮ್ಮದಿಯಿಂದ ಜೀವನ ಮಾಡುವುದಕ್ಕೆ ದಾರಿ ಮಾಡಿಕೊಡುತ್ತೇವೆ ಎನ್ನುವಂಥ ಯಾವುದೇ ಒಂದು ಶಬ್ದ ಇರಲಿಲ್ಲ. ಈ ರೀತಿ ಈ ರಾಜ್ಯದ ರೈತನ ಹಿತವನ್ನು ತರುವಂಥ...

ಶ್ರೀ ಎಂ. ರಾಜಶೇಖರ ಮೂರ್ತಿ.—ನಿಮ್ಮ ಬಡ್ಜೆಟ್ ಬಂದಿದೆ, ಏನು ಮಾಡುತ್ತಾರೋ ನೋಡೋಣ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಕೇಂದ್ರದಲ್ಲಿ ಸ್ಪಷ್ಟವಾಗಿ ಹೇಳಿದ್ದಾರೆ. ನ್ಯಾಷನಲ್ ಬ್ಯಾಂಕ್ಸ್‌ಗೆ ಸಂಬಂಧಪಟ್ಟಂಥ ಸಾಲವನ್ನು ಮನ್ನಾ ಮಾಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಕೋ-ಆಪರೇಟೀವ್ ಸೊಸೈಟಿ ಲೋನ್ಸ್ ಏನಿದೆ ಅದು ನಿಮ್ಮ ರಾಜ್ಯ ಸರ್ಕಾರಕ್ಕೆ ಸಂಬಂಧಪಟ್ಟಿರತಕ್ಕಂಥಾದ್ದು. ಇದನ್ನು ಮನ್ನಾ ಮಾಡುವ ದೃಷ್ಟಿಯಲ್ಲಿ ನಿಮ್ಮ ಕಾರ್ಯಕ್ರಮ ಏನು ? ಇದನ್ನು ಇಲ್ಲಿ ಸ್ಪಷ್ಟ ಮಾಡಬೇಕು ಎಂದು ಹೇಳುವುದಕ್ಕೆ ನಾನು ಇಚ್ಛೆ ಪಡುತ್ತಾ ಇದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಯಡಿಯೂರಪ್ಪನವರ ಪಕ್ಷವಾದ ಬಿ.ಜೆ.ಪಿ. ಇವತ್ತು ಕೇಂದ್ರದಲ್ಲಿ ಪ್ರಬಲವಾಗಿದೆ ಅವರ ಸಹಕಾರ ಮತ್ತು ಬೆಂಬಲ ಇಲ್ಲದೇ ಹೋದರೆ, ಒಂದು ದಿವಸ ಕೂಡ ಕೇಂದ್ರ ಸರ್ಕಾರ ಇರುವುದಕ್ಕಾಗುವುದಿಲ್ಲ. ಇವರ ಪ್ರಭಾವ ಅಲ್ಲಿ ಜಾಸ್ತಿ ಇದೆ. ಕೇಂದ್ರದವರು ತಮ್ಮ ಆಯವ್ಯಯ ಪಟ್ಟಿಯನ್ನು ಪ್ರಕಟಣೆ ಮಾಡಿದ್ದಾರೆ. ರೈತರ ಸಾಲ ಮನ್ನಾ ಮಾಡುವುದಕ್ಕೋಸ್ಕರ ಕೇವಲ ೧ ಸಾವಿರ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ರೈತರ ಸಾಲ ತೀರಿಸುವುದಕ್ಕೆ ಬೇಕಾಗಿರತಕ್ಕ ಹಣ ೧೫,೦೦೦ ಕೋಟಿ ರೂಪಾಯಿಗಳು. ೧೫ ಸಾವಿರ ಕೋಟಿ ರೂಪಾಯಿಗಳನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಿದ್ದರೆ, ಇವರು ಹೇಳಿದ ಹಾಗೆ ಮಾಡತಕ್ಕ ಜನ, ದೇಶಕ್ಕೆ ಮತ್ತು ಜನರಿಗೆ ಕೊಟ್ಟಿರತಕ್ಕ ಆಶ್ವಾಸನೆಯಂತೆ ನಡೆದುಕೊಳ್ಳತಕ್ಕ ಜನ ಎಂದು ನಾವು ತಿಳಿದುಕೊಳ್ಳಬಹುದಿತ್ತು. ೧೫ ಸಾವಿರ ಕೋಟಿ ಎಲ್ಲಿ, ೧ ಸಾವಿರ ಕೋಟಿ ಎಲ್ಲಿ, ಖೋತಾ ಬಜೆಟ್ ೭ ಸಾವಿರ ಕೋಟಿ ಎಂದು ಹೇಳಿದ್ದಾರೆ. ೧೪ ಮತ್ತು ೭ ಸಾವಿರ ಸೇರಿದರೆ, ಒಟ್ಟು ೨೧ ಸಾವಿರ ಕೋಟಿ ಖೋತಾ ಬಜೆಟ್ ಆಗುತ್ತದೆ. ಗ್ರಾಮೀಣ ಜನತೆಯ ಅಭಿವೃದ್ಧಿಯಲ್ಲಿ ನ್ಯಾಯವಾದ ನಿಷ್ಠೆ ಇವರಿಗೆ ಬಿ.ಜೆ.ಪಿ.ಯವರು ಜನತಾದಳದ ಮೇಲೆ ಒತ್ತಡ ತಂದು, ಒತ್ತಾಯ ಮಾಡಿ, ರೈತರ ಸಾಲವನ್ನು ಸಂಪೂರ್ಣವಾಗಿ ವಜಾ ಮಾಡದೇ ಇದ್ದರೆ ಬೆಂಬಲ ಕೊಡುವುದಿಲ್ಲವೆಂದು ಪ್ರಕಟಣೆ ಮಾಡಿದರೆ ನಮಗೆ ಆಗುವಷ್ಟು ಆನಂದ ಅವರಿಗೂ ಆಗುವುದಿಲ್ಲ. ಇಲ್ಲಿ ಕುಳಿತಿರುವಂಥ ಬಾಬಾಗೌಡರಿಗೂ, ಅವರ ಹಿಂದೆ ಕುಳಿತಿರುವಂಥ ನನ್ನ ಸ್ನೇಹಿತರು ಹಸಿರು ಟವಲ್ ಹಾಕಿಕೊಂಡಿದ್ದಾರೆ, ಅವರಿಗೂ ಆನಂದವಾಗುತ್ತದೆ. ಇಲ್ಲಿ ನಾವು ಕೊಡುವುದಕ್ಕೆ ನಮ್ಮ ಹತ್ತಿರ ಹಣ ಇಲ್ಲ ಸಹಕಾರಿ ಸಂಸ್ಥೆಯಿಂದ ಕೊಡುವುದಾಗಲೀ, ಬ್ಯಾಂಕುಗಳಿಂದ ಕೊಡುವುದಾಗಲೀ, ಎಲ್ಲವೂ ಕೇಂದ್ರಕ್ಕೆ ಸೇರಿದ ಸಂಸ್ಥೆಗಳೇ ಕೇಂದ್ರ ಸಾಲ ಮನ್ನಾ ಮಾಡಿದ್ದರೆ ಎಷ್ಟು ಆನಂದವಾಗುತ್ತಿತ್ತು. ಇಲ್ಲಿ ತಾವು ಉಪವಾಸ ಇರುತ್ತೀರಿ, ಧರಣಿ ಮಾಡುತ್ತೀರಿ ಇಲ್ಲಿ ಒಂದು ನಡವಳಿಗಳಿಗೆ ಅತಂಕ ಮಾಡುತ್ತೀರಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಬಸವಲಿಂಗಪ್ಪನವರು ರಾಜ್ಯದಲ್ಲಿ ಜವಾಬ್ದಾರಿ ಸ್ಥಾನಗಳಲ್ಲಿದ್ದವರು. ನಮಗೆ ಸ್ವಾತಂತ್ರ್ಯ ಬಂದ ಮೇಲೆ ಮೊದಲ ಬಾರಿಗೆ ರೈತನ ಸಾಲ ಮನ್ನಾ ಮಾಡುವಂಥಾದ್ದು, ಜನತೆಯ ಅಭಿವೃದ್ಧಿ ಬಗ್ಗೆ ಯೋಚನೆ ಮಾಡುವಂಥ ಪರಿಸ್ಥಿತಿ ಎರಡು ಸಾರಿ ಕೇಂದ್ರದಲ್ಲಿ ಬಂದಿದೆ. ಈ ಸಾರಿ ಕೇಂದ್ರ ತಮ್ಮ ಬಜೆಟ್ಟಿನಲ್ಲಿ ೪೦ ಭಾಗವನ್ನು ಇಡುವಂಥ ಪ್ರಾಮಾಣಿಕ ಪ್ರಯತ್ನ ಮಾಡಿದೆ. ಗ್ರಾಮೀಣ ಜನತೆ ಬದುಕುವುದಕ್ಕೆ ಸಾಧ್ಯವಿಲ್ಲದಂಥ ಜೀವನಕ್ಕಾಗಿ ವಲಸೆ ಹೋಗತಕ್ಕ ಹೀನಸ್ಥಿತಿಗೆ ಬರುವುದಕ್ಕೆ ಕಾರಣಕರ್ತರು ಯಾರು? ೪೦ ವರ್ಷಗಳ ನಂತರವಾದರೂ ಗ್ರಾಮೀಣ ಜನತೆಯ ಬಡ ಜನತೆಯ ಬದುಕು ನೆಮ್ಮದಿಯಾಗಲೀ ಎನ್ನುವ ಉದ್ದೇಶದಿಂದ ನಮ್ಮ ಪಕ್ಷ ಕೂಡ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕೂಡ ಸ್ಪಷ್ಟವಾಗಿ ಹೇಳಿದೆ. ಜನತೆಯ ನೆಮ್ಮದಿಯ

ಜೀವನಕ್ಕೆ ಬೇಕಾದ ಸವಲತ್ತುಗಳನ್ನು ಕೊಡಬೇಕು, ರೈತರು ಬೆಳೆದಂಥ ಬೆಳೆಗೆ ಯೋಗ್ಯ ಬೆಲೆ ಕೊಡಬೇಕು. ರೈತರ ಸಾಲವನ್ನು ಮನ್ನಾ ಮಾಡದೇ ಹೋದರೆ, ಗೌರವದಿಂದ ಬದುಕುವುದಕ್ಕೆ ಸಾಧ್ಯವಿಲ್ಲವೆಂದು ಸ್ಪಷ್ಟಪಡಿಸಿದ್ದೇವೆ. ನಾವು ಕೇಂದ್ರದ ಮೇಲೆ ಒತ್ತಾಯ ತಂದಿದ್ದರ ಪರಿಣಾಮವೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಪಡೆದಿರುವಂಥ ೧೦ ಸಾವಿರ ರೂಪಾಯಿಗಳ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿರುವುದು. ಈ ಸಾರಿ ಒಂದು ಸಾವಿರ ಕೋಟಿ ಇಟ್ಟಿದ್ದಾರೆ. ಹಂತಹಂತವಾಗಿ ಮಾಡುತ್ತಾರೆ; ಸಾಲವನ್ನು ಯಾವರೀತಿ ಅಡ್ಜಸ್ಟ್‌ಮೆಂಟ್ ಮಾಡಬಹುದು ಎನ್ನುವುದನ್ನು ಕೇಂದ್ರ ಸರ್ಕಾರ ಯೋಚನೆ ಮಾಡಬೇಕು.

೧-೦೦ ಪಿ.ಎಂ.

ಒಂದು ಸಾರಿ ಕೇಂದ್ರಸರ್ಕಾರ ಹತ್ತು ಸಾವಿರ ರೂಪಾಯಿಗಳವರೆಗೆ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಘೋಷಣೆ ಮಾಡಿದಮೇಲೆ ಆ ಸಾಲವನ್ನು ವಸೂಲು ಮಾಡುವ ಧೈರ್ಯ ಯಾರಿಗಾದರೂ ಸಾಧ್ಯ ಇದೆ ಏನು. ಒಂದು ಸಾರಿ ನ್ಯಾಷನಲೈಸ್ಡ್ ಬ್ಯಾಂಕಿಗೆ ಸಂಬಂಧಪಟ್ಟ ಸಾಲವನ್ನು ಮನ್ನಾ ಮಾಡಿದಮೇಲೆ, ತಾವು ಚುನಾವಣೆಗೆ ಮುಂಚೆ ಹತ್ತುಸಾವಿರ ರೂಪಾಯಿ ರೈತನ ಸಾಲವನ್ನು ಮನ್ನಾ ಮಾಡುತ್ತೇವೆ. ಈ ಬಗ್ಗೆ ಕೇಂದ್ರಕ್ಕೆ ಒತ್ತಾಯಿಸುತ್ತೇನೆ ಎಂದು ಹೇಳಿಬಂದ ಮೇಲೆ ಇವೊತ್ತು ರಾಜ್ಯಸರ್ಕಾರದ್ದು ಏನೂ ಜವಾಬ್ದಾರಿ ಇಲ್ಲವೇನು ?

ಶ್ರೀ ಬಿ. ಬಸವಲಿಂಗಪ್ಪ.— ರಾಜ್ಯಸರ್ಕಾರ ನಾವು ಇಬ್ಬರೂ ಸೇರಿಕೊಂಡು ಒತ್ತಾಯ ಮಾಡುವುದು ಅಷ್ಟು ಜವಾಬ್ದಾರಿ.

ಶ್ರೀ ಬಿ.ಎಸ್. ಯಡಿಯೂರಪ್ಪ.— ತಾವು ಅಲ್ಲಿ ಕುಳಿತಾಗ ತುಂಬಾ ಜವಾಬ್ದಾರಿಯಿಂದ ಮಾತನಾಡಬೇಕಾಗುತ್ತದೆ. ರೈತನ ಸಾಲವನ್ನು ಮನ್ನಾ ಮಾಡಬೇಕೆಂದು ಚುನಾವಣಾ ಪ್ರಣಾಳಿಕೆಯಲ್ಲಿ ಸೇರಿಸಿದಾಗ, ಗ್ರಾಮೀಣ ರೈತ ತಾನು ಬೆಳೆದಂಥ ಬೆಳೆಗೆ ಸರಿಯಾದ ಬೆಲೆ ಸಿಕ್ಕದೆ, ಸಾಲ ಕೊಡಲಿಕ್ಕೆ ಸಾಧ್ಯವಾಗದ ದುಸ್ಥಿತಿಗೆ ಬಂದಿದ್ದಾನೆಂದು ತಮಗೆ ಮನವರಿಕೆ ಆದಮೇಲೆ ತಾನೇ ತಾವು ಈ ಮಾತನ್ನು ಹೇಳಿದ್ದುದು. ಈ ರೀತಿ ಇರಬೇಕಾದರೆ, ರಾಜ್ಯಸರ್ಕಾರದ ಬೊಕ್ಕಸದಿಂದ ಇಷ್ಟು ಹಣವನ್ನು ಕೊಡುತ್ತೇವೆಂದು ಹೇಳಲಿಕ್ಕೆ ನಿಮಗೆ ಕಷ್ಟ ಏನು ತಾವು ೩೬೦ ಕೋಟಿ ರೂಪಾಯಿ ಏನೋ ಹೇಳುತ್ತಿದ್ದೀರಿ. ನಾನು ಹೇಳಿದೆ ೨೬೦ ಕೋಟಿ ರೂಪಾಯಿ ಆಗಬಹುದು. ಇದರಲ್ಲಿ ನೂರು ಕೋಟಿ ರೂಪಾಯಿಗಳನ್ನು ನಮ್ಮ ರಾಜ್ಯಸರ್ಕಾರದಿಂದ ನಾವು ಕೊಡುತ್ತೇವೆಂದು ಹೇಳಿ. ದುಡ್ಡು ನಿಮ್ಮ ಹತ್ತಿರ ಇಲ್ಲದೇ ಇದ್ದರೆ, ಬಡ್ಡಿ ರಹಿತ ಸಾಲ ಕೊಡಿ ಎಂದು ಕೇಂದ್ರಸರ್ಕಾರವನ್ನು ಕೇಳಬಹುದು ಆದಕ್ಕಾಗಿಯೇ ಒಂದು ಸ್ಕೀಮು ಮಾಡಿಕೊಂಡು ಬನ್ನಿ. ನಿಮಗೆ ಸಹಾಯ ಮಾಡುತ್ತೇವೆಂದು ಹೇಳಿದ್ದುದು ನಿಮಗೆ ಜ್ಞಾಪಕ ಇರಬೇಕು. ಅಲ್ಲಿ ಜನತಾದಳ ಸರ್ಕಾರ ಇದ್ದಾಗ ರೈತನ ಸಾಲ ಬಡ್ಡಿ ಮನ್ನಾ ಮಾಡುವ ತೀರ್ಮಾನವನ್ನು ತೆಗೆದುಕೊಂಡಾಗ ನಬಾರ್ಡ್ ಅದನ್ನು ವಿರೋಧ ಮಾಡಿದಾಗ ನಿಮ್ಮ ಕೇಂದ್ರಸರ್ಕಾರ ರಕ್ಷಣೆಗೆ ಬರಲಿಲ್ಲ. ಮೊದಲಬಾರಿಗೆ ಗ್ರಾಮೀಣ ಜನತೆಯ ಬಗ್ಗೆ ಒಂದು ಯೋಜನೆ ಮಾಡುವಂಥದ್ದು ಪ್ರಾರಂಭವಾಗಿರುವಂಥ ಈ ಸಂದರ್ಭದಲ್ಲಿ ಅವನ ಬಗ್ಗೆ ನಿಮ್ಮ ಕಳಕಳಿ ಏನು, ರೈತನ ಬಗ್ಗೆ ಒಂದು ಶಬ್ದವನ್ನಾದರೂ ಹೇಳಿದ್ದೀರಾ ? ಇವೊತ್ತು ರೈತ ಬರಗಾಲಕ್ಕೆ ತುತ್ತಾಗಿದ್ದಾನೆಂದು ಹೇಳುತ್ತೇವೆ, ಅವನು ಬೆಳದಂಥ ಬೆಳೆಗೆ ಯೋಗ್ಯ ಬೆಲೆ ಸಿಕ್ಕಲಿಲ್ಲ ಎಂದು ಹೇಳುತ್ತೇವೆ. ಇವೊತ್ತು ಸಮಾಜದ ಋಣವನ್ನು ತೀರಿಸಬೇಕೆಂದು ಪದೇ ಪದೇ ನಾವು ರೈತರ ಪರವಾಗಿ ಏತಕ್ಕೆ ಹೇಳುತ್ತೇವೆ - ಅದನ್ನು ತಾವು ಗಮನಿಸಬೇಕು. ಇನ್ನು ಇವೊತ್ತು ತಮಗೆ ಗೊತ್ತಿರುವ ಹಾಗೆ ನೀವು ಪಡಿತರ ವ್ಯವಸ್ಥೆಯಲ್ಲಿ ಸಕ್ಕರೆಯನ್ನು ಕೊಡುತ್ತೀರಿ. ಇದನ್ನು ಗ್ರಾಮೀಣ ಪ್ರದೇಶ ಮತ್ತು ನಗರಪ್ರದೇಶ ಎರಡೂ ಕಡೆಗಳಲ್ಲಿ ಕೊಡುತ್ತೀರಿ. ರೈತ ಬೆವರು ಸುರಿಸಿ, ಕಬ್ಬು ಬೆಳೆಯುತ್ತಾನೆ. ಅವನು ಬೆಳೆದಂಥ ಬೆಳೆಗೆ ಸರಿಯಾದಂತಹ ಬೆಲೆಯನ್ನು ತಾವು ಕೊಡುವುದಿಲ್ಲ. ಆತನಿಗೆ ಕಡಿಮೆ ಬೆಲೆಯನ್ನು ಕೊಡುತ್ತೀರಿ. ಸಕ್ಕರೆ ಕಾರ್ಖಾನೆಯ ಮಾಲೀಕನಿಂದ ಲೆವಿ ರೂಪದಲ್ಲಿ ಸಕ್ಕರೆಯನ್ನು ತಂದು ಪಡಿತರ ಪದ್ಧತಿಯಲ್ಲಿ ಗ್ರಾಮೀಣ ಪ್ರದೇಶದ ಜನರಿಗೆ, ನಗರ ಪ್ರದೇಶದ ಜನರಿಗೆ ಹಂಚುವಂಥ ವ್ಯವಸ್ಥೆ ಮಾಡುತ್ತಿದ್ದೀರಿ. ಅದೇ ರೈತ ಭತ್ತವನ್ನು ಬೆಳೆಯುತ್ತಾನೆ, ಆ ಭತ್ತವನ್ನು ಸುಗ್ಗಿ ಕಾಲದಲ್ಲಿ, ಕಡಿಮೆ ಬೆಲೆಗೆ ಕೊಂಡು ಲೆವಿ ರೂಪದಲ್ಲಿ ಕೊಂಡು ಅದನ್ನು ಪಡಿತರ ವ್ಯವಸ್ಥೆಯಲ್ಲಿ ಕಡಿಮೆ ಬೆಲೆಗೆ ಹಂಚುವಂಥಾದ್ದು ಮಾಡುತ್ತಿದ್ದೀರಿ,

ಶ್ರೀ ಬಿ. ಬಸವಲಿಂಗಪ್ಪ.—ಈಗ ತಾವು ೨೫೦-೩೦೦ ಕೋಟಿ ರೂಪಾಯಿ ಕೊಡಿ, ಎಂದು ಹೇಳಿದಿರಿ. ಈಗ ತಾವು ಒಂದು ಕೆಲಸ ಮಾಡಿ, ನಮ್ಮ ಸರ್ಕಾರದಲ್ಲಿ ಆದಾಯ ಎಷ್ಟು ಇದೆ, ಖರ್ಚು

ಎಷ್ಟು ಇದೆ, ತಾವೇ ನೋಡಿ. ಈಗ ನಮ್ಮ ಸರ್ಕಾರದಲ್ಲಿ ೭೫೦ ಕೋಟಿ ರೂಪಾಯಿ ಉಳಿದಿದೆ ಅಂದರೆ ನಾವು ನಿಮಗೆ ಮನ್ನಣೆ ಮಾಡುತ್ತೇವೆ. ತಾವೇ ತೋರಿಸಿಕೊಡಿ. ಆದಾಯ ಇಲ್ಲದೇ ಇದ್ದರೆ, ಎಲ್ಲಿಂದ ತಂದುಕೊಡುತ್ತೀರಿ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ನಮ್ಮ ಸರ್ಕಾರ ಈ ಒಂದು ಬಡ್ಜೆಟ್‌ನಲ್ಲಿ ಶೇಕಡಾ ೪೮ ಭಾಗ ಸರ್ಕಾರಿ ಸಿಬ್ಬಂದಿಗೆ ಹಣವನ್ನು ಖರ್ಚು ಮಾಡುತ್ತಿದೆ ಇದನ್ನು ಉಳಿಸುವಂಥ ಕಾರ್ಯಕ್ರಮ ಇದರಲ್ಲಿ ಏನಾದರೂ ಇದೆಯೇ ? ಇವೊತ್ತು ಪಬ್ಲಿಕ್ ಅಂಡರ್‌ಟೇಕಿಂಗ್ಸ್‌ನಲ್ಲಿ ಕೋಟ್ಯಾಂತರ ರೂಪಾಯಿಗಳು ಸೋರಿ ಹೋಗುತ್ತದೆ ಎಂದು ಹೇಳಿದ್ದೀರಿ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಮ್ಯಾನೇಜಿಂಗ್ ಡೈರೆಕ್ಟರ್ ಒಬ್ಬರು ಇನ್ನೊಬ್ಬರು ಜನರಲ್ ಮ್ಯಾನೇಜರ್, ಇನ್ನೊಬ್ಬರು ಅಸಿಸ್ಟೆಂಟ್ ಜನರಲ್ ಮ್ಯಾನೇಜರ್, ಇವರುಗಳಿಗೆಲ್ಲಾ ಎರಡೆರಡು ಕಾರುಗಳು. ಎನ್.ಜಿ.ಇ.ಎಫ್. ನಲ್ಲಿರತಕ್ಕ ಅಧಿಕಾರಿಗಳು ಹೊರಗಡೆಯಿಂದ ಸ್ಪೇರ್‌ಪಾರ್ಟ್ಸ್ ಖರೀದಿಸಿ ತಮ್ಮ ಹೆಂಡತಿ ಮಕ್ಕಳ ಹೆಸರಿನಲ್ಲಿ ಈ ಕಾರ್ಖಾನೆಯನ್ನು ಮುಳುಗಿಸುವಂಥ ಪ್ರಯತ್ನವನ್ನು ಮಾಡುತ್ತಿದ್ದಾರೆ. ಇದನ್ನು ಸರಿಪಡಿಸುವುದರಲ್ಲಿ, ಈ ಸದನದಲ್ಲಿ ನೂರು ಸಾರಿ ಚರ್ಚೆ ಆಯಿತಲ್ಲ, ಅದನ್ನು ಉಳಿಸುವ ಬಗ್ಗೆ ನಿಮ್ಮ ಕಡೆಯಿಂದ ಏನಾದರೂ ಪ್ರಯತ್ನ ಆಗಿದೆಯೋ ?

ಶ್ರೀ ಬಿ. ಬಸವಲಿಂಗಪ್ಪ.—ಅವರು ನೀರಿನ ಪೈಪ್ ಸಪ್ಲೈ ಮಾಡಿದ್ದಾರೆ ಅದನ್ನು ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಇವೊತ್ತು ಸರ್ಕಾರದ ಬೊಕ್ಕಸದಲ್ಲಿ ಸೋರಿ ಹೋಗುವಂಥದ್ದಕ್ಕೆ ಸಲಹೆ ಕೇಳಿದಿರಿ. ಪಬ್ಲಿಕ್ ಅಂಡರ್ ಟೇಕಿಂಗ್ಸ್‌ನಲ್ಲಿ ಕೋಟ್ಯಾಂತರ ರೂಪಾಯಿಗಳನ್ನು ಇನ್‌ವೆಸ್ಟ್ ಮಾಡಿದ ಮೇಲೂ, ಅಲ್ಲಿ ಹಣ ಸೋರಿ ಹೋಗುತ್ತಿರುವಾಗ ಅದನ್ನು ಉಳಿಸುವುದಕ್ಕೆ ನಿಮ್ಮ ಕಡೆಯಿಂದ ಏನು ಪ್ರಯತ್ನ ಆಗಿದೆ. ನೀವು ಏನು ಮಾಡಿದ್ದೀರಿ. ಕೋಟ್ಯಾಂತರ ರೂಪಾಯಿಗಳ ಬಂಡವಾಳ ಹಾಕಿ, ಪ್ರತಿವರ್ಷ ಕೋಟ್ಯಾಂತರ ರೂಪಾಯಿಗಳ ನಷ್ಟವನ್ನು ಈ ಸಾರ್ವಜನಿಕ ಉದ್ದಿಮೆಗಳಲ್ಲಿ ಅನುಭವಿಸುತ್ತಿದ್ದೇವೆ. ಇವುಗಳ ಬಗ್ಗೆ ಕೂಡಲೇ ಗಮನಹರಿಸುವುದು ಅಗತ್ಯ. ಇನ್ನು ಸೇಲ್ಸ್ ಟ್ಯಾಕ್ಸ್‌ನಲ್ಲಿ ದೊಡ್ಡ ಪ್ರಮಾಣದಲ್ಲಿ ಹಣ ಸೋರಿಹೋಗುತ್ತಿದೆ. ಎಕ್ಸೈಜ್‌ನಲ್ಲೂ ಕೂಡ ಕೋಟ್ಯಾಂತರ ರೂಪಾಯಿಗಳು ಸೋರಿಹೋಗುತ್ತಿದೆ. ಶ್ರೀ ದೇವೇಗೌಡರು ಮಹಾತ್ಮ ಗಾಂಧಿಯ ಪ್ರತಿಮೆಯ ಹತ್ತಿರ ಹೋಗಿ ಹಾರ ಹಾಕಿ ಆ ಸರ್ಕಾರ ಇದ್ದಾಗ ಪ್ರತಿಭಟನೆ ಮಾಡಿದರು. ಒಂದು ದಿವಸಕ್ಕೆ ಒಂದು ಕೋಟಿ ರೂಪಾಯಿ ಸೋರಿ ಹೋಗುತ್ತಿದೆಂದು ಅವರು ಹೇಳಿದರು. ಅದನ್ನು ಸರಿಪಡಿಸಲು ನೀವು ಏನು ಪ್ರಾಮಾಣಿಕ ಪ್ರಯತ್ನ ಮಾಡಿದ್ದೀರೆಂಬುದನ್ನು ತಿಳಿಸಬೇಕು. ನೀವು ಮೂರು ಪ್ರಯತ್ನಗಳನ್ನು ಮಾಡಿದರೆ ಸಾಕು ಹಣವನ್ನು ಉಳಿತಾಯ ಮಾಡಬಹುದು. ಒಂದು ಎಕ್ಸೈಸ್‌ನಿಂದ ಬರತಕ್ಕ ತೆರಿಗೆಯಲ್ಲಿ ಸೋರುವಿಕೆ ಎರಡು, ಸೇಲ್ಸ್‌ಟ್ಯಾಕ್ಸ್‌ನಲ್ಲಿರತಕ್ಕ ಸೋರುವಿಕೆಯನ್ನು ತಡೆಗಟ್ಟುವುದು. ಹಾಗೂ ಈ ಬಾಬುಗಳಿಂದ ಬರಬೇಕಾದ ಬಾಕಿಯನ್ನು ವಸೂಲಿ ಮಾಡುವುದು. ಈ ರೀತಿ ಕ್ರಮ ಕೈಗೊಂಡರೆ ನೀವು ಸುಮಾರು ೩೫೦ ಕೋಟಿ ರೂಪಾಯಿಗಳನ್ನು ಕ್ರೋಢೀಕರಿಸಬಹುದು. ಆದ್ದರಿಂದ ನೀವು ರೈತರ ನೆರವಿಗೆ ಬರಬಹುದು. ಭ್ರಷ್ಟಾಚಾರವನ್ನು ತಡೆಗಟ್ಟಲು ಏನು ಕಾರ್ಯಕ್ರಮವನ್ನು ಕೈಗೊಂಡಿದ್ದೀರೆಂಬುದನ್ನು ತಿಳಿಸಬೇಕು. ಯಾವ ಅಧಿಕಾರಿಯೂ ಪ್ರಮಾಣಿಕವಾಗಿ ಕೆಲಸ ಮಾಡುತ್ತಿಲ್ಲ. ಆಡಳಿತ ಬಹಳ ಕಳಪೆಯಾಗಿದೆ.

ಶ್ರೀ ಬಿ. ಬಸವಲಿಂಗಪ್ಪ.—ಬಾಕಿ ಎಷ್ಟು ಬರಬೇಕಾಗಿದೆ ಎಂಬುದನ್ನು ಹೇಳಿ ?

ಶ್ರೀ ಬಿ.ಎಸ್. ಯಡಿಯೂರಪ್ಪ.—ಸೇಲ್ಸ್‌ಟ್ಯಾಕ್ಸ್ ಮತ್ತು ಎಕ್ಸೈಜ್‌ನ್ನು ಬಿಗಿ ಮಾಡಿದರೆ ಬಹಳ ಹಣ ಬರುತ್ತದೆ. ಹಾಗೂ ಬಾಕಿ ವಸೂಲಿಯ ಬಗ್ಗೆ ಕೈಗೊಂಡ ಕ್ರಮಗಳನ್ನು ತಿಳಿಸಬೇಕು. ಇವತ್ತು ಪಿ.ಡಬ್ಲ್ಯೂ.ಡಿ. ಮತ್ತು ಇಂಗೇಷನ್‌ನಲ್ಲಿ ಹಣ ಸೋರಿ ಹೋಗುತ್ತದೆ. ಅನೇಕ ಇಲಾಖೆಗಳ ಬಗ್ಗೆ ಅನೇಕಸಲ ನಾವು ಇಲ್ಲಿ ಆರೋಪಿಸಬೇಕಾಗಿದೆ, ಇದನ್ನು ಸರಿಪಡಿಸಲು ನಿಮ್ಮ ಕಡೆಯಿಂದ ಯಾವ ಪ್ರಯತ್ನ ಆಗಿದೆ ಎಂಬುದನ್ನು ತಿಳಿಸಬೇಕು. ರಾಜ್ಯಸರ್ಕಾರಕ್ಕೆ ಬರಬೇಕಾದ ತೆರಿಗೆಗಳಲ್ಲಿ ಇರತಕ್ಕ ಸೋರುವಿಕೆಯನ್ನು ನಿಲ್ಲಿಸಿದರೆ ರೈತರ ಸಾಲವನ್ನು ಮನ್ನಾ ಮಾಡಬಹುದು, ರಾಜ್ಯದ ಆಡಳಿತವನ್ನು ಚುರುಕುಗೊಳಿಸಬೇಕು. ಆಡಳಿತ ವೆಚ್ಚ ಹೆಚ್ಚಾಗಿದೆ. ಎಲ್ಲಾ ಹಣವನ್ನು ಬಕಾಸುರಾ ನುಂಗಿದಂತಾಗಿದೆ. ಗ್ರಾಮೀಣ ಜನತೆಗೆ ಉದ್ಯೋಗ ಕೊಡಬೇಕೆನ್ನುವುದು ತಮ್ಮ ನಿಜವಾದ ಅಪೇಕ್ಷೆಯಾಗಿದ್ದರೆ, ನಗರಪ್ರದೇಶಗಳಲ್ಲಿ, ಕೇಂದ್ರೀಕೃತವಾಗಿರುವ ದೊಡ್ಡ ದೊಡ್ಡ ಉದ್ದಿಮೆಗಳನ್ನು ಗ್ರಾಮೀಣ ಪ್ರದೇಶಗಳಲ್ಲಿ ಬರುವಂತೆ ಮಾಡುವ ದಿಟ್ಟ ಹೆಜ್ಜೆಯನ್ನು ತಾವು ಇಡಬೇಕು. ನಗರ ಪ್ರದೇಶಗಳಲ್ಲಿ ದೊಡ್ಡ ದೊಡ್ಡ ಉದ್ದಿಮೆಗಳು ಕೇಂದ್ರೀಕೃತವಾಗಿರುವುದನ್ನು ನಿಲ್ಲಿಸಬೇಕು. ಗ್ರಾಮಾಂತರ ಪ್ರದೇಶಗಳಲ್ಲಿ ದೊಡ್ಡ ಉದ್ದಿಮೆಗಳು ಬರಲು ಎಲ್ಲಾ ಪ್ರೋತ್ಸಾಹ ನೀಡಬೇಕು. ಈ

ರೀತಿ ತಾವು ಪ್ರಮಾಣಿಕ ಪ್ರಯತ್ನ ಮಾಡಿದರೆ ಗ್ರಾಮೀಣ ಪ್ರದೇಶದಲ್ಲಿರತಕ್ಕ ನಿರುದ್ಯೋಗಿ ಯುವಕರಿಗೆ ಉದ್ಯೋಗವನ್ನು ಒದಗಿಸಿದಂತಾಗುತ್ತದೆ.

ಪುರಸಭೆಗಳು ನಗರಸಭೆಗಳ ಮತ್ತು ಮಹಾ ನಗರಪಾಲಿಕೆಗಳ ಚುನಾವಣಾ ಸಂದರ್ಭದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಏನು ತೀರ್ಮಾನವನ್ನು ತೆಗೆದುಕೊಂಡರು ಅದರಿಂದ ಈ ರಾಜ್ಯದ ಜನತೆಗೆ ಬಹಳ ಸಂತೋಷವಾಯಿತು. ನಂತರ ಚುನಾವಣೆಯನ್ನು ಮುಂದೂಡುವ ವೇಳೆಯಲ್ಲಿ ವಿರೋಧ ಪಕ್ಷದ ನಾಯಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು ತೀರ್ಮಾನ ಮಾಡಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಈ ಚುನಾವಣೆಯು ನಿಶ್ಚಿತವಾದ ದಿನಾಂಕ ನಡೆಯುತ್ತದೆಂದು ಕ್ಯಾಲೆಂಡರ್ ಅಫ್ ಇವೆಂಟ್ಸ್ ಹಾಕಿದ ಮೇಲೆ ೬೦ ದಿವಸಗಳಲ್ಲಿ ಚುನಾವಣೆ ನಡೆಯಬೇಕು. ಯಾರಾದರೂ ಹೈಕೋರ್ಟಿಗೆ ಹೋಗಿ ರಿಟ್ ಹಾಕಿದರೆ ಈ ಚುನಾವಣೆ ನಡೆಯುವುದಕ್ಕೆ ತಡೆಯಾಜ್ಞೆ ಬಂದರೂ ಬರಬಹುದು.

ಈ ಬಜೆಟ್‌ನಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಲಿ, ಮಹಿಳೆಯ ಅಭಿವೃದ್ಧಿ ದೃಷ್ಟಿಯಿಂದಾಗಲಿ, ಗ್ರಾಮೀಣ ರೈತರ ಒಂದು ಅಭಿವೃದ್ಧಿ ದೃಷ್ಟಿಯಿಂದಾಗಲಿ ಯಾವುದೇ ಒಂದು ಮಾತನ್ನು ಹೇಳಿಲ್ಲ. ಪುಟ ೫೧ರಲ್ಲಿ ಕೆಲವು ತೆರಿಗೆಗಳನ್ನು ಜಾಸ್ತಿ ಮಾಡಿದ್ದೀರಿ. ವೃತ್ತಿ ತೆರಿಗೆಯನ್ನು ಹೆಚ್ಚು ಮಾಡಿದ್ದೀರಿ. ಸರಕಾರದಲ್ಲಿ ಕೆಲಸ ಮಾಡತಕ್ಕ ಪ್ರಮಾಣಿಕ ವ್ಯಕ್ತಿಗಳಿಗೆ ಇದು ತುಂಬಲಾರದ ಭಾರವಾಗಿದೆ. ಆದ್ದರಿಂದ ಅದನ್ನು ಕೈಬಿಡಬೇಕು. ಯಾರು ಸಾಮಾನ್ಯ ಜನ ಗ್ರಾಮೀಣ ಪ್ರದೇಶ ಗಳಲ್ಲಿ ಸಣ್ಣ ಸಣ್ಣ ಫೋಟೋ ಸ್ಟುಡಿಯೋಗಳನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದಾರೆ ಅವರಿಗೆ ಒಂದು ವರ್ಷಕ್ಕೆ ೨೫೦ ರೂಪಾಯಿಯಿಂದ ೫೦೦ ರೂಪಾಯಿಗಳ ತೆರಿಗೆಯನ್ನು ಹಾಕಿದ್ದೀರಿ. ಅದನ್ನು ತಾವು ಕೈಬಿಡಬೇಕು. ಹಾಗೆ ಒಂದು ದಿವಸಕ್ಕೆ ೧೦-೧೨ ಬಟ್ಟೆಗಳನ್ನು ಇಸ್ತ್ರಿ ಮಾಡಿ ಡ್ರೈಕ್ಲೀನ್ ಕೆಲಸ ಮಾಡುತ್ತಿರುವವರಿಗೆ ೨೫೦ ರೂಪಾಯಿಯಿಂದ ೫೦೦ ರೂಪಾಯಿಗೆ ಏರಿಸಿದ್ದೀರಿ. ಇದನ್ನು ಕೈಬಿಡ ಬೇಕು. ಗ್ರಾಮೀಣ ಪ್ರದೇಶದ ಸಾಮಾನ್ಯ ಜನರ ಮೇಲೆ ಬೀಳುವಂತಹ ಈ ಕೆಲವು ತೆರಿಗೆಗಳನ್ನು ತಾವು ಕೈಬಿಡಬೇಕು.

ಕೃಷಿ ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ರೈತನು ಬೆಳೆಯುವಂತಹ ಬೆಳೆಗೆ ಸರಿಯಾದಂತಹ ಯೋಗ್ಯ ಬೆಲೆಯನ್ನು ಕೊಡಬೇಕು. ಮತ್ತು ಯಾವ ನೀರಾವರಿ ಯೋಜನೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲ ಅದಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಸರಕಾರವನ್ನು ಒತ್ತಾಯ ಮಾಡುತ್ತಾ ಮತ್ತೊಮ್ಮೆ ಈ ರಾಜ್ಯದ ರೈತನ ಹಿತದೃಷ್ಟಿಯಿಂದ ಕೋ ಅಪರೇಟಿವ್ ಬ್ಯಾಂಕ್‌ನಲ್ಲಿ ರೈತರು ತೆಗೆದುಕೊಂಡಿರುವಂತಹ ಸಾಲಗಳು ಏನು ಇದೆ ಅದನ್ನು ಮನ್ನಾ ಮಾಡುವಂತಹ ಒಂದು ಕಾರ್ಯಕ್ರಮವನ್ನು ತಾವು ರೂಪಿಸಬೇಕು. ಸಹಕಾರಿ ಸಂಸ್ಥೆಗಳ ಮೂಲಕ ರೈತರು ಪಡೆದು ಕೊಂಡಂತಹ ಸಾಲವನ್ನು ಮನ್ನಾ ಮಾಡದಿದ್ದರೆ ತಾವು ಗ್ರಾಮೀಣ ಪ್ರದೇಶಕ್ಕೆ ಹೋದಾಗ ಇಲ್ಲವೇ ಚುನಾವಣೆಗೆ ಹೋದಾಗ ಅನಾವಶ್ಯಕವಾಗಿ ರೈತನ ಜೊತೆಯಲ್ಲಿ ಸಂಘರ್ಷಕ್ಕೆ ಇಳಿಯಬೇಕಾಗುತ್ತದೆ. ರೈತರು ತೆಗೆದುಕೊಂಡಂತಹ ಸಾಲವನ್ನು ವಾಪಸ್ ಮಾಡದಿದ್ದರೆ ಸಹಕಾರ ಸಂಸ್ಥೆಗಳು ಬದುಕುವುದು ಹೇಗೆ ಎಂಬ ಮಾನ್ಯ ಬಸವಲಿಂಗಪ್ಪನವರ ನಿಲುವು ಏನು ಇದೆ ಇದು ಸರಿಯಲ್ಲ. ಇಂತಹ ನಿಲುವು ಇರುವಂತಹ ಸರಕಾರದಲ್ಲಿ ಈ ರಾಜ್ಯದ ರೈತನಿಗೆ ನ್ಯಾಯ ಸಿಗುತ್ತದೆಯೇ ?

ಶ್ರೀ ಬಿ. ಬಸವಲಿಂಗಪ್ಪ.—ಯಾರೇ ಆಗಲೀ ಸಾಲವನ್ನು ತೆಗೆದುಕೊಂಡವರು ವಾಪಸ್ ಕೊಡಲೇ ಬೇಕಾಗುತ್ತದೆ ಅಂತಹ ಪ್ರವೃತ್ತಿ ಇರಬೇಕು. ಸಾಲ ತೆಗೆದುಕೊಂಡು, ಹೇಗೋ ಶಾಸಕರಿದ್ದಾರೆ ಅವರು ಸಾಲವನ್ನು ವಜಾ ಮಾಡಿಸುತ್ತಾರೆಂದು ಹೇಳುವುದು ಸರಿಯಲ್ಲ. ಸಾಲವನ್ನು ವಾಪಸ್ ಕೊಡದೇ ಹೋದರೆ ಸಹಕಾರಿ ಸಂಸ್ಥೆಗಳು ಹೇಗೆ ನಡೆಯುತ್ತವೆ ಅವನ್ನು ಮುಚ್ಚಬೇಕಾಗುತ್ತದೆ. ಕೊಡುವುದು ತೆಗೆದುಕೊಳ್ಳುವ ಲೇವಾದೇವಿ ಏನು ಇದೆ ಇದಕ್ಕೆ ತಾವು ಪ್ರೋತ್ಸಾಹ ಕೊಡಬೇಕು. ಈ ಸಾರಿ ಬಹಳ ಕಷ್ಟಪಟ್ಟು ಮಾಡಿದ್ದೀರಿ ಮುಂದಕ್ಕೆ ಮಾಡುವುದಕ್ಕೆ ಹೋಗಬೇಡಿ. ರೈತರಿಗೆ ಸಹಾಯ ಮಾಡುವಲ್ಲಿ ನಾವೂ ನಿಮ್ಮ ಜೊತೆಗಿದ್ದೇವೆ. ಅದಕ್ಕೆ ಒಂದು ಯೋಜನೆ ಹಾಕಿಕೊಳ್ಳಬೇಕು ಯಾವ ರೂಪದಲ್ಲಿ ಇಂಡಸ್ಟ್ರೀಸ್‌ಗೆ ದುಡ್ಡು ಕೊಡುತ್ತೇವೆ ಮತ್ತು ಅದನ್ನು ವಜಾ ಮಾಡುತ್ತೇವೆ ಅದೇ ರೀತಿಯಾಗಿ ಇದನ್ನೂ ಮಾಡಿ ಏಕೆ ಮಾಡಬಾರದೆಂದು ಪ್ರಶ್ನೆ ಹಾಕಿದರೆ ಏನು ಮಾಡುವುದು ಇದರ ಬಗ್ಗೆ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಕೆಲವು ವಿಚಾರಗಳಲ್ಲಿ ಮಾನ್ಯ ಬಸವಲಿಂಗಪ್ಪನವರದ್ದೇ ಆದ ಪ್ರತ್ಯೇಕ ವಾದ ಒಂದು ವಾದ ಇದೆ. ಅದನ್ನು ಕಾಂಗ್ರೆಸ್ ಪಾರ್ಟಿ ವಾದವೆಂದು ಹೇಳುವುದಕ್ಕೆ ಬರುವುದಿಲ್ಲ. ಇನ್ನೂ ಬಹಳ ಜನ ಸದಸ್ಯರು ಮಾತನಾಡುವವರಿದ್ದಾರೆ ತಾವು ಅವಕಾಶ ಮಾಡಿಕೊಡಿ. ನಾನು ನಿಮ್ಮ ಸ್ನೇಹಿತ ಮತ್ತು ಶಿಷ್ಯನೂ ಆಗಿದ್ದೇನೆ. ಮಾನ್ಯ ರಾಜಶೇಖರಮೂರ್ತಿಯವರು ಇದ್ದಾರೆ ಅವರು

ಉತ್ತರ ಕೊಡಲಿ. ನಿಮ್ಮ ವಿಚಾರವನ್ನು ಅವರು ಒಪ್ಪುವುದಿಲ್ಲ. ಅವರ ವಿಚಾರವನ್ನು ನೀವು ಒಪ್ಪುವುದಿಲ್ಲ ಅಂತಹ ಪರಿಸ್ಥಿತಿ ಇದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಬಸವಲಿಂಗಪ್ಪನವರೇ ತಾವು ರೈತನ ಸಾಲ ಮನ್ನಾ ಮಾಡಿ ಎಂದು ನಾನು ತಮಗೆ ಹೇಳುವುದಕ್ಕೆ ಇಚ್ಛೆಪಡುವುದಿಲ್ಲ. ನೀವು ರೈತನ ಸಾಲವನ್ನು ಮನ್ನಾ ಮಾಡದೇ ನಿಮ್ಮ ರಾಜ್ಯ ಸರಕಾರ ಜವಾಬ್ದಾರಿಯನ್ನು ನಿರ್ವಹಿಸದೇ ಅವನು ಬೆಳೆದಂತಹ ಬೆಳೆಗೆ ಸರಿಯಾದಂತಹ ಬೆಲೆಯನ್ನು ಕೊಡದೇ ತಾವು ಗ್ರಾಮೀಣ ಪ್ರದೇಶಕ್ಕೆ ಚುನಾವಣೆಗೆಂದು ಹೋದಾಗ ರೈತನು ಸರಿಯಾದಂತಹ ಉತ್ತರವನ್ನು ಕೊಡುತ್ತಾನೆ ಅಂತಹ ಶಕ್ತಿ ಅವನಲ್ಲಿದೆ. ರೈತನು ಉತ್ತಮವಾದ ಬೀಜ ಗೊಬ್ಬರ ಹಾಕಿ ಮಳೆ ಬಾರದೇ ಬರಗಾಲಕ್ಕೆ ತುತ್ತಾಗಿ ಬೆಳೆ ನಾಶವಾದರೆ ತೆಗೆದುಕೊಂಡ ಸಾಲವನ್ನು ಯಾವ ರೀತಿ ಆತನು ಕೊಡುತ್ತಾನೆ. ಯಾವ ರೀತಿ ಸಾಲವನ್ನು ಕೊಡಬೇಕೆಂಬ ಬಗ್ಗೆ ತೀರ್ಮಾನ ಮಾಡಲು ಒಂದು ಸಮಿತಿಯನ್ನು ಮಾಡಿ. ರೈತನು ಮನೆಯಲ್ಲಿ ದುಡ್ಡು ತುಂಬಿ ಕೊಂಡಿದ್ದು ಸಾಲವನ್ನು ವಾಪಸ್ ಕೊಡದೇ ಹೋದರೆ ಅದು ಬೇರೆ ವಿಷಯ. ಮೈ ತುಂಬಾ ಬಟ್ಟೆ, ಮನೆ ಇಲ್ಲ, ಮಗನಿಗೆ ಕೆಲಸ ಇಲ್ಲ, ಅಲ್ಲಿ ಆಸ್ಪತ್ರೆ ಇಲ್ಲ ಆತನು ತಾಲ್ಲೂಕು ಬೋರ್ಡಿಗೆ ಬಂದರೆ ಆತನನ್ನು ಕೇಳುವಂತಹ ಅಧಿಕಾರಿಗಳು ಇಲ್ಲ ಈ ರೀತಿಯ ವಾತಾವರಣ ಇರಬೇಕಾದರೆ ಹೇಗೆ ಆತನು ಹಣವನ್ನು ಕಟ್ಟುತ್ತಾನೆ. ಸ್ವಾತಂತ್ರ್ಯ ಬಂದು ೪೩ ವರ್ಷಗಳಾದರೂ ಕೂಡ ರೈತಾಪಿ ಜನರನ್ನು ಮೇಲೆಬ್ಬಿಸುವಂಥ ಕಾರ್ಯಕ್ರಮವನ್ನು ಸರಿಯಾಗಿ ಹಾಕಿಕೊಂಡಿಲ್ಲ. ಅವರನ್ನು ಮೇಲೆಬ್ಬಿಸುವಂಥದ್ದು ಸರಕಾರದ ಕರ್ತವ್ಯ. ಅದನ್ನು ಮಾಡುತ್ತೀರಾ? ಸ್ಯಾಂಪಲ್‌ಗಾಗಿ ತಮಗೆ ಕರ್ನಾಟಕದಲ್ಲಿ ಜನರು ಅವಕಾಶ ಮಾಡಿಕೊಟ್ಟಿದ್ದಾರೆ. ತಾವು ರೈತರಿಗೆ ಸಹಾಯ ಮಾಡದೇ ಹೋದರೆ ಕರ್ನಾಟಕದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಇದು ಕೊನೆಗಾಲ ಆಗಬಹುದು.

ಶ್ರೀ ಬಿ ಬಸವಲಿಂಗಪ್ಪ.—ಕಾಂಗ್ರೆಸ್ ಪಕ್ಷ ನಿಮಗಿಂತ ಹೆಚ್ಚು ಮಾಡಿದೆ. ನಿಮಗಿಂತ ಕಡಿಮೆ ಏನು ಇದೆ. ಬಡ್ಜೆಟಿನಲ್ಲಿ ಇಲ್ಲವೇ? ನಿಮಗಿಂತ ಹೆಚ್ಚು ಸಹಾಯ ಮಾಡಬೇಕೆಂದು ಪ್ರಯತ್ನ ಮಾಡುತ್ತಿದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಕೊನೆಯದಾಗಿ ಹೇಳುವುದಾದರೆ, ಹೊಸ ಸರ್ಕಾರ ಬಂದಮೇಲೆ ನಿಮ್ಮ ಕಾಲದಲ್ಲಾದರೂ ಚುನಾಯಿತ ಪ್ರತಿನಿಧಿಗಳಿಗೆ ಅಂದರೆ ಶಾಸಕರಿಗೆ ಗೌರವ ಕೊಟ್ಟು ಅವರ ಕ್ಷೇತ್ರ ಅಭಿವೃದ್ಧಿ ದೃಷ್ಟಿಯಿಂದ ಅವಕಾಶ ಮಾಡಿಕೊಡುತ್ತೀರೆಂದು ನಾನು ಅಂದು ಕೊಂಡಿದ್ದೆನು. ಇವತ್ತು ಬಜೆಟ್ ಅಧಿವೇಶನ ಪ್ರಾರಂಭವಾಗಿದೆ. ಈ ವರ್ಷದ ಕಾರ್ಯಕ್ರಮದಲ್ಲಿ ಶಾಸಕರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಯಾವುದಾದರೊಂದು ಕೆಲಸವನ್ನು ಸೇರಿಸುವುದಕ್ಕೆ ನಾವು ಪತ್ರವನ್ನು ಕೊಟ್ಟಿರುವುದಾಗಲಿ, ಅಥವಾ ನೀವು ಸೇರಿಸಿರುವುದಾಗಲಿ ಇದೆಯೆ? ಯಾವುದೇ ಒಂದು ಪಕ್ಷ ಅಧಿಕಾರಕ್ಕೆ ಬಂದಕೂಡಲೇ ಬೇರೆ ಪಕ್ಷದ ಶಾಸಕರನ್ನು ಕಡೆಗಣಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ತಮಗೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ೪೫ನೇ ಪೇಜಿನಲ್ಲಿ ೧೧ ನಗರಗಳಿಗೆ ಕುಡಿಯುವ ನೀರಿನ ಯೋಜನೆಗಳನ್ನು ಮಾಡಿದ್ದೀರಿ. ಈ ಎಲ್ಲಾ ೧೧ ನಗರಗಳನ್ನು ಪ್ರತಿನಿಧಿಸುತ್ತಿರುವವರು ಕಾಂಗ್ರೆಸ್ ಪಕ್ಷದವರು ಮಾತ್ರ. ಈ ಕಡೆ ಕುಳಿತ್ತಿರತಕ್ಕ ಬೇರೆ ಪಕ್ಷದ ಯಾವ ಸದಸ್ಯರಿಗೂ ಕೂಡ ಸಂಬಂಧಪಟ್ಟಂಥ ಒಂದೇ ಒಂದು ನೀರಾವರಿ ಯೋಜನೆ ಇದರಲ್ಲಿಲ್ಲ.

ಶ್ರೀ ಬಿ. ಕೆ. ಶಿವಕುಮಾರ್.—ಹಾಗಾದರೆ ಚಾಮರಾಜನಗರದ ಸದಸ್ಯರೂ ಕೂಡ ಕಾಂಗ್ರೆಸ್ ಪಕ್ಷದವರೇ ಇರಬಹುದೇ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ೪೫ನೇ ಪೇಜ್‌ನಲ್ಲಿ ಅರಸೀಕೆರೆ, ತಿಪಟೂರು, ತುಮಕೂರು, ಚಿಕ್ಕಮಗಳೂರು, ಹಾಸನ, ನಂಜನಗೂಡು, ಚಿತ್ತಾಪುರ, ಸೇಡಂ, ಹುಬ್ಬಳ್ಳಿ, ಬೈಂದೂರು, ಉಡುಪಿ ಈ ಎಲ್ಲಾ ಕ್ಷೇತ್ರಗಳೂ ಕೂಡ ಕಾಂಗ್ರೆಸ್ ಪಕ್ಷದವರ ಕ್ಷೇತ್ರಗಳೇ ಆಗಿವೆ. ಇದರಲ್ಲಿ ಒಂದೂ ಕೂಡ ಇತರೇ ಪಕ್ಷಗಳಿಗೆ ಸೇರಿದಂಥ ಸದಸ್ಯ ಕ್ಷೇತ್ರಗಳಿಲ್ಲ. ನಾನು ಒಬ್ಬ ಶಾಸಕ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳ ಅಧಿಕಾರವಿಕೇಂದ್ರೀಕರಣ ಆದಮೇಲೆ ಜಿಲ್ಲಾ ಪರಿಷತ್ತಿನಲ್ಲಿ ಅಲ್ಲಿಯ ಸದಸ್ಯ ಏನು ಹೇಳುತ್ತಾನೆ ಆತನ ಕೆಲಸವಾಗುತ್ತವೆಯೋ ಹೊರತು ಶಾಸಕರಾದ ನಾವು ಹೇಳಿದ ಕೆಲಸವಾಗುವುದಿಲ್ಲ. ಅದೇರೀತಿ ಮಂಡಲ ಪಂಚಾಯಿತಿಗಳಲ್ಲೂ ಕೂಡ ಅಲ್ಲಿಯ ಪ್ರಧಾನ, ಉಪ ಪ್ರಧಾನರು ಹೇಳುವ ಕೆಲಸಗಳಾಗುತ್ತವೆಯೋ ಹೊರತು ಶಾಸಕರಾದ ನಾವು ಹೇಳಿದ ಕೆಲಸಗಳಾಗುವುದಿಲ್ಲ. ಅಲ್ಲಿ ಶಾಸಕರಿಗೆ ಒಂದು ಚೂರು ಬೆಲೆ ಇಲ್ಲ. ಶಾಸಕರಾಗಿ ಬಂದಮೇಲೆ ನಮ್ಮ ಕ್ಷೇತ್ರಗಳಲ್ಲಿ ನಾವು ಹೇಳುವಂಥ ನೀರಾವರಿ ಯೋಜನೆಯಾಗಲಿ, ಲಿಫ್ಟ್ ಇರಿಗೇಷನ್ ಆಗಲಿ, ರಸ್ತೆ ಕೆಲಸವಾಗಲಿ, ಬ್ರಿಡ್ಜ್ ಕೆಲಸವಾಗಲಿ ಅಲ್ಲಿ ಮಾಡಿಸಿಕೊಡುವುದಕ್ಕೆ ಅವಕಾಶವಿಲ್ಲದಿದ್ದರೆ ಚುನಾಯಿತ

ಪ್ರತಿನಿಧಿಗಳಾಗಿ ನಾವು ಅಲ್ಲಿ ಯಾವರೀತಿ ಕೆಲಸಮಾಡಬೇಕು ? ಜನರಿಗೆ ಯಾವರೀತಿ ಉತ್ತರ ಹೇಳಬೇಕು.

ಶ್ರೀ ಬಿ. ಕೆ. ಶಿವಕುಮಾರ್.--ಮಾನ್ಯ ಅಧ್ಯಕ್ಷರೆ. ಬೇರೆಕಡೆ ಅವರು ಗೆದ್ದುಬಂದಿಲ್ಲವಲ್ಲಾ ಅದಕ್ಕೆ ನಾವೇನು ಮಾಡುವುದಕ್ಕೆ ಬರುತ್ತದೆ ?

ಶ್ರೀ ಬಿ. ಎಸ್, ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ, ಒಬ್ಬೊಬ್ಬ ಶಾಸಕರಿಗೆ ಒಂದೊಂದು ರೀತಿ ತಾರತಮ್ಯ ಆಗದ ರೀತಿಯಲ್ಲಿ ನೋಡಿಕೊಳ್ಳತಕ್ಕದ್ದು ನಿಮ್ಮ ಕರ್ತವ್ಯ. ನೀವು ನಿಮ್ಮ ಪಾಲಿನ ಕರ್ತವ್ಯವನ್ನು ಪ್ರಾಮಾಣಿಕತೆಯಿಂದ ಮಾಡಬೇಕು. ಎಲ್ಲಾ ಶಾಸಕರ ಕ್ಷೇತ್ರದಲ್ಲೂ ಅವರು ಹೇಳುವಂಥ ಕೆಲಸವಾಗುವಂತೆ ನೋಡಿಕೊಳ್ಳುವ ಕರ್ತವ್ಯ ನಿಮ್ಮದು. ಕನಿಷ್ಠ ೫೦ ಲಕ್ಷ ರೂಪಾಯಿಗಳಷ್ಟು ಕೆಲಸವನ್ನಾದರೂ ಮಾಡಿಸಿಕೊಡಿ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈಗ ನಿಮ್ಮ ಕಾಲದಲ್ಲಾದರೂ ಈ ರಾಜ್ಯದ ರೈತರ ಹಿತ ದೃಷ್ಟಿಯಿಂದ, ಗ್ರಾಮಾಂತರ ಪ್ರದೇಶದ ಜನರ ಹಿತದೃಷ್ಟಿಯಿಂದ, ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ದೃಷ್ಟಿಯಿಂದ ಪ್ರಾಮಾಣಿಕವಾಗಿ ಕಾರ್ಯಕ್ರಮಗಳನ್ನು ರೂಪಿಸುವ ಕೆಲಸವಾಗಲಿ, ಬಜೆಟ್ ಅಧಿವೇಶನ ಮುಗಿಯುವುದರೊಳಗೆ ತ್ರಿಶಂಕುಸ್ವರ್ಗದಲ್ಲಿರುವಂಥ ರೈತನ ಸಾಲವನ್ನು ಮನ್ನಾ ಮಾಡುವ ಕಾರ್ಯಕ್ರಮವನ್ನು ಏನು ರೂಪಿಸುತ್ತಿದ್ದೇವೆಂದು ತಾವು ಹೇಳಿದ್ದೀರಿ ಅದನ್ನು ರೂಪಿಸಿ ಕೋ-ಆಪರೇಟಿವ್ ಸೊಸೈಟಿಗಳಲ್ಲಿ ಅವನ ಸಾಲ ಏನಿದೆ ಅದನ್ನು ಮನ್ನಾ ಮಾಡುವಂಥ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಆಗ್ರಹಮಾಡಿ ಇಷ್ಟು ಮಾತುಗಳನ್ನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಬಂಗಾರಪ್ಪ, (ಸೊರಬ).—ಮಾನ್ಯ ಸಭಾಧ್ಯಕ್ಷರೇ ಮಾನ್ಯ ಅರ್ಥಸಚಿವರು ಮಂಡನೆ ಮಾಡಿರತಕ್ಕಂಥ ಈ ಆಯವ್ಯಯ ಪತ್ರಕ್ಕೆ ನಾನು ಬೆಂಬಲವನ್ನು ವ್ಯಕ್ತಪಡಿಸಿ ಮಾತನಾಡುವುದಕ್ಕೆ ಎದ್ದು ನಿಂತಿದ್ದೇನೆ. ೧೯೯೦-೯೧ನೇ ಸಾಲಿನ ಆಯವ್ಯಯ ಪತ್ರವನ್ನು ಅಥವಾ ಈರೀತಿಯಾಗಿ ಬರತಕ್ಕಂಥ ಆಯವ್ಯಯ ಪತ್ರವನ್ನು ಮೊಟ್ಟಮೊದಲನೆಯ ಬಾರಿಗೆ ನಾವು ನೋಡುತ್ತಾ ಇಲ್ಲ. ನಾವು ಮೊಟ್ಟಮೊದಲನೆಯದಾಗಿ ಅಥವಾ ಮೂಲಭೂತವಾಗಿ ವಿಚಾರವನ್ನು ಅರಿತರೆ ಬಹಳ ಒಳ್ಳೆಯದೆಂದು ನಾನು ಭಾವಿಸಿ ಅನೇಕ ಮಾನ್ಯ ಸದಸ್ಯರು ಇದನ್ನು ಅರಿತಿದ್ದಾರೆಂದು ನಂಬಿಕೆ ಇಟ್ಟು ಕೊಂಡು ಮಾತನಾಡುತ್ತಿದ್ದೇನೆ. ಪ್ರಗತಿಪರ ರಾಷ್ಟ್ರದಲ್ಲಿ ಅಥವಾ ಬದಲಾವಣೆಯಾಗುತ್ತಿರತಕ್ಕಂಥ ರಾಷ್ಟ್ರದಲ್ಲಿ ಕೊರತೆಯ ಆಯವ್ಯಯ ಪತ್ರವನ್ನು ರಾಷ್ಟ್ರದ ಪಾರ್ಲಿಮೆಂಟ್‌ನಲ್ಲಿಯಾಗಲಿ ಅಥವಾ ರಾಜ್ಯದ ಶಾಸನ ಸಭೆಯಲ್ಲಾಗಲಿ ಮಂಡನೆ ಮಾಡಿದರೆ ಅದು ಅತಿಶಯವೇನೂ ಅಲ್ಲ, ಅದು ಅನಿವಾರ್ಯ ಎನ್ನುವ ಮಾತನ್ನು ನಾನು ಪ್ರಸ್ತಾಪ ಮಾಡಬೇಕಾಗುತ್ತದೆ. ಇವತ್ತು ನಾವು ಕೊರತೆಯ ಆಯವ್ಯಯ ಪತ್ರ ಅಥವಾ ಡಿಫಿಸಿಟ್ ಬಜೆಟ್ ಬಗ್ಗೆ ನಾನು ಏನು ಹೇಳುತ್ತೇನೆ ಆ ಮಾತನ್ನು ಹೇಳಬೇಕಾದರೆ ಕೇಂದ್ರ ಸರ್ಕಾರವು ಪಾರ್ಲಿಮೆಂಟ್ ಬಜೆಟ್ ಇಟ್ಟಾಗ ಕೊರತೆ ಅಲ್ಲಿ ಉದ್ಭವವಾದರೆ ಅಲ್ಲಿಯ ಕಾರಣ ಅಥವಾ ಪರಿಸ್ಥಿತಿ ಏನೋ ? ರಾಜ್ಯದಲ್ಲಿ ಒಂದು ಕೊರತೆಯ ಆಯವ್ಯಯ ಪತ್ರವನ್ನು ಸದನದ ಒಪ್ಪಿಗೆಗಾಗಿ ಇಟ್ಟರೆ ಏನು ಕಾರಣ ಎನ್ನುವ ವಿಶ್ಲೇಷಣೆ ಇಲ್ಲಿ ಬಹಳ ಅಗತ್ಯವೆಂದು ನಾನು ಭಾವಿಸುತ್ತೇನೆ. ಈವತ್ತು ಕೇಂದ್ರ ಸರ್ಕಾರ ಕೊರತೆ ಇರತಕ್ಕಂಥ ಬಜೆಟ್ಟನ್ನು ಇಟ್ಟರೆ, ರಾಜ್ಯ ಸರ್ಕಾರ ಕೊರತೆಯ ಬಜೆಟ್‌ನ್ನು ಇಟ್ಟರೆ if leads to heavy inflationary trends. ಹಣದ ಉಬ್ಬರಕ್ಕೆ ಹೆಚ್ಚಾಗಿ ಒತ್ತು ಕೊಡತಕ್ಕಾಂಥದ್ದು ಅನಿವಾರ್ಯ ಮತ್ತು ಕೊರತೆ ಇರತಕ್ಕಂಥ ಬಜೆಟ್ ಉದ್ಭವವಾಗುತ್ತದೆ. ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ವಿಶ್ಲೇಷಣೆ ಮಾಡಿದಾಗ ನಮಗೆ ಅನಿಸುತ್ತದೆ ಹಣದುಬ್ಬರದ ಚೌಕಟ್ಟಿನಲ್ಲಿ ನರಳುತ್ತಿದ್ದೇವೆಂದು. ನಾವು ಈ ಒಂದು ಕೊರತೆ ಇರತಕ್ಕಂಥ ಆಯವ್ಯಯಪತ್ರವನ್ನು ಪ್ರತಿವರ್ಷ ಯಾವುದೇ ಸರ್ಕಾರ ಕೇಂದ್ರದಲ್ಲಿರಲಿ ನಾವು ಕಾಣುತ್ತಿದ್ದೇವೆ, ಇವತ್ತೇನಿಲ್ಲ ಸ್ವಾತಂತ್ರ್ಯಾನಂತರ ಬಂದ ಬಲವತ್ತರವಾದ ಆಶೋತ್ತರಗಳು ಫಲಿಸಲು ವರ್ಷೇ ವರ್ಷೇ ಬೃಹತ್ತಾದ ಯೋಜನೆಗಳನ್ನು ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕೆಗಳನ್ನು ಬೃಹದಾಕಾರವಾಗಿ ಬಡಾವಣೆ ಮಾಡುತ್ತಿದ್ದಾಗ್ಯೂ ಸಹಜವಾಗಿ ನಾವು ನಮ್ಮ ಸಂಪನ್ಮೂಲಗಳನ್ನು ಕ್ರೋಡೀಕರಣ ಮಾಡುವ ವಿಚಾರದಲ್ಲಿ ನಾವು ಎಲ್ಲಿ ವಿಫಲರಾಗಿದ್ದೇವೆ, ಎಲ್ಲಿ ಕೊರತೆಯನ್ನು ಕಂಡಿದ್ದೇವೆ ಅಲ್ಲಿ ಸಹಜವಾಗಿ ಇಂಥ ಒಂದು ಕೊರತೆಯ ಬಜೆಟ್‌ನ್ನು ಮಂಡನೆ ಮಾಡಬೇಕಾಗುತ್ತದೆ. ಕೆಲವೊಮ್ಮೆ ಕಡಿಮೆ ಕೊರತೆ ಇರತಕ್ಕಂಥ ಬಜೆಟ್‌ನ್ನು ಮಂಡನೆ ಮಾಡುತ್ತಾರೆ. ಏತಕ್ಕೆಂದರೆ ವಾರ್ಷಿಕ ಯೋಜನೆಯ ಗಾತ್ರ ಎಂದು ಏನು

ಕರೆಯುತ್ತೇವೆ ಆ ಯೋಜನೆಯ ಗಾತ್ರವನ್ನು ಗೊತ್ತುಮಾಡಿದಾಗ ಸಾಮಾನ್ಯವಾಗಿ ಕೊರತೆಯನ್ನು ತೋರಿಸಲಿಕ್ಕೆ ಸಾಧ್ಯವಾಗುತ್ತದೆ. ನಾವು ಇದನ್ನು ವಿದ್ಯುಚ್ಛಕ್ತಿಯ ವಿಚಾರದಲ್ಲಿ ಹೇಳಬಹುದು, ಇಂಡಸ್ಟ್ರಿಯಲ್ ವಿಚಾರದಲ್ಲಿ ಹೇಳಬಹುದು, ವ್ಯವಸಾಯ ಕ್ಷೇತ್ರದ ವಿಚಾರದಲ್ಲಿ ಹೇಳಬಹುದು. ಹೀಗೆ ಬಹಳ ಪ್ರಮುಖವಾಗಿರತಕ್ಕಂಥ ವಿಚಾರಗಳಲ್ಲಿ ನಾವು ಈ ಕೊರತೆಯ ಬಗ್ಗೆ ಹೆಚ್ಚಾಗಿ ಗಮನ ಹರಿಸಬೇಕು.

ಏಕೆಂದರೆ ಯೋಜನಾ ಆಯೋಗದಲ್ಲಿ ನಾವು ಹಲವಾರು ವರ್ಷಗಳಿಂದ ಕಂಡಿರತಕ್ಕ ವಿಚಾರ ಅಂದರೆ ಈ ಒಂದು ಕೋರ್ ಸೆಕ್ಟಾರ್‌ಗೆ ಪ್ರಾತಿನಿಧ್ಯ ಕೊಟ್ಟಿರತಕ್ಕದ್ದು. ಹೆಚ್ಚಿಗೆ ಆದ್ಯತೆ ಕೊಟ್ಟು ಹೆಚ್ಚಿಗೆ ಹಣವನ್ನು ಉತ್ಪಾದನೆಯ ದೃಷ್ಟಿಯಿಂದ ಕೊಡುವುದು. ಇದರ ಉದ್ದೇಶವೇನು? ಬಡತನ ತುಂಬಿರ ತಕ್ಕ ನಮ್ಮ ದೇಶದಲ್ಲಿ ಉಳ್ಳವರ ಮತ್ತು ಉಳ್ಳದೆ ಇರತಕ್ಕವರ ಅಂತರದಲ್ಲಿ ವ್ಯತ್ಯಾಸ ಸಹಜವಾಗಿ ದೊಡ್ಡದು ಇದ್ದಾಗ ಅದನ್ನು ನಾವು ಕಡಿಮೆ ಮಾಡುವ ದೃಷ್ಟಿಯಿಂದ ಉತ್ಪಾದನೆಗೆ ಹೆಚ್ಚಿಗೆ ಗಮನ ಕೊಡುತ್ತೇವೆ. ಪವರ್ ಸೆಕ್ಟಾರ್‌ಗೆ ಹೆಚ್ಚಿಗೆ ಗಮನ ಕೊಡುತ್ತಿದ್ದೇವೆ. ವಿದ್ಯುಚ್ಛಕ್ತಿ ಉತ್ಪಾದನೆಯಿಂದ ಕೈಗಾರಿಕಾ ಬೆಳವಣಿಗೆಯಾಗುತ್ತದೆ. ಹೀಗಾಗಿ ವಿದ್ಯುಚ್ಛಕ್ತಿ ಉತ್ಪಾದನೆ ಮತ್ತು ವ್ಯವಸಾಯ ಕ್ಷೇತ್ರದಲ್ಲಿನ ಉತ್ಪಾದನೆಗೆ ಹೆಚ್ಚಿನ ಗಮನ ಕೊಡುತ್ತೇವೆ. ನಮಗೆಲ್ಲಾ ಗೊತ್ತಿರುವ ಹಾಗೆ ವ್ಯವಸಾಯ ಪ್ರಧಾನವಾಗಿರುವ ನಮ್ಮ ರಾಷ್ಟ್ರದಲ್ಲಿ ಶೇಕಡ ೭೫–೭೬ರಷ್ಟು ರೈತರು ಇರತಕ್ಕ ಸಮಾಜದಲ್ಲಿ ಸಹಜವಾಗಿ ನಾವು ಈ ವ್ಯವಸಾಯ ಕ್ಷೇತ್ರಕ್ಕೆ ಹೆಚ್ಚಿಗೆ ಗಮನ ಕೊಟ್ಟಿದ್ದೇವೆ. ಜವಹಾರಲಾಲ್ ನೆಹರೂರವರ ಕಾಲದಿಂದಲೂ ನೋಡುತ್ತಾ ಬಂದಿದ್ದೇವೆ. ಜೊತೆ ಜೊತೆಗೆ ಕೈಗಾರಿಕಾ ಬೆಳವಣಿಗೆಗೆ ಕೂಡ ಗಮನ ಕೊಡುವ ಯೋಜನೆಗಳನ್ನು ಸೃಷ್ಟಿಸಿಕೊಂಡು ಬಂದಿದ್ದೇವೆ. ಆದರೂ ಕೂಡ ಜನಸಂಖ್ಯೆಯ ಬೆಳವಣಿಗೆ ವೈಪರಿತ್ಯವನ್ನು ಮುಟ್ಟತಕ್ಕ ಸಂದರ್ಭದಲ್ಲಿ ನಮ್ಮ ಸಮಸ್ಯೆಗಳು ಉಲ್ಬಣಗೊಂಡಿವೆ. ಈ ಸಮಸ್ಯೆಗಳಿಗೆ ಉತ್ತರ ಹುಡುಕುವ ಸಂದರ್ಭದಲ್ಲಿ ಯೋಜನೆಯ ಗಾತ್ರ ದೊಡ್ಡದಾಗುತ್ತಾ ಇರುವುದು ಅನಿವಾರ್ಯವೆಂದು ಮಾಡುತ್ತಾ ಹೋಗುತ್ತಿದ್ದೇವೆ. ಸಮಸ್ಯೆಗಳಿಗೆ ಏನಾದರೂ ಮಾಡಿ ಪರಿಹಾರ ಕಂಡುಹಿಡಿಯಬೇಕೆಂದು ಇಕನಾಮಿಕ್ ಗ್ರೋತ್ ಎಂದು ಏನು ಹೇಳುತ್ತಾರೆ ಅದನ್ನು ಮಾಡಬೇಕೆನ್ನುವ ಸದುದ್ದೇಶದಿಂದ ಯೋಜನೆಯ ಗಾತ್ರವನ್ನು (ವಾರ್ಷಿಕ ಯೋಜನೆ ಅಥವಾ ಪಂಚವಾರ್ಷಿಕ ಯೋಜನೆ ಇರಬಹುದು) ಪ್ರತಿ ವರ್ಷ ಯೋಜನಾ ಆಯೋಗದ ಮುಂದೆ ದೊಡ್ಡದು ಮಾಡತಕ್ಕ ವಿಚಾರಕ್ಕೆ ಹೆಚ್ಚಾಗಿ ಪುಷ್ಟಿ ಕೊಡುವ ಹಲವಾರು ವಿಚಾರಗಳನ್ನು ಇಡುತ್ತಾ ಬಂದಿದ್ದೇವೆ. ಇಷ್ಟಾದರೂ ಬಡತನ ರೇಖೆಯ ಕೆಳಗೆ ಇರತಕ್ಕ ಜನಗಳಿಗೆ ಒಂದು ಪಂಚವಾರ್ಷಿಕ ಯೋಜನೆಯಿಂದ ಮತ್ತೊಂದು ಪಂಚವಾರ್ಷಿಕ ಯೋಜನೆಗೆ ಯೋಜನೆಯ ಗಾತ್ರ ಕಡಿಮೆಯಾಗದೆ ಬೆಳೆಯುತ್ತಾ ಹೋಗಿರುವುದು ಎಲ್ಲರಿಗೂ ಚಿಂತೆಗೆ ಈಡು ಮಾಡಿದೆ ಎಂಬುದನ್ನು ಮರೆಯುವುದಕ್ಕೆ ಸಾಧ್ಯವಿಲ್ಲ. ಅಂದಾಗ ನಮ್ಮ ಯೋಜನೆಯನ್ನು ಮಾಡುವುದರಲ್ಲಿ ತಪ್ಪನ್ನು ಮಾಡಿರಬಹುದು ಅಥವಾ ಯೋಜನೆಯನ್ನು ಸ್ಪಷ್ಟವಾಗಿ ಮಾಡಿದ್ದರೂ ಜಾರಿಗೆ ಕೊಡುವುದರಲ್ಲಿ ಎಡವಿರಬಹುದೆಂದು ಇಟ್ಟುಕೊಳ್ಳಬೇಕಾಗುತ್ತದೆ. ಅವರ ಭವಿಷ್ಯವನ್ನು ಚಿಂತನೆ ಮಾಡತಕ್ಕ ವಿಚಾರದಲ್ಲಿ ಯೋಜನೆಗಳನ್ನು ಜಾರಿಗೆ ಕೊಡುವುದರಲ್ಲಿ ಎಡವಿದ್ದೇವೆ, ತಪ್ಪು ಮಾಡಿದ್ದೇವೆ ಎಂದು ಕೆಲವು ಸಂದರ್ಭಗಳಲ್ಲಿ ಬಂದದ್ದು ಉಂಟು. ಈ ವಿಚಾರದ ಬಗ್ಗೆ ಮಾತನಾಡುವುದಕ್ಕೆ ಅನೇಕ ವಿವರಗಳು ಇದ್ದರೂ ಕೂಡ ಕಾಲದ ಅಭಾವದಿಂದ ವಿವರಗಳಿಗೆ ಹೋಗುವುದಿಲ್ಲ. ಇಷ್ಟು ಮಾತ್ರ ನಿಜ. ನಾವು ನಮ್ಮ ಯೋಜನಾ ಗಾತ್ರದ ಬಗ್ಗೆ ವಿಚಾರ ಮಾಡಿದಾಗ ಮಾನ್ಯ ಹಣಕಾಸಿನ ಸಚಿವರು ಏನು ಅಂಕಿಅಂಶಗಳನ್ನು ಇಟ್ಟಿದ್ದಾರೆ ಅದರ ಬಗ್ಗೆ ಪುನಃ ನಾನು ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಇದು ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿರುವ ವಿಚಾರ. ಯೋಜನೆಯ ಗಾತ್ರವನ್ನು ಕಳೆದ ಅನೇಕ ವರ್ಷಗಳಿಂದ ಜಾಸ್ತಿ ಮಾಡುತ್ತಾ ಬಂದಿದ್ದೇವೆ. ಇದೇ ಸಂದರ್ಭದಲ್ಲಿ ರೂಪಾಯಿಯ ವ್ಯಾಲ್ಯೂ ಏನಾಗಿದೆ ಎಂದು ವಿಚಾರ ಮಾಡುವುದು ಒಳ್ಳೆಯದು. ಬೆಂಗಳೂರಿನಂಥ ನಗರದಲ್ಲಿ ಇದರ

೧–೩೦ ಪಿ. ಎಂ.

ಬೆಲೆ ೧೩ ಪೈಸೆಗೆ ಬಂದಿದೆ. ಕಳೆದ ವರ್ಷ it was lowest in the whole of the country. ಗ್ರಾಹಕರ ಸೂಚ್ಯಂಕದ ಆಧಾರದ ಮೇಲೆ ಅವನ್ನು ನೋಡಿ ರೂಪಾಯಿಯ ಮೌಲ್ಯವನ್ನು ಕಂಡುಹಿಡಿಯುತ್ತೇವೆ. ಅದನ್ನು ನೋಡಿದಾಗ ರೂಪಾಯಿಯ ಮೌಲ್ಯ ಕಳೆದ ವರ್ಷ ಸುಮಾರಾಗಿ ೧೩ ಪೈಸೆ ಇತ್ತು. ಈ ವರ್ಷ ೧೪ ಪೈಸೆಯಾಗಿದೆ ಎಂದು ಮಾನ್ಯ ಹಣಕಾಸಿನ ಸಚಿವರು ಹೇಳುತ್ತಿದ್ದಾರೆ. ಒಂದು ಪೈಸೆ ವ್ಯತ್ಯಾಸ ಇರಬಹುದು. ಬೆಂಗಳೂರು ನಗರದಿಂದ ಮದ್ರಾಸಿಗೆ ಮದ್ರಾಸಿನಿಂದ ಬೊಂಬಾಯಿಗೆ, ಬೊಂಬಾಯಿಯಿಂದ ಡೆಲ್ಲಿಗೆ ಇದು ವ್ಯತ್ಯಾಸ ಆಗುತ್ತಾ ಹೋದರೂ ಒಂದು ಅಥವಾ ಎರಡು ಪೈಸೆಯಷ್ಟು ವ್ಯತ್ಯಾಸ ಬರಬಹುದು. ನಾನು ರೂಪಾಯಿಯ ಮೌಲ್ಯವನ್ನು

ಇಂಟರ್‌ನ್ಯಾಷನಲ್ ಮಾರ್ಕೆಟ್ ವಿಚಾರದಲ್ಲಿ ಹೇಳುತ್ತಿಲ್ಲ. ನಮ್ಮ ದೇಶದಲ್ಲಿರತಕ್ಕ ರೂಪಾಯಿಯ ಬೆಲೆ ಯಾವ ಮಟ್ಟದಲ್ಲಿದೆ ಎಂಬುದನ್ನು ನೋಡಿದಾಗ ನಮ್ಮ ಯೋಜನಾ ಗಾತ್ರ ಹೆಚ್ಚು ಮಾಡಿಕೊಂಡಿದ್ದೇವೆ ಎಂಬ ಅಭಿಪ್ರಾಯ ಇಟ್ಟುಕೊಂಡರೂ ಕೂಡ ಯೋಜನಾ ಕೆಲಸಗಳು ಅಂತಿಮವಾಗಿ ಏನು ಪ್ರತಿಫಲ ಪಡೆಯಬೇಕೋ ಅದನ್ನು ಪಡೆಯುವುದು ಕಷ್ಟವಾಗುತ್ತದೆ. ಉದಾಹರಣೆಗೆ ಪರದೇಶದಿಂದ ಸಾಲ ತರುವ ವಿಚಾರ ಮಾಡಿದ್ದೇವೆ. ಯಾವ ಯಾವ ಉದ್ದೇಶಕ್ಕೋಸ್ಕರ ವಿದೇಶಿ ಸಂಸ್ಥೆಗಳಿಂದ ಹಣ ಪಡೆಯಲಾಗುತ್ತದೆ ಎಂಬ ಬಗ್ಗೆ ದೊಡ್ಡ ಪಟ್ಟಿಯನ್ನು ಮಾಡಿ ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ. ಪರದೇಶದಿಂದ ತರತಕ್ಕ ಸಾಲ, ಗಲ್ಫ್ ಕಂಟ್ರಿಯಿಂದ ಇರಬಹುದು ಅಥವಾ ವರ್ಲ್ಡ್ ಬ್ಯಾಂಕ್‌ನಿಂದ ಇರಬಹುದು ಸಾಲ ತರಬೇಕಾದರೆ ಅದಕ್ಕೆ ಭಾರತ ಸರ್ಕಾರದ ಒಪ್ಪಿಗೆ ಕೊಡಬೇಕಾಗುತ್ತದೆ. ಅದನ್ನು ತೆಗೆದುಕೊಂಡರೂ ಹಲವಾರು ಅಡೆತಡೆಗಳು ಇರುತ್ತವೆ. ಉದಾಹರಣೆಗೆ ೧೦೦ ರೂಪಾಯಿ ಪರದೇಶದಿಂದ ತೆಗೆದುಕೊಂಡರೆ ೧೦೦ ರೂಪಾಯಿಯೂ ನಮಗೆ ಬರುವುದಿಲ್ಲ. ಸರ್ವೀಸ್ ಛಾರ್ಜಸ್ ಅಲ್ಲದೆ ಕೆಲವು ಪ್ರಮಾಣದ ಹಣವನ್ನು ಕೇಂದ್ರಸರ್ಕಾರದವರು ಕಟ್ ಮಾಡಿಕೊಳ್ಳುತ್ತಾರೆ. ಸೆಂಟ್ ಪರ್ಸೆಂಟ್ ಎಂದೂ ರಾಜ್ಯ ಸರ್ಕಾರಕ್ಕೆ ಕೊಡುವುದಿಲ್ಲ. ಇದು ಎಲ್ಲರಿಗೂ ಗೊತ್ತಿರುವ ವಿಚಾರ. ೧೦೦ ರೂಪಾಯಿ ಮಂಜೂರಾದರೂ ಕೈಗೆಬರತಕ್ಕದ್ದು ೬೦–೭೦ ರೂಪಾಯಿಮಾತ್ರ. ೩೦-೪೦ ಪರ್ಸೆಂಟ್ ಅಲ್ಲಿಯೇ ಹೋಗಿಬಿಡುತ್ತದೆ. ಪ್ರಾಜೆಕ್ಟ್‌ನಿಂದ ಪ್ರಾಜೆಕ್ಟ್‌ಗೆ ಇದು ವೇರಿ ಆಗಬಹುದು. ಯೋಜನಾ ಗಾತ್ರ ಜಾಸ್ತಿ ಮಾಡಿ ಅದನ್ನು ಜಾರಿಗೆ ಕೊಡುವ ಮನದ ಇಚ್ಛೆ ಇದ್ದರೂ ಕೂಡ ಸಾಲ ತರತಕ್ಕ ಆಸೆ ಇಟ್ಟುಕೊಂಡು ಜಾರಿಗೆ ಕೊಡುತ್ತೇವೆ ಅಂದುಕೊಂಡರೂ ಕೂಡ ಸಾಲದ ಹೊರೆಯೂ ಅಷ್ಟೇ ಪ್ರಮಾಣದಲ್ಲಿ ಬಂದು ನಿಲ್ಲುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕು. ಆದರೂ ಇದು ಅನಿವಾರ್ಯ ಎಂಬ ದೃಷ್ಟಿಯಿಂದ ಹೇಳಿದ್ದಾರೆ. ಇಲ್ಲ ಎಂದು ಹೇಳುವುದಿಲ್ಲ. ಪವರ್ ಸೆಕ್ಟಾರ್ ಅಗ್ರಿಕಲ್ಚರ್ ಸೆಕ್ಟಾರ್. ಇಂಡಸ್ಟ್ರಿಯಲ್ ಸೆಕ್ಟಾರ್ ಇವೆಲ್ಲವೂ ಆದ್ಯತೆ ಪಡೆಯತಕ್ಕ ವಲಯಗಳು. ಯೋಜನಾ ಆಯೋಗದ ಮುಂದೆ ಕೂಡ ಕೇಸ್ ಇರುವಾಗ ಆದ್ಯತೆ ಕೊಟ್ಟು ಇಡುತ್ತೇವೆ ನಮ್ಮ ಬಜೆಟ್‌ನಲ್ಲಿ ಕೂಡ ಇದಕ್ಕೆ ಪ್ರತ್ಯೇಕವಾಗಿ ಹೆಚ್ಚಿನ ಹಣ ಇಡುವುದನ್ನು ಕಾಣುತ್ತೇವೆ. ಉತ್ಪಾದನೆ ಕಡೆಗೆ ಹೆಚ್ಚಿನ ಗಮನ ಕೊಡಬೇಕು, ರಾಯಚೂರಿನ ಥರ್ಮಲ್ ಪ್ಲಾಂಟ್ ಮುಗಿಸಬೇಕೆಂದಿದ್ದೇವೆ. ಕಾಳೀ ಯೋಜನೆ ಕೇಸ ಕಾರ್ಯ ಮುಗಿಸಬೇಕೆಂದಿದ್ದೇವೆ. ಶರಾವತಿ ಟೇಲ್ ರೇಸ್ ಪ್ರಾಜೆಕ್ಟ್ ಮುಗಿಸಬೇಕೆಂದಿದ್ದೇವೆ. ಇದರ ಜೊತೆಗೆ ಹಲವಾರು ಸಣ್ಣ ಪುಟ್ಟ ಪ್ರಾಜೆಕ್ಟ್‌ಗಳು ಸೆಂಟ್ರಲ್‌ನಿಂದ ಕ್ಲಿಯರೆನ್ಸ್ ಆಗಿರುವಂಥದ್ದು ಮತ್ತು ಆಗುವಂಥದ್ದು ಅವೆಲ್ಲವನ್ನೂ ಮುಗಿಸಬೇಕೆಂಬ ಆಸೆ ಇರುವುದರಿಂದ ಅದಕ್ಕೆ ಹೆಚ್ಚಿನ ಹಣ ಬೇಕಾಗುತ್ತದೆ. ಇಲ್ಲಿ ಹೇಗೆ ಹಣ ಬರುತ್ತದೆ ಎಂಬುದು ಪ್ರಾಮುಖ್ಯವಾದುದು. ನನಗೆ ಗೊತ್ತಿರುವ ಹಾಗೆ ನೀರಾವರಿಗೆ ೧೦೦ ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕಿನಿಂದ ಪಡೆದಿದ್ದೇವೆ ನಿಜ.

ಇವತ್ತು ಸಣ್ಣ, ಮಧ್ಯಮ ಮತ್ತು ದೊಡ್ಡ ನೀರಾವರಿ ಕ್ಷೇತ್ರದಲ್ಲಿ ನಾವು ಎಷ್ಟು ಹಣವನ್ನು ತೊಡಗಿಸಿದ್ದೇವೆ ಅದಕ್ಕೆ ಪ್ರತಿಫಲವಾಗಿ ಒಂದೊಂದು ಪಂಚವಾರ್ಷಿಕ ಯೋಜನೆಗಳಲ್ಲಿ ಎಷ್ಟೆಷ್ಟು ವಾಪಸ್ ಹಣ ಪಡೆದಿದ್ದೇವೆ. ಉತ್ಪತ್ತಿ ಪಡೆದಿದ್ದೇವೆ ಎಂಬುದನ್ನು ಲೆಕ್ಕ ಹಾಕಬೇಕಾಗುತ್ತದೆ. ತುಂಗಭದ್ರಾ ಅಣೆಕಟ್ಟನ್ನು ಕೋಟಿ ಕೋಟಿ ರೂಪಾಯಿ ಖರ್ಚು ಮಾಡಿ ಕಟ್ಟಿದ್ದೇವೆ ಇವತ್ತು ಅವರಿಂದ ಆಂಧ್ರಕ್ಕೆ ನೀರು ಹೋಗುವುದು ಇರಲಿ ನಾವು ಪಡೆಯುತ್ತಿರತಕ್ಕ ನೀರಿನ ಭಾಗದಿಂದ ಎಷ್ಟು ಉತ್ಪಾದನೆ ಪಡೆದಿದ್ದೇವೆ ಎಂಬುದನ್ನು ನೋಡಬೇಕು. ಈ ಬಗೆ ಮಾನ್ಯ ಹಣಕಾಸಿನ ಮಂತ್ರಿಗಳು ಗಮನಹರಿಸಬೇಕು. ಇವತ್ತು ನೀರಾವರಿ ಇರಬಹುದು. ವಿದ್ಯುತ್ ಕ್ಷೇತ್ರ ಇರಬಹುದು ಸ್ವಾತಂತ್ರ್ಯಾನಂತರ ಇಲ್ಲಿಯವರೆಗೆ ಎಷ್ಟು ಹಣವನ್ನು ಇದರಲ್ಲಿ ತೊಡಗಿಸಿದ್ದೇವೆ ಅದರಿಂದ ಪ್ರತಿಫಲ ಎಷ್ಟು ಬಂತು ಎಂದು ನೋಡಬೇಕು. ಈ ಯೋಜನೆಗಳಿಗೆ ಯಾವುದೇ ಸರ್ಕಾರ ಹಣ ಖರ್ಚುಮಾಡಿರಬಹುದು, ಇದನ್ನೆಲ್ಲಾ ಲೆಕ್ಕ ಇಟ್ಟು ವರ್ಷದಿಂದ ವರ್ಷಕ್ಕೆ ಗ್ರೋತ್ ಎಷ್ಟು ಆಗಿದೆ ಎಂದು ಲೆಕ್ಕ ಇಟ್ಟು ಅದರಿಂದ ಬಂದ ಪ್ರತಿಫಲ ಏನು ಎಂದು ಕೂಡಾ ನೋಡಬೇಕು. ಇವತ್ತು ಸುಮ್ಮನೆ ಯೋಜನೆಗಳನ್ನು ಮಾಡುತ್ತಾ ಹೋಗುವುದು, ಹಣವನ್ನು ತೊಡಗಿಸುತ್ತಾ ಹೋಗುವುದರ ಜೊತೆಗೆ ಅವುಗಳಿಂದ ಬರುವ ಪ್ರತಿಫಲ ಎಷ್ಟು ಎಂದು ನೋಡದೆ ಇದ್ದರೆ ಹೇಗೆ ? ನೀರಾವರಿ ಯೋಜನೆಗಳು ವಿಳಂಬ ಆಗುವುದರಿಂದ ಪ್ರೈಸ್ ಎಸ್ಕಲೇಷನ್ ಸಿಕ್ಕಾಪಟ್ಟೆ ಹೆಚ್ಚು ಆಗುತ್ತದೆ. ಇದಕ್ಕೆಲ್ಲಾ ನಾವು ಹಣವನ್ನು ಎಲ್ಲಿಂದ ತರಬೇಕೆನ್ನುವ ಪ್ರಶ್ನೆ ನಮ್ಮ ಮುಂದೆ ಇದೆ. ಇದಕ್ಕೆ ನಾವು ಹಣವನ್ನು ಹುಡುಕುವ ಸಮಯದಲ್ಲಿ ಕೇಂದ್ರದ ಶೇರ್ ಎಷ್ಟು ಬರುತ್ತದೆ ಎಂಬುದನ್ನೂ ಗಮನಿಸಬೇಕಾಗುತ್ತದೆ. ಸ್ಮಾಲ್ ಸೇವಿಂಗ್ಸ್‌ನಲ್ಲಿ ಎಷ್ಟು ಬರುತ್ತದೆ ಎಂಬುದನ್ನು ನಾವು ಗಮನದಲ್ಲಿ ಇಡಬೇಕು. Apart from the revenues

we exactly get from certain items in our State and apart from direct taxes. ಇವತ್ತು ನಾವು ಹಾಕಿರುವ ಯೋಜನೆಗಳಲ್ಲಿ ಎಷ್ಟು ಪ್ರತಿಫಲ ಪಡೆದಿದ್ದೇವೆ ಎಂಬುದರ ಬಗ್ಗೆ ನಾವು ಗಮನ ಕೊಡದೇ ನಾವು ಸುಮ್ಮನೇ We just go on investing without getting anything or getting very little when compared to the amount we have invested in these projects irrespective of whether agriculture, power sector or industrial sector. ಹಣ ಕೊಡುವುದು ಸರಿಯಲ್ಲ. ಹಣಕಾಸಿನ ವಿಷಯ ನೋಡಿಕೊಳ್ಳುವುದಕ್ಕೆ ಅಧಿಕಾರಿಗಳ ಸಮಿತಿಯನ್ನು ನೇಮಕ ಮಾಡುತ್ತೇವೆಂದು ಹೇಳಿದ್ದಾರೆ. ಆ ಸಮಿತಿಗೆ ಟರ್ಮ್ಸ್ ಆಫ್ ರೆಫರೆನ್ಸ್ ಕೊಡುವಾಗ ನಾನು ಹೇಳಿದ ಈ ಒಂದು ವಿಚಾರವನ್ನೂ ಕೊಟ್ಟರೆ ಒಳ್ಳೆಯದು ಎಂದು ನನ್ನ ಅಭಿಪ್ರಾಯ. ನಾವು ಎಲ್ಲಿ ನಿಂತಿದ್ದೇವೆ ಎಂಬುದನ್ನು ನೋಡಬೇಕು. ನಾವು ಇವುಗಳಿಗೆ ಹಣವನ್ನು ಒದಗಿಸಿ ಯೋಜನೆಗಳನ್ನು ಪೂರೈಸಿದ ಮೇಲೆ ನಾವು ಎಲ್ಲಿ ನಿಂತಿದ್ದೇವೆ ಎನ್ನುವ ಬಗ್ಗೆ ಸ್ಪಷ್ಟವಾದ ನೈಜ ಚಿತ್ರ ನಮ್ಮಲ್ಲಿ ಇರಬೇಕು. ಸಮಿತಿಯವರಿಗೆ ಈ ಒಂದು ಕೆಲಸವನ್ನು ವಹಿಸಿದರೆ ಮುಂದೆ ಈ ಬಗ್ಗೆ ನಮಗೆ ಒಂದು ಸ್ಪಷ್ಟ ಚಿತ್ರ ಸಿಗುತ್ತದೆ. ಆರ್ಥಿಕ ಅಭಿವೃದ್ಧಿಗೆ ಅನುಕೂಲ ಆಗತಕ್ಕ ಆಧಾರದ ಮೇಲೆ ನಾವು ಆಯವ್ಯಯವನ್ನು ತಯಾರು ಮಾಡಬೇಕಾಗುತ್ತದೆ. ಇರತಕ್ಕ ಪರಿಸ್ಥಿತಿಯಲ್ಲಿ ಇದಕ್ಕಿಂತಲೂ ಒಳ್ಳೆಯ ಬಡ್ಜೆಟ್ ಮಾಡುವುದಕ್ಕಾಗುವುದಿಲ್ಲ. ಕೇಂದ್ರದ ಬಡ್ಜೆಟ್ ಬಗ್ಗೆ ನಾನು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನಾವು ನಮ್ಮ ಮಿತಿಗೆ ಒಳಪಟ್ಟು ಮಾತನಾಡಬೇಕಾಗುತ್ತದೆ. ರಾಜ್ಯದ ಆಯವ್ಯಯದ ಬಗ್ಗೆ ಕೇಂದ್ರದವರು ಹೇಗೆ ಮಾತನಾಡುವುದಕ್ಕಾಗುವುದಿಲ್ಲವೋ ಹಾಗೇ ನಾವೂ ಕೇಂದ್ರದ ಆಯವ್ಯಯದ ಬಗ್ಗೆ ಇಲ್ಲಿ ಮಾತನಾಡುವುದಕ್ಕಾಗುವುದಿಲ್ಲ. ಆದರೆ ಇಷ್ಟು ಮಾತ್ರ ನಿಜ. ಕೊರತೆ ಬಡ್ಜೆಟ್ ಹಣದುಬ್ಬರಕ್ಕೆ ಎಡೆ ಮಾಡಿಕೊಡುತ್ತದೆಂದು ನಾನು ಪದೇ ಪದೇ ಹೇಳುತ್ತಾ ಬಂದಿದ್ದೇನೆ. ಇದು ಬಹಳ ಅಪಾಯ. ಆದರೆ ಕೇಂದ್ರದಲ್ಲಿ ಕೊರತೆ ಇದ್ದರೆ ಅದು ಬೇರೆ ವಿಷಯ. ಏಕೆಂದರೆ ಅಲ್ಲಿ ಡಿಫೆನ್ಸ್ ವಿಷಯ ಇರುತ್ತದೆ ಹಾಗೆ 'ಲ ಬೇರೆ ಬೇರೆ ವಿಚಾರಗಳು ಇರುತ್ತವೆ. ನಮಗೆ ಡಿಫಿಸಿಟ್ ಬಜೆಟ್ ಬಂದರೆ ಮಾತ್ರ ಅದು ಬಹಳ ಅಪಾಯ. ನನಗೆ ಗೊತ್ತಿರುವ ಹಾಗೆ percentage of inflation. ಸೆಂಟ್ರಲ್ ಬಜೆಟ್‌ನಿಂದ ಇರತಕ್ಕದ್ದು ೬. ಸಮ್‌ಥಿಂಗ್ ನಮ್ಮ ರಾಜ್ಯದ ಬಜೆಟ್ ೭.೧ ಅಥವಾ ೨ ಇದೆ. ನನಗೆ ನೆನಪಿರುವಹಾಗೆ ಕಳೆದ ವರ್ಷದಿಂದ, ಅದರ ಹಿಂದಿನ ವರ್ಷದಿಂದ ಹಣದುಬ್ಬರಕ್ಕೆ ಅವಕಾಶ ಆಗಿದೆ. ಇವತ್ತು ಕೇಂದ್ರಕ್ಕಿಂತ ರಾಜ್ಯದ್ದು ಡಿಫಿಸಿಟ್ ಇದ್ದರೆ ಇನ್ನು ಅಪಾಯ ಜಾಸ್ತಿಯಾಗುತ್ತದೆ. ಆ ಪೆಟ್ಟು ನಮಗೆ ಗೊತ್ತಾಗುವುದಿಲ್ಲ. The housewife who foots the bill of the house, knows better than the Government and all of us sitting and discussing here about the budget. ಮನೆಯಲ್ಲಿರತಕ್ಕವರು ಕೊಳ್ಳುವುದಕ್ಕೆ ಹೋದಾಗ ಅವರಿಗೆ ಅದು ಗೊತ್ತಾಗುತ್ತದೆ. She feels the punch. ಮಾರ್ಕೆಟ್‌ಗೆ ಯಾರು ಹೋಗುತ್ತಾರೆ ಅವರಿಗೆ ಹೇಗೆ ವ್ಯತ್ಯಾಸವಾಗುತ್ತದೆನ್ನುವುದು ಸ್ಪಷ್ಟವಾಗಿ ನಮಗೆ ಅಲ್ಲಿ ಗೊತ್ತಾಗುತ್ತದೆ. ಅಮ್ಮಾವರು ಹೇಳುತ್ತಿದ್ದಾರೆ, ನಿಮಗೆ ಹೇಗೆ ಗೊತ್ತಾಗುತ್ತದೆಂದು. ಅದಕ್ಕೆ ಹೌಸ್‌ವೈಫ್ ಎಂದು ಹೇಳಿದ್ದೇನೆ. ತಮ್ಮನ್ನು ಕುರಿತು ನಾನು ಹೇಳಿದ್ದೇನೆ. ನಾನು ವಿವರಗಳಿಗೆ ಹೋಗದೆ ಇಷ್ಟು ಮಾತ್ರ ಸೂಚ್ಯವಾಗಿ ಹೇಳಬಲ್ಲೆ. ಡಿಫಿಸಿಟ್ ಬಜೆಟ್ ಇಡಬೇಕಾದರೆ ಎರಡು ದಾರಿಗಳಿವೆ. ಯೋಜನಾ ಗಾತ್ರವನ್ನು ಕಡಿಮೆ ಮಾಡಿ ಡಿಫಿಸಿಟ್ ಕಡಿಮೆ ತೋರಿಸುವುದು. ಇನ್ನೊಂದು ವಾರ್ಷಿಕ ಯೋಜನಾ ಗಾತ್ರವನ್ನು ಜಾಸ್ತಿ ಮಾಡಿ ಡಿಫಿಸಿಟ್ ಜಾಸ್ತಿ ತೋರಿಸುವುದು. ಸಪೋಸ್ ಕೊರತೆ ಜಾಸ್ತಿಯಿದ್ದರೆ how to make good that deficit? Either through indirect taxes or direct taxes. ಅದು ಹಿಂದೆ ಒಂದು ಕಾಲವಿತ್ತು. ರಾಜಮಹಾರಾಜರ ಕಾಲದಲ್ಲಿ ಮಾರಾಟ ತೆರಿಗೆ ಇವುಗಳ ಸುದ್ದಿಯೇ ಇರಲಿಲ್ಲ. Apart from what we get from State revenues, ತೆರಿಗೆ ಯಾವುದೇ ಇರಲಿ, ತೆರಿಗೆ ಇರಬಾರದು. Every country in the whole world aims at a tax-less society. Every Government says that. It may be communist block. Of course it is tumbling down in the European countries and particularly in Russia also. ಎನ್ನತಕ್ಕ ಮಾತು ಇದೆ, ಆ ವಿವರ ಬೇಡ. ರಷ್ಯನ್ ಕ್ಯಾಂಪ್‌ನಲ್ಲಿ ಇರಬಹುದು, ನಾನ್ ರಷ್ಯನ್ ಕ್ಯಾಂಪಿನಲ್ಲಿ ಇರಬಹುದು ಇಲ್ಲಿದ್ದರೂ ಕೂಡ ನಮಗೆ ಅನಿಸುತ್ತದೆ ಟ್ಯಾಕ್ಸ್‌ಲೆಸ್ ಸೊಸೈಟಿ, ಟ್ಯಾಕ್ಸ್ ಹಾಕದೆ ಇರತಕ್ಕ ಸಮಾಜವನ್ನು ನಿರ್ಮಾಣ ಮಾಡಬೇಕೆಂದು ಆ ಗುರಿಯನ್ನು ಇಟ್ಟುಕೊಂಡು ನಾವು ಆಯವ್ಯಯ ಪತ್ರವನ್ನು ಮಾಡಬೇಕು. ನಾವು ಅದರ ಬಗ್ಗೆ ಗಮನವನ್ನು ಕೊಡುತ್ತೇವೆ ಅದು ಅನಿವಾರ್ಯವಾಗಿರತಕ್ಕ ಪರಿಸ್ಥಿತಿ. ಇಡೀ ರಾಷ್ಟ್ರದಲ್ಲಿ ಯಾವುದೇ ಸರ್ಕಾರವಿರಬಹುದು, ಕರ್ನಾಟಕ

ರಾಜ್ಯದಲ್ಲಿ ಅಷ್ಟೇ ಅಲ್ಲ. Certain States are there who are ruled by Left Front Governments like West Bengal and Kerala. ಅವರೂ ಕೂಡ ಡಿಫಿಸಿಟ್ ಬಜೆಟ್ ಇಟ್ಟಿದ್ದಾರೆ. ಇದು ಅನಿವಾರ್ಯ. ಅನಿವಾರ್ಯವಾಗಿರತಕ್ಕ ಪರಿಸ್ಥಿತಿಯಲ್ಲಿ ಜನತಾದಳ ಇರಬಹುದು, ಬಿ.ಜೆ.ಪಿ. ಇರಬಹುದು, ಸೆಂಟ್ರಲ್‌ನಲ್ಲಿ ನ್ಯಾಷನಲ್ ಫ್ರಂಟ್ ಸರ್ಕಾರ ಇರಬಹುದು. ಕಾಂಗ್ರೆಸ್ ಸರ್ಕಾರ ಇರಬಹುದು. ಯಾವುದೇ ಪಕ್ಷದ ಸರ್ಕಾರವಿರಬಹುದು. We are forced to adopt this deficit budgeting Basically it is a very dangerous trend but it is inescapable. ಏನೂ ಮಾಡುವುದಕ್ಕಾಗುವುದಿಲ್ಲ, ನಾವು ಯಾರೂ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಮೊನ್ನೆ ಚುನಾವಣೆಗಳು ಕಳೆದ ಮೇಲೆ this dose of taxation ಏನಿದೆ ಇದು ಹೇವಿ ಬಿದ್ದರೆ ಅದು ಚುನಾವಣೆಗೆ ಸಂಬಂಧಪಟ್ಟಿದ್ದಲ್ಲ. ಕರ್ನಾಟಕ ರಾಜ್ಯದ ಜನತೆ ಕಳೆದ ಹಲವಾರು ವರ್ಷಗಳಿಂದ ಅನುಭವಿಸಿರತಕ್ಕ ಬರಗಾಲದ ಪರಿಸ್ಥಿತಿ ಎಂದು ನಾನು ಇದನ್ನು ಸ್ವೀಕಾರ ಮಾಡುತ್ತಿದ್ದೇನೆ, ಬಹು ಮುಖ್ಯವಾಗಿ ೧೯೮೬-೮೭ರ ಕೊನೆಯಲ್ಲಿ ನಮ್ಮ ಪಕ್ಷದ ಸರ್ಕಾರವಿದ್ದಾಗ ಕೊನೆಯ ಹಂತದಲ್ಲಿ ಕೆಲವು ಏರಿಯಾ ಬಿಟ್ಟರೆ ಉಳಿದಿರತಕ್ಕ ಎಲ್ಲಾ ಭಾಗದಲ್ಲಿ ಬರಗಾಲವೆಂದು ಕೇಂದ್ರ ಸರ್ಕಾರಕ್ಕೆ ವರದಿಗಳು ಹೋಗಿವೆ. ಒಂದು ಕಾಲದಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಕೊಡಗು ಜಿಲ್ಲೆ ಬಿಟ್ಟರೆ ಇಡೀ ಕರ್ನಾಟಕ ರಾಜ್ಯ ಬರಗಾಲದ ದವಡೆಗೆ ಸಿಕ್ಕಿದೆಯೆಂದು ಚರ್ಚೆ ಮಾಡಿದ್ದೇವೆ. ಕೊಡಗು ಜಿಲ್ಲೆಯ ಕುಶಾಲನಗರ, ಸೋಮವಾರಪೇಟೆಯಲ್ಲೂ ಸಹ ಬರಗಾಲ ಬಿದ್ದಿದೆ ಎಂದು ಜಿಲ್ಲಾಪರಿಷತ್‌ನವರು ವರದಿ ಕಳಿಸಿರುವುದನ್ನು ಈ ಸದನದಲ್ಲಿ ಓದಿದ್ದೇವೆ. ಆದ್ದರಿಂದ ಹೆಚ್ಚಿಗೆ ತೆರಿಗೆಗಳನ್ನು ಹಾಕದೇ ಎಷ್ಟು ಸಾಧ್ಯವೋ ಅಷ್ಟು ಡೈರೆಕ್ಟ್ ಟ್ಯಾಕ್ಸ್ ಹಾಕದೇ ಇರುವುದಕ್ಕೆ ಮತ್ತೆ ಹೆಚ್ಚು ವೆಚ್ಚ ಮಾಡತಕ್ಕದನ್ನು ನಾನು ಸ್ವಾಗತ ಮಾಡುತ್ತೇನೆ. ಆದರೆ ಇದೇ ಸಂದರ್ಭದಲ್ಲಿ ಚಪ್ಪಲಿಗಳ ಬಗ್ಗೆ, ಕೆಲವು ಐಟಮ್ಸ್‌ಗಳಲ್ಲಿ ಟ್ಯಾಕ್ಸ್ ಜಾಸ್ತಿ ಮಾಡಿರುವುದು ಸರಿಯಾಗಲಿಲ್ಲ.

ಶ್ರೀ ಎಂ. ರಾಜಶೇಖರಮೂರ್ತಿ (ಹಣಕಾಸು. ಸಾಂಸ್ಥಿಕ ಹಣಕಾಸು. ಮತ್ತು ಅಬಕಾರಿ ಮಂತ್ರಿ).—ಮಾನ್ಯ ಅಧ್ಯಕ್ಷರೇ, ಒಂದು ಕ್ಲಾರಿಫಿಕೇಶನ್ ಚಪ್ಪಲಿಗಳ ಮೇಲೆ ಈಗ ಇರತಕ್ಕಂಥ ಟ್ಯಾಕ್ಸ್ ನೂರು ರೂಪಾಯಿಗೆ ೧೦ರಷ್ಟು ಅಂದರೆ ೧೦ ಪರ್ಸೆಂಟ್ ಈಗ ೩೦ ರೂಪಾಯಿಗೆ ಕಡಿಮೆ ಇರತಕ್ಕಂಥ ಚಪ್ಪಲಿಗೆ ಯಾವ ತೆರಿಗೆಯೂ ಇಲ್ಲ ೩೦ ರೂಪಾಯಿ ಮೀರಿದರೆ ೧೦ ಪರ್ಸೆಂಟ್ ಇತ್ತು. ನಮ್ಮ ತೆರಿಗೆ ಅಧಿಕಾರಿಗಳು ಇದನ್ನು ಪರಿಶೀಲನೆ ಮಾಡುವಾಗ ಅವರ ಗಮನಕ್ಕೆ ಬಂದಿದ್ದು ಏನು ಎಂದರೆ ಕೆಲವು ಚಪ್ಪಲಿಗಳ ಬೆಲೆ ೮೫ ರೂಪಾಯಿ ಎಂದು ಪ್ರಿಂಟ್ ಮಾಡಿದ್ದರೂ ಕೂಡ ಇನ್‌ವಾಯ್ಸ್‌ನಲ್ಲಿ ೧೫ ರೂಪಾಯಿ ಎಂದು ನಮೂದಿಸುತ್ತಿದ್ದರು. ಅಂದರೆ ತೆರಿಗೆಯಿಂದ ತಪ್ಪಿಸಿಕೊಳ್ಳುವುದಕ್ಕೋಸ್ಕರ ೩೦ ರೂಪಾಯಿಗಳಿಗೆ ಮೇಲ್ಪಟ್ಟಿದ್ದರೂ ಸಹ ಬಿಲ್‌ಗಳಲ್ಲಿ ೩೦ ರೂಪಾಯಿ ಕೆಳಗಡೆ ಬರೆಯುತ್ತಾ ಹೋದರು. ಇದರಿಂದ ತೆರಿಗೆ ಕಡಿಮೆ ಯಾಯಿತು. ಈ ದೃಷ್ಟಿಯಿಂದ ಸ್ವಲ್ಪ ಕಡಿಮೆ ಮಾಡಿ ಎಲ್ಲದಕ್ಕೂ ತೆರಿಗೆ ಹಾಕಲು ಉದ್ದೇಶಿಸಲಾಗಿದೆ. ೧೦ ಪರ್ಸೆಂಟ್ ಇದ್ದುದರ ಬದಲು ೮ ಪರ್ಸೆಂಟ್ ಮಾಡಿ ಎಲ್ಲದಕ್ಕೂ ತೆರಿಗೆ ಅನ್ವಯಿಸುವ ಹಾಗೆ ಮಾಡಲಾಗಿದೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಇದರಿಂದ ಚಪ್ಪಲಿಗಳ ಬೆಲೆ ಕಡಿಮೆ ಏನೂ ಆಗುವುದಿಲ್ಲ, ಇಂಡೈರೆಕ್ಟ್ ಆಗಿ ಟ್ಯಾಕ್ಸ್ ಮಾಡಿದಹಾಗೆ ಆಗುತ್ತದೆ. ಇದರಿಂದ ಬರುವ ರೆವಿನ್ಯೂ ಕೂಡ ಕಡಿಮೆಯೇ ಇರುತ್ತದೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಸಭಾಧ್ಯಕ್ಷರೇ, ಆಯುವ್ಯಯ ಮೇಲೆ ಚರ್ಚೆ ನಡೆಯುತಕ್ಕಂಥ ಸಂದರ್ಭದಲ್ಲಿ ಎಲ್ಲಾ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿರಬೇಕೆಂದು ಶ್ರೀ ಸಿಂಧ್ಯ ರವರು ಹೇಳಿದ್ದರು. ಸಭೆಯಲ್ಲಿ ಎಲ್ಲಾ ಅಧಿಕಾರಿಗಳು ಇಲ್ಲದೇ ಹೋದರೆ ಮಾನ್ಯ ಸದಸ್ಯರುಗಳ ಅಭಿಪ್ರಾಯದ ಕಲ್ಪನೆ ಅವರಿಗೆ ಆಗುವುದಿಲ್ಲ. ಆದ್ದರಿಂದ ಎಲ್ಲಾ ಅಧಿಕಾರಿಗಳು ಸಹಿತ ಇಲ್ಲಿ ಉಪಸ್ಥಿತರಿರಬೇಕೆಂದು ಮತ್ತೊಮ್ಮೆ ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಅಧಿಕಾರಿಗಳು ಇರಲಿ, ಶಾಸಕರೇ ಇಲ್ಲಿ ಇರುವುದಿಲ್ಲ. ಖಾಲಿ ಕುರ್ಚಿಗಳೇ ಇರುತ್ತವೆ ಅಧಿಕಾರಿಗಳು ಇರಬೇಕು. ನಿಜ. ಅಷ್ಟೇ ಜವಾಬ್ದಾರಿಯಿಂದ ಶಾಸಕರೂ ಇರಬೇಕಾಗುತ್ತದೆ. ಈ ಆಯುವ್ಯಯದ ಮೇಲೆ ಚರ್ಚೆ ಪ್ರಾರಂಭವಾಗಿ ಮೂರು ದಿವಸ ಆಯಿತು. ಇವತ್ತು ನಾಲ್ಕನೇ ದಿವಸವೂ ಶಾಸಕರ ಹಾಜರಾತಿ ತುಂಬಾ ಕಡಿಮೆ ಇದೆ ಈ ಕಡೆ ಒಂದು ಎಂಟು. ಆ ಕಡೆ ೧೫ ಜನ

ಒಬ್ಬರು ಮಾನ್ಯ ಸದಸ್ಯರು.—ವಿರೋಧಪಕ್ಷದವರ ಲೆಕ್ಕವನ್ನೂ ತೆಗೆದುಕೊಳ್ಳಬೇಕಾಗುತ್ತದೆ.

ಛೇರ್‌ಮನ್.— ಶ್ರೀ ಬಂಗಾರಪ್ಪನವರೇ, ನೀವು ಮುಂದುವರೆಸಿ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ತಾವು ತಿದ್ದುಪಡಿಯನ್ನು ತರತಕ್ಕಂಥ ಸಂದರ್ಭದಲ್ಲಿ ಸ್ವಲ್ಪ ವಿಚಾರ ಮಾಡಿ ಬಡವರ ಪಾದರಕ್ಷೆಗಳ ಮೇಲೆ ಹೆಚ್ಚು ಟ್ಯಾಕ್ಸ್ ಬೀಳಬಾರದಂ, ಇದನ್ನು ಸ್ವಲ್ಪ ವಿಚಾರ ಮಾಡಿ. ಅವರಿಗೆ ರಿಯಾಯ್ತಿ ಕೊಡಬೇಕಾಗಿದೆ. ಇತರ ಐಟಮ್‌ಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡತಕ್ಕಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ.

ಈ ಸಂದರ್ಭದಲ್ಲಿ ಬಡವರಿಗೆ ತೊಂದರೆಯಾಗದ ಹಾಗೆ ನೋಡಿಕೊಳ್ಳಬೇಕಂ. ಚಪ್ಪಲಿ ಇತ್ಯಾದಿ ಬಗ್ಗೆ ಹಾಗೂ ಇದೇ ರೀತಿಯ ಯಾವುದೇ ಐಟಂ ಇದ್ದರೂ ಕೂಡ ವಿಚಾರ ಮಾಡುವುದು ಒಳ್ಳೆಯದು. ನಾನಂ ಸಾಂದರ್ಭಿಕವಾಗಿ ಈ ವಿಚಾರವನ್ನು ಪ್ರಸ್ತಾಪ ಮಾಡಿದ್ದೇನೆ ಏಕೆಂದರೆ ಇವತ್ತು ಟ್ಯಾಕ್ಸ್ ಒಬ ಕಟ್ಟಬೇಕಾದರೆ, the capacity of an individual to pay more taxes, either at the Centre or at the State level, ಇದು ಎಲ್ಲಿ ಸಾಧ್ಯ, ಹೇಗೆ ಸಾಧ್ಯವಾಗುತ್ತದೆ. Only through economic growth. ಇನ್‌ಕ್ರೀಸ್ ಮಾಡಬೇಕಾಗುತ್ತದೆ. ಆರ್ಥಿಕ ಬೆಳವಣಿಗೆ ಜಾಸ್ತಿಯಾದಾಗ ಮಾತ್ರ ನಾವು ಈ ಟ್ಯಾಕ್ಸ್ ಜಾಸ್ತಿ ಕೊಡತಕ್ಕ ಶಕ್ತಿಯನ್ನು ಒಬ್ಬ ವ್ಯಕ್ತಿಗೆ ನೀಡುವುದಕ್ಕೆ ಸಾಧ್ಯವಾಗುತ್ತದೆ. ಇದು ಯಾವಾಗ ಸಾಧ್ಯವಾಗುತ್ತದೆ, ಹೇಗೆ ಸಾಧ್ಯವಾಗುತ್ತದೆ ? ನಾನು ಈಗಾಗಲೇ ಅದನ್ನು ಹೇಳಿದೆ. ಕೋರ್ ಸೆಕ್ಟಾರ್ ಎಂದು ನಾವೇನು ಹೇಳುತ್ತೇವೆ, ಪ್ಲಾನಿಂಗ್ ಕಮಿಷನ್‌ಗೆ ಸಂಬಂಧಪಟ್ಟಂತೆ, ನಮ್ಮ ಮಾತಿನಲ್ಲಿ ಹೇಳಬೇಕಾದರೆ, ಅಲ್ಲಿ ಉತ್ಪಾದನೆಗೆ ಹೆಚ್ಚಿನ ಗಮನವನ್ನು ನೀಡಬೇಕಾಗುತ್ತದೆ. ಇವತ್ತು ನೀರಾವರಿ ತೆಗೆದುಕೊಂಡರೆ, ಕಾವೇರಿ ಬೇಸಿನ್‌ನಲ್ಲಿ, ಕಾವೇರಿ ಜಲಾನಯನ ಪ್ರದೇಶದಲ್ಲಿರತಕ್ಕ ಹಲವಾರು ಯೋಜನೆಗಳ ತೊಂದರೆಯನ್ನು ನಿಭಾಯಿಸು ವುದಕ್ಕೆ ಬಹಳ ಕಷ್ಟವಾದ ಪರಿಸ್ಥಿತಿ ಇದೆ. ಕಾವೇರಿ ಯೋಜನೆಗಳು, ಯೋಜನಾ ಚೌಕಟ್ಟಿನಲ್ಲಿ ಬರದೇ ಇರತಕ್ಕ ಯೋಜನೆಗಳು. ಈ ಸಂದರ್ಭದಲ್ಲಿ ದಿವಂಗತ ದೇವರಾಜ ಅರಸು ಅವರನ್ನು ನೆನಸಬೇಕು. It is only on account of him that the State Government started taking these projects under Cavery basin. ನಿಜ. ಸೆಂಟ್ರಲ್‌ನಲ್ಲಿ ನಮ್ಮ ಯೋಜನಾ ಆಯೋಗದವರೂ ಕೂಡ ಒಪ್ಪಿಗೆ ಕೊಡದೇ ಇರುವುದಕ್ಕೆ ಹಲವಾರು ಕಾರಣಗಳು ಇವೆ. ನಾನು ಈ ವಿವರಗಳಿಗೆ ಹೋಗುವುದಿಲ್ಲ. ತಮಿಳುನಾಡು ಮತ್ತು ನಮಗೆ 1924ರಲ್ಲಿ ಆಗಿರತಕ್ಕ ಅಗ್ರಿಮೆಂಟ್ ಟೈಮ್ ಮುಗಿದು ಹೋಗಿದೆಯೆಂದು ನಾವು, ಅವರು ಪಂಚಾಯಿತ್ತಿಗೆ ವಹಿಸಬೇಕೆಂಬ ವಿಚಾರ, ಈ ಒಂದೊಂದು ವಿವರಗಳಿಗೂ ನಾನು ಹೋಗುವುದಿಲ್ಲ. ಏಕೆಂದರೆ, ಇವುಗಳನ್ನು ಬೇರೆ ಸಂದರ್ಭದಲ್ಲಿ ಚರ್ಚೆಗೆ ತೆಗೆದುಕೊಳ್ಳೋಣ. ರೈತರ ಸಾಲದ ಬಗ್ಗೆ ಪ್ರತ್ಯೇಕವಾದ ಚರ್ಚೆ ಇಲ್ಲಿರು ವುದರಿಂದ, ಮಾನ್ಯ ಯಡಿಯೂರಪ್ಪನವರು ಮತ್ತು ಬಾಬಾಗೌಡ ಪಾಟೀಲರು ಭಾಷಣ ಮಾಡುವಾಗ ನಿನ್ನೆ ಹೇಳಿದ್ದಾರೆ, ಇದು ಬೇಡ, ಪ್ರತ್ಯೇಕವಾಗಿ ಚರ್ಚೆಗೆ ಬರುತ್ತದೆ ಆಗ ಈ ವಿವರಗಳಿಗೆ ಹೋಗು ವುದಕ್ಕೆ ಸಾಧ್ಯವಾಗುತ್ತದೆ, ಇವುಗಳ ಮೇಲೆ ಬೆಳಕು ಚೆಲ್ಲುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ಮಾತನ್ನು ನಿನ್ನೆಯೂ ಕೂಡ ಹೇಳಿದ್ದೇನೆ. ಹೀಗೆ ಕೆಲವು ವಿಚಾರಗಳ ಬಗ್ಗೆ ವಿವರಗಳಿಗೆ ನಾನು ಹೋಗುವುದಿಲ್ಲ. ಇವತ್ತು ನಾವು ನಮ್ಮ ಯೋಜನಾ ಚೌಕಟ್ಟನ್ನು ಬಿಟ್ಟರತಕ್ಕ ಯೋಜನೆಗಳು, ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳು. The financial constraint on our State Exchequer. ಎಷ್ಟು ಬರುತ್ತವೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಹಾಗಾದಾಗ, ನಾವು ಅಲೋಕೇಷನ್ ಫಾರ್ ಪ್ಲಾನ್ ಮತ್ತು ನಾನ್‌ಪ್ಲಾನ್ ಸ್ಕೀಮ್ ಎನ್ನುವ ಮಾತನ್ನು ಆಡಿದಾಗ, ಇವತ್ತು ಪ್ಲಾನಿಂಗ್ ಕಮೀಷನ್‌ನವರು ಅಪ್ರೂವಲ್ ಮಾಡಿರತಕ್ಕ ಕಾರ್ಯ ಕ್ರಮಗಳು ಅಥವಾ ಯೋಜನೆಗಳು ಏನಿವೆ, ನಾವು ಯೋಜನೇತರ ಕಾರ್ಯಕ್ರಮಗಳ ಪಟ್ಟಿಯಲ್ಲಿ ಕೆಲವೊಮ್ಮೆ. ಉತ್ಪಾದನಾ ಯೋಜನೆಗಳು ಕಾವೇರಿ ಬೇಸಿನ್‌ನಲ್ಲಿರತಕ್ಕ ಯೋಜನೆಗಳಂ ಇನ್ನು ಅನುತ್ಪಾದನೆಗೆ ಸಂಬಂಧಪಟ್ಟ ಯೋಜನೆಗಳು ಎಂದರೆ, ಬಡವರಿಗೆ ಸೀರೆ, ಬಟ್ಟೆ, ಸ್ಲೇಟು, ಪುಸ್ತಕ ಕೊಟ್ಟರ, ಇವು ಅನುತ್ಪಾದಕ ಯೋಜನೆಗಳಾಗುತ್ತವೆ, ಕೆಲವುಸಾರಿ ಈ ರೀತಿ ಕೊಡುವುದೂ ಅನಿವಾರ್ಯವಾಗುತ್ತದೆ; ಏನೂ ಮಾಡುವುದಕ್ಕಾಗುವುದಿಲ್ಲ. ಸೆಂಟ್ರಲ್ ಬಜೆಟ್‌ನ್ನೂ ನಾವು ನೋಡುತ್ತೇವೆ, ಸ್ಟೇಟ್ ಬಜೆಟ್‌ನ್ನೂ ನಾವು ನೋಡುತ್ತೇವೆ. ಎಲ್ಲಿಯವರೆಗೆ ಅನುತ್ಪಾದಕ ಎಕ್ಸ್ ಪೆಂಡೀಚರ್ ಜಾಸ್ತಿಯಾಗುತ್ತದೆ. ಅಲ್ಲಿಯವರೆಗೆ non-productive programmes. ಕಡಿಮೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಹಣದುಬ್ಬರವನ್ನು ತಡೆಯುವುದಕ್ಕೆ ಸಾಧ್ಯವಾಗುವುದಿಲ್ಲ, ಯಾರಿಗೂ ಸಾಧ್ಯವಾಗುವುದಿಲ್ಲ. ಇದನ್ನು ಸೆಂಟ್ರಲ್ ಮತ್ತು ಸ್ಟೇಟ್ ಎಲ್ಲರೂ ವಿಚಾರ ಮಾಡಬೇಕು. ನಾವೂ ವಿಚಾರ ಮಾಡಬೇಕು. ಆದರೂ ಕೆಲವೊಮ್ಮೆ, we are forced to take up certain programmes under nonplan schemes, ನಾವು ತೆಗೆದುಕೊಂಡ

ಬಿಡುತ್ತೇವೆ. ನಾವು ದುಡ್ಡು ತೆಗೆದುಕೊಂಡು ಹೋಗಿ ಪೂರ್ತಿ ಅಲ್ಲಿ ಇಟ್ಟುಬಿಡುತ್ತೇವೆ. ಯಾವುದಾದರೂ ಬಡವರ ಮದುವೆಗಳು ಬಂದರೆ, ತಾಳಿಭಾಗ್ಯ ಯೋಜನೆ ಎನ್ನುವುದು, ಬಡವರಿಗೆ ಒಂದು ತಾಳಿ ಕೊಟ್ಟು ಮಾಡಿಸಿದರೆ, ಈ ತಾಳಿ ಎಲ್ಲಿಂದ ಬರುತ್ತದೆ; ಹಣ ಏನಾಗುತ್ತದೆ. ಉತ್ಪಾದನೆ ಎಂದರೆ, ಮಕ್ಕಳನ್ನು ಹೆರುವುದು ಉತ್ಪಾದನೆ ಅಲ್ಲ. ನಿಜ ಹೇಳಬೇಕೆಂದರೆ, ಮಕ್ಕಳನ್ನು ಹೆರುವುದು, ಇದರಿಂದ ಹೆಚ್ಚಿನ ಒತ್ತಡ, ಸ್ಟೇಟ್ ಎಕ್ಸ್‌ಚೆಕರ್, ಮತ್ತು ಸೆಂಟ್ರಲ್ ಎಕ್ಸ್‌ಚೆಕರ್ ಮೇಲೆ ಬೀಳುತ್ತದೆ ಈಗ ಪರಿಸ್ಥಿತಿ ಏನಾಗಿದೆ ಎಂದರೆ, ಒಂದು ಮಗು ಹುಟ್ಟಿತು ಎಂದರೆ, ನಮಗೆ ಇಲ್ಲಿ ತಲಾವಾರು ಆದಾಯ ಕಡಿಮೆಯಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಈಗ ಹೀಗೆ ಮಾಡಬೇಕಾಗುತ್ತದೆ. ನಾನ್‌ಪ್ಲಾನ್‌ನಲ್ಲಿ ಬೇರೆ ಮಕ್ಕಳನ್ನು ಹುಟ್ಟಿಸಬೇಕಾಗುತ್ತದೆ. ಪ್ಲಾನ್‌ನಲ್ಲಿ ಬೇರೆ ಮಕ್ಕಳನ್ನು ಹುಟ್ಟಿಸಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್.— ಇದರ ಬಗ್ಗೆ ವಿಶೇಷ ಸಭೆ ಕರೆದು ಚರ್ಚೆ ಮಾಡೋಣ, ಇದು ಬಹಳ ಗಂಭೀರವಾದ ಪ್ರಶ್ನೆ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಕೆಲವು ಸ್ಕೀಮ್ಸ್‌ನ್ನು ನಾನ್‌ಪ್ಲಾನ್‌ನಲ್ಲಿ ತೆಗೆದುಕೊಳ್ಳಲೇ ಬೇಕಾಗುತ್ತದೆ. ವಿದ್ಯಾರ್ಥಿವೇತನ ಎನ್‌ಹ್ಯಾನ್ಸ್ ಮಾಡುವುದು, ಇದು ನಾನ್ ಪ್ಲಾನ್‌ನಲ್ಲಿ ಬರುತ ದೆ ಹಾಸ್ಟೆಲ್ ಕಟ್ಟಿಸುವುದು ನಾನ್ ಪ್ಲಾನ್‌ನಲ್ಲಿ ಬರುತ್ತದೆ. ಮನೆಗಳನ್ನು ಕಟ್ಟಿಸಿಕೊಡುವುದು ನಾನ್ ಪ್ಲಾನ್‌ನಲ್ಲಿ ಬರುತ್ತದೆ. ಈಗ ಅಗ್ರಿಕಲ್ಚರಲ್ ಲೇಬರರ್ಸ್ ಇದ್ದಾರೆ, ಅವರಿಗೆ ಏನು ಕೊಡುತ್ತೇವೆ ? ಜಮೀನು ಇರುವವರಿಗೆ ಪ್ರಾಜೆಕ್ಟ್ ಮಾಡಿ ನೀರು ಕೊಡಬಹುದು, ಎಲೆಕ್ಟ್ರಿಸಿಟಿ ಕೊಟ್ಟು ಸಹಾಯ ಮಾಡಬಹುದು, ಆದರೆ ಸಾವಿರಾರು, ಲಕ್ಷಾಂತರ ಜನ ಏನು ಕೂಲಿಗಾರರು ಇದ್ದಾರೆ, ಅಗ್ರಿಕಲ್ಚರಲ್ ಲೇಬರ್ಸ್ ಆಗಬಹುದು, ಫ್ಯಾಕ್ಟರಿ ಲೇಬರರ್ಸ್ ಆಗ ಬಹುದು, ಆರ್ಟಿಸಾನ್ಸ್ ಆಗಬಹುದು, ಅವರಿಗೂ ಕೂಡಾ ಸಹಾಯ ಕೊಡಬೇಕು ಎಂಬ ದೃಷ್ಟಿಯಿಂದ ಇದೆಲ್ಲವನ್ನೂ ಮಾಡಬೇಕಾಗುತ್ತದೆ. ನಾನ್ ಪ್ಲಾನ್‌ನಲ್ಲಿ ಏನೂ ಆಗುವುದಿಲ್ಲ ಎಂದು ಡಿಸ್ಕಾರ್ಡ್ ಮಾಡುವುದಕ್ಕೆ ಆಗುವುದಿಲ್ಲ. ಅದನ್ನೂ ಕೂಡಾ ಸ್ವಲ್ಪ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.– ಮಾನ್ಯ ಸದಸ್ಯರಾದ ಖರ್ಗೆಯವರು ಹೇಳಿದ್ದು ಕರೆಕ್ಟ್. ಎಲ್ಲಾ ರಾಜಕೀಯ ಪಕ್ಷದವರಿಗೂ ಕೂಡಾ ಇದು ಅನಿವಾರ್ಯ, ಈ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಒಬ್ಬರಿಗೂ ಸಾಧ್ಯವಾಗಿಲ್ಲ. ಕಾನೂನು ಇರಲಿ. ಇಲ್ಲದೇ ಹೋಗಲಿ ಕೇಂದ್ರ ಮಾಡಲಿ, ರಾಜ್ಯ ಮಾಡಲಿ ಯಾವುದೇ ಮಾಡಲಿ ಇದು ಅನಿವಾರ್ಯ. ಯೋಜನೇತರ ಬಾಬಿನಲ್ಲಿ ಹಣವನ್ನು ವರ್ಷದಿಂದ ವರ್ಷಕ್ಕೆ ಜಾಸ್ತಿ ಮಾಡುತ್ತಾ ಹೋಗುತ್ತಿದ್ದೇವೆ. ಇದರಿಂದ ಅಲ್ಟಿಮೇಟ್ ಆಗಿ ನಮ್ಮ ಎಕನಾಮಿಕ್ ಸ್ಟ್ರಕ್ಚರ್ ಕುಸಿದು ಬೀಳುವುದಕ್ಕೆ ಕಾರಣವಾಗುತ್ತದೆ ಎಂದು ಗೊತ್ತಿದ್ದರೂ ಕೂಡಾ ಅನಿವಾರ್ಯವಾಗಿ ಫೋರ್ಸ್‌ನಿಂದ ಕೊಡುತ್ತಿದ್ದೇವೆ. ಏನೂ ಮಾಡುವುದಕ್ಕೆ ಸಾಧ್ಯವಾಗುತ್ತಿಲ್ಲ. ಏತಕ್ಕೆಂದರೆ ಇವತ್ತು ಹ್ಯಾವ್‌ನಾಟ್ಸ್ ಸಂಖ್ಯೆ ಇದೆಯಲ್ಲ, ಎಲ್ಲಾ ಸೌಲಭ್ಯಗಳಿಂದ ವಂಚಿತರಾಗಿರತಕ್ಕಂಥವರು. ರಾಜ್ಯಾಂಗದಲ್ಲಿ ಹಕ್ಕು ಬಾಧ್ಯತೆಗಳು ಕೊಡಲಾಗಿದ್ದರೂ ಕೂಡಾ ಅದನ್ನು ಅನುಭವಿಸುವುದಕ್ಕೆ ಸಂಪೂರ್ಣ ಶಕ್ತಿ ಕಳೆದುಕೊಂಡಿರತಕ್ಕಂಥ ವರ್ಗಗಳು, ಶತಶತಮಾನಗಳಿಂದ ತುಳಿತಕ್ಕೆ ಸಿಕ್ಕಿರತಕ್ಕಂಥ ವರ್ಗಗಳನ್ನು ಪ್ಲಾನ್ ಸ್ಕೀಮ್ ಬಂದ ಮೇಲೂ ಕೂಡಾ ನಾನ್ ಪ್ಲಾನ್ ಪಾಕೆಟ್ಟಿನಲ್ಲಿ ಬರತಕ್ಕಂಥ ಇಂತಹ ವರ್ಗಗಳನ್ನು ಮೇಲೆತ್ತುವುದಕ್ಕೆ ನೂರಾರು ವರ್ಷಗಳು ಬೇಕಾಗುತ್ತದೆ ಎಂಬ ಅಭಿಪ್ರಾಯವನ್ನು ನಾವು ಇಟ್ಟುಕೊಳ್ಳಬೇಕಾಗುತ್ತದೆ. ತುಳಿತಕ್ಕೆ ಸಿಕ್ಕಿರತಕ್ಕಂಥ ಇಂತಹ ವರ್ಗಗಳನ್ನು ಮೇಲೆತ್ತಬೇಕಾದರೆ, ಹರಿಜನ ಗಿರಿಜನರು, ಬುಡಕಟ್ಟು ವರ್ಗದವರು, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಮತ್ತು ಎಲ್ಲಾ ಜಾತಿಯಲ್ಲಿ ಇರತಕ್ಕಂಥ ಕಡುಬಡವರು. It may vary in degree, percentage from one community to another. ಎಲ್ಲಾ ಜಾತಿಯಲ್ಲೂ ಬಡತನ ಇದ್ದೇ ಇದೆ. ನಾನು ಮೊದಲು ಹೇಳಿರತಕ್ಕ ಕೆಲವು ಗುಂಪುಗಳಲ್ಲಿ ಬಡತನ ಹೆಚ್ಚಾಗಿರತಕ್ಕಂಥ ಗುಂಪುಗಳು ಇವೆ. ಇಂತಹ ವರ್ಗಗಳನ್ನು ನಾವು ಮೇಲೆತ್ತುವ ವಿಚಾರದಲ್ಲಿ ಅನಿವಾರ್ಯವಾಗಿ ನಾವು ಯೋಜನೇತರ ಬಾಬಿನಲ್ಲಿ ಹಣವನ್ನು ಖರ್ಚು ಮಾಡತಕ್ಕಂಥಾದ್ದು ಇದೆ. ಏತಕ್ಕೆಂದರೆ ಅವರು ಓಟನ್ನು ಕೊಡುತ್ತಾರೆ. ಹಕ್ಕುಬಾಧ್ಯತೆಗಳ ಬಗ್ಗೆ ಬೇಕಾದಷ್ಟು ಭಾಷಣ ಮಾಡುತ್ತೇವೆ. ಆದರೆ ಅವರು ಅವರ ಬಗ್ಗೆ ಹೇಳುವುದಕ್ಕೆ ಸಾಧ್ಯ ಇಲ್ಲ. ನಾಲಿಗೆ ಇದ್ದರೂ ಕೂಡಾ ನಾಲಿಗೆ ಕಳೆದುಕೊಂಡಿರತಕ್ಕಂಥವರು, ಕೈ ಇದ್ದರೂ ಕೂಡಾ ಕೈ ಕಳೆದುಕೊಂಡಿರುವವರು, ಹೇಳತಕ್ಕಂಥ ವಿಚಾರ ಮನಸ್ಸಿನಲ್ಲಿ ಇದ್ದರೂ ಕೂಡಾ ಹೇಳುವುದಕ್ಕೆ ಸಾಧ್ಯ ಇಲ್ಲದಿರತಕ್ಕ ವರ್ಗಗಳಿಗೆ, ಅನಿವಾರ್ಯವಾಗಿ ನಾವು ಸೀರೆಪಂಚೆ, ಸ್ಲೇಟು ಪುಸ್ತಕ, ಬಟ್ಟೆಬರೆಗಳನ್ನು ಕೊಡಲೇ ಬೇಕಾಗುತ್ತದೆ.

ಕುಡಿಯುವ ನೀರು ರಾಷ್ಟ್ರೀಯ ಸಮಸ್ಯೆಯಾಗಿದೆ, ಅದನ್ನೂ ಕೊಡಲೇ ಬೇಕಾಗುತ್ತದೆ, ಕೆಲವು ಸಲ ದೇವಸ್ಥಾನಗಳನ್ನೂ ಕೂಡಾ ಕಟ್ಟಿಸಿಕೊಡುವುದಕ್ಕೆ ಹಣವನ್ನು ಕೊಡುತ್ತೇವೆ. ಅಂತಹ ಸಂದರ್ಭಗಳೂ ಬರಬಹುದು. ಹೀಗೆ ಯೋಜನೇತರ ಬಾಬಿನಲ್ಲಿ ಅನಿವಾರ್ಯವಾಗಿ ಖರ್ಚು ಮಾಡದಿದ್ದರೆ, ಸಮಾಜದ ಅವಿಭಾಜ್ಯವಾದ ಅಂಗವಾದ ಇಂತಹ ವರ್ಗಗಳನ್ನು ಮೇಲೆತ್ತುವ ಅವಕಾಶಕ್ಕೆ ನಾವು ಗಮನಹರಿಸುವುದಕ್ಕೆ ಸಾಧ್ಯವಾಗಿಲ್ಲ ಎಂದು ಹೇಳಬೇಕಾಗುತ್ತದೆ. ನಾನ್‌ಪ್ಲಾನ್ ಸ್ಕೀಮ್‌ನಲ್ಲಿ ಯಾವಾಗಲೂ ಹಣವನ್ನು ತೆಗೆದಿಡುತ್ತೇವೆ. ಇದರಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಇನ್ನೂ ಕೂಡಾ ಹೀಗೆ ಬಿಟ್ಟರೆ ನಮ್ಮ ಆರ್ಥಿಕ ಪರಿಸ್ಥಿತಿಯ ಮೇಲೆ ಹೆಚ್ಚಿನ ಒತ್ತಡ ಬೀಳುವುದಕ್ಕೆ ಸಾಧ್ಯವಾಗುತ್ತದೆ. ನನಗನ್ನಿಸುತ್ತದೆ ಇದು ಅನಿವಾರ್ಯ. ಇದರಿಂದ ಇನ್‌ಫ್ಲೇಷನ್ ಟ್ರೇಡ್ ಜಾಸ್ತಿಯಾಗುತ್ತದೆ. ಈಗಿನ ಟ್ರೈಫಿಸ್ಕಲ್ ಪಾಲಿಸಿಯಲ್ಲಿ ಸೆಂಟ್ರಲ್, ಸ್ಟೇಟ್ ಮತ್ತು ಲೋಕಲ್ ಗೌರ್ನಮೆಂಟ್ ಬಜೆಟ್ ತಯಾರು ಮಾಡಬೇಕಾದರೂ ಅವರದ್ದೂ ಡೆಫಿಸಿಟ್ ಬಜೆಟ್ ಇದೆ.

೨-೦೦ ಪಿ.ಎಂ.

ನಾನು ಪತ್ರಿಕೆಗಳಲ್ಲಿ ಓದುತ್ತಿದ್ದೇನೆ, ತುಂಬಾ ಬರುತ್ತಿದೆ. ಸರ್‌ಪ್ಲೆಸ್ ಬಜೆಟ್ ಜಿಲ್ಲಾ ಪರಿಷತ್‌ಗಳಲ್ಲಿ ಇರುವುದನ್ನು ಓದಿದ್ದೇವೆ. ಪತ್ರಿಕೆಗಳಲ್ಲಿ ಬರುತ್ತಿದೆ. ಪ್ರತಿಯೊಂದು ಜಿಲ್ಲಾ ಪರಿಷತ್ತಿನಲ್ಲೂ ಕೂಡ ಕೊರತೆಯ ಆಯವ್ಯಯವನ್ನು ಕಾಣುತ್ತಿದ್ದೇವೆ. ಲೋಕಲ್ ಬಾಡಿಸ್ ಅಲ್ಲ, ಟ್ರೈಫಿಸಿಕಲ್ ಅಲ್ಲ, ಚೌಕಂಬ ಅಂದರೆ ನಾಲ್ಕು ಮಟ್ಟಗಳಲ್ಲಿ ತೆಗೆದುಕೊಂಡು ಹೋಗಿ ಇಡೀ ಅಂದರೆ ಮಂಡಲ್ ಪಂಚಾಯಿತ್ ಲೆವೆಲ್‌ನಲ್ಲಿ ಬಜೆಟ್ ತಯಾರು ಮಾಡಬೇಕೆಂದು ಎಂದು ಹೇಳಿ ಮಾಡಿದರೂ ಕೂಡ ಅಲ್ಲೂ ಈ ಡಿಫಿಸಿಟ್ ಬಜೆಟ್ ಬರುತ್ತದೆ. ನಮ್ಮ ಜಿಲ್ಲಾ ಪರಿಷತ್ತು ಆಕ್ಟ್‌ನಲ್ಲಿಯೂ ಅದೂ ಇದೆ. ಈ ಡಿಫಿಸಿಟ್ ಎನ್ನುವುದು ಸೆಂಟ್ರಲ್, ಸ್ಟೇಟ್ ಲೋಕಲ್ ಬಾಡೀಸ್ ಅಂದರೆ ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯತಿಗಳಲ್ಲೂ ಬರುತ್ತದೆ. ಎಷ್ಟು ಡಿಫಿಸಿಟ್‌ನ ಮೊತ್ತ ಹೆಚ್ಚಾಗುತ್ತದೆ ಅಷ್ಟು ಪಟ್ಟು ಹೆಚ್ಚು ಬೆಳೆಯುತ್ತದೆ ಮತ್ತು ಈ ಮಾತನ್ನು ಹೇಳುವುದು ಅನಿವಾರ್ಯ. ಇದನ್ನು ನಾವು ನೀವು ಎಲ್ಲರೂಸೇರಿ ಅನುಭವಿಸಬೇಕಾಗುತ್ತದೆ. ಇದಕ್ಕೆ ಏನು ಉತ್ತರ? ಇದಕ್ಕೆ ಏನಾದರೂ ಒಂದು ಉತ್ತರ ಕಂಡುಹಿಡಿಯಬೇಕಾಗುತ್ತದೆ. ನಾನು ಈ ಮೊದಲೇ ಸೂಕ್ಷ್ಮವಾಗಿ ಹೇಳಿದೆ. ನಮ್ಮ ಅನುತ್ಪಾದಕ ಯೋಜನೆಗಳು ಆಯವ್ಯಯ ಪಟ್ಟಿಯಲ್ಲಿ ಅನಿವಾರ್ಯವಾದರೂ ಕೂಡ ನಮ್ಮ ಯೋಜನಾ ಚೌಕಟ್ಟಿನಲ್ಲಿ ಯೋಜನೆಗಳನ್ನು ಹೆಚ್ಚು ಮಾಡಿಕೊಂಡು ಯೋಜನೆಗಳಿಗೆ ಹೆಚ್ಚು ಹೆಚ್ಚು ಹಣವನ್ನು ಒದಗಿಸಿ ಜಾಸ್ತಿ ಮಾಡುತ್ತಾ ಹೋಗಬೇಕಾಗುತ್ತದೆ. ಆಗ ತಾವು ಹೆಚ್ಚು ಹೆಚ್ಚು ಉತ್ಪಾದನೆಯನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆಗ ನಮ್ಮ ಎಕನಾಮಿಕ್ ಗ್ರೋತ್ ಜಾಸ್ತಿಯಾಗುತ್ತದೆ. ಅದು ಬಿಟ್ಟು ಈ ಯೋಜನೇತರ ಬಾಬುಗಳಿಗೆ ಹಣ ಹಾಕಿದರೆ ಆಗ ಇನ್‌ಫ್ಲೇಷನರಿ ಟ್ರೆಂಡ್ ಜಾಸ್ತಿಯಾಗುತ್ತದೆ. ಇದನ್ನು ಕಡಿಮೆ ಮಾಡುವುದಕ್ಕೆ ನಾವು ಪ್ರಯತ್ನ ಮಾಡಬೇಕು. ಈ ದೇಶದಲ್ಲಿ ನಾವು ಹೊರ ದೇಶಗಳಿಂದ ತರಿಸಿಕೊಳ್ಳುವುದನ್ನು ಕಡಿಮೆ ಮಾಡಬೇಕು. ಅಂದರೆ ಇಂಪೋರ್ಟ್ಸ್ ಬಿಟ್ಟುಬಿಡಬೇಕು. ನಮ್ಮ ದೇಶದಿಂದ ಹೆಚ್ಚು ಹೆಚ್ಚು ಉತ್ಪಾದನೆ ಮಾಡಿ ಎಕ್ಸ್‌ಪೋರ್ಟ್ ಮಾಡುವಂತೆ ಇರಬೇಕು. ಅದಕ್ಕೆ ನಾವು ಪ್ರೊಡಕ್ಷನ್ಸ್ ಜಾಸ್ತಿ ಮಾಡಿಕೊಳ್ಳಬೇಕಾಗುತ್ತದೆ. ಅಂದರೆ Under these core Sectors like Power-industry, and agriculture, ಇದು ಜಾಸ್ತಿ ಆದರೆ ಮಾತ್ರ ಸಾಧ್ಯವಾಗುತ್ತದೆ. ಹೆಚ್ಚಾಗುತ್ತಿರುವ ಇನ್‌ಫ್ಲೇಷನ್ ತಡೆಗಟ್ಟಬಹುದು. ಮಾನ್ಯ ಅಧ್ಯಕ್ಷರೇ ಈ ವಿಚಾರವನ್ನು ನಾನು ಮೂಲಭೂತವಾಗಿ ಇಟ್ಟಿದ್ದೇನೆ. ನಾನು ಈ ಸಂದರ್ಭದಲ್ಲಿ ಹೆಚ್ಚು ವಿವರಗಳಿಗೆ ಹೋಗದೆ ನಮ್ಮ ಆಯವ್ಯಯ ಪತ್ರಕ್ಕೆ ಸಂಬಂಧಪಟ್ಟಿರತಕ್ಕಂಥ ಕೆಲವು ವಿವರಗಳನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ವಿವರವಾಗಿ ಮಾತನಾಡುತ್ತಾ ಹೋದರೆ ಕೆಲವು ಗಂಟೆಗಳೇ ಆಗಬಹುದು ಅದ್ದರಿಂದ ನಾನು ಪೂರ್ವ ಪೀಠಿಕೆಯಾಗಿ ಇದನ್ನು ಇಟ್ಟಿದ್ದೇನೆ. ನಾನು ಪ್ರಸ್ತಾಪ ಮಾಡಿದಂತಹ ವಿಚಾರಗಳ ಬಗ್ಗೆ ಮಾನ್ಯ ಸಚಿವರು ಗಮನಹರಿಸಿದ್ದಾರೆಂದು ಭಾವಿಸುತ್ತೇನೆ. ನಾನು ಈಗಾಗಲೇ ಹೇಳಿದೆ. ನಮ್ಮ ಯೋಜನಾ ಗಾತ್ರ ಕಳೆದ ವರ್ಷಕ್ಕಿಂತ ಜಾಸ್ತಿ ಇದೆ ಎಂದು. ಒಂದು ವೇಳೆ ಜಾಸ್ತಿ ಇದ್ದರೂ ಕೂಡ ನಮ್ಮ ವಾರ್ಷಿಕ ಯೋಜನಾ ಗಾತ್ರದ ಕೊರತೆ ನಿಮ್ಮಳವಾಗಿ ಇಡಲು ಆಗದೆ ಇದ್ದರೂ ಕೂಡ ಕೊರತೆಯ ಬಾಬು ಹೆಚ್ಚಾದಂತೆ ರಿವೈಜ್ ಮಾಡುವುದಕ್ಕೂ ಅವಕಾಶ ಇದೆ. ಅಂತಹ ಸಂದರ್ಭಗಳು ಕೂಡ ಬರುತ್ತವೆ. ಈ ಕೊರತೆಯನ್ನು ತುಂಬಲು ಟ್ಯಾಕ್ಸೇಷನ್‌ನಿಂದ ಹಣ ತುಂಬಬಹುದು. ಇನ್ನು ಅನೇಕ ಬಾಬುಗಳಿಂದ ತುಂಬಬಹುದು. ಇದನ್ನು ಅನೇಕ ಸಾರಿ ಪುನರ್ ಪುನರ್ ಪರಿಶೀಲನೆ ಮಾಡತಕ್ಕಂಥ ಸಂದರ್ಭಗಳು ಸಹ ಬರುತ್ತವೆ ಅಂದರೆ ಪೂರಕ ಅಂದಾಜುಗಳ ರೂಪದಲ್ಲಿ ಸದನದ ಒಪ್ಪಿಗೆಗೆ ಇಟ್ಟು ಒಪ್ಪಿಗೆ ಪಡೆಯತಕ್ಕಂಥ ಸಂದರ್ಭವನ್ನು ಕೂಡ ನಾವು ಇಟ್ಟುಕೊಂಡಿದ್ದೇವೆ. ಮಾನ್ಯ ಅಧ್ಯಕ್ಷರೇ ನಾವು ಈಗಾಗಲೇ, ಅನೇ

ಪಂಚವಾರ್ಷಿಕ ಯೋಜನೆಯನ್ನು ಪ್ರಾರಂಭ ಮಾಡತಕ್ಕಂಥ ಸಂದರ್ಭದಲ್ಲಿ ಇದ್ದೇವೆ. ನಾವು ನಮ್ಮ ಹಿಂದಿನ ಪಂಚವಾರ್ಷಿಕ ಯೋಜನೆಗಳ ಫಲ ನೋಡಿದರೆ, ನಮ್ಮ ಕರ್ನಾಟಕ ರಾಜ್ಯದ ಮಟ್ಟಿಗೆ ಹೇಳುವುದಾದರೆ ನಮ್ಮ ಶಕ್ತಿಯನ್ನು ಕಳೆದುಕೊಂಡಿದ್ದೇವೆ. ಅದನ್ನು ಗಮನದಲ್ಲಿಟ್ಟುಕೊಂಡು ಸ್ಪಷ್ಟವಾದ ನಮ್ಮ ಗುರಿಯನ್ನು ನಾವು ಮುಟ್ಟಬೇಕಾಗುತ್ತದೆ. 8ನೇ ಪಂಚವಾರ್ಷಿಕ ಯೋಜನೆಯನ್ನು ಗಮನದಲ್ಲಿಟ್ಟುಕೊಳ್ಳುವುದು ಅವಶ್ಯಕವೆಂದು ನಾನು ಭಾವಿಸುತ್ತೇನೆ. ನಮ್ಮ ವಾರ್ಷಿಕ ಯೋಜನೆಯ ಗಾತ್ರಕ್ಕೆ ಯೋಜನಾ ಆಯೋಗದವರು ಒಪ್ಪಿಗೆ ಕೊಟ್ಟು ಕಳುಹಿಸುತ್ತಾರ ಬಹಳ ದೊಡ್ಡ ಪ್ರಮಾಣದಲ್ಲಿ ನಮ್ಮ ಯೋಜನಾ ಗಾತ್ರವನ್ನು ಪುಷ್ಟೀಕರಿಸುವುದಕ್ಕೆ ಸಿದ್ಧತೆಗಳನ್ನು ಪೂರ್ವಭಾವಿಯಾಗಿ ಮಾಡಿಕೊಳ್ಳಬೇಕು. ನಮ್ಮ ಕೇಸ್ ಯೋಜನಾ ಆಯೋಗದ ಮುಂದೆ ಸ್ಟ್ರಾಂಗ್ ಆಗಿ ಇಡುವುದಕ್ಕೆ ಎಲ್ಲಾ ಕಡೆ ಗಮನಹರಿಸಬೇಕು. ಅದಕ್ಕಾಗಿ ನಮ್ಮ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳಬೇಕಾಗುತ್ತದೆ. ನಮ್ಮ ಗುರಿ ಸಾಧನೆ ಬಗ್ಗೆ ನಾವು ಹೆಚ್ಚು ಗಮನ ಕೊಡದಿದ್ದರೆ ನಾವು ಸಂಪೂರ್ಣವಾಗಿ ವಿಫಲರಾಗುತ್ತೇವೆ ಎನ್ನುವ ಮಾತು ನಿಜ. ರೈತರ ಸಾಲ ಸೋಲಗಳ ಬಗ್ಗೆ ಆಗಲಿ ಅಥವಾ ಇನ್ನಿತರೆ ಯಾವುದೇ ಬಾಬು ಆಗಲಿ ಅವರಿಗೆ ಏನಾದರೂ ಹೆಚ್ಚಿನ ಸೌಲಭ್ಯಗಳು ಕೊಡಬೇಕು ಎನ್ನುವ ವಿಚಾರ ಮುಂದೆ ಬಂದಾಗ ಏನು ಮಾಡಬೇಕು ಎನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ ನಾನು ಹೆಚ್ಚು ವಿವರಗಳಿಗೆ ಹೋಗದೆ ಬಜೆಟ್ ಮೇಲೆ ಸ್ವಲ್ಪ ಮಾತನಾಡುತ್ತೇನೆ. ಸೆಂಟ್ರಲ್ ಬಜೆಟ್‌ನಲ್ಲಿ ರಾಷ್ಟ್ರೀಕೃತ ಬ್ಯಾಂಕುಗಳಿಂದ ತೆಗೆದುಕೊಂಡಿರತಕ್ಕಂಥ ಸಾಲಕ್ಕೆ ಸಂಬಂಧಪಟ್ಟಂತೆ ಒಂದು ಮಾತು ಹೇಳಿದ್ದಾರೆ.

ಕೋ-ಆಪರೇಟಿವ್ ಸೆಕ್ಟರ್‌ನಲ್ಲಿ ಇರತಕ್ಕಂಥ ಸಾಲ ಏನಿದೆ ಅದೇ ದೊಡ್ಡದು. ಸಹಕಾರಿ ಕ್ಷೇತ್ರದಲ್ಲಿ ಸಾಲ ಪಡೆದಿರತಕ್ಕಂಥಾದ್ದೇ ಜಾಸ್ತಿ. ಮಾನ್ಯ ಜಾಲಪ್ಪನವರು ಸಹಕಾರಿ ಕ್ಷೇತ್ರದಲ್ಲಿ ಅನುಭವ ಉಳ್ಳವರು ಇವರಿಗೆ ಇದು ಚೆನ್ನಾಗಿ ಗೊತ್ತಿರುತ್ತದೆ. ಹೆಚ್ಚು ಹಣ ತೊಡಗಿಸಿರುವುದೇ ಸಹಕಾರಿ ಕ್ಷೇತ್ರಗಳಲ್ಲಿ. ಕೇಂದ್ರದ ಬಜೆಟನ್ನು ಓದಿದಾಗ ನನಗನ್ನಿಸುತ್ತದೆ, ಯೋಜನೆಗಳನ್ನು ರಾಜ್ಯ ಸರ್ಕಾರಗಳೇ ಮಾಡಿಕೊಳ್ಳಲಿ ಎನ್ನತಕ್ಕ ಮಾತುಗಳನ್ನು ಅವರು ಆಡಬಾರದಾಗಿತ್ತು ಎಂದು ಈಗ ನಾನು ಈ ಬಜೆಟ್‌ಗೆ ಮಾತ್ರ ಸೀಮಿತವಾಗಿ ಮಾತನಾಡುತ್ತೇನೆ. ರೈತ ಮುಖಂಡರುಗಳು, ಮಾನ್ಯ ಯಡಿಯೂರಪ್ಪನವರು, ಜನತಾದಳ ಪಕ್ಷದ ಮಿತ್ರರು ಎಲ್ಲರೂ ಚುನಾವಣೆ ಪ್ರಣಾಳಿಕೆಯಲ್ಲಿ ರೈತರ ಸಾಲದ ಬಗ್ಗೆ ಆಶ್ವಾಸನೆ ಕೊಟ್ಟು ಜನತೆ ಮುಂದೆ ಹೋಗಿ ಬಂದಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ.— ನಿಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಸಾಲ ಮನ್ನಾ ಮಾಡುವ ವಿಚಾರವನ್ನು ಇಡಲಾಗಿತ್ತೆ?

ಶ್ರೀ ಎಸ್. ಬಂಗಾರಪ್ಪ.— ನಾವು ಇಟ್ಟಿರತಕ್ಕಂಥ ರೀತಿ ನೀತಿಯಲ್ಲಿ ಸ್ವಲ್ಪ ಬದಲಾವಣೆ ಇದೆ, ಒಂದೊಂದು ರಾಜಕೀಯ ಪಕ್ಷ ಒಂದೊಂದು ತರಹ ಚುನಾವಣಾ ಪ್ರಣಾಳಿಕೆಯನ್ನು ಇಟ್ಟಿತ್ತು.

ಶ್ರೀ ಪಿ.ಜಿ.ಆರ್. ಸಿಂಧ್ಯ.— ತಮ್ಮ ಪಕ್ಷದ ನಾಯಕರು ಹಾಗೂ ಸಭಾ ನಾಯಕರೂ ಆಗಿರತಕ್ಕಂಥ ಮುಖ್ಯ ಮಂತ್ರಿಯವರು ಹೇಳಿರತಕ್ಕಂಥಾದ್ದು ಏನೆಂದರೆ, ನಾವು ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಪ್ರಧಾನ ಮಂತ್ರಿಯವರ ಮೇಲೆ ಒತ್ತಡ ತರುತ್ತೇವೆಂದು ಹೇಳಿದ್ದೇನೆ ಅಷ್ಟೆ, ರೈತರ ಸಾಲವನ್ನು ನಾವು ಮನ್ನಾ ಮಾಡುತ್ತೇವೆಂದು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿಲ್ಲವೆಂದು ಹೇಳಿದ್ದಾರೆ. ತಾವು ನೋಡಿದರೆ ಒಂದು ತರಹ ಹೇಳುತ್ತಿದ್ದೀರಿ. ಇದರ ಬಗ್ಗೆ ಸ್ಪಷ್ಟೀಕರಣ ಕೊಡಬೇಕೆಂದು ಕೇಳುತ್ತೇನೆ.

ಶ್ರೀ ಎಸ್ ಬಂಗಾರಪ್ಪ.— ನಾವು ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದೇವೆ. ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿರತಕ್ಕಂಥಾದು ಏನು ಎಂದು ತಾವೇ ಹೇಳಿದ್ದೀರಿ ಸಾಲ ಮನ್ನಾ ಮಾಡುತ್ತೇವೆಂದು ಹೇಳುವ ಹಾಗಿದ್ದಿದ್ದರೆ ಅದನ್ನು ನೇರವಾಗಿ ಹೇಳುತ್ತಿದ್ದೆವು. ಬರೀ ರಾಜ್ಯ ಸರ್ಕಾರವೇ ರೈತರ ಸಾಲವನ್ನು ಮನ್ನಾ ಮಾಡುವುದಕ್ಕೆ ಹೋದರೆ ರಾಜ್ಯದ ಆರ್ಥಿಕ ಪರಿಸ್ಥಿತಿ ಮೇಲೆ ಹೆಚ್ಚಿನ ಹೊರೆ ಬಿದ್ದು ಸುಸ್ತು ಹೊಡೆಯುತ್ತದೆ. ಆ ದೃಷ್ಟಿಯಿಂದ ನಮ್ಮ ಸರ್ಕಾರ ಆಡಳಿತಕ್ಕೆ ಬಂದರೆ ರೈತರ ಸಾಲವನ್ನು ಮನ್ನಾ ಮಾಡುವ ಬಗ್ಗೆ ಪ್ರಧಾನ ಮಂತ್ರಿಯವರಿಗೆ ಒತ್ತಡ ತರುತ್ತೇವೆ ಎನ್ನುವ ಮಾತನ್ನು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ. ಪ್ರಧಾನ ಮಂತ್ರಿಯವರು ಎನ್ನತಕ್ಕ ಮಾತು ಹೇಳಿದ ಮೇಲೆ ರಾಜೀವ್ ಗಾಂಧಿಯವರು ಮಾತ್ರ ಎಂದು ನಾವು ಹೇಳಿಲ್ಲ. ಈಗ ಮಾನ್ಯ ವಿ ಪಿ. ಸಿಂಗ್ ಅವರು ಪ್ರಧಾನಿಯಾಗಿದ್ದಾರೆ. ನಮ್ಮ ರಾಜ್ಯ ಸರ್ಕಾರದ ಮುಖ್ಯ ಮಂತ್ರಿಗಳಾದ ಮಾನ್ಯ ವೀರೇಂದ್ರ ಪಾಟೀಲರೂ ಮಾನ್ಯ ವಿ.ಪಿ. ಸಿಂಗ್ ಅವರನ್ನು ಕಂಡು ಬಂದಿದ್ದಾರೆ. ನಾವು ಅದರ ಬಗ್ಗೆ ಒತ್ತಡ ತರುತ್ತೇವೆ. ಈ ವಿಚಾರ ಬಂದಿದ್ದಾಗ ಮಾನ್ಯ ಬಾಬಾ ಗೌಡರು ಮಾತನಾಡುವಾಗ ನಾನು ಸುಮ್ಮನೆ ಕುಳಿತುಕೊಂಡೆ. The intention of

our party is also very, very clear about this. ರೈತರು ಸುಸ್ತು ಹೊಡೆದು ಬಿಟ್ಟಿದ್ದಾರೆ. ಅವರು ಸಾಲವನ್ನು ವಾಪಸ್ ಕೊಡತಕ್ಕಂಥ ಪರಿಸ್ಥಿತಿಯಲ್ಲಿ ಇಲ್ಲ. ಸಾಲವನ್ನು ವಾಪಸ್ ಕೊಡುವುದಕ್ಕೆ ರೈತರುಗಳಿಗೆ ಆಗುವುದಿಲ್ಲ ಎನ್ನುವ ಭಾವನೆ ಎಲ್ಲರಿಗೂ ಬಂದಿದೆ. ನಾನು ರೈತರ ವಿರೋಧಿ ಎನ್ನತಕ್ಕ ಭಾವನೆ ಯಾರೂ ಇಟ್ಟುಕೊಳ್ಳಬಾರದು ಆದರೆ ಇವತ್ತು ಸಹಕಾರ ಕ್ಷೇತ್ರದಲ್ಲಿರತಕ್ಕ ಸಾಲವನ್ನು ವಜಾ ಮಾಡಬೇಕಾದರೆ, ರಿಸರ್ವ್ ಬ್ಯಾಂಕ್‌ನವರು ನಬಾರ್ಡ್‌ಗೆ ಕೊಡಬೇಕಾಗುತ್ತದೆ. ಅದು ಎಲ್ಲಿಂದ ಬರುತ್ತದೆ ಸ್ವಾಮಿ? Through Reserve Bank, NABARD through Apex Banks. Who controls this Reserve Bank? There is a separate Act called Reserve Bank Act. Through the Reserve Bank, the State Government is controlled by the Government of India. Let them also take that decision. ಎನ್ನತಕ್ಕಂಥಾದ್ದು ನಮ್ಮ ಅಭಿಪ್ರಾಯ. ಅದಕ್ಕೋಸ್ಕರ ನಾವು ಪ್ರಧಾನ ಮಂತ್ರಿಗಳ ಮೇಲೆ ಒತ್ತಡ ತರುತ್ತೇವೆಂದೇ ಈ ಮಾತನ್ನು ಹೇಳಿದ್ದೇವೆ. ಅಂದರೆ the intention is very clear. ಸಾಲ ವಜಾ ಮಾಡತಕ್ಕಂಥದ್ದಕ್ಕೆ ಎಲ್ಲರ ಮನಸ್ಸು ಇದೆ. ಆದರೆ ವಜಾ ಮಾಡಿದರೆ ಹಣಕಾಸಿನ ಒತ್ತಡ ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಎಷ್ಟರ ಮಟ್ಟಿಗೆ ಬೀಳುತ್ತದೆ ಎಂದು ನೋಡಬೇಕಾಗುತ್ತದೆ. ನಾನು ವಿವರಕ್ಕೆ ಹೋಗುವುದಿಲ್ಲ. Who should bear that loss that is going to be caused to the State exchequer? ಸೆಂಟ್ರಲ್ ಗೌರ್ನ್ಮೆಂಟ್‌ನವರು ಹಣ ಸಹಾಯ ಮಾಡಬೇಕಾಗುತ್ತದೆ. ಸಂದರ್ಭ ಒದಗಿದಂತೆ ನಾವು ಆ ಕಡೆ ಇರಬಹುದು, ನೀವು ಈ ಕಡೆ ಇರಬಹುದು. ಆದರೆ ರಾಜ್ಯದ ಹಣಕಾಸಿನ ಪರಿಸ್ಥಿತಿ ಒಂದೇ ರೀತಿ ಇರುತ್ತದೆ. ಆದ್ದರಿಂದ ನಾನು ಹೇಳ ತಕ್ಕಂಥಾದ್ದನ್ನು ಅವರು ಹೇಳುತ್ತಾರೆಯೆ? ನಾಳೆ ಯೋಜನಾ ಆಯೋಗದ ಮುಂದೆ, ಹಣಕಾಸಿನ ಆಯೋಗದ ಮುಂದೆ, ರಾಜ್ಯ ಸರಕಾರದವರು ರೈತರ ಪರವಾಗಿ ೩೦ ಪರ್ಸೆಂಟ್, ೪೦ ಪರ್ಸೆಂಟ್ ೫೦ ಪರ್ಸೆಂಟ್ ಸಾಲವನ್ನು ವಹಿಸಿಕೊಂಡರೆ ರಿಸರ್ವ್ ಬ್ಯಾಂಕ್‌ನ ಮೂಲಕ ನಬಾರ್ಡ್‌ಗೆ ಕಟ್ಟುವುದಕ್ಕೆ ಅವರು ರೆಡಿ ಆದರೆ ಇವೊತ್ತು ಹಣವನ್ನು ನಾವು ತುಂಬಿಕೊಡುತ್ತೇವೆ, ಎನ್ನತಕ್ಕಂಥ ಆ ಕೇಸನ್ನು ಕೇಂದ್ರ ಸರಕಾರದವರು ಒಪ್ಪುತ್ತಾರೆಯೆ? ವೆಸ್ಟ್‌ಬೆಂಗಾಲ್‌ನಲ್ಲಿ ಬೇರೆ ಸರ್ಕಾರ ಇದೆ, ಬಿ.ಜೆ.ಪಿ. ಸರ್ಕಾರ ಇದೆ ಜನತಾದಳ ಸರಕಾರ ಇದೆ, ನಮ್ಮ ಸರಕಾರ ಇದೆ, ಆದುದರಿಂದ ಅದು ಅಷ್ಟು ಸುಲಭವಾದುದು ಅಲ್ಲ. ಅದಕ್ಕಾಗಿ ಅವರು ಬಹಳ ಬುದ್ಧಿವಂತಿಕೆ ಮಾಡಿ ಬಜೆಟ್‌ನಲ್ಲಿ ಏನು ಹೇಳಿದ್ದಾರೆ ಎಂದು ಗೊತ್ತಿದೆಯೆ? ಅವರ ಬಗ್ಗೆ ಯೋಜನೆಗಳನ್ನು ರಾಜ್ಯ ಸರಕಾರಗಳವರು ತರಲಿ ಎಂದು ಹೇಳಿದ್ದಾರೆ. ಏಕೆ ಈ ಮಾತನ್ನು ಹೇಳಬೇಕಾಗಿತ್ತು? ನ್ಯಾಷನಲ್ ಫ್ರಂಟ್ ಸರಕಾರದವರು ಏತಕ್ಕೆ ಈ ಯೋಜನೆಗಳನ್ನು ಮಾಡಬಾರದಾಗಿತ್ತು? ಇವರಿಗೆ ಬೇರೆ ಬೇರೆ ಯೋಜನೆಗಳನ್ನು ಮಾಡುವುದಕ್ಕೆ ಬರುತ್ತದೆ, ನ್ಯಾಶನಲ್ ಬ್ಯಾಂಕ್ಸ್‌ನ ಸಾಲದ ಬಗ್ಗೆ ಹೇಳುವುದಕ್ಕೆ ಬರುತ್ತದೆ, ಅವರ ಬಜೆಟ್ ಪ್ರಾವಿಜನ್ ೧ ಸಾವಿರ ಕೋಟಿ ಇಡುವುದಕ್ಕೆ ಬರುತ್ತದೆ ಕೋ-ಆಪರೇಟಿವ್ ಸೆಕ್ಟರ್ ಮಾತ್ರ ಏಕೆ ಬಿಟ್ಟಿದ್ದಾರೆ? ಕಡೆಯ ಪಕ್ಷ ೪ ಸಾವಿರ, ೨ ಸಾವಿರ ಕೋಟಿ ರೂಪಾಯಿಗಳನ್ನು ಕೋ-ಆಪರೇಟಿವ್ ಸೆಕ್ಟರ್‌ನ ಸಾಲದ ಬಗ್ಗೆ ಇಟ್ಟಿದ್ದರೆ ಅದರ ಬಗ್ಗೆ ದೊಡ್ಡ ಮಾತನ್ನು ಆಡಿದ್ದರೆ with out calling for any schemes from any State Government ruled by any political party ಆ ಒಂದು ಮಾತನ್ನು ಆಡಿದ್ದರೆ ಎಷ್ಟು ಚೆನ್ನಾಗಿ ಇರುತ್ತಿತ್ತು? That is why I wrote a letter to our Prime Minister Sri V.P. Singh. ಅವರ ಉತ್ತರ ಕೂಡ ನನಗೆ ಬಂದಿದೆ. ನೀವು ಎಲ್ಲರನ್ನೂ ಕರೆದು ಮೀಟಿಂಗ್ ಮಾಡಿ, ಈ ಬಗ್ಗೆ ಚರ್ಚೆ ಮಾಡಿ ಎಂದು ಹೇಳಿದ್ದೇನೆ. ಸಾಲ ಮನ್ನಾದ ಬಗ್ಗೆ ಎಲ್ಲಾ ಪಕ್ಷಗಳವರೂ ಕೂಡ ಪ್ರಿಂಟ್ ಮಾಡಿ ದೇಶದ ಜನತೆಯ ಮುಂದಿಟ್ಟಿದ್ದರು. ಅದಕ್ಕಾಗಿ ಎಲ್ಲಾ ಪಕ್ಷಗಳ ಅಧ್ಯಕ್ಷರುಗಳನ್ನು ಮೀಟಿಂಗ್‌ಗೆ ಕರೆಯಿರಿ ಎಲ್ಲಾ ಮುಖ್ಯಮಂತ್ರಿಯವರುಗಳನ್ನು ಕರೆಯಿರಿ ಕೃಷಿಮಂತ್ರಿಯವರನ್ನು ಆರ್ಥಿಕ ಮಂತ್ರಿಯವರನ್ನು, ಗ್ರಾಮೀಣ ಅಭಿವೃದ್ಧಿ ಮಂತ್ರಿಯವರನ್ನು, ರಿಸರ್ವ್ ಬ್ಯಾಂಕ್‌ನವರನ್ನು, ನಬಾರ್ಡ್‌ನವರನ್ನು, ಮುಂತಾಗಿ ಸಂಬಂಧಪಟ್ಟವರೆಲ್ಲರನ್ನು ಕರೆದು ಒಂದು ನ್ಯಾಯಸಮ್ಮತವಾದ ತೀರ್ಮಾನವನ್ನು ಈ ದೇಶದಲ್ಲಿ ಮಾಡಿದರೆ ಯಾರು ಈ ಸಾಲಗಳಿಂದ ತೊಂದರೆಗೆ ಈಡಾಗಿದ್ದಾರೆ, ಯಾರು ಬರಗಾಲಕ್ಕೆ ತುತ್ತಾಗಿ ನಷ್ಟಕ್ಕೆ ಒಳಗಾಗಿದ್ದಾರೆ, ಅಂತಹ ಜನರಿಗೆ ಅಂತಿಮವಾಗಿ ಒಂದು ಪರಿಹಾರವನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ ನಾನು ರೈತರನ್ನು ಕೇಳಿಕೊಂಡಿದ್ದೇನೆ. ಅವರಿಗೆ ಪರಿಸ್ಥಿತಿಯನ್ನು ಹೇಳಿದ್ದೇನೆ. ಇವೊತ್ತು ರೈತರಿಗೆ ಬಿಟ್ಟರೆ ಮತ್ತೊಬ್ಬರಿಗೆ ಪೆಟ್ಟು ಆಗುತ್ತದೆ, ನಮ್ಮ ವಾರ್ಷಿಕ ಯೋಜನೆಗೆ ಹಣದ ಪರಿಸ್ಥಿತಿಗೆ ಪೆಟ್ಟು ಆಗುತ್ತದೆ ಎಂಬುದನ್ನು ವಿವರಿಸಿ ತಿಳಿಸಿದ್ದೇನೆ. ಇದೆಲ್ಲವನ್ನು ಮಾಡದೇನೆ, ಕೇಂದ್ರ ಬಜೆಟ್‌ನಲ್ಲಿ ಒಂದು ಪೈಸೆಯನ್ನು ಕೂಡ ಸಹಕಾರಿ ಕ್ಷೇತ್ರಕ್ಕೆ ಇಡದೇ ಬಜೆಟರಿ ಪ್ರಾವಿಜನ್‌ನಲ್ಲಿ ಒಂದು

ಸಾವಿರ ಕೋಟಿಯನ್ನು ನ್ಯಾಷನಲ್‌ಬ್ಯಾಂಕ್ಸ್ ಬಗ್ಗೆ ಇಟ್ಟಾಗ ನಾಳೆ ರೈತರಿಗೆ ಹೇಗೆ ಸಹಾಯ ಮಾಡುವುದಕ್ಕೆ ಯಾವ ರಾಜ್ಯ ಸರ್ಕಾರದ ಅರ್ಥ ಮಂತ್ರಿಗಳಿಗೆ, ಯಾವುದೇ ಒಂದು ಸರ್ಕಾರಕ್ಕೆ ಯಾರಿಗೆ ಸಾಧ್ಯವಾಗುತ್ತದೆ? ಇದರಿಂದ ಯಾರಿಗೂ ಸಾಧ್ಯವಾಗದವಂಥ ಪರಿಸ್ಥಿತಿ ಇದೆ. ಆದ್ದರಿಂದ even now I expect that the Government of India to come forward and take the entire responsibility of convening the meeting of the type just now proposed. ನನಗೆ ತಿಳಿದ ಹಾಗೆ ಒಂದೊಂದು ಕುಟುಂಬದಲ್ಲಿ ಬಾರಿ ಆಸ್ತಿ ಇದ್ದವರು ೪-೬ ಜನರು ಸಾಲವನ್ನು ತೆಗೆದುಕೊಂಡಿದ್ದಾರೆ. ಒಬ್ಬರಿಗೆ ೧೦ ಸಾವಿರ ಕೊಟ್ಟರೆ ಉಳಿದವರಿಗೂ ನೀವು ಕೊಡಲೇ ಬೇಕು. ಅವರ ಆಸ್ತಿ ಹರಾಜು ಹಾಕಲೇ ಬೇಕಾಗುತ್ತದೆ, ಏನೂ ಮಾಡುವುದಕ್ಕಾಗುವುದಿಲ್ಲ. ಎಲ್ಲರಿಗೂ ನೀವು ಬಿಟ್ಟು ಕೊಡುವುದಕ್ಕೆ ಆಗುವುದಿಲ್ಲ. ಈ ರೀತಿಯಾದ ಪೆಟ್ಟು ಬೀಳುತ್ತದೆ. ಈ ಸಂದರ್ಭದಲ್ಲಿ ನಾನು ಸ್ಪಷ್ಟಪಡಿಸುತ್ತೇನೆ, ನಮ್ಮ ಸರಕಾರ, ಕರ್ನಾಟಕ ರಾಜ್ಯದಲ್ಲಿರತಕ್ಕಂಥ ರೈತರ ಪರವಾಗಿ ಸಾಲ ಮನ್ನಾ ಮಾಡುವ ವಿಚಾರದಲ್ಲಿ ವಿರೋಧ ವಾಗಿಲ್ಲ. ಸಾಲವನ್ನು ಮನ್ನಾ ಮಾಡಿಸಬೇಕು. ಆದರೆ ಅದನ್ನು ಹೇಗೆ ಮಾಡಬೇಕೆಂಬ ಬಗ್ಗೆ ಕೇಂದ್ರ ಸರಕಾರದವರಿಂದ ಸೂಕ್ತ ಕ್ರಮವನ್ನು ನಾವು ನಿರೀಕ್ಷೆ ಮಾಡುತ್ತೇವೆ. ಕೇಂದ್ರ ಸರಕಾರದವರು ಈ ಬಗ್ಗೆ ಮುಂದೆ ಬಂದರೆ ನಾವು ಚರ್ಚೆಯಲ್ಲಿ ಪಾಲ್ಗೊಳ್ಳುವುದಕ್ಕೆ ಮತ್ತು ಹೇಗೆ ಮನ್ನಾ ಮಾಡಬಹುದು ಎಂಬ ಬಗ್ಗೆ ಸಲಹೆ, ಸಹಕಾರಗಳನ್ನು ಕೊಟ್ಟು ಜವಾಬ್ದಾರಿಯನ್ನು ಹೊರುವುದಕ್ಕೆ ಸಿದ್ಧರಿದ್ದೇವೆ.

ಶ್ರೀ ಬಿ.ಎಸ್. ಯಡಿಯೂರಪ್ಪ.— ಮಾನ್ಯ ಅಧ್ಯಕ್ಷರೇ, ಇಲ್ಲಿ ಉದ್ಭವವಾಗಿರುವ ಪ್ರಶ್ನೆ ಏನೆಂದರೆ ಮೊದಲಬಾರಿಗೆ ಕೇಂದ್ರ ಸರಕಾರದವರು ಈ ದೇಶದ ರೈತರ ಭಾರವನ್ನು ಹೊರುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಈ ಬಗ್ಗೆ ರಾಜ್ಯ ಸರಕಾರಗಳೂ ಕೂಡ ಸರಿ ಸಮಾನವಾಗಿ ಭಾರ ಹೊರ ಬೇಕಾಗುತ್ತದೆ. ಅದಕ್ಕಾಗಿ ಬೇಕಾದಂಥ ಸಹಕಾರ ಬೇಕಾದರೆ, ಏನೇನು ಅನುಕೂಲಗಳನ್ನು ಮಾಡಿ ಕೊಡಬೇಕು ಅದನ್ನು ಮಾಡಿಕೊಡುವುದಕ್ಕೆ ನಾವು ಯೋಚನೆ ಮಾಡುತ್ತೇವೆ ಎಂದು ಸ್ಪಷ್ಟ ಮಾಡಿದ್ದಾರೆ. ಹೀಗೆ ಮೊದಲ ಬಾರಿಗೆ ಈ ರೀತಿಯಾಗಿ ಕೇಂದ್ರ ಸರಕಾರದವರು ಯೋಚನೆ ಮಾಡಿದಾಗ, ತಾವು ಕೂಡ ಪ್ರಾರಂಭದಲ್ಲಿ ಹೇಳಿದ ರೈತರ ಸಾಲ ಮನ್ನಾ ಆಗಬೇಕು. ಅದರ ಅಗತ್ಯ ಇದೆ ಎಂದು ರೈತರ ಪರವಾಗಿ ಹೇಳಿದಾಗ, ದೇಶದ ರೈತರ ಪರಿಸ್ಥಿತಿಯು ಹದಗೆಟ್ಟಿದೆ ಎಂದು ಹೇಳಿದಾಗ, ಅವನ್ನು ಹಣಕಾಸಿನ ಅನುಕೂಲ ಇದ್ದಾಗ ಮಾತ್ರ ಮಾಡುವುದು ಅಲ್ಲ. ಇಲ್ಲದಿದ್ದಾಗಲೂ ರೈತರನ್ನು ಮೇಲೆತ್ತುವ ಕಾರ್ಯವನ್ನು ಮಾಡುತ್ತೀರಾ? ಎನ್ನುವುದು ಬಹಳ ಮುಖ್ಯವಾದ ವಿಚಾರ

ಶ್ರೀ ಎಸ್. ಬಂಗಾರಪ್ಪ.— ಈ ವಿಚಾರದಲ್ಲಿ ವಿವರವಾಗಿ ನಾವು ಪ್ರತ್ಯೇಕವಾದ ಚರ್ಚೆ ಮಾಡೋಣ ಈಗ ಅನುಮಾನ ಬರದ ಹಾಗೆ ಒಂದು ಅಭಿಪ್ರಾಯ ಇರುವುದು ಏನೆಂದರೆ ಇವತ್ತು ನಾವು ನ್ಯಾಷನಲೈಸ್ಡ್ ಬ್ಯಾಂಕ್ಸಿಂದ ತಂದಿರುವ ಸಾಲದ ಬಗ್ಗೆ ಬಜೆಟರಿ ಪ್ರಾವಿಷನ್ ಸಾವಿರ ಕೋಟಿ ಸೆಂಟ್ರಲ್ ಬಜೆಟ್‌ನಲ್ಲಿ ಯಾವುದಿಟ್ಟಿದ್ದಾರೋ ಆ ರೀತಿಯಾಗಿ ರಾಜ್ಯ ಸರ್ಕಾರದಿಂದ ಒಂದು ಸ್ಕೀಮ್ ತೆಗೆದುಕೊಂಡು ಬನ್ನಿ ಎಂದು ಹೇಳಬಹುದಿತ್ತು ಏಕೆಂದರೆ ಎಲ್ಲವನ್ನೂ ರಾಜ್ಯಗಳ ಮೇಲೆ ಬಿಡಲಾಗುವುದಿಲ್ಲ ಎಂಬುದನ್ನು ಯಡಿಯೂರಪ್ಪನವರೂ ಒಪ್ಪುತ್ತಾರೆಂದು ನನ್ನ ಭಾವನೆ. ಅಥವಾ ಎಲ್ಲವನ್ನೂ ರಾಜ್ಯ ಸರ್ಕಾರಗಳಿಗೇ ಒಪ್ಪಿಸಬೇಕೆಂದರೆ ಅವರು ಹೇಳಿಬಿಟ್ಟಿದ್ದರೆ ಯಾರೂ ಏನೂ ಹೇಳ ಬೇಕಾಗಿಲ್ಲ, ಸಂಟ್ರಲ್ ಬಜೆಟ್‌ನಲ್ಲೂ ಹೇಳುವುದು ಬೇಡ. ಆದರೆ ಕೇಂದ್ರದ ಪಾಲು ಅಥವಾ ಸಂಪೂರ್ಣವಾಗಿಯೋ ಈ ಜವಾಬ್ದಾರಿ ಅವರ ಮೇಲೆ ಬಂದೇ ಬರುತ್ತದೆ, ಅವರೂ ಸಹ ಹಣಕಾಸಿನ ದೃಷ್ಟಿಯಿಂದ ಇದನ್ನು ವಹಿಸಿಕೊಳ್ಳಬೇಕಾಗುತ್ತದೆ. ಹಾಗಿದ್ದಾಗ ಕನಿಷ್ಟ ಈ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಸಂಬಂಧಿಸಿದಂತೆ ಸಾವಿರ ಕೋಟಿ ಬಜೆಟರಿ ಪ್ರಾವಿಷನ್ ನೀವು ಹೇಗೆ ಇಟ್ಟಿರೋ ಅದೇ ರೀತಿ ಈ ಸಹಕಾರಿ ಕ್ಷೇತ್ರದ ಸಾಲದ ಬಗ್ಗೆಯೂ ಕೂಡ ಕನಿಷ್ಟ ೫ ಸಾವಿರ ಕೋಟಿ ತೆಗೆದಿಟ್ಟು ಬಿಟ್ಟಿದ್ದರೆ ಅವರ ವಾದವನ್ನು ನಾನು ಒಪ್ಪುತ್ತಿದ್ದೆ. ಬರೀ ಹಣ ಇಲ್ಲದೆ ಚೌಕಾಸಿ ಇದು ಅಷ್ಟೇ. ಅದಕ್ಕಾಗಿ ನಾನು ಹೇಳುವುದೇ ನೆಂದರೆ ಬಜೆಟರಿ ಪ್ರಾವಿಷನ್ ಇಡದೆ ಸ್ಕೀಮ್ ತನ್ನಿ ಎಂದು ಹೇಳುವ ಇಂಟೆನ್‌ಷನ್ ಅವರಿಗೆ ಇಲ್ಲವೆಂದು ನಾನು ಭಾವಿಸುತ್ತೇನೆ, ತಾವು ಇದನ್ನು ಖಂಡಿಸಬೇಕಾಗುತ್ತದೆ. ಸಹಕಾರಿ ಸಾಲದ ಬಗ್ಗೆ ಅವರ ಇನ್‌ಟೆನ್‌ಷನ್ ಕ್ಲಿಯರಾಗಿಲ್ಲ. ಬಜೆಟ್‌ನಲ್ಲಿ ಅವರು ಪ್ರಸ್ತಾಪ ಮಾಡಿಲ್ಲ. ಅದಕ್ಕಾಗಿಯೂ ನಾನಂತೂ ೧೦ ಸಾವಿರದವರೆಗೆ ಲೋನ್ ಮನ್ನಾ ಮಾಡುವ ಬಗ್ಗೆ ಪರವಾಗಿದ್ದೇನೆ. ಆ ಬಗ್ಗೆ ಸದನದಲ್ಲಿ ಹೊರಗಡೆ ಹಾಗೂ ವೈಯಕ್ತಿಕವಾಗೂ ಹೇಳಿದ್ದೇನೆ. ಇದರಲ್ಲಿ ನನ್ನ ಪಕ್ಷದ ಅಭಿಪ್ರಾಯ ಕೂಡ ಏನೇನೂ ವ್ಯತ್ಯಾಸ ಇಲ್ಲ. ಆದರೆ ಕೇಂದ್ರದವರು ಅದಕ್ಕೆ ಅವಕಾಶ ಮಾಡಿಟ್ಟಿಲ್ಲ.

ಶ್ರೀ ಬಿ.ಎಸ್. ಬನ್ನಿಕೋಡ್.— ಅಧ್ಯಕ್ಷರೇ, ಈ ಹಿಂದೆ ಕರ್ನಾಟಕದಲ್ಲಿದ್ದ ಹೆಗಡೆಯವರ ಸರ್ಕಾರ ಕೇಂದ್ರದ ಬಡ್ಡಿ ಮನ್ನಾ ಮಾಡಲಿಕ್ಕೆ, ಸಬ್ಸಿಡಿ ಬಡ್ಡಿ ಕೊಡುವುದಕ್ಕೆ ವಿರೋಧವಿದ್ದರೂ ಸಹ

ರೈತರಿಗೆ ಬಡ್ಡಿ ಮನ್ನಾ ಮಾಡಿ ಸಬ್ಸಿಡಿ ಬಡ್ಡಿಯ ಸಾಲ ಕೊಟ್ಟಿತು. ಮತ್ತು ಚಾಲ್ತಿ ಸಾಲದ ಮೇಲೆ ೭ ಪರ್ಸೆಂಟ್ ಬಡ್ಡಿ ಕೊಟ್ಟಿತ್ತು. ಆದರೆ ಈಗ ಕೇಂದ್ರಕ್ಕೆ ಈ ಬಗ್ಗೆ ಒಲವಿದ್ದರೂ ಕೂಡ ೭ ಪರ್ಸೆಂಟ್ ಬಡ್ಡಿ ಏತಕ್ಕೆ ಮುಂದುವರೆಸಬಾರದು ಎಂದು ಕೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಹಿಂದಿನ ಸರ್ಕಾರ ರೈತರ ಸಾಲದ ಬಡ್ಡಿ ವಿಚಾರದಲ್ಲಿ ರಿಯಾಯಿತಿ ಕೊಟ್ಟಿದ್ದನ್ನು ನಾವು ಸ್ವಾಗತಿಸಿದ್ದೇವೆ ಆದರೆ ಯಾವ ಸರ್ಕಾರವೇ ಆಗಲಿ ರೈತರ ಹಣವನ್ನು ವಹಿಸಿ ಕೊಳ್ಳುತ್ತದೋ ಅದು ಆ ಹಣವನ್ನು ನಬಾರ್ಡ್‌ನವರಿಗೆ ಕಟ್ಟಬೇಕು. ಕಳೆದ ಸಲ ಕನ್‌ಸಿಷನ್ ಕೊಟ್ಟಿದ್ದರಿಂದ ಏನಾಯಿತು? ಮರುಸಾಲ ನೀಡಿಕೆ ಅಷ್ಟರಮಟ್ಟಿಗೆ ನಿಂತಿತು. ನೀವು ಕನ್‌ಸಿಷನ್ ಕೊಟ್ಟಿದ್ದು ಎಷ್ಟು ಸ್ವಾಮಿ? ೧೧೧.೬೪ ಕೋಟಿ ಪೈಕಿ ೫೨ ಕೋಟಿ ರೂಪಾಯಿಗಳನ್ನು ಹೆಗಡೆಯವರ ಸರ್ಕಾರ ನಬಾರ್ಡ್‌ಗೆ ಕಟ್ಟಲಿಲ್ಲ. ಇದು ವೈಯಕ್ತಿಕ ಪ್ರಶ್ನೆ ಅಲ್ಲ. ಸರ್ಕಾರ ಮಾತು ಕೊಟ್ಟ ಮೇಲೆ ನಬಾರ್ಡ್‌ನವರಿಗೆ ಹಣ ಕೊಡಬೇಕು ಆಮೇಲೆ ನೀವು ಹಣ ಕಟ್ಟಲು ಟೈಮ್ ಎಕ್ಸ್‌ಟ್ರಾ ತೆಗೆದು ಕೊಂಡಿರಿ.

ಎಷ್ಟು ಸ್ವಾಮಿ ಕೊಡದೇ ಇರುವುದು, ನನಗೆ ಲೇಟೆಸ್ಟ್ ಫಿಗರ್ ಗೊತ್ತಿಲ್ಲ. ಇನ್ನು ಲೇಟೆಸ್ಟ್ ಅಂಕಿಸಂಖ್ಯೆಗಳ ಪ್ರಕಾರ ೫೨ ಕೋಟಿ ರೂಪಾಯಿಯನ್ನು ಇನ್ನೂ ಕೊಟ್ಟಿಲ್ಲ. ಒಟ್ಟಾರೆ ೧೧೧.೬೪ ಲಕ್ಷ ರೂಪಾಯಿಗಳಲ್ಲಿ ಇನ್ನು ೫೨ ಕೋಟಿ ರೂಪಾಯಿಗಳನ್ನು ರಾಮಕೃಷ್ಣಹೆಗಡೆ ಸರ್ಕಾರದವರು ಕೊಟ್ಟಿಲ್ಲ. ನನಗೆ ಅವರ ವೈಯಕ್ತಿಕ ಪ್ರಶ್ನೆ ಇಲ್ಲ. ಒಂದು ಸರ್ಕಾರ ಮಾತು ಕೊಟ್ಟ ಮೇಲೆ ಹಣ ವನ್ನು ಕೊಡಬೇಕು. ಹಣವನ್ನು ಕೊಡಬೇಕಾದ್ದಕ್ಕೆ ನಬಾರ್ಡ್‌ನವರು ಟೈಮ್‌ನ್ನು ಕೊಡುತ್ತಾ ಹೋದರು. ತಮಗೆ ಗೊತ್ತಿದೆ, ಯಾವಾಗ ಕೊಡಬೇಕಾಗಿತ್ತು, ಅಲ್ಲಿಂದಲೂ ಟೈಮ್‌ನ್ನು ತೆಗೆದು ಕೊಳ್ಳುತ್ತಾ ಬಂದರು. ಅದರ ಬಗ್ಗೆ ನಮ್ಮ ವಿಶ್ವನಾಥನ್‌ರವರು ದೊಡ್ಡ ವಿವರವಾಗಿರತಕ್ಕಂಥ ಸ್ಟೇಟ್‌ಮೆಂಟನ್ನು ಕೂಡಾ ಕೊಟ್ಟರು. ಹಿಂದಿನ ಸರ್ಕಾರದವರು ಟೈಮ್‌ನ್ನು ತೆಗೆದುಕೊಂಡರು, ನಾವು ಟೈಮನ್ನು ಕೊಡುತ್ತಾ ಹೋದೆವು, ಆದರೆ ಅವರು ಹಣವನ್ನು ಕಟ್ಟಲಿಲ್ಲ. ಆ ರೀತಿ ಕೊಡದೇ ಇರುವುದರಿಂದ ನಾವು ರೀ–ಫೈನಾನ್ಸ್ ಮಾಡುವುದಕ್ಕೆ ಬಹಳ ತೊಂದರೆಯಾಗಿದೆ, ಬಹಳ ಕಷ್ಟವಾಗಿದೆ ಎಂದು ಹೇಳಿದರು. ಇನ್ನು ಕೂಡಾ ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲ ಎನ್ನುವ ದೃಷ್ಟಿಯಿಂದ ತೊಂದರೆ ಯಾಗಿದೆ ಎಂದು ಹೇಳಿದರು. ಈಗ ನಮ್ಮ ಸರ್ಕಾರ ಬಂದ ಮೇಲೆ ರೀ–ಫೈನಾನ್ಸ್ ಮಾಡುವುದಕ್ಕೆ ಸ್ಟಾರ್ಟ್ ಮಾಡಿಬಿಟ್ಟರು. ಏಕೆಂದರೆ ಕಾನೂನು ಆ ರೀತಿ ಇದೆ, ಏನೂ ಮಾಡುವುದಕ್ಕಾಗುವುದಿಲ್ಲ. ನಮ್ಮ ಸರ್ಕಾರ ಬಂದ ಮೇಲೆ ಕೊಟ್ಟಿದ್ದೇವೆ. ಎಷ್ಟು ಕೊಟ್ಟಿದ್ದೇವೆ ಲೇಟೆಸ್ಟ್ ಫಿಗರ್ ನನಗೆ ಗೊತ್ತಿಲ್ಲ. ಎಷ್ಟೋ ಹಣವನ್ನು ಕೊಟ್ಟಿದ್ದೇವೆ, ಅಷ್ಟು ಹಣವನ್ನು ಕೊಟ್ಟು ಇನ್ನು ೫೨ ಕೋಟಿ ರೂಪಾಯಿಗಳನ್ನು ಕೊಡಬೇಕಾಗಿದೆ.

ವೈಸ್ ಛೇರ್ಮನ್.—ಇನ್ನು ಬಹಳ ಜನ ಮಾತನಾಡುವವರು ಇದ್ದಾರೆ, ತಾವು ಮುಗಿಸಬೇಕು.

ಶ್ರೀ ಆರ್. ವಿ. ದೇಶಪಾಂಡೆ —ಮಾನ್ಯ ಬಂಗಾರಪ್ಪನವರು ಹಣವನ್ನು ಕೊಟ್ಟಿದ್ದೇವೆಂದ ಹೇಳುತ್ತಿದ್ದಾರೆ, ಆದರೆ ಅಲ್ಲಿ ರಿಲೀಸ್ ಎಷ್ಟು ಮಾಡಿದ್ದಾರೆ ಕೇಳಿ. ಸರ್ಕಾರದಿಂದ ಹಣವನ್ನು ರಿಲೀಸ್ ಮಾಡಿದ್ದಾರೆಯೋ ? ಹಣವನ್ನು ಟ್ರೆಜರಿಯಲ್ಲಿಟ್ಟು ಆದೇಶವನ್ನು ಕೊಟ್ಟಿದ್ದಾರೇ, ಲ್ಯಾಂಡ್ ಬ್ಯಾಂಕ್‌ಗೆ ಮತ್ತು ಅಪೆಕ್ಸ್ ಬ್ಯಾಂಕ್‌ಗೆ ಆದೇಶವನ್ನು ಕೊಟ್ಟಿದ್ದಾರೇ, ಏನೆಂದು ಆದೇಶ ಕೊಟ್ಟಿದಾ ರೆಂದರೆ ಅದಕ್ಕೆ ಕೈ ಹಚ್ಚಬೇಡಿ ಎಂದು ಹೇಳಿದ್ದಾರೆ. ಇವತ್ತು ರಾಮಕೃಷ್ಣಹೆಗಡೆ ಸರ್ಕಾರ ಇರಲಿ, ಯಾರದೇ ಸರ್ಕಾರ ಇರಲಿ. ಸಬ್ಸಿಡಿಯನ್ನು ಕೊಡುವುದು ಅದು ರಾಮಕೃಷ್ಣಹೆಗಡೆ ಸರ್ಕಾರ ಇದೆ, ವೀರೇಂದ್ರ ಪಾಟೀಲರ ಸರ್ಕಾರ ಇದೆ, ಗುಂಡೂರಾಯರ ಸರ್ಕಾರ ಇದೆ ಎಂದು ಕೊಡುವುದು, ಅದು ಆ ರೀತಿ ಬರುವುದಿಲ್ಲ. ಅದು ಕಂಟಿನ್ಯೂ ಆಗಿ ನಡೆಯುತ್ತಿರುತ್ತದೆ. ಒಂದು ವೇಳೆ ಹಣ ಉಳಿದಿದ್ದರೆ ಹೆಗಡೆ ಸರ್ಕಾರದಿಂದ ಉಳಿದದ್ದಲ್ಲ. ಆಗ ರಾಷ್ಟ್ರಪತಿ ಆಡಳಿತ ಇತ್ತು ಎಂದರೆ ನಿಮ್ಮದೇ ಸರ್ಕಾರ ಇತ್ತು. ಏಪ್ರಿಲ್‌ನಿಂದ ನಿಮ್ಮ ಸರ್ಕಾರವೇ ಇತ್ತು. ಆಗ ಹಣ ಉಳಿದಿತ್ತು, ಆ ಸಮಯದಲ್ಲಿ ಹಣ ರಿಲೀಸ್ ಆಗಿಲ್ಲ. ರಾಷ್ಟ್ರಪತಿ ಆಡಳಿತ ಎಂದರೆ ನಿಮ್ಮದೇ ಸರ್ಕಾರ. ಆಗ ಸರ್ಕಾರದಲ್ಲಿ ಬಹಳ ದೊಡ್ಡ ದೊಡ್ಡ ಮಾತನ್ನು ಹೇಳಿದ್ದರು, ಹಣಕಾಸಿನ ಪರಿಸ್ಥಿತಿ ಬಹಳ ಸುಧಾರಿಸಿದೆ, ಹಣವನ್ನು ಬಹಳ ರಿಲೀಸ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಆದರೆ ಅಲ್ಲಿ ಏನೇನೂ ಆಗಿಲ್ಲ. ಇವತ್ತು ಒಂದು ಮಾಹಿತಿ ಬಂದಿದೆ, ಕಾರವಾರದಿಂದ ಫೋನ್ ಬಂದಿತ್ತು. ಪ್ಲಾನ್ ಮತ್ತು ನಾನ್ ಪ್ಲಾನ್‌ಗಳಿಗೆ ಎರಡು ತಿಂಗಳಿಂದಲೂ ಹಣವನ್ನು ರಿಲೀಸ್ ಮಾಡಿಲ್ಲ ಜಿಲ್ಲಾ ಪರಿಷತ್‌ಗೆ, ಅಲ್ಲಿ ಹಣವನ್ನು ರಿಲೀಸ್ ಮಾಡಿಲ್ಲ. ಇದರ ಬಗ್ಗೆ ತಾವು ಏನು ಹೇಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಶ್ರೀಮಾನ್ ದೇಶಪಾಂಡೆಯವರು ಹೇಳಿರತಕ್ಕಂಥ ಅದು ಬೇರೆ ಪ್ರತ್ಯೇಕವಾದ ವಿಚಾರ. ಇದಕ್ಕೆ ಸಂಬಂಧಪಟ್ಟಿದ್ದಲ್ಲ. ನಾನು ಈಗ ಅದಕ್ಕೆ ಉತ್ತರ ಕೊಡತಕ್ಕಂಥ ಅವಶ್ಯಕತೆ ಇಲ್ಲ ಎಂದು ಭಾವಿಸುತ್ತೇನೆ. ಪ್ರತ್ಯೇಕವಾಗಿ ವಿಚಾರವನ್ನು ತೆಗೆದುಕೊಂಡಾಗ ಚರ್ಚೆ ಮಾಡೋಣ. ಆದು ಈಗ ಬರುವುದಿಲ್ಲ. ಆದರೆ ಒಂದು ಹೊಸ ಮಾತು, ಹೊಸ ಅರ್ಥವನ್ನು ಕಲಿತುಕೊಂಡೆ. ರಾಷ್ಟ್ರಪತಿಯವರ ಆಡಳಿತ ಎಂದರೆ ನಮ್ಮದೇ ಸರ್ಕಾರ ಎಂದು ನನಗೆ ಗೊತ್ತಿರಲಿಲ್ಲ. ಇದು ಹೊಸ ಒಂದು ಅರ್ಥ. ಬಹಳ ಚೆನ್ನಾಗಿದೆ. ನನಗೆ ಗೊತ್ತಿರಲಿಲ್ಲ. ರಾಜ್ಯಾಂಗದಲ್ಲಿ ಇದು ಒಂದು ಹೊಸ ಪಾಯಿಂಟ್. ಎಲ್ಲಿಯೋ ನಾನು ಇದನ್ನು ಮಿಸ್ ಮಾಡಿಬಿಟ್ಟಿದ್ದೆ. ಮಾನ್ಯ ಸದಸ್ಯರಾದ ದೇಶಪಾಂಡೆಯವರು, ರಾಷ್ಟ್ರಪತಿಯವರು ಪಕ್ಷಾತೀತರು ಎಂದು ತಮಗೆ ಗೊತ್ತಿದೆ. ಅದೇ ರೀತಿ ರಾಜ್ಯದಲ್ಲಿರತಕ್ಕಂಥ constitutional head of the government (Governor) is also above the party politics. ತಮಗೆ ಅದು ಗೊತ್ತಿದೆ, ಹಾಗಾದರೆ ನಾನು ಹೇಳಲೇನು ? ತಮ್ಮ ಗೌರ್ನರ್ ಇದ್ದಾರೆ, ತಮ್ಮದು ನ್ಯಾಷನಲ್ ಫ್ರಂಟ್ ಗೌರ್ನಮೆಂಟ್ ಇದೆ. your party President ಶ್ರೀಮಾನ್ ವಿ. ಪಿ. ಸಿಂಗ್‌ರವರು ಪ್ರಧಾನಮಂತ್ರಿಗಳಾಗಿದ್ದಾರೆ, ತಮ್ಮ ಗೌರ್ನರ್‌ಗಳು ಕೂಡಾ ಇವತ್ತು ಅನೇಕ ರಾಜ್ಯಗಳಲ್ಲಿದ್ದಾರೆ, ಅವರನ್ನು ಇಟ್ಟುಕೊಂಡಿದ್ದೀರಿ, ಅದಕ್ಕೆ ತಮ್ಮ ಸರ್ಕಾರ ಇದೆ, ತಮ್ಮ ಸರ್ಕಾರ ಇದೆ ಎಂದು ಹೇಳುವುದಕ್ಕೆ ಆಗುತ್ತದೆಯೆ ? ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬಂದರೂ ಬೇರೆ ಪಕ್ಷದ ಸರ್ಕಾರ ಇದ್ದರೂ ಕೂಡಾ ಗೌರ್ನರನ್ನು ನೋಡಿಬಿಟ್ಟು ಇವತ್ತು ಈ ಗೌರ್ನಮೆಂಟ್ ಇರಬಹುದು, ನಾಳೆ ಮತ್ತೊಬ್ಬರು ಬರಬಹುದು, ನಾಳೆ ಬಂದ ತಕ್ಷಣ ಅದನ್ನು ನೋಡಿ ಜನತಾ ದಳದ ಸರ್ಕಾರ ಇದೆ ಎಂದು ಹೇಳುವುದಕ್ಕೆ ಆಗುತ್ತದೆಯೇ ?

ಶ್ರೀ ಆರ್. ವಿ. ದೇಶಪಾಂಡೆ.—ಈಗ ಪಾಪ್ಯುಲರ್ ಗೌರ್ನಮೆಂಟ್ ಇದೆ, ಜನ ನಿಮಗೆ ಮ್ಯಾನ್‌ಡೇಟ್ ಕೊಟ್ಟಿದ್ದಾರೆ. ಆಗ ಪಾಪ್ಯುಲರ್ ಗೌರ್ನಮೆಂಟ್ ಇರಲಿಲ್ಲ. Governor was functioning under President's rule.

ಶ್ರೀ ಎಸ್. ಬಂಗಾರಪ್ಪ.—ರಾಷ್ಟ್ರಾಧ್ಯಕ್ಷರ ಆಳ್ವಿಕೆ ಬಂದಾಗಲಂತೂ ಎಂದು ನಾನು ಹೇಳಿದ್ದೇನೆ. ನನ್ನ ಮಾತನ್ನು ತಾವು ಸ್ವಲ್ಪ ಫಾಲೋ ಮಾಡಬೇಕು. ಆದುದರಿಂದ ಈ ಹಣ ಹೋದರೆ ರಾಜ್ಯ ಸರ್ಕಾರದ ಬೊಕ್ಕಸದ ಮೇಲೆ ಬೀಳುತ್ತದೆ. ಅದನ್ನು ಕೇಂದ್ರ ಸರ್ಕಾರದ ಜೊತೆ ವಿಚಾರ ಮಾಡಿ ಅಂತಿಮವಾಗಿ ತೀರ್ಮಾನಕ್ಕೆ ನಾವು ಬರತಕ್ಕಂಥದ್ದು ಅನಿವಾರ್ಯವಾಗಿದೆ ಎನ್ನತಕ್ಕಂಥ ಮಾತನ್ನು ಹೇಳಿ ಈ ವಿಚಾರದಲ್ಲಿ ಇಟ್ಟಿರತಕ್ಕಂಥ ಕೆಲವು ಪ್ರಪೋಸಲ್‌ಗಳ ಬಗ್ಗೆ ನಾನು ಮಾತನಾಡಿ ಇನ್ನು ಐದು-ಹತ್ತು ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ. ಎಲ್ಲರೂ ಕೂಡಾ ಇವತ್ತು ವಿಚಾರ ಮಾಡುತ್ತಿರತಕ್ಕಂಥದ್ದು ಎಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಬಹಳ ಹಿಂದುಳಿದಿರತಕ್ಕಂಥ ಕೆಲವು ಪ್ರದೇಶಗಳು ಎಂದರೆ ಹೈದರಾಬಾದ್-ಕರ್ನಾಟಕ ಭಾಗ ಎನ್ನತಕ್ಕಂಥ ಮಾತನ್ನು ನಾವು ಆಡುತ್ತೇವೆ.

ಅಂದರೆ ಬೇರೆ ಭಾಗವು ಅಷ್ಟು ಮುಂದುವರೆದಿಲ್ಲ ಎಂಬ ಭಾವನೆ ಬರಬಾರದು. ಉದಾಹರಣೆಗೆ ಚಿತ್ರದುರ್ಗಕ್ಕೆ ಹೋದರೆ ಭರಮಸಾಗರ ಇದೆ, ಮಾನ್ಯ ಶಿವಮೂರ್ತಿಯವರ ಕ್ಷೇತ್ರ. ಇವೊತ್ತು ನಾವು ನ್ಯಾಶನಲ್ ಹೈವೇ ನಂಬರ್ ೪ ರಲ್ಲಿ ಸುಮಾರು ೮-೯ ಸಾರಿ ನೋಡಿದ್ದೇನೆ, ಎಷ್ಟು ಒಳ್ಳೆಯ ಬೆಳೆ ಬಂದಿದೆ ಇದಕ್ಕೆ ಏನು ಹೇಳಬೇಕು? ಹೈದರಾಬಾದ್ ಕರ್ನಾಟಕ ಏರಿಯಾ ಬಹಳ ಹಿಂದುಳಿದೆ ನಮ್ಮ ಏರಿಯಾ ಮುಂದುವರೆದಿದೆ ಎಂಬ ಅರ್ಥ ಆಗಬೇಕು, ಆದರೆ ಅದು ಹಾಗಲ್ಲ. ನಾವು ಬೇರೆ ಪ್ರದೇಶಗಳನ್ನು ಹೋಲಿಸಿದಾಗ ಅದನ್ನು ಬಹಳ ನಿಕೃಷ್ಟವಾಗಿ ಕಂಡಿದ್ದೇವೆ ಎಂಬ ಮಾತು ಪದೇ ಪದೇ ಬರುತ್ತದೆ, ಇದಕ್ಕಾಗಿ ಜಾಸ್ತಿ ಹಣವನ್ನು ಕೊಡಬೇಕು ಎಂದು ಎಲ್ಲಾ ರಾಜಕೀಯ ಪಕ್ಷಗಳು ಸಹ ಈ ದೃಷ್ಟಿಯಿಂದ ವಿಚಾರ ಮಾಡಿದ್ದಾರೆ. ಇದಕ್ಕೋಸ್ಕರವಾಗಿ ಸುಮಾರು ೪೦ ಕೋಟಿ ರೂಪಾಯಿ ಹಣವನ್ನು ತೆಗೆದು ಇಟ್ಟಿರುವುದು ಬಹಳ ಸಮಂಜಸ ಆಗಿದೆ. ಜಾಸ್ತಿ ಮಾಡುವುದಕ್ಕೆ ಸಾಧ್ಯ ಆದರೆ ಜಾಸ್ತಿ ಮಾಡಬೇಕೆಂದು ಮಾನ್ಯ ಹಣಕಾಸಿನ ಮಂತ್ರಿಗಳನ್ನು ಕೇಳುತ್ತೇನೆ. ನಾರ್ಮಲ್ ಕೋರ್ಸ್‌ನಲ್ಲಿ ೩೩ ಕೋಟಿ ರೂಪಾಯಿ ಆಗುತ್ತದೆ, ಇದರ ಜೊತೆಗೆ ಸ್ಪೆಷಲ್ ಆಗಿ ತಾವು ಇಡತಕ್ಕಂಥಾದ್ದು. ೪೦ ಕೋಟಿ ರೂಪಾಯಿ ಎಂದು ಇಟ್ಟು ತಾವು ಮಂಡಲ್ ಎಂದು ಏನು ಮಾಡುತ್ತೀರಿ ಇದರಲ್ಲಿ ಕಾರ್ ಸಂಬಳ ಇತ್ಯಾದಿ ಎಲ್ಲಾ ಇರುತ್ತದೆ. ಏಕೆಂದರೆ ಹಣ ತೆಗೆದು ಇಟ್ಟು ಬಿಡುತ್ತೀರಿ. ಇದರ ಜೊತೆಗೆ ಪರ್ಸೆಂಟ್ ಕೂಡ ತೆಗೆದು ಇಡಬೇಕು. ನಾವು ದೊಡ್ಡ ದೊಡ್ಡ ಮಾತನ್ನು ಆಡುತ್ತೇವೆ, ೪೦ ಕೋಟಿ ರೂಪಾಯಿ ೧೦೦ ಕೋಟಿ ರೂಪಾಯಿ ಇಟ್ಟಿದ್ದೇವೆ ಎಂದು, ಇದರಲ್ಲಿ ಸಂಬಳ, ಕಾರ್, ಭತ್ಯೆ ಇತ್ಯಾದಿ ಎಲ್ಲಾ ಹೋಗಿ ಆಕ್ಚುಯಲ್ ಆಗಿ ಎಷ್ಟು ಉಳಿಯುತ್ತದೆ? ಯಾವುದೇ ಭಾಗದ ಬೆಳವಣಿಗೆಗಾಗಿ ಅದು ನೀರಾವರಿ ಇರಬಹುದು ರೋಡ್ ಇರಬಹುದು ಮತ್ತೊಂದು ಇರಬಹುದು ಪ್ರಗತಿಗೋಸ್ಕರ ಎಷ್ಟು ಪರ್ಸೆಂಟೇಜಿಗೆ ಹೋಗಿ ನಿಲ್ಲುತ್ತದೆ ಎಂಬುದನ್ನು ವಿಚಾರ ಮಾಡಬೇಕಾಗುತ್ತದೆ. ಅದನ್ನು ಮಾಡದಿದ್ದರೆ

೪೦ ಕೋಟಿ ರೂಪಾಯಿ, ೫೦ ಕೋಟಿ ರೂಪಾಯಿ ಅಥವಾ ೧೦೦ ಕೋಟಿ ರೂಪಾಯಿ ಕೊಡುತ್ತೇವೆ ಎನ್ನುವ ಮಾತು ಆಡುವುದರಲ್ಲಿ ಅರ್ಥ ಉಳಿಯುವುದಿಲ್ಲ. ಇದು ಅನಿವಾರ್ಯ ಆದರಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ನಾನು ಏನು ಸಲಹೆ ಮಾಡುತ್ತೇನೆ ಅಂದರೆ ಬಜೆಟ್ ಪ್ರಾವಿಷನ್‌ನಲ್ಲಿ ಸಾಧ್ಯವಿದ್ದರೆ ಸ್ವಲ್ಪ ಜಾಸ್ತಿ ಹಣವನ್ನು ಇಡುವುದಕ್ಕೆ ಸಾಧ್ಯ ಇದೆಯೇ ಎಂಬುದನ್ನು ನೋಡಿ. ಗಡಿ ಪ್ರದೇಶದ ಬಗ್ಗೆ ಪ್ರಸ್ತಾಪ ಮಾಡಿರುವುದು ಬಹಳ ಒಳ್ಳೆಯ ಯೋಜನೆ. ನಾನೂ ಸಹ ಹಿಂದೆ ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಆಗಿದ್ದೆ. ಆಂಧ್ರದವರೆಗೆ ಒಳ್ಳೆಯ ರೋಡ್ ಇದೆ, ಮಾನ್ಯ ಲೋಕೋಪಯೋಗಿ ಸಚಿವರೂ ಸಹ ಇಲ್ಲಿ ಇದ್ದಾರೆ. ಮೊನ್ನೆ ಮೊನ್ನೆ ತಾವು ಸಚಿವರಾಗಿದ್ದೀರಿ, ಗಡಿ ಪ್ರದೇಶಗಳಿಗೆ ಹೋಗಿಲ್ಲ. ದಯವಿಟ್ಟು ಹೋಗಿ. ಚಿಂಚೋಳಿ ಭಾಗವನ್ನು ತೆಗೆದುಕೊಳ್ಳೋಣ. ನಾನು ಪಿ.ಡಬ್ಲ್ಯೂ.ಡಿ. ಮಿನಿಸ್ಟರ್ ಇದ್ದಾಗ ಹೋಗಿದ್ದೆ. ಆಂಧ್ರದವರೆಗೆ ಅಷ್ಟು ಒಳ್ಳೆಯ ರೋಡ್ ಇದ್ದು ನಮ್ಮ ಕಡೆ ರೋಡ್‌ಗಳು ಅಷ್ಟು ಚೆನ್ನಾಗಿ ಇಲ್ಲ. ಸೇಡಂ, ಚಿತಾಪುರ, ಮುಖಾಂತರ ಗುಲ್ಬರ್ಗಾಕ್ಕೆ ಹೋಗುವ ಎಲ್ಲಾ ರೋಡ್‌ಗಳನ್ನು ನಾವು ನೋಡಿದ್ದೇವೆ. ಅಲ್ಲಿ ರೋಡ"ನಲ್ಲಿ ಹೋಗುವುದಕ್ಕೆ ಆಗುವುದಿಲ್ಲ. ಆದ್ದರಿಂದ ನಾನು ಏನು ಹೇಳುವುದು ಎಂದರೆ ಈ ಗಡಿ ಪ್ರದೇಶಗಳಿಗೆ ಉತ್ತೇಜನ ಕೊಡುವುದಕ್ಕೋಸ್ಕರವಾಗಿ ೫ ಕೋಟಿ ರೂಪಾಯಿಗಳನ್ನು ತೆಗೆದು ಇಟ್ಟಿರುವುದು ಸಮಯೋಚಿತವಾಗಿದೆ. ಇಲ್ಲಿ ಗಡಿಯ ವಿಷಯವಾಗಿ ಮಾತನಾಡೋಣ. ಪ್ರತ್ಯೇಕವಾಗಿ ಹೈದರಾಬಾದ್ ಕರ್ನಾಟಕದ ಗಡಿ ಎಂದು ಮಾತನಾಡುವ ಭಾವನೆ ಅಲ್ಲ. ಗಡಿ ಎಲ್ಲೆಲ್ಲಿ ಬರುತ್ತದೆ, ಕಾಸರಗೋಡು, ಮಂಗಳೂರು ಗಡಿ ಬರಬಹುದು.

ಛೇರ್ಮನ್.—ಕೇರಳದ ಗಡಿಯೂ ಕೂಡ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ತಾವು ಅಲ್ಲಿ ಕುಳಿತಿದ್ದೀರಿ. ತಮ್ಮ ಕ್ಷೇತ್ರ ಕಾಸರಗೋಡು ಪಕದಲ್ಲಿ ಬರುತ್ತದೆ. ನಮ್ಮ ಮಲ್ಲಾರಿಗೌಡರದ್ದು ಬೆಳಗಾಂ ಗಡಿ ಕೂಡ ಬರುತ್ತದೆ. ಅದನ್ನೂ ಸಹ ಮರೆತಿಲ್ಲ. ಯಾವುದೇ ಗಡಿಯನ್ನು ನಾವು ಮರೆಯಬಾರದು. ಅದೇ ರೀತಿಯಲ್ಲಿ ಬಳ್ಳಾರಿ ಗಡಿ ಇರಬಹುದು ಅಥವಾ ರಾಜ್ಯದ ಗಡಿ ಇರಬಹುದು.

ಶ್ರೀ ಎನ್. ಜಿ. ನಾಯಕ್.—ಕೋಲಾರದ ಗಡಿ ಬರುತ್ತದೆ...

ಶ್ರೀ ಎಸ್. ಬಂಗಾರಪ್ಪ.—ಕೋಲಾರದ್ದು ಬರಬಹುದು, ಮೊಣಕಾಲ್ಮೂರು ಗಡಿ ಬರಬಹುದು. ಮತ್ತೊಬ್ಬರು ನಮ್ಮ ನಾಯಕರು ಇದ್ದಾರೆ, ಮೊಣಕಾಲ್ಮೂರು ಪಕ್ಕದಲ್ಲಿ ಆಂಧ್ರ ಬರುತ್ತದೆ. ನಾನು ಅದನ್ನೂ ಹೇಳಿದೆನೆಂದು ಅವರಿಗೆ ದಯವಿಟ್ಟು ಯಾರಾದರೂ ಹೇಳಿ. ಏಕೆಂದರೆ ನಾನು ಅಲ್ಲಿಗೆ ಹೋದಾಗ ನಮ್ಮ ಗಡಿ ಬಗ್ಗೆ ಪ್ರಸ್ತಾಪ ಮಾಡಲಿಲ್ಲ ಎಂದು ಬಯ್ಸಿಕೊಳ್ಳಬೇಕಾಗುತ್ತದೆ. ಆದ್ದರಿಂದ ಗಡಿ ಯಾವುದೇ ಇರಬಹುದು. ೫ ಕೋಟಿ ರೂಪಾಯಿ ಹಣವನ್ನು ಬಜೆಟ್‌ನಲ್ಲಿ ಇಟ್ಟಿರತಕ್ಕದ್ದು ಹೊಸ ವಿಚಾರಧಾರೆ ಎಂದು ನನ್ನ ವಿಚಾರ. ಈ ಹೈದರಾಬಾದ್ ಕರ್ನಾಟಕ ಏರಿಯಾಗೆ ಬಜೆಟ್‌ನಲ್ಲಿ ಮೀಸಲು ಇಟ್ಟಿದ್ದೀರಿ, ಈ ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಗುಲ್ಬರ್ಗಾ, ಬೀದರ್ ಮತ್ತು ರಾಯಚೂರು ಎಂದು ಹೇಳುವುದು ಸರಿಯಲ್ಲ, ಬಳ್ಳಾರಿ ಜಿಲ್ಲೆ ಕೂಡ ಸೇರಿಸಬೇಕು ಎಂದು ನನ್ನ ಅರ್ಥ. ಈಗಾಗಲೆ ತಮಗೆ ಗೊತ್ತಿರಬಹುದು. ಅವರ ಒಂದು ದೊಡ್ಡ ನಿಯೋಗ ಬಂದಿದ್ದರು, ಅದೂ ಪಕ್ಷಾತೀತವಾಗಿ. ಎಲ್ಲರೂ ಸೇರಿ ಮಾನ್ಯ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಿದ್ದರು. ಅದಕ್ಕಾಗಿ ನಾನು ಹೇಳುವುದು ಹೈದರಾಬಾದ್ ಕರ್ನಾಟಕ ಏರಿಯಾದಲ್ಲಿ ಬೀದರ್, ಗುಲ್ಬರ್ಗಾ ಮತ್ತು ರಾಯಚೂರು ಮಾತ್ರವಲ್ಲ ಬಳ್ಳಾರಿ ಜಿಲ್ಲೆಯನ್ನು ಕೂಡ ಸೇರಿಸಿ, ೪೦ ಕೋಟಿ ರೂಪಾಯಿಯನ್ನು ಸ್ವಲ್ಪ ಜಾಸ್ತಿ ಮಾಡಿ, ದಾಮಾಶ ಕೂಡ ಜಾಸ್ತಿ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ೪೦ ಕೋಟಿ ರೂಪಾಯಿ ಇಟ್ಟು ಮತ್ತೊಂದು ಜಿಲ್ಲೆ ಸೇರಿಸಿದರೆ ಕೊನೆಗೆ ಏನೂ ಉಳಿಯುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ದಯಮಾಡಿ ಅದನ್ನು ಸೇರಿಸಬೇಕು. ತಮಗೆ ಗೊತ್ತಿರುವ ಹಾಗೆ ತುಂಗಭದ್ರ ನೀರಾವರಿ ಪ್ರದೇಶದ ಕೆಲವು ಭಾಗ ಬಿಟ್ಟುಬಿಟ್ಟರೆ ಉಳಿದಿದದ್ದು ಅಷ್ಟೂ ಡ್ರೈ ಏರಿಯಾ. ಇದನ್ನು ತಾವು ಗಮನದಲ್ಲಿಡುತ್ತೀರಿ ಎನ್ನತಕ್ಕಂಥ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ಇದನ್ನು ಸೇರಿಸಬೇಕು ಎಂದು ಹೇಳುತ್ತೇನೆ,

೨.೩೦ ಪಿ. ಎಂ.

ಮಾನ್ಯ ಸಭಾಧ್ಯಕ್ಷರೆ, ನೀರಾವರಿ ಬಗ್ಗೆ ನಾನು ಮೊದಲೇ ಹೇಳಿದ್ದೇನೆ. ಕೃಷ್ಣ ಬೇಸಿನ್‌ನಲ್ಲಿ ಬರತಕ್ಕಂಥ ಮತ್ತು ಕಾವೇರಿ ಜಲಾನಯನ ಪ್ರದೇಶದಲ್ಲಿ ಬರತಕ್ಕಂಥ ಯೋಜನೆಗಳನ್ನು ಪೂರ್ತಿ ಮಾಡಬೇಕು. ಕೃಷ್ಣ ಯೋಜನೆಯನ್ನು ನಾವು ಈ ಶತಮಾನದ ಅಂತ್ಯದ ವೇಳೆಗೆ ಪೂರ್ತಿ ಮಾಡದೇ ಇದರೆ ಮುಂದೆ ನಮಗೆ ಸಿಗತಕ್ಕಂಥ ವಿದೇಶಿ ಹಣದ ನೆರವಿನ ಗತಿ ಏನಾಗಬಹುದು? ಇವೆಲ್ಲಾ ಟೈಂ ಬಾಂಡ್

ಪ್ರೋಗ್ರಾಮ್ಸ್ ಆಗಿದೆ. ನಾವು ಕಾವೇರಿ ಯೋಜನೆಗೆ ಹಣ ಖರ್ಚು ಮಾಡತಕ್ಕಂಥಾದ್ದು ಏನಿದೆ ಅದನ್ನು ತೀವ್ರವಾಗಿ ನೋಡಿ ಅದಕ್ಕೂ ಕೂಡ ಜಾಸ್ತಿಯಾಗಿ ಹಣವನ್ನು ಹೂಡದೇ ಇದ್ದರೆ ಆ ಕೆಲಸವನ್ನು ಮಾಡಿ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಇದೇ ರೀತಿ ಪವರ್ ಜನರೇಷನ್ ಕೂಡ ಇದೆ. ಇದಕ್ಕೆ ತಾವು ಬಡ್ಜೆಟ್‌ನಲ್ಲಿ ೨೦೦ ಚಿಲ್ಲರೆ, ೩೦೦ ಕೋಟಿ ಇದೆ ಎನ್ನುವ ವಿಚಾರ ಇಟ್ಟಿದ್ದೀರಿ. ಅದನ್ನು ಇನ್ನೂ ಜಾಸ್ತಿ ಮಾಡತಕ್ಕಂಥ ವಿಚಾರ ಮಾಡದೇ ಇದ್ದರೆ ಅದಕ್ಕಾಗಿ ನಾವು ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡದೆ ಇದ್ದರೆ, ರಿಸೋರ್ಸಸ್ ಮೊಬಿಲೈಸೇಷನ್ ಮಾಡದೇ ಇದ್ದರೆ ಪ್ಲಾನಿಂಗ್ ಕಮಿಷನ್‌ನಿಂದ ಯೋಜನಾ ಬಾಬಿನಲ್ಲಿ ಹೆಚ್ಚಾಗಿ ಯೋಜನೆಗಳನ್ನು ಕೂಡ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ. ಮತ್ತು ಯೋಜನೇತರ ವೆಚ್ಚವನ್ನೂ ಸಮತೋಲನವಾಗಿ ನಾವು ತೆಗೆದುಕೊಂಡು ಹೋಗುವುದಕ್ಕೂ ಕೂಡ ಸಾಧ್ಯವಾಗುವುದಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ.

ಇನ್ನು ಹೆಂಡದ ಮಾರಾಟ ಕೆಲವು ಜಿಲ್ಲೆಗಳಲ್ಲಿ ಈಗಾಗಲೇ ರದ್ದಾಗಿದೆ. ಇನ್ನು ಉಳಿದಿರತಕ್ಕ ಜಿಲ್ಲೆಗಳಲ್ಲಿ ರದ್ದು ಮಾಡತಕ್ಕಂಥ ತೀರ್ಮಾನವನ್ನು ತಾವು ಮಾಡಿದ್ದೀರಿ. ಈ ಸಂದರ್ಭದಲ್ಲಿ ಒಂದೇ ಒಂದು ವಿಚಾರ ಹೇಳತಕ್ಕಂಥಾದ್ದು ಇದೆ. ಹೆಂಡದ ಮಾರಾಟವನ್ನು ರದ್ದು ಮಾಡತಕ್ಕ ವಿಚಾರ ರಾಜ್ಯ ಸರ್ಕಾರದ್ದು. ಆದರೆ ರದ್ದು ಮಾಡುವ ಸಂದರ್ಭದಲ್ಲಿ ಒಂದು ವಿಚಾರ ಮಾಡಬೇಕು. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮೂರ್ತೇದಾರರು ಇದ್ದಾರೆ. ಈ ಕೆಲಸವನ್ನು ಮಾಡತಕ್ಕವರು ಮೂರ್ತೇದಾರರು ಸಾವಿರ ಗಟ್ಟಲೆ ಜನ ಇದ್ದಾರೆ. ಇವತ್ತಲ್ಲ ಹಲವಾರು ವರ್ಷಗಳಿಂದ ಕಸುಬನ್ನು ಮಾಡಿಕೊಂಡು ಬಂದಿದ್ದಾರೆ. ಅವರ ಕಸುಬು ಏನೆಂದರೆ, ತಾಳೆ ಮರ ಕಟ್ಟುತ್ತಾರೆ, ತೆಂಗಿನ ಮರ ಕಟ್ಟುತ್ತಾರೆ, ಈಚಲ ಮರ ಕಟ್ಟುತ್ತಾರೆ, ಮರ ಹತ್ತುತ್ತಾರೆ, ಇಳಿಯುತ್ತಾರೆ. ಇವರು ಮೂರ್ತೇದಾರರು. ಅವರ ಬಗ್ಗೆ ತಮ್ಮ ಉತ್ತರದಲ್ಲಿ ಏನಾದರೂ ಹೇಳದೇ ಇದ್ದರೆ ನಾಳೆ ಆ ವರ್ಗಗಳ ಗತಿ ಏನು ಅವರೆಲ್ಲ ಅಸಂಘಟಿತ ಜನಗಳು. ಇವತ್ತು ಯಾರಾದರೂ ಸಣ್ಣ ಅಸೋಸಿಯೇಷನ್ ಮಾಡಿಕೊಂಡಿರಬಹುದು. ಉದಾಹರಣೆಗೆ ಹೇಳುವುದಾದರೆ, ಇವತ್ತು ರೈತ ಸಮುದಾಯ ಇದೆ. ಇವತ್ತು ಅಸಂಘಟಿತ ಸಮುದಾಯ ಎಷ್ಟು ದುಡಿದರೂ ಸಂಘಟಿತರಹಿತವಾಗಿದ್ದರೆ ಶಕ್ತಿಯನ್ನು ಎಂದೂ ಕೂಡ ತೋರ್ಪಡಿಸಿ ತನ್ನ ಕಾರ್ಯಕ್ರಮ ಹಾಕಿಕೊಳ್ಳುವುದಕ್ಕೆ ಎಂದೂ ಕೂಡ ಆಗುವುದಿಲ್ಲ. ಅದಕ್ಕೋಸ್ಕರ ರೈತ ಸಂಘದ ಸಮಸ್ಯೆಗಳು ಪರಿಹಾರವನ್ನು ಕಾಣದೆ ಉಲ್ಬಣಾವಸ್ಥೆಯನ್ನು ಮುಟ್ಟಿರುವುದಕ್ಕೆ ಅಸಂಘಟನೆಯೇ ಕಾರಣ ಎನ್ನುವುದನ್ನು ಮೂಲಭೂತವಾಗಿ ಮರೆಯುವ ಹಾಗಿಲ್ಲ. ಇವೆಲ್ಲಾ ಸಮಾಜದ ಅವಿಭಾಜ್ಯ ಅಂಗಗಳು. ಈ ಭಾಗಗಳನ್ನು ನಾವು ಮರೆಯುವುದಕ್ಕೆ ಆಗುವುದಿಲ್ಲ. ಇವತ್ತು ಯಾವುದೋ ಒಂದು ಕಾರ್ಯಕ್ರಮ ಮಾಡುವುದಕ್ಕೆ ಹೋಗಿ ಮತ್ತೊಂದು ವರ್ಗಕ್ಕೆ ತೊಂದರೆಯಾಗಬಾರದು. ಇವತ್ತು ಒಬ್ಬ ವ್ಯಕ್ತಿಯ ಹತ್ತಿರ ಇರುವುದನ್ನು ಕಿತ್ತು ಮತ್ತೊಬ್ಬರಿಗೆ ಕೊಟ್ಟು ಅವರನ್ನು ಉದ್ಧಾರ ಮಾಡಿ ಮತ್ತೊಬ್ಬ ವ್ಯಕ್ತಿಗೆ ಬಡತನವನ್ನು ಹುಟ್ಟಿಸಿ ಹಾಕುವುದು ನಮ್ಮ ಗುರಿಯಾಗಬಾರದು. ಇಲ್ಲಿ ಮೂರ್ತೇದಾರರು ಅಂದರೆ ಮರದಲ್ಲಿ ಕಟ್ಟಿ ಹೆಂಡವನ್ನು ಇಳಿಸತಕ್ಕ ವರ್ಗಗಳು. ಇವರು ಅನೂಚಾನವಾಗಿ ಆ ಕಸುಬನ್ನು ಮಾಡಿಕೊಂಡು ಬಂದು ಬಿಟ್ಟಿದ್ದಾರೆ. ಅವರಿಗೆ ಇದರಲ್ಲಿ ಏನು ಕಾರ್ಯಕ್ರಮ ತಾವು ಹಾಕಿದ್ದೀರಿ ಎನ್ನುವ ಮಾತನ್ನು ಹೇಳತಕ್ಕದ್ದು ಬಹಳ ಅವಶ್ಯಕವಿದೆ ಇದನ್ನು ನಾನು ಒತ್ತಾಯ ಮಾಡುತ್ತೇನೆ. ಅವರು ಸಂಘದವರು ಆಗಲೇ ಟೆಲಿಗ್ರಾಂ ಕಳಿಸಿದ್ದಾರೆ, ಪತ್ರ ಬರೆದಿದ್ದಾರೆ, ಫೋನ್ ಮಾಡಿದ್ದಾರೆ. ನಿಮ್ಮನ್ನೆಲ್ಲಾ ಕಾಣುವುದಕ್ಕೆ ನಾನು ತಿಳಿಸಿದ್ದೇನೆ. ಮಾನ್ಯ ಮುಖ್ಯಮಂತ್ರಿಗಳನ್ನು, ಮಾನ್ಯ ಹಣಕಾಸಿನ ಸಚಿವರನ್ನು ನೀವೆಲ್ಲಾ ಕಾಣಬೇಕು ಎಂದು ತಿಳಿಸಿದ್ದೇನೆ. ಏಕೆಂದರೆ ಎಕ್ಸೈಜ್ ಬಾಬೂ ಇವರ ಹತ್ತಿರ ಇರುವುದರಿಂದ ತಿಳಿಸಿದ್ದೇನೆ. ಇವರೆಲ್ಲ ದುಡಿದು ತಿನ್ನತಕ್ಕ ವರ್ಗಗಳು, ಬೆವರು ಸುರಿಸಿ ಅನ್ನ ತಿನ್ನತಕ್ಕ ವರ್ಗಗಳನ್ನು ನಾವು ಬೀದಿ ಪಾಲು ಮಾಡಿ ಇಟ್ಟರೆ ಆಗುವುದಿಲ್ಲ. ಇವತ್ತು ೬೦ ಕೋಟಿ ಏನು ಲಾಸ್ ಆಗುತ್ತಿದೆ ಅದನ್ನು ಅರೇಕ್ ಮತ್ತೊಂದರ ಬಗ್ಗೆ ಟ್ಯಾಕ್ಸ್‌ನ್ನು ಹಾಕಿ ತುಂಬತಕ್ಕದ್ದು ಮಾಡಬಹುದು. ಆದರೆ ಮ್ಯಾನ್‌ಪವರ್ ಲಾಸ್ ಆಗುತ್ತದೆ, ನಾವು ಅದನ್ನು ವಿಚಾರ ಮಾಡಬೇಕು. ಮ್ಯಾನ್‌ಪವರ್ ಲಾಸ್ ಮಾಡುವುದಕ್ಕಾಗುವುದಿಲ್ಲ. ಕೆಲವರ ಹಾಗೆ ನಿರ್ಗತಿಕರಾಗಿ ಏನೇನೂ ಕೆಲಸವಿಲ್ಲದೆ ಉದ್ಯೋಗರಹಿತರಾಗಿರತಕ್ಕ ವರ್ಗ ಏನಿದೆ ಅದಕ್ಕೆ ಮತ್ತೊಂದು ಸಾರಿ ಶಕ್ತಿಯನ್ನು ಕೊಡತಕ್ಕ ಗುರಿ ಎಂದೂ ಆಗಬಾರದೂ ಎನ್ನತಕ್ಕಂಥಾದ್ದನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದೇನೆ. ಇದರ ಬಗ್ಗೆ ವಿಚಾರ ಮಾಡುತ್ತೀರಿ ಎನ್ನುವ ಭಾವನೆಯಿಂದ ಹೇಳಿದ್ದೇನೆ. ಸ್ಟ್ಯಾಂಪ್ ಇತ್ಯಾದಿ ಜನ ಸಾಮಾನ್ಯರ ಮೇಲೆ ಪೆಟ್ಟು ಜಾಸ್ತಿಯಾಯಿತು ಎನ್ನುವುದು ನನ್ನ ಅಭಿಪ್ರಾಯ. ಇದರ ದರವನ್ನು ಕಡಿಮೆ ಮಾಡಿದರೆ ಒಳ್ಳೆಯದಾಗುತ್ತದೆ. ಉಳಿದಿರತಕ್ಕ ವಿವರಗಳಿಗೆ ನಾನು ಹೋಗುವುದಿಲ್ಲ. ತಾವು ಡೈರೆಕ್ಟ್ ಟ್ಯಾಕ್ಸೇಷನ್ ಬಗ್ಗೆ ಹೇಳಿದ್ದೀರಿ. ಮೇರೆ ಮೀರಿ ಹೋಗಿರತಕ್ಕ ಬಜೆಟ ಅಲ್ಲದೇ ಇದ್ದು, ಆ ದೃಷ್ಟಿಯಿಂದ ನಾನು ಸ್ವಾಗತ ಮಾಡಿದ್ದೇನೆ. ಭಾರಿ ನಿರೀಕ್ಷೆ ಇಟ್ಟುಕೊಳ್ಳದೆ, ಭಾರಿ ಟ್ಯಾಕ್ಸ್ ಡೈರೆಕ್ಟಾಗಿ ಮತ್ತು ಇಂಡೈರೆಕ್ಟಾಗಿ ಇಲ್ಲದೆ ಇದ್ದು ಬ್ಯಾಲೆನ್ಸ್ ಬಜೆಟ್ ಎಂದು ಅನಿವಾರ್ಯವಾಗಿ ಹೇಳಬೇಕಾಗಿ

ಸಮತೋಲನದ ಆಯವ್ಯಯ ಪತ್ರವಾಗಿದ್ದು ಹೆಚ್ಚಿನ ಡಿಫಿಸಿಟ್‌ಗೆ ಅವಕಾಶ ಇಲ್ಲದಂತೆ ಎಚ್ಚರಿಕೆಯಿಂದ ಮಾಡಿರತಕ್ಕ ಬಜೆಟ್ ಆಗಿದ್ದು, ಇದು ಮುಂದಿನ ವರ್ಷಗಳಿಗೆ ಅನುಕೂಲವಾಗುವುದರಿಂದ ಈ ಬಜೆಟನ್ನು ಸ್ವಾಗತ ಮಾಡಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ, ನನ್ನ ಭಾಷಣವನ್ನು ಮುಗಿಸುತ್ತೇನೆ.

† ಶ್ರೀ ಪಿ. ಜಿ. ಆರ್. ಸಿಂಧ್ಯ (ಕನಕಪುರ).—ಸನ್ಮಾನ್ಯ ಅಧ್ಯಕ್ಷರೆ, ೧೯೯೦-೯೧ನೇ ಸಾಲಿನ ಆಯುವ್ಯಯ ಪತ್ರವನ್ನು ನಮ್ಮ ಅರ್ಥ ಮಂತ್ರಿಗಳು ಸಭೆಯ ಮುಂದೆ ಮಂಡಿಸಿ, ಒಪ್ಪಿಗೆ ಕೇಳುವುದಕ್ಕೆ ನಮ್ಮ ಮುಂದೆ ಇಟ್ಟಿದ್ದಾರೆ. ನನಗೊಂದು ಸಂತೋಷ ಏನೆಂದರೆ, ಮಾನ್ಯ ಅರ್ಥ ಮಂತ್ರಿಗಳು ಕಳೆದ ಮೂರು ದಿನಗಳಿಂದ ಸದನದ ಎರಡೂ ಕಡೆಯ ಸದಸ್ಯರ ಅಭಿಪ್ರಾಯಗಳನ್ನು ಈ ಇಳಿವಯಸ್ಸಿನಲ್ಲಿ ಕುಳಿತು ಕೇಳಿದ್ದಾರೆ. ಅವರಿಗೆ ಅಪಾರವಾದ ಅನುಭವ ಇದೆ. ಮಾನ್ಯ ರಾಜಶೇಖರಮೂರ್ತಿಯವರು ಹಿಂದೆ ರಾಜ್ಯ ಸರ್ಕಾರದಲ್ಲಿ ಕೈಗಾರಿಕಾ ಮಂತ್ರಿಗಳಾಗಿ, ಬೇರೆ ಬೇರೆ ಇಲಾಖೆಯ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಲೋಕಸಭೆಯಲ್ಲಿ ಕೂಡ ಕೆಲಸ ಮಾಡಿ, ರಾಜ್ಯದ ಹಾಗೂ ರಾಷ್ಟ್ರದ ಆರ್ಥಿಕ ಪರಿಸ್ಥಿತಿ ಬಗ್ಗೆ ಚೆನ್ನಾಗಿ ಅರ್ಥಮಾಡಿಕೊಂಡಿದ್ದಾರೆ. ಜೊತೆಗೆ ನಮ್ಮ ರಾಜ್ಯದ ಮುಖ್ಯಮಂತ್ರಿಗಳಾದ ಸನ್ಮಾನ್ಯ ವೀರೇಂದ್ರಪಾಟೀಲರು ಇಡೀ ರಾಷ್ಟ್ರದಲ್ಲಿ ದಕ್ಷ ಆಡಳಿತಗಾರರೆಂದು ಹೆಸರು ಪಡೆದವರಾಗಿದ್ದಾರೆ. ನಮಗೆ ಹಿಡಿಸಿತೋ, ಬಿಡುತ್ತೋ ಅದು ಬೇರೆ ವಿಚಾರ, ಬಹಳ ಮುಖ್ಯವಾಗಿ ಕಾಂಗ್ರೆಸ್ ಪಕ್ಷಕ್ಕೆ ಒಂದು ವರ್ಗದ ಜನ ಬೆಂಬಲವನ್ನು ಕೊಟ್ಟುಕೊಂಡು ಬಂದಿದ್ದಾರೆ. ೧೯೬೯ರಲ್ಲಿ ಕಾಂಗ್ರೆಸ್ ಪಕ್ಷ ಇಬ್ಭಾಗವಾದಂಥ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷದ ಧೋರಣೆಗಳು ಬಹಳ ಮುಖ್ಯವಾಗಿ ರಾಷ್ಟ್ರೀಕರಣ, ರಾಜಧನ ರದ್ದು ಮಾಡಿದಂಥಾದ್ದು, ಸಮಾಜವಾದದ ತತ್ವವನ್ನು ಜಾರಿಗೆ ತಂದು, ಈ ರಾಷ್ಟ್ರದ ಬಡವರಿಗೆ ಅನುಕೂಲ ಮಾಡಿಕೊಡುತ್ತೇವೆಂದು ಶ್ರೀಮತಿ ಇಂದಿರಾಗಾಂಧಿಯವರ ನಾಯಕತ್ವದಲ್ಲಿ ಹೇಳಿಕೊಂಡು ಬಂದರು. ಇದಾದನಂತರ ೨೦ ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರುತ್ತೇವೆಂದು, ಇದರಿಂದ ಬಡವರಿಗೆ ಉಪಯುಕ್ತವಾಗುತ್ತದೆಂದು ಹೇಳಿಕೊಂಡು ಬಂದರು. ಈ ಸಾರಿ ೧೯೮೯ನೇ ಇಸವಿ ನವೆಂಬರ್‌ನಲ್ಲಿ ನಡೆದಂಥ ಚುನಾವಣೆಯಲ್ಲಿ ನಿಮಗೆ ಸಿಕ್ಕಿರತಕ್ಕಂಥ ಬೆಂಬಲ ಏನಿದೆ, ಅದು ಯಾವ ಕಾರಣದಿಂದ ಸಿಕ್ಕಿದೆ ಎಂಬುದನ್ನು ನಾನು ವಿಶ್ಲೇಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಜನ ನಮ್ಮನ್ನು ತಿರಸ್ಕಾರ ಮಾಡಿ, ನಿಮಗೆ ಓಟು ಕೊಟ್ಟಿದ್ದಾರೆ. ಜನಗಳ ತೀರ್ಮಾನವನ್ನು ಒಪ್ಪಿದ್ದೇವೆ. ಇವತ್ತು ನಿಮಗೆ ೧೭೮ ಜನ ಸದಸ್ಯರ ಬೆಂಬಲ ಇದೆ. ಹಿಂದುಳಿದ ವರ್ಗದ ಜನ, ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ವರ್ಗದವರು ಅದರಲ್ಲಿಯೂ ವಿಶೇಷವಾಗಿ ಕಾರ್ಮಿಕರು ಅಭೂತ ಪೂರ್ವವಾದ ಬೆಂಬಲವನ್ನು ಕೊಟ್ಟಿದ್ದಾರೆ. ಈ ಕಡೆ ಕುಳಿತುಕೊಂಡಿದ್ದ ಅನೇಕ ಜನ ಆ ಕಡೆ ಕುಳಿತು ಕೊಂಡಿದ್ದಾರೆ. ೨-೩ನೇ ಸಾಲಿನಲ್ಲಿ ಕುಳಿತಿದ್ದಾರೆ, ಅದು ನಿಮ್ಮ ಪಕ್ಷದ ಆಂತರಿಕ ವಿಚಾರ, ನಾನು ಆ ವಿಷಯಕ್ಕೆ ಬರುವುದಿಲ್ಲ.

ಅವರು ನಮಗೆ ಏನು ಹೇಳುತ್ತಿದ್ದರು ಅಂದರೆ ನೀವು ಬಡವರ ವಿರೋಧಿಗಳು, ಪರಿಶಿಷ್ಟ ಜಾತಿ, ಪರಿಶಿಷ್ಟವರ್ಗಗಳ ವಿರೋಧಿಗಳು, ಹಿಂದುಳಿದ ವರ್ಗಗಳ ವಿರೋಧಿಗಳು ಎಂದು ಹೇಳುತ್ತಿದ್ದರು. ಆದರೆ ನನಗೆ ಬಹಳ ದುಃಖವಾಗುತ್ತಿದೆ. ಈ ಒಂದು ಸರ್ಕಾರದ ಬಜೆಟ್ ಏನು ಇದೆ, ಇಂಥ ಒಂದು ಅಭೂತಪೂರ್ವ ಬೆಂಬಲ ಸಿಕ್ಕಿರತಕ್ಕ ಹಿನ್ನೆಲೆಯಲ್ಲಿ ಇದು ಒಂದು ಸಾಮಾನ್ಯವಾದ ಬಜೆಟ್ ಆಗ ಬಾರದಾಗಿತ್ತು. ನಾವು ಸಹಿತ ೧೯೮೩ನೇ ಇಸವಿಯಲ್ಲಿ ಮಾನ್ಯ ಹೆಗಡೆ ಅವರ ನಾಯಕತ್ವದಲ್ಲಿ ರಾಜ್ಯದಲ್ಲಿ ಜನ ಬೆಂಬಲ ಕೊಟ್ಟಾಗ ೧೩೯ ಶಾಸಕರ ಸಿಕ್ಕಿದಾಗ ಜನರು ಒಳ್ಳೆಯ ಮಾತುಗಳನ್ನು ಹೇಳುತ್ತಿದ್ದರು. ೧೯೮೩-೮೪ರ ಸಾಲಿನಲ್ಲಿ ಮಾಡಿದಂತಹ ಕೆಲಸಗಳನ್ನು ೧೯೮೫ರ ನಂತರ ಮಾಡಲಿಕ್ಕೆ ಆಗಲಿಲ್ಲ. ನಿಮಗೂ ಸಹಿತ ಅದೇ ಗತಿ ಬರುತ್ತದೆ. ಇವತ್ತು ದೊಡ್ಡ ಮಾತುಗಳನ್ನು, ಶಬ್ದಗಳನ್ನು ಏನು ಹೇಳಿದ್ದೀರಿ ಅದನ್ನು ನೀವೇ ನುಂಗತಕ್ಕ ಪರಿಸ್ಥಿತಿ ಬರುತ್ತದೆ ಎಂಬುದನ್ನು ಗಮನದಲ್ಲಿ ಇಟ್ಟುಕೊಳ್ಳಬೇಕು. ನಾನು ಮುಖ್ಯವಾಗಿ ಹೇಳುವುದು ಏನೆಂದರೆ ಈ ಸರ್ಕಾರ ಐದು ವರ್ಷಗಳ ಕಾಲ ಆಡಳಿತವನ್ನು ನಡೆಸ ಬೇಕು ಜನತೆಯ ಅಭ್ಯುದಯವನ್ನು ಮಾಡಬೇಕು. ಅದಕ್ಕೆ ನಾವು ಬೆಂಬಲ ಕೊಡುತ್ತೇವೆ. ಸರ್ಕಾರ ಬಡವರ ಪರವಾಗಿ, ಹಿಂದುಳಿದ ವರ್ಗಗಳ ಪರವಾಗಿ, ಜನಸಾಮಾನ್ಯರ ಪರವಾಗಿ ಇರಬೇಕೆಂದು ನಮ್ಮ ಆಸೆ. ಇವತ್ತು ಅತ್ಯಂತ ದುಃಖದಿಂದ ನಾನು ಒಂದು ಮಾತನ್ನು ಹೇಳಬೇಕಾಗಿದೆ. ಯಾವ ಒಂದು ವರ್ಗದ ಜನ ನಿಮ್ಮ ಪಕ್ಷಕ್ಕೆ ಬೆಂಬಲವನ್ನು ಕೊಟ್ಟಿದ್ದಾರೆ ಅವರಿಗೆ ತುಂಬ ನಿರಾಸೆಯಾಗಿದೆ. ಈಗಾಗಲೇ ಜನರು ಮಾತನಾಡುತ್ತಿದ್ದಾರೆ. ನಾವು ಇವರಿಗೆ ಬಹಳ ದೊಡ್ಡ ಬೆಂಬಲವನ್ನು ಕೊಟ್ಟು ಕಳುಹಿಸಿದೆವು, ನಮಗೆ ಏನು ಉಪಯೋಗವಾಗುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದು ಆಗಬಾರದು. ಮುಂದಿನ

---

† ಈ ಚಿಹ್ನೆ ಸಂಬಂಧಪಟ್ಟ ಮಾನ್ಯ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೧೯೯೦-೯೧, ೧೯೯೧-೯೨ರಲ್ಲಿ ತಾವು ಏನು ಕೆಲಸ ಮಾಡಬಹುದೋ ಅದನ್ನು ೧೯೯೫ರ ನಂತರ ಮಾಡಲಿಕ್ಕೆ ಆಗುವುದಿಲ್ಲ. ಈಗಾಗಲೇ ಜನಗಳಿಂದ ಗುಸುಗುಸು ಮಾತುಗಳು ಬರುತ್ತಿವೆ. ಅದು ಆಗದೇ ಇರಲಿ ಎಂದು ನನ್ನ ಇಚ್ಛೆ. ಅದು ಆಗಬಾರದು ನಮ್ಮ ರಾಜ್ಯದಲ್ಲಿ ಸ್ಟ್ರಾಂಗ್ ಲೀಡರ್‌ಷಿಪ್ ಇರಬೇಕು ಆಗ ಡೆಲ್ಲಿಯಲ್ಲಿ ನಿಮಗೆ ಬೆಲೆ ಸಿಕ್ಕುತ್ತದೆ ಇಲ್ಲದಿದ್ದರೆ ನಿಮಗೆ ಬೆಲೆ ಸಿಗುವುದಿಲ್ಲ. ಈಗಿರುವವರೇ ಮುಖ್ಯಮಂತ್ರಿಗಳಾಗಿರಲಿ ತಾವೇ ಅರ್ಥ ಮಂತ್ರಿಗಳಾಗಿದ್ದು ಬಜೆಟ್ ಮಂಡನೆ ಮಾಡಿ ಇವತ್ತು ನಾನು ಏನು ಹೇಳುತ್ತಿದ್ದೇನೆ ಎಂದರೆ ಯಾವ ವರ್ಗದ ಜನರ ಪರವಾಗಿ ಕಾಂಗ್ರೆಸ್ ಪಕ್ಷ ಧ್ವನಿ ಎತ್ತಬೇಕು ಆ ಧ್ವನಿ ಬಜೆಟ್‌ನಲ್ಲಿ ಇಲ್ಲ ಎಂದು ನನ್ನ ನೋವು. ತಾವು ಹೊಸ ಸಂಪನ್ಮೂಲಗಳನ್ನು ಹುಡುಕುವುದರಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದೀರಿ. ನೀವು ಮಾಡತಕ್ಕ ಎಲ್ಲಾ ಕಾರ್ಯಕ್ರಮವನ್ನು ವಿರೋಧ ಮಾಡುವವನು ನಾನು ಅಲ್ಲ. ಕೆಲವೊಂದು ಕಾರ್ಯಕ್ರಮಗಳು ಚೆನ್ನಾಗಿ ಇದೆ. ಅದನ್ನು ನಾನು ಸ್ವಾಗತ ಮಾಡುವವನಿದ್ದೇನೆ. ಈಗ ತಾವು ನೂರಾರು ಕೋಟಿ ರೂಪಾಯಿಗಳ ಹೊಸ ಸಂಪನ್ಮೂಲ ಏನು ಹುಡುಕಿಕೊಂಡು ಹೇಳಿದ್ದೀರಿ ಅದರಲ್ಲಿ ಈ ವರ್ಷ ವಿಫಲರಾಗುತ್ತೀರಿ. ಈಗ ೫೬ ಕೋಟಿ ರೂಪಾಯಿಗಳ ಕೊರತೆ ಬಡ್ಜೆಟ್ ಏನು ಮಂಡನೆ ಮಾಡಿದ್ದೀರಿ ಅದು ಮುಂದೆ ೧೫೦ ಕೋಟಿ ರೂಪಾಯಿ ಆಗುವುದರಲ್ಲಿ ಸಂಶಯವಿಲ್ಲ. ಇದನ್ನು ಏತಕ್ಕೆ ಹೇಳುತ್ತಿದ್ದೇನೆ ಎಂದರೆ ಯೋಜನಾ ಗಾತ್ರ ಶ್ರೀಮಾನ್ ಹೆಗಡೆ ಅವರ ಕಾಲದಲ್ಲಿ ಬಹಳ ಕಡಿಮೆ ಇತ್ತು ಎಂದು ಹೇಳಿದ್ದೀರಿ. ತಮಗೆಲ್ಲ ವಿಚಾರ ಗೊತ್ತಿದೆ. ಇವೊತ್ತು ರಾಷ್ಟ್ರದಲ್ಲಿ ಕಳೆದ ೧೯೮೧ನೇ ಇಸವಿಯಿಂದ ಕೇಂದ್ರ ಸರ್ಕಾರ ಮಾಡಿರತಕ್ಕ ಬಡ್ಜೆಟ್‌ನಲ್ಲಿ ಯೋಜನೇತರ ವೆಚ್ಚ ಮತ್ತು ಯೋಜನಾ ವೆಚ್ಚ ಎಷ್ಟು ಎಂದು ಅಂಕಿ ಅಂಶ ನೋಡಬೇಕು. ೧೯೮೧-೮೨ನೇ ಇಸವಿಯಲ್ಲಿ percentage increases in non-plan expenditure is 46%. Plan expenditure was 54%. ೧೯೯೦ರ ಫಿಗರ್ಸ್ ನಾನು ಹೇಳುತ್ತಿಲ್ಲ. ೧೯೮೮ನೇ ಇಸವಿಯಲ್ಲಿ ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್ಸ್ ೭೩ ಪರಸೆಂಟ್ ಆಗಿದೆ, ಯೂನಿಯನ್ ಬಡ್ಜೆಟ್ ಮಾತು ಹೇಳುತ್ತಿದ್ದೇನೆ. ಪ್ಲಾನ್ ಎಕ್ಸ್‌ಪೆಡೀಚರ್ಸ್ ೨೬ ಪರಸೆಂಟ್‌ಗೆ ಇಳಿದಿದೆ. ಇದು ಒಂದು ರಾಷ್ಟ್ರದ ಪಿಡುಗು. ಇದು ಕ್ಯಾನ್ಸರ್ ತರಹ ಹಬ್ಬಿದೆ. ಪಾಪ್ಯುಲಿಸ್ಟ್ ಪ್ರೋಗ್ರಾಮ್ ಚೀಪ್ ಪ್ರೋಗ್ರಾಮ್ ಸಾಲ ಮೇಳಗಳನ್ನು ನಾವೆಲ್ಲರೂ ಮಾಡಿಕೊಂಡು ಬಂದಿದೇವೆ. ೧೮ನೇ ಡಿಸೆಂಬರ್ ೧೯೮೯ರಲ್ಲಿ ನಮ್ಮ ಅಂದಿನ ರಾಜ್ಯಪಾಲರು ಮುಖ್ಯವಾದ ಒಂದು ಘೋಷಣೆಯನ್ನು ಮಾಡಿದರು. ಈ ಸದನದಲ್ಲಿ ಅವರು ಓದಿರತಕ್ಕ ಭಾಷಣವನ್ನು ಜ್ಞಾಪಕಕ್ಕೋಸ್ಕರವಾಗಿ ಹೇಳಲಿಕ್ಕೆ ಬಯಸುತ್ತೇನೆ.

"The 20 point programme first initiated by the late Prime Minister. Smt. Indira Gandhi will form the basis for the economic policies and programmes of my Govt. My Government is of the considered view that for promoting social change and social justice, implementation of the 20 point economic programme is a must. To this end, the 20 point economic programme would be rejuvenated in Karnataka and closely monitered."

ಎನ್ನತಕ್ಕ ಮಾತನ್ನು ರಾಜ್ಯಪಾಲರ ಬಾಯಿಂದ ಹೇಳಿಸಿದ್ದೀರಿ. ಇದರ ಜೊತೆಗೆ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಮಾಡತಕ್ಕ ಸಂದರ್ಭದಲ್ಲಿ ನೇರವಾಗಿ ಹಿರಿಯ ಸದಸ್ಯರುಗಳು, ಜನತಾ ದಳ ಹಾಗೂ ಜನತಾ ಸರ್ಕಾರ ಇದ್ದ ಸಂದರ್ಭದಲ್ಲಿ ಪಟ್ಟಭದ್ರಹಿತಾಶಕ್ತಿಗಳಿಗೆ ಒಳಗೊಳಗೆ ಬಡವರ ವಿರೋಧವಾಡಿ ಕೆಲಸ ಮಾಡಿದರೆಂದು ಹೇಳಿದರು. ಆದರೆ ನೀವು ಮಾಡಿರತಕ್ಕದ್ದು ಏನು? ಈ ಬಡವರ ಧ್ವನಿಯನ್ನು ಈ ಬಜೆಟ್‌ನಲ್ಲಿ ಎಲ್ಲಿ ತೋರಿಸಿದ್ದೀರೆಂಬುದನ್ನು ದಯವಿಟ್ಟು ತಾವು ನಮಗೆ ತಿಳಿಸಬೇಕು. ೨೦ ಅಂಶಗಳ ಎಲ್ಲಾ ಕಾರ್ಯಕ್ರಮಗಳನ್ನು ನಾನು ಓದುವುದಕ್ಕೆ ಹೋಗುವುದಿಲ್ಲ. ಆದರೆ ಕೆಲವು ಕಾರ್ಯಕ್ರಮಗಳನ್ನು ಮುಖ್ಯವಾಗಿ ಈ ಸಂದರ್ಭದಲ್ಲಿ ತಮ್ಮ ಜ್ಞಾಪಕಕ್ಕೆ ತರಲು ಪ್ರಯತ್ನ ಮಾಡುತ್ತೇನೆ.

"Books and stationeries at controlled pricesed; essential commodities at controlled prices to students in hostels. Implementation of the agricultural land ceiling, bonded labour whatever form it exists will be declared illegal, stepping up of the provision of House-sites to landless and weaker sections."

೨೦ ಅಂಶಗಳ ಒಂದೊಂದು ಕಾರ್ಯಕ್ರಮಕ್ಕೂ ಸಹಿತ ಈ ಬಜೆಟ್‌ನಲ್ಲಿ ಎಷ್ಟು ಹಣವನ್ನು ಇಟ್ಟಿದ್ದೀರೆಂಬುದನ್ನು ನನಗೆ ಹೇಳಬೇಕು, ನಿಜ, ನಾನು ಒಪ್ಪಿಕೊಳ್ಳುತ್ತೇನೆ. ಬಡವರಿಗೆ ಸೈಟು ಗಳನ್ನು ಕೊಡುವುದು ಅಷ್ಟೊಂದು ಸುಲಭದ ಕೆಲಸವಲ್ಲ. ಇವತ್ತು ೧೦-೨೦ ಎಕರೆ ಜಮೀನು ಇರತಕ್ಕವರ ಒಂದು ರೋಮವನ್ನು ಮುಟ್ಟಲು ನಿಮಗೆ ಆಗುವುದಿಲ್ಲ. ಒಂದು-ಒಂದೂವರೆ ಎಕರೆ ಇರತಕ್ಕವರ ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತೇವೆ. ಎಷ್ಟು ಲಕ್ಷ ಎಕರೆ ನಾವು ಜಮೀನನ್ನು ಅಕ್ವೈರ್ ಮಾಡಿಕೊಳ್ಳುತ್ತೇವೆ ? ಅದಕ್ಕೆ ಎಷ್ಟು ಹಣವನ್ನು ಇಟ್ಟಿದ್ದೀರೆಂಬುದನ್ನು ತಿಳಿಸಬೇಕು. ೨೦ ಅಂಶಗಳ ಕಾರ್ಯಕ್ರಮವನ್ನು ನಾವು ಕಾರ್ಯಗತ ಮಾಡುತ್ತೇವೆಂದು ಕೇವಲ ಪ್ರಚಾರಕ್ಕೋಸ್ಕರ ಹೇಳಿದಂತಾಗಿದೆ. ನಾವು ಪಟ್ಟಭದ್ರ ಹಿತಾಶಕ್ತಿಗಳಿಗೋಸ್ಕರ ಕೆಲಸ ಮಾಡಿದ್ದರಿಂದ ಕೇವಲ ೨೩-೨೪ ಜನ ನಾವು ಆರಿಸಿಬಂದಿದ್ದೇವೆಂದು ನಮ್ಮನ್ನು ಟೀಕೆ ಮಾಡಲು ಹೊರಟಿದ್ದೀರಿ. ಆದರೆ ಈ ಬಜೆಟ್‌ನಲ್ಲಿ ತಾವು ಏನು ಹೇಳಿದ್ದೀರಿ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಇನ್ನು ತಮ್ಮ ಆಯವ್ಯಯದಲ್ಲಿ ೯ನೇ ಹಣಕಾಸಿನ ಆಯೋಗದ ಬಗ್ಗೆ ಹೇಳಿದ್ದೀರಿ. ೭ನೇ ಆಯೋಗ ಶೇಕಡ ೪.೮೨ ಹಣವನ್ನು ನಮಗೆ ಕೊಟ್ಟಿತು, ೮ನೇ ಆಯೋಗ ಶೇಕಡ ೪.೩ ನಮಗೆ ಕೊಟ್ಟಿತ್ತು. ೯ನೇ ಆಯೋಗ ಶೇಕಡ ೪.೨೨ ರಷ್ಟು ಹಣವನ್ನು ನಮಗೆ ಕೊಟ್ಟಿದೆ, ಡಾ॥ ಮಲ್ಕ ರೆಡ್ಡಿಯವರು ಈ ಬಗ್ಗೆ ಹೇಳಿರತಕ್ಕ ಮಾತು ೧೦೦ಕ್ಕೆ ೧೦೦ ರಷ್ಟು ಸತ್ಯ. ೯ನೇ ಆಯೋಗದ ಶಿಫಾರಸ್ಸನ್ನು ಕೇಂದ್ರ ಸರ್ಕಾರ ಒಪ್ಪಿಕೊಂಡರೆ ನಮಗೆ ತೊಂದರೆಯಾಗುತ್ತದೆ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಈಗ ನಾವು ನಮ್ಮ ಮಾನ್ಯ ಹೆಗಡೆಯವರ ಮೊರೆ ಹೋಗಲೇಬೇಕು. ಇದಕ್ಕೆ ಸದನದ ಸದಸ್ಯರ ಸಹಕಾರವನ್ನು ತಾವು ತೆಗೆದುಕೊಳ್ಳಬೇಕು. ಈ ಆಯೋಗದ ವರದಿಯಿಂದ ನಮ್ಮ ರಾಜ್ಯಕ್ಕೆ ಬಹಳ ಅನ್ಯಾಯವಾಗಿದೆ. ಆದ್ದರಿಂದ ನಾವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಬೇಕಾಗಿದೆ. ನನಗೆ ಸಂತೋಷವಾಗುತ್ತದೆ, ಬುದ್ಧಿವಂತರಾದ ನೀವು ಆ ಮಾತನ್ನು ಇಲ್ಲಿ ಹೇಳಿದ್ದೀರಿ. ಮಾನ್ಯ ಹೆಗಡೆಯವರು ನಮ್ಮ ರಾಜ್ಯಕ್ಕೆ ನ್ಯಾಯವನ್ನು ದೊರಕಿಸಿಕೊಡುತ್ತಾರೆಂದು ನನಗೆ ವಿಶ್ವಾಸವಿದೆ. ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಇವತ್ತಿಗೂ ಒಂಟೆ ಮೇಲೆ ಜನರು ಪ್ರಯಾಣ ಮಾಡುತ್ತಿದ್ದಾರೆ. ಮಾನ್ಯ ಬಂಗಾರಪ್ಪನವರು ಮಾತನಾಡುವಾಗ ನಾನು ಇಲ್ಲಿಯೇ ಕುಳಿತಿದ್ದೆ ಅವರು ಈಗ ಇದ್ದಿದ್ದರೆ ಚೆನ್ನಾಗಿತ್ತು. ನಾನು ಭಾಷಣ ಪ್ರಾರಂಭ ಮಾಡಿದ ಕೂಡಲೇ ಅವರು ಎದ್ದು ಹೊರಟು ಹೋದರು, ಬೀದರ್‌ನ ಔರಾದ್‌ನಲ್ಲಿ ಒಂಟೆಯನ್ನು ಅವಲಂಬಿಸಿ ಜೀವನ ಮಾಡತಕ್ಕ ಜನ ಇದ್ದಾರೆ. ಬೀದರ್ ಗುಲ್ಬರ್ಗ, ರಾಯಚೂರು ಈ ಜಿಲ್ಲೆಗಳಿಗೆ ನ್ಯಾಯವನ್ನು ಒದಗಿಸಿಕೊಡುವ ದೃಷ್ಟಿಯಿಂದ ೪೦ ಕೋಟಿ ರೂಪಾಯಿಯ ಹಣವನ್ನು ಕೊಡಬೇಕೆಂದು ಅವರು ಒಂದು ಯೋಜನೆಯನ್ನು ಮಾಡಿದ್ದಾರೆ. ಇಡೀ ರಾಷ್ಟ್ರದಲ್ಲಿಯೇ ಒಂದು ಮಾದರಿಯಾಗಿರತಕ್ಕ ಯೋಜನಾಯೋಗಕ್ಕೆ ಶ್ರೀ ರಾಮಕೃಷ್ಣ ಹೆಗಡೆಯವರು ಉಪಾಧ್ಯಕ್ಷರಾಗಿದ್ದಾರೆ. ಈಗ ಯೋಜನಾಯೋಗವು ಬಹಳ ಚುರುಕುಗೊಂಡು ತನ್ನ ಕಾರ್ಯಚರಣೆಯನ್ನು ಶುರುಮಾಡಿದೆ. ಗ್ರಾಮಗಳ ಅಭಿವೃದ್ಧಿಗಾಗಿ ಶೇಕಡ ೪೯ ರಷ್ಟು ಹಣವನ್ನು ಬಜೆಟ್‌ನಲ್ಲಿ ಕೊಡಿಸುವುದರಲ್ಲಿ ಅವರು ಯಶಸ್ವಿಯಾಗಿದ್ದಾರೆ. ಶೇಕಡ ೫೦ ರಷ್ಟು ಕೊಡಬೇಕೆಂದು ಸಹ ತೀರ್ಮಾನ ಮಾಡಿದ್ದಾರೆ. ಎಲ್ಲದಕ್ಕಿಂತ ಮಿಗಿಲಾಗಿ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ಆಗಿರತಕ್ಕ ತಪ್ಪುಗಳನ್ನು ಸರಿಪಡಿಸಲು ಶ್ರೀ ಹೆಗಡೆಯವರು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಇಂತಹ ಒಂದು ಒಳ್ಳೆಯ ಕೆಲಸವನ್ನು ನಮ್ಮ ಕರ್ನಾಟಕದ ಒಬ್ಬರಾಗ ಮಾಡಿದ್ದಾರೆಂದರೆ ನಮಗೆ ಸಂತೋಷವಾಗುತ್ತದೆ. ಇದನ್ನು ನಮ್ಮ ಮುಖ್ಯಮಂತ್ರಿಗಳೂ ಸಹ ಗಮನಿಸಿದ್ದಾರೆ. ಆದ್ದರಿಂದ ಅವರನ್ನು ಮೊದಲನೆಯದಾಗಿ ಅಭಿನಂದಿಸಿದರು. ನಮಗೆ ಬಹಳ ಸಂತೋಷ. ಬಹಳ ಹೆಮ್ಮೆ ಇದರ ಉಪಯೋಗವನ್ನು ಚಾಣಾಕ್ಷತೆಯಿಂದ ಮಾಡಿಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ. ರಾಜ್ಯದ ಹಣಕಾಸು ಸ್ಥಿತಿಯ ಪರಿಶೀಲನೆ ಬಗ್ಗೆ ಒಂದು ಆಯೋಗವನ್ನು ಮಾಡಬೇಕೆಂದು ಹೇಳಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಆ ಆಯೋಗದಲ್ಲಿ ಹಾಕತಕ್ಕಂತಹ ಸದಸ್ಯರುಗಳು ಯಾರಿದ್ದಾರೆ ಅವರು ಜನ ಸಾಮಾನ್ಯರ ನೋವನ್ನು, ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು. ಅರ್ಥ ಮಾಡಿಕೊಳ್ಳದೇ ಇರತಕ್ಕಂತಹ ಅಧಿಕಾರಿಗಳನ್ನು ಅಲ್ಲಿಗೆ ಹಾಕುವುದರಿಂದ ಏನೂ ಉಪಯೋಗವಿಲ್ಲ. ಜನಗಳ ಕಷ್ಟವನ್ನು ಅರ್ಥ ಮಾಡಿಕೊಂಡಿರತಕ್ಕ ಸದಸ್ಯರನ್ನು ಒಳಗೊಂಡ ಆಯೋಗಕ್ಕೆ ೩-೬ ತಿಂಗಳು ಸಮಯ ಕೊಡಿ ಆ ಆಯೋಗದ ವರದಿ ಅಷ್ಟರಲ್ಲಿಯೇ ಬರಬೇಕು. ಅದು ಬಿಟ್ಟು ವರ್ಷಗಟ್ಟಲೆ ಮಾಡಿದರೆ ಅದು ಉಪಯೋಗವಾಗುವುದಿಲ್ಲ. ರಾಜ್ಯಕ್ಕೆ ಭದ್ರವಾದ ಆರ್ಥಿಕ ಬುನಾದಿಯನ್ನು ಆರ್ಥಿಕ ಶಕ್ತಿಯನ್ನು ಹೆಚ್ಚು ಮಾಡಲಿಕ್ಕೆ ಏನು ಯೋಜನೆಯನ್ನು ತಮ್ಮ ಬಜೆಟ್ಟಿನಲ್ಲಿ ಹಾಕಿಕೊಂಡಿದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತೇನೆ ನನ್ನ ಪಕ್ಷ ಕೂಡ ಅದನ್ನು ಸ್ವಾಗತ ಮಾಡುತ್ತದೆ. ಇನ್ನು ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚು ವಿಸ್ತಾರವಾಗಿ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ ಸಮಯದ ಅಭಾವದ ಪ್ರಜ್ಞೆ ನನಗೆ ಇದೆ. ಕೃಷ್ಣಾ, ಕಾವೇರಿ ಯೋಜನೆಗಳಿಗೆ ಇವತ್ತಿನ ಅಂದಾಜಿನ ಪ್ರಕಾರ ೩೭೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ.

೨೦೦೦ರ ಇಸವಿಯ ಒಳಗಡೆ ಈ ಯೋಜನೆಯನ್ನು ಮುಗಿಸದೇ ಹೋದರೆ ನಮ್ಮ ರಾಜ್ಯ ಪಂಗನಾಮ ಹಾಕಿಕೊಳ್ಳಬೇಕಾಗುತ್ತದೆ. ಮೈಸೂರು ಜಿಲ್ಲೆಯಿಂದ ಬಂದಿರತಕ್ಕಂತಹ ತಮಗೆ ಕಾವೇರಿ ಜಲ ವಿವಾದದ ಬಗ್ಗೆ ಅರ್ಥವಾಗಿರಬಹುದು. ೩೭೫೦ ಕೋಟಿ ರೂಪಾಯಿಗಳನ್ನು ನಾವು ೮ ವರ್ಷದಲ್ಲಿ ಒದಗಿಸದೇ ಹೋದರೆ ತೊಂದರೆಯಾಗುತ್ತದೆ. ಈ ನೀರಾವರಿ ಯೋಜನೆಗಳಿಗೋಸ್ಕರ ಹೊಸ ಸಂಪನ್ಮೂಲಗಳನ್ನು ಕಂಡುಹಿಡಿಯಲಿಕ್ಕೆ ಎಂದು ಸದನದ ಸಮಿತಿಯನ್ನು ಮಾಡಿ. ಎಲ್ಲವನ್ನೂ ಕೂಡ ಅಂದರೆ ವಿಸ್ತಾರವಾಗಿ ಈ ಸದನದ ಒಳಗೆ ಮಾತನಾಡುವುದಕ್ಕೆ ನಮಗೆ ಅವಕಾಶ ಸಿಕ್ಕುವುದಿಲ್ಲ. ರಾಜ್ಯದ ನೀರಾವರಿ ಯೋಜನೆಗಳಿಗೆ ಬೇಕಾದ ಹೊಸ ಸಂಪನ್ಮೂಲಗಳನ್ನು ಹುಡುಕುವ ಬಗ್ಗೆ ಇರಿಗೇಷನ್ ಬಾಂಡ್ ಮಾಡಬೇಕೆ ಇಲ್ಲವೇ ಬೇರೆ ಯಾವ ರೀತಿಯಲ್ಲಿ ಹಣವನ್ನು ಸಂಗ್ರಹ ಮಾಡಬೇಕು ಎಂಬ ಬಗ್ಗೆ ಸದನ ಸಮಿತಿ ವಿಚಾರ ಮಾಡಬೇಕು. ಎಲ್ಲ ಪಕ್ಷಗಳ ಸದಸ್ಯರುಗಳೂ ಸೇರಿ ಯಾವ ರೀತಿ ಇದಕ್ಕೆ ಹಣವನ್ನು ಸಂಗ್ರಹ ಮಾಡಬೇಕೆಂಬುದರ ಬಗ್ಗೆ ಹೊಸ ತೆರಿಗೆಯನ್ನು ಹೇಗೆ ಹಾಕಬೇಕೆಂಬುದರ ಬಗ್ಗೆ ಒಂದು ತೀರ್ಮಾನಕ್ಕೆ ಬರೋಣ. ಇನ್ನು ಒಣ ಭೂಮಿಯ ಬಗ್ಗೆ ಸ್ವಲ್ಪ ಹೇಳಬೇಕಾಗುತ್ತದೆ. ಕೋಲಾರ, ಚಿತ್ರದುರ್ಗ, ತುಮಕೂರು ಮತ್ತು ಬೆಂಗಳೂರು, ಬಳ್ಳಾರಿ ಕಡೆಗಳಲ್ಲಿ ದೊಡ್ಡ ದೊಡ್ಡ ನೀರಾವರಿ ಯೋಜನೆಗಳನ್ನು ಮಾಡಿಕೊಳ್ಳಲಿಕ್ಕೆ ಅವಕಾಶ ಇಲ್ಲ ಇದು ಕನಸಿನ ಮಾತು. ತುಮಕೂರಿಗೆ ಹೇಮಾವತಿ ನೀರು ಯಾವಾಗ ಬರುತ್ತದೆಯೋ ಗೊತ್ತಿಲ್ಲ. ಕೋಲಾರಕ್ಕೆ ಅಪ್ಪರ್ ಭದ್ರ ಯಾವಾಗ ಬರುತ್ತದೋ ಗೊತ್ತಿಲ್ಲ. ೩೭೫೦ ಕೋಟಿ ರೂಪಾಯಿಯನ್ನು ಕೃಷ್ಣಾ ಕಾವೇರಿ ಜಲಾನಯನ ಯೋಜನೆಗಳಿಗೆ ಕೊಟ್ಟರೆ ರಾಗಿ, ಜೋಳ ಬೆಳೆಯುತಕ್ಕಂತಹ ನಮಗೆ ಅನುಕೂಲ ವಾಗುತ್ತದೆ. ಒಣ ಬೇಸಾಯದ ಬಗ್ಗೆ ವಿಶ್ವ ಬ್ಯಾಂಕ್‌ನಿಂದ ಹಿಂದೆ ಯೋಜನೆಯನ್ನು ತೆಗೆದುಕೊಂಡಿದ್ದೆವು ಒಣ ಬೇಸಾಯದ ಬಗ್ಗೆ ವಿಶ್ವ ಬ್ಯಾಂಕ್ ನೆರವಿನ ಯೋಜನೆಗಳನ್ನು ಇದರಲ್ಲಿ ನೀಡಿಲ್ಲ. ಪ್ರವಾಸೋದ್ಯಮದ ಬಗ್ಗೆ ವಿಶ್ವ ಬ್ಯಾಂಕ್‌ನಿಂದ ಸಾಲವನ್ನು ತೆಗೆದುಕೊಳ್ಳಬೇಕೆಂದು ಬೆಂಗಳೂರು ನಗರ ಅಭಿವೃದ್ಧಿಯಾಗ ಬೇಕೆಂದು ಹೇಳಿದ್ದೀರಿ. ಆದರೆ ಒಣ ಭೂಮಿ ಪ್ರದೇಶದ ಬಗ್ಗೆಯೂ ಇದರ ನೆರವು ಬೇಕಾಗುತ್ತದೆ, ಭೂ ಅಭಿವೃದ್ಧಿ ಮಂಡಲಿಗೆ ಹೆಚ್ಚಿನ ಹಣಕಾಸಿನ ಶಕ್ತಿಯನ್ನು ಕೊಡಿ. ನನ್ನ ಸಾತನೂರು ಕ್ಷೇತ್ರದ ಮಿತ್ರರು ಇಲ್ಲಿ ಇದ್ದಾರೆ. ಅಲ್ಲಿ ಕಬ್ಬಿನಾಳ ಯೋಜನೆಯನ್ನು ತೆಗೆದುಕೊಂಡಿದ್ದೇವೆ ಅದರ ಯೋಜನಾ ಗಾತ್ರ ಎರಡು ವರ್ಷದಲ್ಲಿ ಎರಡು ಪಟ್ಟು ಜಾಸ್ತಿಯಾಗಿದೆ. ನೀರಾವರಿಯೋಜನೆಗಳನ್ನು ಮಾಡುವುದರಿಂದ ಇರತಕ್ಕಂತಹ ಸಮಸ್ಯೆಗಳನ್ನು ಪರಿಹಾರ ಮಾಡಬಹುದು. ಈ ದಿಕ್ಕಿನಲ್ಲಿ ಕೆಲವು ಹೆಜ್ಜೆಗಳನ್ನು ಮುಂದೆ ಇಟ್ಟಿದ್ದೇವೆ. ದಿಟ್ಟ ಹೆಜ್ಜೆಗಳನ್ನು ಇಟ್ಟು ಒಣ ಭೂಮಿ ಪ್ರದೇಶದ ರೈತರಿಗೆ ಅನುಕೂಲ ಮಾಡಿಕೊಡ ಬೇಕು.

ಇನ್ನು ತಮ್ಮ ಭಾಷಣದಲ್ಲಿ ಸಾರ್ವಜನಿಕ ಉದ್ದಿಮೆಗಳ ಬಗ್ಗೆ ಮಾತನಾಡಿದ್ದೀರಿ. ಸ್ವಾಮಿ, ೪೨೦೦ ಕೋಟಿ ರೂಪಾಯಿಗಳಿಗಿಂತ ಹೆಚ್ಚಿನ ಬಂಡವಾಳವನ್ನು ನಾವು ಈ ಸಾರ್ವಜನಿಕ ಉದ್ದಿಮೆಗಳಲ್ಲಿ ತೊಡಗಿಸಿದ್ದೇವೆ. ೭೫೦ ಕೋಟಿ ರೂಪಾಯಿಗಳು ಈಗಾಗಲೇ ನಷ್ಟವಾಗಿದೆ. ಆದರೆ ರಷ್ಯಾದಲ್ಲಿ ಆಗಿ ರತಕ್ಕ ಬದಲಾವಣೆ '' ಪೆರಿಸ್ಟ್ರೋಯಿಕ್ '' ಹೆಸರಿನಲ್ಲಿ ಖಾಸಗೀಕರಣವನ್ನು ಮಾಡತಕ್ಕ ಕೆಲಸವನ್ನು ದಯವಿಟ್ಟು ಮಾಡುವುದಕ್ಕೆ ಹೋಗಬೇಡಿ. ೪೦ ವರ್ಷಗಳಿಂದ ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನು ಇಟ್ಟುಕೊಂಡು ಬಂದಿರುವ ಪಕ್ಷ ನಮ್ಮದು. ಇದಕ್ಕೆ ನೀವು ಕೊಡಲಿ ಪೆಟ್ಟನ್ನು ಹಾಕುವುದಕ್ಕೆ ಪ್ರಯತ್ನ ಮಾಡುತ್ತಿದ್ದೀರಿ. ಇದು ಸರಿಯಲ್ಲ. ನಾನು ಸಾರಿಗೆ ಮಂತ್ರಿಯಾಗಿ ಕೆಲವು ದಿವಸ ಕೆಲಸ ಮಾಡಿದ್ದೇನೆ. ಬೆಲೆಗಳು ಜಾಸ್ತಿಯಾದುದು ನಿಜ. ದಕ್ಷತೆಯನ್ನು ತರುವುದಕ್ಕೆ ನಾನು ಬಹಳಷ್ಟು ಪ್ರಯತ್ನ ಮಾಡಿದೆ. ಸಾರಿಗೆ ಸಂಸ್ಥೆಯಲ್ಲಿ ೬೦ ಕೋಟಿ ರೂಪಾಯಿ ನಷ್ಟವಾಗುತ್ತಿದ್ದುದು ಇವತ್ತು ೧ ಕೋಟಿ ರೂಪಾಯಿಗೆ ಇಳಿದಿದೆ. ಇದು ಪ್ರಶಂಸನೀಯವಾದುದು. ವಿಕ್ರಾಂತ್ ಟೈರ್ಸ್ ಫ್ಯಾಕ್ಟರಿ ನಿಮ್ಮ ಪಕ್ಕದಲ್ಲಿಯೇ ಇದೆ...

ಶ್ರೀ ಎಂ. ರಾಜಶೇಖರಮೂರ್ತಿ.— ನಾನೇ ಅದಕ್ಕೆ ಪರವಾನಗಿಯನ್ನು ಕೊಟ್ಟಿದ್ದುದು.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಅದಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಆದರ ಮೊದಲು ಅಲ್ಲಿ ೧೬ ಕೋಟಿ ರೂಪಾಯಿ ಲಾಭ ಬರುತ್ತಿತ್ತು. ಕೇವಲ ಒಂದೂವರೆ ವರ್ಷದಲ್ಲಿ ೧೬ ಕೋಟಿ ರೂಪಾಯಿಯಿಂದ ೧ ಕೋಟಿ ರೂಪಾಯಿಗೆ ಇಳಿದಿದೆ. ಅಂದರೆ ಇದಕ್ಕೆ ಕಾರಣ ಏನು ಎಂಬು ದನ್ನು ನೀವು ಯೋಚನೆ ಮಾಡಬೇಕು. ನಾನು ತಮಗೆ ಹೇಳುತ್ತೇನೆ. ತಾವು ಯಾವುದೇ ಕಾರಣದಿಂದಲೂ ಅಲ್ಲಿರತಕ್ಕ ಕಾರ್ಮಿಕರನ್ನು ಟೀಕೆ ಮಾಡುವುದಕ್ಕೆ ಹೋಗಬೇಡಿ. ಎಲ್ಲೋ ಇದ್ದಂಥ ಅಧಿಕಾರಿ ನಮ್ಮ ರಾಜ್ಯಕ್ಕೆ ಬಂದಿದ್ದಾರೆ. ಇವತ್ತು ಅವರನ್ನು ವಾಪಸು ಕಳುಹಿಸುವುದಕ್ಕೆ ಸಾಧ್ಯವಿಲ್ಲ. ಆ ಕಾರ್ಖಾನೆ ಯಲ್ಲಿ ಕೆಲಸ ಮಾಡತಕ್ಕ ಜನ ಯಾರಿದ್ದಾರೆ ಅವರು ಅವರ ರಾಜ್ಯದಿಂದಲೇ ಬರುತ್ತಿದ್ದಾರೆ. ಈ ರಾಜ್ಯದ

ಇತಿಹಾಸದಲ್ಲಿ ವಿಕ್ರಾಂತ್ ಟೈರ್ಸ್ ಕಾರ್ಖಾನೆಯಲ್ಲಿ ನಮ್ಮ ರಾಜ್ಯದವರಿಗೆ ಆಗಿರತಕ್ಕ ಅನ್ಯಾಯ ಬೇರೆ ಎಲ್ಲೂ ಆಗಿಲ್ಲ. ಅಷ್ಟೊಂದು ಅನ್ಯಾಯವಾಗಿದೆ. ಅಲ್ಲಿ ನಮ್ಮ ರಾಜ್ಯದವರಿಗೆ ಅನ್ಯಾಯ ಆಗಿದೆಯೋ? ಇಲ್ಲವೇ ? ಎಂಬುದನ್ನು ವಿಚಾರಣೆ ಮಾಡಿಸುವುದು, ಬಿಡುವುದು ನಿಮಗೆ ಸೇರಿದ್ದುದು. ಆ ವ್ಯಕ್ತಿ ತಮಿಳುನಾಡಿನ ನೂರಾರು ಜನರಿಗೆ ಉದ್ಯೋಗವನ್ನು ಕೊಟ್ಟಿದ್ದಾನೆ. ನಮ್ಮ ರಾಜ್ಯದವರಿಗೆ ಬಹಳಷ್ಟು ಅನ್ಯಾಯವಾಗುತ್ತಿದೆ. ಇದನ್ನು ತಾವು ಪ್ರತಿಭಟನೆ ಮಾಡಬೇಕಾಗುತ್ತದೆ. ಆ ಅಧಿಕಾರಿ ಸ್ವೇಚ್ಛಾಚಾರದಿಂದ ತನಗೆ ಬೇಕಾದವರನ್ನು ನೇಮಕ ಮಾಡಿಕೊಂಡಿದ್ದಾನೆ, ಅನೇಕಸಾರಿ ವಿದೇಶಗಳಿಗೆ ಪ್ರವಾಸ ಹೋಗಿ ಬಹಳಷ್ಟು ಹಣವನ್ನು ಅನಾವಶ್ಯಕವಾಗಿ ಪೋಲು ಮಾಡಿದ್ದಾನೆ ಎನ್ನತಕ್ಕ ವಿಚಾರವನು ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇನ್ನು ಕೆ. ಎಸ್. ಆರ್. ಟಿ. ಸಿ.ಯ ಬಗ್ಗೆ ಹೇಳುವುದಾದರೆ ನಿಜವಾಗಿಯೂ ಅದು ನಷ್ಟದಲ್ಲಿಲ್ಲ. ಯಾವ ಸಾರಿಗೆ ಸಂಸ್ಥೆಯೂ ಕೂಡ ತನ್ನ ಒಟ್ಟು ಆದಾಯದಲ್ಲಿ ೧೭½ ಪರ್ಸೆಂಟ್‌ನ್ನು ರಾಜ್ಯ ಸರ್ಕಾರಕ್ಕೆ ಕೊಡುವುದಿಲ್ಲ. ಖಾಸಗೀ ಬಸ್‌ನವರು ೧೦ ಪರ್ಸೆಂಟ್ ಕೊಡುತ್ತಾರೆ, ನಾವು ೧೭½ ಪರ್ಸೆಂಟ್ ಕೊಡುತ್ತಿದ್ದೇವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪಾಸ್ ಕೊಟ್ಟಿದ್ದೇವೆ ಇದಕ್ಕಾಗಿ ಸುಮಾರು ೩೨ ಕೋಟಿ ರೂಪಾಯಿ ಖರ್ಚಾಗುತ್ತದೆ. ಇದನ್ನು ಮಾನ್ಯ ಸಚಿವರು ಗಮನದಲ್ಲಿಟ್ಟುಕೊಳ್ಳಬೇಕು. ಸಾರಿಗೆ ಸಂಸ್ಥೆಯಲ್ಲಿ ನಷ್ಟವಾಗುತ್ತಿದೆ ಅದರಿಂದ ಅಲ್ಲಿಯ ಅಧಿಕಾರಿಗಳು ಸರಿಯಿಲ್ಲ ಎಂದು ಹೇಳುವುದು ಬೇಡ. ರಾಜ್ಯದಲ್ಲಿರತಕ್ಕ ೯೦ ಕೆ.ಎಸ್.ಆರ್.ಟಿ.ಸಿ. ಡಿಪೋಗಳ ಪೈಕಿ ೪೫ರಲ್ಲಿ ನಷ್ಟವಾದರೆ ಇನ್ನು ೪೫ ಆದರೂ ಏತಕ್ಕೆ ಲಾಭದಲ್ಲಿ ನಡೆಯಬಾರದು. ಇತ್ತೀಚೆಗೆ ಶಿವಮೊಗ್ಗ ನಗರದಲ್ಲಿ ಸಾರಿಗೆಗೆ ಎಂದು ಕೊಟ್ಟರಂತೆ. ಇದು ಇನ್ನೂ ಪ್ರಾರಂಭವೋ ಏನೋ ಗೊತ್ತಿಲ್ಲ. ನಾನಾದರೂ ಹೇಳುತ್ತೇನೆ, ದಯವಿಟ್ಟು ಈ ತತ್ವಕ್ಕೆ ನೀವು ಹೋಗಬೇಡಿ. ದೊಡ್ಡ ಅನಾಹುತವಾಗುತ್ತದೆ. ಮಾನ್ಯ ಕೆ. ಹೆಚ್. ಪಾಟೀಲರು ನಮಗಿಂತ, ನಿಮಗಿಂತ ಹೆಚ್ಚು ಅನುಭವ ಇರತಕ್ಕವರು ಮಾತನಾಡಿದ್ದಾರೆ. ನಾವು ಆ ಕಡೆ ಕುಳಿತಿದ್ದಾಗ ಇದೇ ರೀತಿ ಮಾತನಾಡಿ ನಮ್ಮ ಅಧಿಕಾರವನ್ನು ಕಳೆದುಕೊಂಡೆವು. ಅದೇ ರೀತಿ ಇನ್ನೂ ಕೆಲವರು ಅಧಿಕಾರವನ್ನು ಕಳೆದುಕೊಂಡರು. ಸಮಯದ ಅಭಾವವಿರುವುದರಿಂದ ನಾನು ಎಲ್ಲವನ್ನೂ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಒಟ್ಟಾರೆ ಇಷ್ಟುಮಾತ್ರ ಹೇಳಬಯಸುತ್ತೇನೆ ನಾವೆಲ್ಲರೂ ಪಕ್ಷಭೇದವನ್ನು ಬಿಟ್ಟು ಕೆಲಸ ಮಾಡಬೇಕು. ಆಡಳಿತದಲ್ಲಿ ಬಿಗಿಯನ್ನು ತರುತ್ತೇವೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಬಹಳ ಸಂತೋಷ. ನಾವು ಯಾರೂ ಕೂಡ ಅದರಲ್ಲಿ ಕೈ ಹಾಕುವುದಕ್ಕೆ ಹೋಗುವುದಿಲ್ಲ. ದಕ್ಷತೆಯಿಂದ ಅವರು ಕೆಲಸ ಮಾಡಲಿ. ಆದರೆ ಸಾರ್ವಜನಿಕ ಉದ್ದಿಮೆಗಳಿಗೆ ಮಾತ್ರ ಕೈಹಾಕಬೇಡಿ, ಖಾಸಗೀಕರಣಕ್ಕೆ ದಯವಿಟ್ಟು ಹೋಗಬೇಡಿ. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ ನಿಮ್ಮ ಬಗ್ಗೆಯೂ ಕೂಡ ಗುಸುಗುಸು ಮಾತುಗಳು ಪ್ರಾರಂಭವಾಗಿವೆ. ದಯವಿಟ್ಟು ಅದಕ್ಕೆ ಅವಕಾಶ ಕೊಡಬೇಡಿ.

೩–೦೦ ಪಿ. ಎಂ.

ಇನ್ನು ಉದ್ಯೋಗ ಅವಕಾಶದ ಬಗ್ಗೆ ತಮ್ಮ ಬಜೆಟ್‌ನಲ್ಲಿ ಇದೆ. ಜವಹಾರ್ ರೋಜ್‌ಗಾರ್ ಯೋಜನೆ ಎಂದು ಹೇಳಿದ್ದೀರಿ. ಪಂಡಿತ್ ಜವಹಾರ್‌ಲಾಲ್ ನೆಹರೂರವರ ಬಗ್ಗೆ ನಾವೆಲ್ಲಾ ಪುಸ್ತಕಗಳನ್ನು ಓದಿದ್ದೇವೆ. ಬಹಳ ದೂರದಿಂದ ಅವರನ್ನು ನೋಡಿದ್ದೇವೆ. ಬಹಳ ದೊಡ್ಡ ವ್ಯಕ್ತಿಗಳು ಎಂದು ನಾವು ತಿಳಿದುಕೊಂಡಿದ್ದೇವೆ, ಅವರ ಹೆಸರನ್ನು ಎನ್‌ಆರ್‌ಇಪಿ, ಆರ್‌ಎಲ್‌ಇಜಿಪಿ ಗೆ ಕೊಟ್ಟುಕೊಂಡು ಜವಹಾರ್‌ಲಾಲ್ ರೋಜ್‌ಗಾರ್ ಯೋಜನೆ ಎಂದು ಮಾಡಿದ್ದೀರಿ. ಆದರೆ ಅವಕ್ಕೂ ರೋಜ್‌ಗಾರ್ ಯೋಜನೆಗೂ ವಿದ್ಯಾವಂತ ಮಕ್ಕಳ ನಿರುದ್ಯೋಗಕ್ಕೂ ಏನು ಸಂಬಂಧ ? ಅದೆಲ್ಲಾದರೂ ಸಾಧ್ಯವೆ ? ಅದು ಸಾಧ್ಯವೇ ಇಲ್ಲ. ಅದನ್ನು ಮುಂದುವರಿಸಬೇಕು. ನಾವು ನಿಮಗೆ ಸಹಕಾರ ಕೊಡುತ್ತೇವೆ, ಯೋಜನಾ ಆಯೋಗದಿಂದ ಕೇಂದ್ರ ಸರ್ಕಾರದಿಂದ ಏನು ಸಹಾಯ ಬೇಕು ಅದನ್ನು ಮಾಡಲಿಕ್ಕೆ ನಾವು ನಿಮ್ಮ ಜೊತೆಯಲ್ಲಿ ಬರುತ್ತೇವೆ. ೪-೫ ಒಳ್ಳೆಯ ಕೆಲಸ ಮಾಡಿದ್ದೀರಿ ರೆವಿನ್ಯೂ ಭೂಮಿಯಲ್ಲಿರತಕ್ಕಂಥ ಕಟ್ಟಡಗಳನ್ನು ಸಕ್ರಮ ಮಾಡುತ್ತೇವೆಂದು ಹೇಳಿದ್ದೀರಿ. ಅದಕ್ಕೆ ಅಭಿನಂದಿಸುತ್ತೇನೆ. ಸರ್ಕಾರಕ್ಕೆ ದುಡ್ಡು ಸಹ ಬರುತ್ತದೆ. ಅದನ್ನು ಬೇಗ ಮಾಡಿ. ಅದಕ್ಕೆ ಅನೇಕ ಅಡಚಣೆಗಳು ಬಂದವು. ಮಾಡಬೇಕೆಂದು ಮನಸ್ಸು ಇದ್ದರೂ ನಮ್ಮ ಕೈಯಲ್ಲಿ ಮಾಡಲಾಗಲಿಲ್ಲ ನಾವು ವಿಫಲರಾಗಿದ್ದೇವೆ, ನೀವು ಮಾಡಿ ನಗರ ಪ್ರದೇಶದ ಖಾಲಿ ಜಮೀನಿನ ಮೇಲೆ ಇಂತಹ್ಯಂಥ ತೆರಿಗೆ ... ಕೋಟಿ ರೂಪಾಯಿ ಎಂದು ಹೇಳಿದ್ದೀರಿ. ಅದು ಇನ್ನು ಹೆಚ್ಚಾಗುತ್ತದೆ. ಇದನ್ನು ಮಾಡಬೇಕು. ಆವತ್ತು ಏನಾಗುತ್ತಿದೆ ಸ್ಪೆಕ್ಯುಲೇಶನ್ ಬಹಳ ಜಾಸ್ತಿಯಾಗುತ್ತಿದೆ. ೭೦–೯೦ ಸೈಟನ್ನು ಬಿ.ಡಿ.ಎ ನಲ್ಲಿ ಒಂದು ಲಕ್ಷಕ್ಕೆ ತೆಗೆದುಕೊಂಡರೆ ಅದನ್ನು ೮–೧೦ ಲಕ್ಷ ರೂಪಾಯಿಗಳಿಗೆ ಮಾರುತ್ತಿದ್ದಾರೆ. ಆದ್ದರಿಂದಾಗಿ ನೀವು ಟ್ಯಾಕ್ಸೇಷನ್ ಮಾಡಬೇಕೆಂದು ಏನು ಹೇಳಿದ್ದೀರಿ ಇದು ಸರಿ ನೀವು ಮಾಡಿರತಕ್ಕಂಥದ್ದು. ಅದರ

ಜೊತೆಗೆ ಹೈದರಾಬಾದ್ ಅಭಿವೃದ್ಧಿಗೆ ಹಣವನ್ನು ಇಟ್ಟಿದ್ದೀರಿ. ನನ್ನ ಒಂದೇ ಒಂದು ವಿನಂತಿ ಎಂದರೆ ಬಳ್ಳಾರಿ ಜಿಲ್ಲೆಯನ್ನು ಅದಕ್ಕೆ ಸೇರಿಸಲೇಬೇಕು. ಬೀದರ್ ರಾಯಚೂರು, ಗುಲ್ಬರ್ಗಾ ಜನಕ್ಕೆ ಎಲ್ಲಾ ರೀತಿಯಿಂದ ಸಹಕಾರವನ್ನು ಕೊಡಬೇಕು. ಅವರನ್ನು ಮೇಲಕ್ಕೆ ಎತ್ತಲಿಕ್ಕೆ ಪ್ರಯತ್ನ ಮಾಡಬೇಕು. ಅದನ್ನು ನಾನು ಅಭಿನಂದಿಸಿ, ಗಡಿ ಪ್ರದೇಶದ ಅಭಿವೃದ್ಧಿ ಯೋಜನೆಗೆ ಇದು ಅಷ್ಟೇ ಮುಖ್ಯವಾಗಿರ ತಕ್ಕಂಥ ಒಂದು ಅಂಶ. ಇವತ್ತು ನಾನು ಬೇರೆ ಗಡಿಗಳು ಬಹಳ ಸೂಕ್ಷ್ಮ ಎಂದು ಹೇಳಿದೆ. ಆದರೆ ಬೆಳಗಾವಿಯಲ್ಲಿರತಕ್ಕಂಥ ಗಡಿ ಏನು ಇದೆ ಆ ಗಡಿ ಪ್ರದೇಶದ ಜನಗಳ ಭಾವನೆ ನಿಮಗೆ ಗೊತ್ತಿದೆ. ೪-೫ ಜನ ಆ ಮಿತ್ರರು ಇದ್ದಿದ್ದರೆ ಬಹಳ ಚೆನ್ನಾಗಿ ಇರುತ್ತಿತ್ತು. ಮಾನ್ಯ ಮುಖ್ಯಮಂತ್ರಿಗಳು ಗಂಡು ಧ್ವನಿಯಿಂದ ಹೇಳಿದ್ದಾರೆ ಮಹಾಜನ್ ಆಯೋಗದ ತೀರ್ಪು ಕೊನೆ ತೀರ್ಪು ಎಂದು ಹೇಳಿ, ಅದನ್ನು ನಾನು ಮೆಚ್ಚುತ್ತೇನೆ. ಆದರೆ ಅಲ್ಲಿ ಕೆಲವು ಜನ ಸತತವಾಗಿ ಗೆದ್ದು ಬರಬೇಕಾದರೆ ಕಾರಣ ಏನು? ಆದರೆ ಎಲ್ಲಾ ಗಡಿಗಳಲ್ಲೂ ಹಾಗೆ ಇಲ್ಲ. ಈವತ್ತು ಬೀದರ್ ಜಿಲ್ಲೆಯಲ್ಲಿರತಕ್ಕಂಥ ಗಡಿ ಪ್ರದೇಶದ ಜನ ಸಂಪೂರ್ಣವಾಗಿ ನಮ್ಮ ಜೊತೆಯಲ್ಲಿ ವಿಲೀನ ಆಗಿದ್ದಾರೆ. ತಮಗೆ ಗೊತ್ತಿರಬಹುದು. ಎಂ. ಇ. ಎಸ್ ನವರು ಒಂದು ಸಹಿತ ಗೆಲ್ಲುತ್ತಿಲ್ಲ. ಯಾವುದೋ ಕಾಲದಲ್ಲಿ ಗೆಲ್ಲುತ್ತಿದ್ದರು. ಕಾರವಾರ ಜಿಲ್ಲೆಯಲ್ಲೂ ಅಷ್ಟೆ. ನಿಮ್ಮ ಪಾರ್ಟಿ ಗೆದ್ದಿರಬಹುದು, ನಮ್ಮ ಪಾರ್ಟಿ ಗೆದ್ದಿರಬಹುದು. ಆದರೆ ಅವರು ಮಾತ್ರ ಗೆಲ್ಲಲಿಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಒಂದಿಷ್ಟು ಹಣವನ್ನು ಕೊಡಬೇಕೆಂದು ತಾವು ಪ್ರಯತ್ನ ಮಾಡುತ್ತಿದ್ದೀರಿ. ನಾನು ಇದಕ್ಕೆ ಅಭಿನಂದಿಸುತ್ತೇನೆ. ಇನ್ನು ಹೆಚ್ಚಿನ ಹಣ ಕೊಡಿ. ಅವರು ಹೊಟ್ಟೆಗಿಲ್ಲದೆ ಜೀವನ ಮಾಡುತ್ತಿದ್ದಾರೆ. ನಮ್ಮನ್ನು ಹೇಳುವವರು ಕೇಳುವವರು ಇದ್ದಾರೆಂದು ಆ ಪ್ರದೇಶದ ಜನರಿಗೆ ಒಂದು ಭಾವನೆ ಬರಬೇಕು. ಇದನ್ನು ನಾನು ಅಭಿನಂದಿಸುತ್ತೇನೆ.

ಪಂಚಾಯತಿ ರಾಜ್ಯದ ಬಗ್ಗೆ ನಮ್ಮಲ್ಲಿ ಅನೇಕ ಜನ ಸದಸ್ಯರು ಮಾತನಾಡುತ್ತಾ ಕೆಲವರು ಸರಿ, ಕೆಲವರು ತಪ್ಪು ಎನ್ನುವ ಮಾತನ್ನು ಆಡಿದ್ದಾರೆ. ನಾನು ಅವರ ಭಾಷಣದ ಬಗ್ಗೆ ವಿಶ್ಲೇಷಣೆ ಮಾಡಲಿಕ್ಕೆ ಹೋಗುವುದಿಲ್ಲ. ಆಯವ್ಯಯ ಪತ್ರದಲ್ಲಿ ಇದನ್ನು ನಾವು ನಂಬುತ್ತೇವೆಂದು ತಾವು ಹೇಳಿದ್ದೀರಿ, ನಿಮ್ಮ ಪಕ್ಷದ ಅಧ್ಯಕ್ಷರು ರಾಷ್ಟ್ರೀಯ ನಾಯಕರು ಈ ಮಾತನ್ನು ಹೇಳಿದ್ದಾರೆ ಆದ್ದರಿಂದ ನಿಮಗೆ ನಾವು ಅಭಿನಂದಿಸಬೇಕಾದ ಅಗತ್ಯವಿಲ್ಲ. ಏಕೆಂದರೆ ನಾವು ನೀವು ಅಧಿಕಾರದಿಂದ ಬಂದವರು. ಆದರೆ ಕೆಲವರಿಗೆ ಪಾಳೈಗಾರಿಕೆ ಪ್ರವೃತ್ತಿ ಇದೆ ನಾವು ಇದಾದತಕ್ಷಣ ನಮಗೆ ಎಲ್ಲಾ ಅಧಿಕಾರಬೇಕು, ನಾವು ಹೇಳಿದಹಾಗೆ ತಾಲ್ಲೂಕಿನಲ್ಲಿ ನಡೆಯಬೇಕೆಂದು ಹೇಳುವುದಲ್ಲ ಚೌಕಂಭದ ವ್ಯವಸ್ಥೆಯಲ್ಲಿ ನಂಬಿಕೆ ಇರತಕ್ಕಂಥ ಜನರಿಗೆ ಯಾವ ರೀತಿ ಓಟನ್ನು ಕೊಟ್ಟು ಗೆಲ್ಲಿಸಿದ್ದಾರೆ ಅದೇರೀತಿ ಬೇರೆ ಪ್ರತಿನಿಧಿಗಳಿಗೂ ಓಟನ್ನು ಕೊಟ್ಟು ಗೆಲ್ಲಿಸಿದ್ದಾರನ್ನುವ ಪ್ರಜ್ಞೆ ಇರಬೇಕು. ನಾನು ಈ ಸಂದರ್ಭದಲ್ಲಿ ಮಾನ್ಯ ಬಸವಲಿಂಗಪ್ಪನವರು ನಿಮ್ಮ ಸಹೋದ್ಯೋಗಿಗಳು ಅವರು ಇರಬೇಕಾಗಿತ್ತು ನಾನು ಕೇಳಿಕೊಂಡಿದ್ದೆ ನೀವು ಇರಬೇಕೆಂದು ಹೇಳಿ. ಅವರು ಅನೇಕ ಸಂದರ್ಭಗಳಲ್ಲಿ ಮಾತನಾಡುತ್ತಾ ಒಬ್ಬ ಕಾಂಟ್ರವರ್ಶಿಯಲ್ ಮಿನಿಸ್ಟರ್ ನಾನಾಗಬೇಕೆಂದು ಹೊರಟ್ಟಿದ್ದಾರೆ. ಅಧಿಕಾರವನ್ನು ವರ್ಜಿತ ಮಾಡಬೇಕು. ಹಿಂದುಳಿದ ವರ್ಗದವರಿಗೆ ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳಿಗೆ ಪ್ರಧಾನರ ಹುದ್ದೆಯನ್ನು ಉಪಪ್ರಧಾನರ ಹುದ್ದೆಯನ್ನು ಜಿಲ್ಲಾ ಪರಿಷತ್ ಅಧ್ಯಕ್ಷರ ಹುದ್ದೆಯನ್ನು ಮೀಸಲಾತಿ ಮಾಡಬೇಕು, ನಾವು ಬಹಳ ಮುಖ್ಯವಾಗಿ ಮಾಡಲಾಗಲಿಲ್ಲ. ಆದರೂ ನೀವು ಬದಲಾವಣೆಯನ್ನು ಮಾಡಿ. ನಾವು ಸ್ವಾಗತ ಮಾಡುತ್ತೇವೆ. ಸಹಕಾರವನ್ನು ಕೊಡುತ್ತೇವೆ. ಆದರೆ ಇಡೀ ವ್ಯವಸ್ಥೆ ತಪ್ಪು ಎಂದು ಹೇಳತಕ್ಕಂಥದ್ದು ಸರಿಯಲ್ಲ. ಭ್ರಷ್ಟಾಚಾರದ ಬಗ್ಗೆ......

ಶ್ರೀ ಬಿ.ಕೆ. ಶಿವಕುಮಾರ್.—ತಾವು ನಗರ ಪಾಲಿಕೆ ಪಂಚಾಯತ್ ಬಿಲ್ ತಂದಾಗ ಕೇಂದ್ರದಲ್ಲಿ ಏನ ಮಾಡಿದ್ದಾರೆಂಬುದು ತಮಗೆ ಗೊತ್ತಿರಬಹುದು. ನಾವು ಮೀಸಲಾತಿ ಉಪಾಧ್ಯಕ್ಷರನ್ನು ಅಧ್ಯಕ್ಷರನ್ನು ಮಾಡಬೇಕೆಂದು ಹೊರಟಂತ ಜನ. ಅದನ್ನು ತಾವು ವಿರೋಧ ಮಾಡಿದಂಥ ಜನ.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಭ್ರಷ್ಟಾಚಾರದ ಬಗ್ಗೆ ಹೇಳುವುದಾದರೆ ಭ್ರಷ್ಟಾಚಾರ ಮೇಲಿನ ಹಂತದಲ್ಲೂ ಇದೆ, ಕೆಳಗಿನ ಹಂತದಲ್ಲೂ ಇದೆ. ಇಲ್ಲವೆಂದರೆ ನಾವು ಮೂರ್ಖರಾಗುತ್ತೇವೆ. ಅದನ್ನು ತಡೆಗಟ್ಟುತ್ತೇವೆಂದು ಹೇಳಿದ್ದೀರಿ, ಸ್ವಾಗತಿಸುತ್ತೇನೆ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳು ಬಂದಮೇಲೆ ಜಗಳಗಳು ಜಾಸ್ತಿಯಾಗಿರಬಹುದು. ತಾಲ್ಲೂಕು ಬೋರ್ಡುಗಳಿದ್ದಾಗ ಸೊಸೈಟಿಗಳಲ್ಲಿ ಜಗಳ ಆಗುವುದಿಲ್ಲವೆ? ಅಲ್ಲಿ ಸದಸ್ಯರನ್ನು ಎತ್ತಿ ಕೊಂಡೆ ಹೋಗುತ್ತಾರೆ. ಆದ್ದರಿಂದ ಇಡೀ ವ್ಯವಸ್ಥೆಯನ್ನು ಟೀಕಿಸುವುದು ಸರಿಯಲ್ಲ. ಹರಿಜನ ಗಿರಿಜನರಿಗೆ ಜಿಲ್ಲಾ ಪರಿಷತ್ತಿನ ಅಧ್ಯಕ್ಷರು...

ಶ್ರೀ ಎಂ. ರಾಜಶೇಖರ ಮೂರ್ತಿ.—ಬಡ್ಜೆಟ್ ಸ್ಪೀಚನ್ನು ನೋಡಿ, ಅದನ್ನು ಟೀಕೆ ಮಾಡಿಲ್ಲ, ಸ್ವಾಗತಿಸಿದ್ದೇವೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.— ಪ್ರಧಾನರ ಮತ್ತು ಉಪ ಪ್ರಧಾನರ ಮೀಸಲಾತಿ ಮಾಡಬೇಕೆಂದು ಹೇಳುತ್ತೇನೆ. ನಿರ್ಮಲ ಗ್ರಾಮೀಣಾ ಯೋಜನೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಸೀರೆ ಬಟ್ಟೆ ಪುಸ್ತಕ ವಿತರಣೆ ಬಗ್ಗೆ ಕಟುವಾಗಿ ಟೀಕೆಗಳು ಬಂದಿವೆ. ನಿಮ್ಮ ೨೦ ಅಂಶಗಳ ಕಾರ್ಯಕ್ರಮದ ಪ್ರಕಾರ ಕೊಡತಕ್ಕದ್ದು, ಭಗವದ್ಗೀತೆ, ಖುರಾನ್, ಬೈಬಲ್ ಎಂದು ಘೋಷಣೆ ಮಾಡಿಕೊಂಡು ಬಂದಿದ್ದೀರಿ. ವಿತರಣೆಯಲ್ಲಿ ಅನ್ಯಾಯವಾಗಿರಬಹುದು. ಹಸಿರು ಕಾರ್ಡ್ ಹಂಚಿರುವುದು ಸರಿ ಎಂದು ಹೇಳಲಿಲ್ಲ. ಬಡವರಿಗೆ ಸಿಕ್ಕಿಲ್ಲ, ಬಲ್ಲಿದರಿಗೆ ಸಿಕ್ಕಿದೆ. ದಯವಿಟ್ಟು ಈ ಕಾರ್ಯಕ್ರಮಗಳ ಬಗ್ಗೆ ಪುನರ್ಪರಿಶೀಲನೆ ಮಾಡಿ. ಸೀರೆ ಹಂಚತಕ್ಕದ್ದನ್ನು ನಾನು ಒಪ್ಪುತ್ತೇನೆ. ಆದರೆ ನಿಮ್ಮ ಪಕ್ಷದ ಸದಸ್ಯರು ಭಾಷಣ ಮಾಡುವಾಗ ಎರಡು ಗಜ ಸೀರೆಯನ್ನು ನೀರಿಗೆ ಹಾಕಿದರೆ ಒಂದು ಗಜ ಆಗುತ್ತದೆಂದರು, ಅಂಥವರ ಕೈಗಳನ್ನು ಕತ್ತರಿಸಿ. ಆದರೆ ಬಡವರ ಕಷ್ಟವನ್ನು ಯೋಚನೆ ಮಾಡಿ. ಒಂದು ಹಿಡಿ ಅಕ್ಕಿ ಸಿಕ್ಕದೆ ಇರತಕ್ಕ ಜನರು ಇದ್ದಾರೆ. ಅಂಥವರಿಗೆ ಇವೆರಡನ್ನು ಕೊಡುವುದನ್ನು ಉಳಿಸಿಕೊಂಡಿರುವುದಕ್ಕೆ ಅಭಿನಂದಿಸುತ್ತೇನೆ. ಹಸಿರು ಕಾರ್ಡಿನಲ್ಲಿ ಸಿಗುವ ಅಕ್ಕಿಯ ಬೆಲೆ ಕೇಜಿಗೆ ೨.೨೦ ಪೈಸೆ ಆಗಿದೆ ಎಂದು ಕೇಳಿದ್ದೇನೆ. ಆ ರೀತಿ ಆಗಿದ್ದರೆ ಅನ್ಯಾಯ. ಅದನ್ನು ಕಡಿಮೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಗ್ರಾನೈಟ್ ಕಲ್ಲಿನ ಬಗ್ಗೆ ಹೇಳುವುದಾದರೆ, ಇದರಿಂದ ೧೦ ಕೋಟಿ ರೂಪಾಯಿಗಳಷ್ಟು ಹೆಚ್ಚು ಹಣ ಸಂಪಾದನೆ ಮಾಡಬಹುದು. ಇದರಿಂದ ರಾಜ್ಯಕ್ಕೆ ಹೇಗೆ ಹಣ ಬರಬಹುದೆಂಬುದನ್ನು ವಿಚಾರ ಮಾಡಿದ್ದೀರಿ. ಗ್ರಾನೈಟ್ ಕಲ್ಲಿನ ವ್ಯವಹಾರವನ್ನು ದಯವಿಟ್ಟು ರಾಷ್ಟ್ರೀಕರಣ ಮಾಡಿ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಾವು ಮಾಡಿದ್ದಕ್ಕಾಗಿಲ್ಲವೆಂಬುದನ್ನು ಒಪ್ಪುತ್ತೇನೆ. ನೀವು ಮಾಡಿ. ಹತ್ತು ಅಲ್ಲ ನೂರು ಕೋಟಿ ರೂಪಾಯಿ ಹಣ ಅದರಿಂದ ಸಿಗುತ್ತದೆ. ಇವತ್ತು ಅದರ ದರೋಡೆ ನಡೆಯುತ್ತಿದೆ. ಮೈಸೂರು ಮಿನರಲ್ಸ್ ಲಿಮಿಟೆಡ್ ಏನಿದೆ ಅಲ್ಲಿ ಅದಕ್ಷ ಅಧಿಕಾರಿಗಳಿದ್ದರೆ ಅವರನ್ನು ತೆಗೆದುಹಾಕಿ ಬುದ್ಧಿ ಕಲಿಸಿ. ಅವರೇ ಸಂಪೂರ್ಣ ಗ್ರಾನೈಟ್ ಅನ್ನು ಕಳುಹಿಸತಕ್ಕ ವ್ಯವಸ್ಥೆಯನ್ನು ಜಾರಿಗೆ ತನ್ನಿ. ನನಗೆ ತಿಳಿದಿರುವ ಹಾಗೆ ಇದರ ಬಗ್ಗೆ ಸರ್ಕಾರ ಬೇರೆ ರೀತಿಯಲ್ಲಿ ವಿಚಾರ ಮಾಡುತ್ತಿದೆ, ಖಾಸಗೀಯವರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಚನೆ ಮಾಡಿದ್ದಾರೆಂದು ಕೇಳಿದ್ದೇನೆ. ಅದಕ್ಕೆ ದಯವಿಟ್ಟು ಅವಕಾಶ ಕೊಡಬಾರದೆಂದು ಹೇಳುತ್ತೇನೆ. ಸ್ಟೈಪೆಂಡರಿ ಪದವೀಧರರ ನೇಮಕದ ಬಗ್ಗೆ ಹೇಳುವುದಾದರೆ, ನಿಮ್ಮ ಪಕ್ಷದ ಸರ್ಕಾರ ಇದ್ದಾಗ ಆದ ನೇಮಕ ಅದು. ನಾವು ಸುಮಾರು ೩-೪ ಸಾವಿರ ಜನರಿಗೆ ಕೆಲಸ ಕೊಟ್ಟಿದ್ದೇವೆ. ನೀವು ಅವರ ಸಮಸ್ಯೆಯನ್ನು ಸಂಪೂರ್ಣವಾಗಿ ಬಗೆಹರಿಸಿದರೆ ಅಭಿನಂದನೆ. ಹರಿಜನ ಗಿರಿಜನ ಹಾಗೂ ಹಿಂದುಳಿದವರ ಮಕ್ಕಳ ಊಟೋಪಚಾರದ ವೆಚ್ಚವನ್ನು ಹೆಚ್ಚು ಮಾಡುತ್ತಿದ್ದೀರಿ, ಸಂತೋಷ. ಕನ್ನಡ ವಿಶ್ವವಿದ್ಯಾನಿಲಯ ತೆರೆಯುವ ವಿಚಾರವನ್ನು ಸ್ವಾಗತಿಸುತ್ತೇನೆ. ಕನ್ನಡಕ್ಕೆ ಉತ್ತೇಜನ ಕೊಡುತ್ತೇವೆಂದು ಹೇಳಿದ್ದೀರಿ. ಮಂತ್ರಿಮಂಡಲದಲ್ಲಿರತಕ್ಕ ನಿಮ್ಮ ಸಹೋದ್ಯೋಗಿಗಳು ಒಬ್ಬರು ಕನ್ನಡಕ್ಕೆ ಆದ್ಯತೆ ಕೊಡುವ ಬಗ್ಗೆ ವಿರೋಧ ಇದ್ದಾರೆಂದು ತಿಳಿದಿದ್ದೇನೆ. ನಮ್ಮ ಮಂತ್ರಿ ಮಂಡಲದಲ್ಲೂ ಅವರು ಸದಸ್ಯರಾಗಿದ್ದರು. ಕನ್ನಡದ ವಿಚಾರದಲ್ಲಿ ಹೊರಗಡೆ ಬಂದರು. ನಿಜವಾಗಿ ನಿಮಗೆ ಕನ್ನಡದ ಬಗ್ಗೆ ನಂಬಿಕೆ ಇದ್ದರೆ ಯಾವ ರೀತಿ ಆದ್ಯತೆ ಕೊಡುತ್ತೀರೋ ಗೊತ್ತಿಲ್ಲ. ಕನ್ನಡ ಕಾವಲು ಸಮಿತಿಯನ್ನು ರದ್ದು ಮಾಡಿದ್ದೀರಿ. ರಾಜ್ಯಪಾಲರ ಆಡಳಿತದಲ್ಲಿ ಹೈದರಾಬಾದ್ ಆಡಳಿತ ಆಗಿತ್ತು. ಕನ್ನಡಕ್ಕೆ ಆದ್ಯತೆ ಇರಲೇ ಇಲ್ಲ. ಮುಂಚೆಯೇ ಅಧಿಕಾರಿಗಳು ಕನ್ನಡದಲ್ಲಿ ಹೆಸರು ಬರೆಯುವುದಕ್ಕೆ ಹಿಂದುಮುಂದು ನೋಡುತ್ತಾರೆ. ರಾಜ್ಯಪಾಲರ ಆಡಳಿತದಲ್ಲಿ ಕನ್ನಡಕ್ಕೆ ಪೆಟ್ಟಾಗಿದೆ. ದಯವಿಟ್ಟು ಪುನಃ ಕನ್ನಡ ಕಾವಲು ಸಮಿತಿಯನ್ನು ಪ್ರಾರಂಭಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ. ಮುಖ್ಯವಾಗಿ ಬಜೆಟ್‌ನಲ್ಲಿ ಏರಿಸಿರತಕ್ಕ ತೆರಿಗೆಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ಜೂಜಿನ ಮೇಲೆ ತೆರಿಗೆ ಹಾಕಿದ್ದೀರಿ, ಅದನ್ನು ಸ್ವಾಗತಿಸುತ್ತೇನೆ.

ಆದರೆ ಪಾದರಕ್ಷೆಗಳ ಮೇಲೆ ಹಾಕಿರುವ ತೆರಿಗೆಯನ್ನು ತೆಗೆಯಬೇಕು. ಇದನ್ನು ಏತಕ್ಕೆ ಹಾಕಿದ್ದಾರೋ ನನಗೆ ಅರ್ಥವಾಗುತ್ತಿಲ್ಲ. ಮಾನ್ಯ ಬಂಗಾರಪ್ಪನವರು ಮಾತನಾಡುವಾಗ ಮಾನ್ಯ ಸಚಿವರು ವಿವರಣೆ ಕೊಟ್ಟಿದ್ದಾರೆ. ಅದರೂ ಸಮಂಜಸವಲ್ಲ ಅದು. ದಯವಿಟ್ಟು ಇದರ ಬಗ್ಗೆ ಪುನರಾಲೋಚನೆ ಮಾಡಬೇಕು: ಕನ್ಸೈನ್‌ಮೆಂಟ್‌ನಲ್ಲಿ ಸುಳ್ಳು ಹೇಳಿ ದುರುಪಯೋಗ ಮಾಡಿಕೊಳ್ಳುತ್ತಾರೆಂದು ಅಧಿಕಾರಿಗಳು ಹೇಳುತ್ತಾರೆ. ಆದರೂ ಇದರ ಬಗ್ಗೆ ಯೋಚನೆ ಮಾಡಿ ಕಬ್ಬಿನ ಮೇಲೆ ತೆರಿಗೆ ಹಾಕಿದ್ದೀರಿ. ನಾಳೆ ಉತ್ತರ ಕೊಡುವಾಗ ಸಹಿಯಾದ ಉತ್ತರ ಕೊಡುತ್ತಾರೆಂದು ನಂಬಿದ್ದೇನೆ. ಇಲ್ಲದೇ ಇದ್ದರೆ ರೈತರು ಬಹಳ ಶಾಪ ಹಾಕುತ್ತಾರೆ. ಸ್ಟಾಂಪುಗಳು ಮತ್ತು ನೋಂದಣಿ ಬಾಬಿನಿಂದ ೨೦ ಕೋಟಿ ರೂಪಾಯಿ ಆದಾಯ ನಿರೀಕ್ಷೆ ಮಾಡಿದ್ದೀರಿ. ಅದು ಖಂಡಿತ ಬರುವುದಿಲ್ಲ. ಸಿಂಪಲ್ ಮಾರ್ಟಿಗೇಜ್‌ಗೆ ೩ ಪರ್ಸೆಂಟಿನಿಂದ ೫ ಪರ್ಸೆಂಟಿಗೆ ಏರಿಸಿದ್ದೀರಿ. ಸಾಮಾನ್ಯವಾದ ರೈತ ಒಂದು ಸಾವಿರ ರೂಪಾಯಿ ಸಾಲ ತೆಗೆದುಕೊಳ್ಳಬೇಕಾದರೆ ೩೦ ರೂಪಾಯಿ ಕೊಡುವ

ವನ್ನು ೫೦ ರೂಪಾಯಿ ಕೊಡಬೇಕು. ೪೫ ರೂಪಾಯಿ ಕೊಡಬೇಕಾದವನು ೮೦ ರೂಪಾಯಿ ಕೊಡಬೇಕಾಗಿದೆ. ಅಧಿಕಾರಿಗಳನ್ನು ಕರೆಯಿಸಿ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ. ಸಿಂಪಲ್ ಮಾರ್ಟಗೇಜ್ ಶುಲ್ಕವನ್ನು ಏರಿಸುವುದಕ್ಕೆ ಹೋಗಬಾರದು ಎಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮೋಟಾರು ವಾಹನಗಳ ತೆರಿಗೆ ಹಾಕಿದ್ದೀರಿ ನನಗೆ ಆಶ್ಚರ್ಯವಾಗುತ್ತದೆ ಯಾವ ಅಧಿಕಾರಿಗಳು ಈ ರೀತಿ ನಿಮಗೆ ಗೈಡ್ ಮಾಡಿದರೋ ನನಗೆ ಅರ್ಥವಾಗುತ್ತಾ ಇಲ್ಲ. ವಿದೇಶೀ ಕಾರುಗಳ ಮೇಲೆ ತೆರಿಗೆ ಹಾಕಿದ್ದೀರಿ. ಅದರ ಬಗ್ಗೆ ನನ್ನ ತಕರಾರಿಲ್ಲ. ದೊಡ್ಡ ದೊಡ್ಡ ಕಾರುಗಳ ಮೇಲೆ ಹಾಕಿ, ಆದರೆ ಹೋಗಿ ಹೋಗಿ ೫೦ ಸಿ. ಸಿ ಮೊಪೆಡ್ಸ್ ಮೇಲೆ ಏತಕ್ಕೆ ಹಾಕಿದ್ದೀರಿ? ೧೯೮೯ನೇ ಜುಲೈನಲ್ಲಿ ಕೇಂದ್ರ ಸರ್ಕಾರದವರು ಮೋಟಾರ್ ವೆಹಿಕಲ್ಸ್ ಆಕ್ಟ್‌ಗೆ ತಿದ್ದುಪಡಿ ಮಾಡಿ ೩೫ ಕ್ಯುಬಿಕ್ ಸಿಸಿ ಇರತಕ್ಕ ಮೊಪೆಡ್‌ಗಳಿಗೆ ಟ್ಯಾಕ್ಸ್ ಹಾಕಬಾರದು ಎಂದು ಹೇಳಿದ್ದಾರೆ. ದಯವಿಟ್ಟು ಈಗ ತಾವು ಮಾಡಿರುವುದನ್ನು ಕಡಿಮೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಅಧಿಕಾರಿಗಳು ನಿಮಗೆ ಮಿಸ್‌ಗೈಡ್ ಮಾಡಿದ್ದಾರೆಂದು ನಾನು ಅಂದುಕೊಂಡಿದ್ದೇನೆ.

SRI M. RAJASHEKAR MURTHY.--I am not misguided.

SRI P. G. R. SINDHYA.--Atleast you are guided. ಬ್ಲಾಕ್ ಅಂಡ್ ಎಲ್ಲೋ ಟ್ಯಾಕ್ಸಿ ಥಿಯಾಟರ್ಸ್‌ಗೆ ಕಡಿಮೆ ಮಾಡಿದ್ದೇವೆಂದು ಹೇಳಿದ್ದಾರೆ. ಕರ್ನಾಟಕದಲ್ಲಿ ಇದು ಇರುವುದು ನಾಲ್ಕುನೂರೋ, ಐದುನೂರೋ. ಇದರಿಂದ ಯಾವ ಉಪಯೋಗವೂ ಇಲ್ಲ. ೫೦ ಸಿ. ಸಿ. ಮೊಪೆಡ್ಸ್ ಮೇಲೆ ೮೫೦ ರಿಂದ ೧೫೦೦ ರೂಪಾಯಿಗೆ ತೆರಿಗೆ ಏರಿಸುವುದರಿಂದ ನಿಮಗೆ ಬರತಕ್ಕ ಆದಾಯ ಕಡಿಮೆಯಾಗುತ್ತದೆ. ಕರ್ನಾಟಕದಲ್ಲಿರತಕ್ಕ ಎಲ್ಲಾ ಬಾರ್ಡರ್ ಜಿಲ್ಲೆಯವರು ಕರ್ನಾಟಕದಲ್ಲಿದ್ದರೂ ಹೊರ ರಾಜ್ಯಗಳಿಗೆ ಹೋಗಿ ರಿಜಿಸ್ಟ್ರೇಷನ್ ಮಾಡಿಸುತ್ತಾರೆ. ಮಹಾರಾಷ್ಟ್ರ ಬಾರ್ಡರ್‌ನಲ್ಲಿರುವವರು ಮಹಾರಾಷ್ಟ್ರದಲ್ಲಿ, ಆಂಧ್ರ ಬಾರ್ಡರ್‌ನಲ್ಲಿರುವವರು ಆಂಧ್ರಕ್ಕೆ ಹೋಗಿ ಮತ್ತು ತಮಿಳುನಾಡು ಬಾರ್ಡರ್‌ನಲ್ಲಿರುವವರು ತಮಿಳುನಾಡಿಗೆ ಹೋಗಿ ರಿಜಿಸ್ಟ್ರೇಷನ್ ಮಾಡಿಸಿಕೊಂಡು ಬರುತ್ತಾರೆ. ಏಕೆಂದರೆ ಅಲ್ಲಿ ಟ್ಯಾಕ್ಸ್ ಕಡಿಮೆ ಇದೆ. ನಾನು ಡಿಪಾರ್ಟ್‌ಮೆಂಟಲ್ ಆಫೀಸರ್ಸ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರು ಎಷ್ಟು ಅಂತ ಎನ್‌ಫೋರ್ಸ್ ಮಾಡುತ್ತಾರೆ? ಆದ್ದರಿಂದ ದಯವಿಟ್ಟು ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅಬ್ಕಾರಿ ಇಲಾಖೆ ಬಗ್ಗೆ ಹೇಳುವುದಾದರೆ ಹೆಂಡವನ್ನು ರದ್ದು ಮಾಡಿದ್ದೀರಿ. ನಮ್ಮ ಸರ್ಕಾರ ಇದ್ದಾಗ ೭ ಜಿಲ್ಲೆಗಳಲ್ಲಿ ರದ್ದು ಮಾಡಿದ್ದೆವು. ಅದನ್ನು ತತ್ವಶ; ಸರಿ ಎಂದು ಒಪ್ಪುತ್ತೇನೆ. ಆದರೆ ಮಾನ್ಯ ಮಂತ್ರಿಗಳು ಗಮನಿಸಬೇಕಾಗಿದೆ ಹೆಂಡವನ್ನು ರದ್ದು ಮಾಡುವುದರಿಂದಾಗಿ ಸುಮಾರು ೬೫–೭೦ ಸಾವಿರ ಜನ ಕಾರ್ಮಿಕರಿಗೆ ಪರ್ಯಾಯ ವ್ಯವಸ್ಥೆ ಇಲ್ಲ. ಅವರೆಲ್ಲಾ ಬಹಳ ಬಡವರು. ಅವರಿಗೆ ಬೇರೆ ಗತಿ ಇಲ್ಲ. ಓಟರ್ಸ್ ಲಿಸ್ಟ್‌ನಲ್ಲಿ ಅವರ ಹೆಸರೇ ಇರುವುದಿಲ್ಲ. ಏಕೆಂದರೆ ಕಂಟ್ರಾಕ್ಟರ್ ಹೋದಕಡೆ ಎಲ್ಲಾ ಅವರು ಹೋಗುತ್ತಿರುತ್ತಾರೆ, ಒಂದೇ ಕಡೆ ಇರುವುದಿಲ್ಲ. ಇದರ ಬಗ್ಗೆ ದಕ್ಷಿಣ ಕನ್ನಡ ಜಿಲ್ಲೆಯ ಶಾಸಕರು ಏನೇನು ಹೇಳಿದ್ದಾರೋ ಅದನ್ನು ವಿಚಾರ ಮಾಡಿ. ಬಹಳ ತೊಂದರೆಯಾಗುತ್ತಿದೆ ಅದರಿಂದ

(ಶ್ರೀಮತಿ ರೇಣುಕಾ ರಾಜೇಂದ್ರನ್ ಅವರು ಪೀಠವನ್ನಲಂಕರಿಸಿದರು)

ಇದನ್ನು ಹಂತ ಹಂತವಾಗಿ ಮಾಡಬೇಕು ಎಂದು ನಾನು ಹೇಳುತ್ತೇನೆ. ಹಂತಹಂತವಾಗಿ ಮಾಡುವುದರಿಂದ ಅವರೂ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುತ್ತಾರೆ. ಪ್ರತಿ ಮಾತಿಗೂ ನೀವು ಈ ರೀತಿ ನೀವು ಏನು ಮಾಡಿಲ್ಲ, ನೀವು ಏನೂ ಮಾಡಿಲ್ಲ ಎಂದರೆ ನಾವೇನೂ ಮಾತನಾಡುವುದಕ್ಕೆ ಆಗುವುದಿಲ್ಲ. ನಾವು ಮಾಡುವುದನ್ನು ಮಾಡಿದ್ದೇವೆ. ನಾವು ಮಾಡದೇ ಇರುವುದನ್ನು ನೀವು ಮಾಡಬೇಕು. ಹಂತಹಂತವಾಗಿ ಮಾಡಿದರೆ ಅದರಿಂದ ಉಪಯೋಗವಾಗುತ್ತದೆ. ಇನ್ನು ತಾವು ಸಾರಾಯಿ ಮೇಲೆ ಮಲ್ಟಿ ಪರ್‌ಪಸ್ ಟ್ಯಾಕ್ಸ್ ತೆಗೆದು ಸಿಂಗಲ್ ಪಾಯಿಂಟ್ ಮಾಡಿದ್ದೀರಿ. ಲಾಸ್ಟ್ ಪಾಯಿಂಟ್‌ನಲ್ಲಿ ೩ ಪರ್ಸೆಂಟ್ ಇದ್ದು ಮೊದಲ ಪಾಯಿಂಟ್‌ನಲ್ಲಿ ಬೇರೆ ದರ ಇತ್ತು. ಈ ರೀತಿ ಸಿಂಗಲ್ ಪಾಯಿಂಟ್ ಮಾಡಿದರೆ ಸಾರಾಯಿಯಲ್ಲಿ ಸೆಕೆಂಡ್ಸ್ ಮಾಡುವುದು ಬಹಳ ಸುಲಭವಾಗುತ್ತದೆ. ಈ ರೀತಿ ಸಿಂಗಲ್ ಪಾಯಿಂಟ್ ಮಾಡುವುದರಿಂದ ಸೆಕೆಂಡ್ಸ್ ಆಗುವುದರಲ್ಲಿ ಸಂಶಯ ಇಲ್ಲ ಎಂಬುದನ್ನು ತಾವು ಗಮನದಲ್ಲಿ ಇಟ್ಟುಕೊಳ್ಳಬೇಕೆಂದು ಹೇಳುತ್ತೇನೆ. ಇದನ್ನು ೨೦ ಪರ್ಸೆಂಟ್ ಮಾಡಿರುವದರಿಂದ ಸೆಕೆಂಡ್ಸ್ ಹೆಚ್ಚಾಗುತ್ತದೆ. ಸರಿಯಾಗಿ ಅಕೌಂಟ್ಸ್ ಸಿಗುವುದಿಲ್ಲ. ಆದ್ದರಿಂದ ಇದನ್ನು ಪುನರ್‌ವಿಮರ್ಶೆ ಮಾಡಿ ಎಂದು ಹೇಳುತ್ತೇನೆ. ಈಗ ಐ. ಎಂ. ಎಫ್. ಎಲ್. ಗೆ ೩೫ ರಿಂದ ೪೦ ಪರ್ಸೆಂಟ್ ಮಾಡಿದ್ದೀರಿ. ಅದರ ಆಧಾರದ ಮೇಲೆ ಇದಕ್ಕೂ ಹೆಚ್ಚು ಮಾಡಿ. ಆದ್ದರಿಂದ ಇದನ್ನು ಪುನರ್‌ವಿಮರ್ಶೆ ಮಾಡಬೇಕೆಂದು

ಕೇಳುತ್ತೇನೆ. ನಾನು ಯಾವರೀತಿಯ ಆಪಾದನೆಯನ್ನೂ ಈ ಸಂದರ್ಭದಲ್ಲ ಮಾಡುವುದಿಲ್ಲ, ಕಳೆದ ಚುನಾವಣೆಯಲ್ಲಿ ನಾವು ತಪ್ಪು ಮಾಡಿದ್ದೇವೆನ್ನುವ ಭಾವನೆ ಇತ್ತು, ಮಾನ್ಯ ಬೈರೇಗೌಡರು ನಿನ್ನೆ ಮಾತನಾಡುವಾಗ ೧ ದಿವಸಕ್ಕೆ ೨ ಕೋಟಿ ರೂಪಾಯಿ ಹಣ ಸೋರಿಹೋಗುತ್ತಿತ್ತೆಂದು ಹೇಳಿದರು. ಹಾಗಾದರೆ ಈಗ ನಿಮ್ಮ ಸರ್ಕಾರ ಬಂದು ೧೦೦ ದಿವಸಗಳು ಆಗಿವೆ. ಇವಕ್ಕೆ ಮುಂಚೆ ೨೪೦ ದಿವಸಗಳು ರಾಜ್ಯಪಾಲರ ಆಡಳಿತ ಇತ್ತು. ಎಂದರೆ ಒಟ್ಟು ೩೪೦ ದಿವಸಗಳಲ್ಲಿ ದಿನಕ್ಕೆ ೨ ಕೋಟಿ ರೂಪಾಯಿ ಎಂದರೆ ೬೮೦ ಕೋಟಿ ರೂಪಾಯಿ ಆಯಿತು. ಈ ಹಣ ಎಲ್ಲಿ? ಇದರಿಂದ ರೈತರ ಸಾಲವನ್ನು ಮನ್ನಾ ಮಾಡಬಹುದಿತ್ತು. ಹಳ್ಳಿಗಳಿಗೆ ರಸ್ತೆ ಸೌಲಭ್ಯ ಒದಗಿಸಬಹುದಿತ್ತು. ದಯಮಾಡಿ ಈ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕೆಂದು ಹೇಳುತ್ತೇನೆ. ಇವತ್ತು ಎಂ. ಎಸ್. ಐ. ಎಲ್. ನವರಿಗೆ ಸೀಲ್ ಹಾಕುವುದಕ್ಕೆ ಕೊಟ್ಟಿದ್ದೀರಿ, ಮತ್ತೆ ಎಂ. ಎಸ್, ಐ. ಎಲ್ ನ್ನು ಜಾಯಿಂಟ್ ಸೆಕ್ಟಾರ್ ಮಾಡಬೇಕೆಂದು ಹೊರಟಿದ್ದೀರೆಂಬ ವಿಷಯ ನನ್ನ ಕಿವಿಗೆ ಬಿತ್ತು. ತಾವು ಹಾಗೆ ಮಾಡುವುದಕ್ಕೆ ಹೋಗಬೇಡಿ. ತಾವು ಹಾಗೆ ಮಾಡಲು ಹೊರಟರೆ ಜನರಿಗೆ ನಿಮ್ಮ ಮೇಲೆ ಸಂಶಯ ಬರುತ್ತದೆ. ಹಾಗೆ ಮಾಡದಿದ್ದರೆ ಸಂತೋಷ. ಮತ್ತೆ ಮತ್ತೆ ಎಕ್ಸ್‌ಪೋರ್ಟ್ ಮಾಡತಕ್ಕ ಐಎಂಎಫ್‌ಎಲ್ ಮೇಲೆ ಎಕ್ಸ್‌ಪೋರ್ಟ್ ಡ್ಯೂಟಿ ಹಾಕಿದ್ದೀರಿ. ಒಂದು ಬಲ್ಕ್ ಲೀಟರ್‌ಗೆ ೧ ರೂಪಾಯಿ ಇದ್ದುದನ್ನು ೨೦ ರೂಪಾಯಿಗೆ ಏರಿಸಿದ್ದೀರಿ. ಹೀಗೂ ಇದರಿಂದ ೩೮ ಕೋಟಿ ರೂಪಾಯಿ ಆದಾಯ ಬರುತ್ತದೆಂದು ಹೇಳಿದ್ದೀರಿ. ಮಾನ್ಯ ಅಧ್ಯಕ್ಷಿಣಿಯವರೇ ಇದಕ್ಕೆ ನಾನು ಪ್ರಾರಂಭದಲ್ಲಿಯೇ ನೀವು ಯೋಚನೆ ಮಾಡಿರತಕ್ಕ ೧೮೦ ಕೋಟಿ ರೂಪಾಯಿ ಸಂಪನ್ಮೂಲ ಆಗುವುದಿಲ್ಲ ಎಂದು ಹೇಳಿದೆ. ತಾವು ಇವತ್ತು ಯೋಚನೆ ಮಾಡಿ. ಈ ಬಾಬಿನಲ್ಲಿ ೩೨ ಕೋಟಿ ರೂಪಾಯಿಗಳು ಖಂಡಿತಾ ಬರುವುದಿಲ್ಲ. ಈ ಒಂದು ಅಧಿಕಾರವನ್ನು ಏಪ್ರಿಲ್ ೧ನೇ ತಾರೀಖಿನಿಂದ ಜಾರಿಗೆ ತರುವುದಾದರೆ ಅವತ್ತಿನಿಂದ ಡಿಸ್ಟಿಲರಿಗಳನ್ನು ಹೊರರಾಜ್ಯಕ್ಕೆ ಕಳುಹಿಸಿ ಲಿಕ್ಕರನ್ನು ಬಂದ್ ಮಾಡುತ್ತಾರೆ. ಇದುವರೆಗೆ ಅದರಿಂದ ಬರುತ್ತಿದ್ದ ಅಲ್ಪಸ್ವಲ್ಪ ಹಣ ಕೂಡಾ ಬರುವುದು ನಿಲ್ಲುತ್ತದೆಂದು ನಾನು ಹೇಳುತ್ತೇನೆ, ಇವತ್ತು ಮಹಾರಾಷ್ಟ್ರ ಹಾಗೂ ಉತ್ತರಪ್ರದೇಶದವರು ನಮಗೆ ಟಫ್ ಕಾಂಪಿಟೇಷನ್ ಕೊಡುತ್ತಾ ಬಂದಿದ್ದಾರೆ.

ಉತ್ತರ ಪ್ರದೇಶದವರು ಪರ್ ಕೇಸ್ ಎಕ್ಸ್‌ಪೋರ್ಟ್ ಡ್ಯೂಟಿಯನ್ನು ೬ ರೂಪಾಯಿ ಹಾಕಿದ್ದಾರೆ ಮಹಾರಾಷ್ಟ್ರದವರು ಪರ್ ಕೇಸ್ ಎಕ್ಸ್‌ಪೋರ್ಟ್ ಡ್ಯೂಟಿಯನ್ನು ೪ ೧/೨ ರೂಪಾಯಿ ಹಾಕಿದ್ದಾರೆ. ತಮಿಳುನಾಡಿನವರು ಪರ್ ಕೇಸ್ ಎಕ್ಸ್‌ಪೋರ್ಟ್ ಡ್ಯೂಟಿಯನ್ನು ೪ರೂಪಾಯಿ ಐದು ಪೈಸೆಯನ್ನು ಹಾಕಿದ್ದಾರೆ. ಬಹಳ ಜಾಸ್ತಿ ಅಂದರೆ ಬಿಹಾರದವರು ೧೩ ೧/೨ ರೂಪಾಯಿ ಪರ್ ಕೇಸ್ ಹಾದ್ದಾರೆ ಬಲ್ಕ್ ಲೀಟರ ಗೆ ಹಾಕಿಲ್ಲ. ಕರ್ನಾಟಕ ರಾಜ್ಯದಲ್ಲಿ ೧೮೦ ರೂಪಾಯಿಗಳನ್ನು ನಾವು ಹಾಕಿದ್ದೇವೆ. ಇದರಿಂದ ಇಡೀ ಎಕ್ಸ್‌ಪೋರ್ಟ್ ಮಾಡತಕ್ಕ ಮಾಲುಗಳು ಏನಿವೆ ಅವುಗಳಿಗೆ ಕರ್ನಾಟಕ ರಾಜ್ಯದಲ್ಲಿ ಹೊರೆ ಬೀಳುತ್ತದೆ. ನಿಮಗೆ ಅಧಿಕಾರಿಗಳು ಹೇಳಿರಬಹುದು, ಮಾಲುಗಳನ್ನು ಹೊರಗೆ ಕಳುಹಿಸುವುದಿಲ್ಲ ವೆಂದು. ಸೆಕೆಂಡ್ಸ್ ತಂದು ಇಲ್ಲಿಯೇ ಮಾರಾಟ ಮಾಡುತ್ತಾರೆ, ಅದನ್ನು ನಾವು ಇಲ್ಲವೆಂದು ಹೇಳು ವುದಿಲ್ಲ. ವಾಸ್ತವಾಂಶವನ್ನು ತಾವು ದಯವಿಟ್ಟು ಯೋಚನೆ ಮಾಡಿ. ಇವತ್ತು ಇದನ್ನು ನೀವು ಬಂದ್ ಮಾಡುವುದರಿಂದ ರಾಜ್ಯದ ಬೊಕ್ಕಸಕ್ಕೆ ಹಣ ಬರುತ್ತದೆಂದು ತಾವೇನು ನಿರೀಕ್ಷೆ ಮಾಡಿದ್ದೀರಿ ಅದು ಖಂಡಿತವಾಗಿಯೂ ಬರುವುದಿಲ್ಲವೆನ್ನುವುದನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇವತ್ತು ನಮ್ಮ ರಾಜ್ಯಕ್ಕೆ ಹೊರರಾಜ್ಯಗಳಿಂದ Indian-made Foreign Liquor made outside Karnataka ಬರುತ್ತಿದೆ. ಅದರ ಮೇಲೆ ಎಕ್ಸೈಜ್ ಡ್ಯೂಟಿಯನ್ನು ಹಾಕುತ್ತೀರಿ. ಅದನ್ನು ತಾವು ಇಂಪೋರ್ಟ್ ಡ್ಯೂಟಿಯೆಂದು ಹೇಳುತ್ತೀರಿ ಅದನ್ನು ಹೆಚ್ಚು ಮಾಡಬಾರದು. ಅದನ್ನು ಹೆಚ್ಚು ಮಾಡುವುದಕ್ಕೆ ಹೋಗಿಲ್ಲ. ಅದನ್ನು ತಾವು ಹೆಚ್ಚು ಮಾಡಿಲ್ಲ, ಇದರ ಅರ್ಥ ಏನು ಬರುತ್ತದೆಂಬುದನ್ನು ತಾವು ಯೋಚನೆ ಮಾಡಿ. ಇಂಪೋರ್ಟ್ ಡ್ಯೂಟಿಯನ್ನು ಜಾಸ್ತಿ ಮಾಡಿಲ್ಲ. ಎಕ್ಸ್‌ಪೋರ್ಟ್ ಡ್ಯೂಟಿಯನ್ನು ಜಾಸ್ತಿ ಮಾಡಿದ್ದೀರಿ. ಅಂದರೆ ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ತಮ್ಮ ಪ್ರೊಡಕ್ಷನ್ ಮಾಡಬಾರದು, ಆರೇಳು ಸಾವಿರ ಕಾರ್ಮಿಕರು ಅಲ್ಲಿ ಕೆಲಸ ಮಾಡುತ್ತಿದ್ದಾರೆನ್ನು ವುದನ್ನು ತಾವು ಗಮನದಲ್ಲಿಟ್ಟುಕೊಂಡು ಅದಕ್ಕೆ ರಾಜಕಾರಣವನ್ನು ಬೆರೆಸತಕ್ಕದ್ದು ಅಷ್ಟೊಂದು ಸರಿಯಾದುದಲ್ಲವೆಂದು ನನ್ನ ಅಭಿಪ್ರಾಯ. ಅಬಕಾರಿ ಇಲಾಖೆಯಿಂದ ೬೦ ಕೋಟಿ ಹೆಚ್ಚು ಹಣ ಬರುತ್ತದನ್ನುವ ಅಭಿಪ್ರಾಯವನ್ನು ಇಟ್ಟುಕೊಂಡಿದ್ದೀರಿ, ಅದು ಖಂಡಿತವಾಗಿಯೂ ಸಾಧ್ಯವಿಲ್ಲ ವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದುವರೆಗೆ ಸೆಕೆಂಡ್ಸ್ ಮಾತನಾಡುತ್ತಿದ್ದರು. ಈಗ ಥರ್ಡ್ ಶುರುವಾಗುತ್ತದೆ. ಫಸ್ಟ್, ಸೆಕೆಂಡ್, ಥರ್ಡ್ ಥರ್ಡ್ ಅಂದರೆ ಏನು? ಸಾರಾಯಿಗೆ ಬೇರೆ ಬೇರೆ ಬಣ್ಣಗಳನ್ನು ಹಾಕುತ್ತಾರೆ ವಿಸ್ಕಿ ಎಸೆನ್ಸ್ ಇಟ್ಟುಕೊಂಡು, ನಾನು ಕುಡಿಯುವವನಲ್ಲ, I am a teetotaller ನಾನು ನೋಡಿರುವುದನ್ನು ಹೇಳುತ್ತಿದ್ದೇನೆ. ತೋಟಗಳಲ್ಲಿ ಎಸೆನ್ಸ್‌ಗಳನ್ನು ಹಾಕುತ್ತಾರೆ ಆ ಮೇಲೆ ಅದನ್ನು ಮಾರಾಟ ಮಾಡುತ್ತಿದ್ದಾರೆ. ಮತ್ತೆ ಪಾಂಡಿಚೇರಿಯಲ್ಲಿ ಮಾಡತಕ್ಕ

ದ್ದನ್ನು ಹೊರ ರಾಜ್ಯಗಳಲ್ಲಿ ಮಾಡತಕ್ಕದ್ದನ್ನು ಇಂಪೋರ್ಟ್ ಡ್ಯೂಟಿ ಕೊಟ್ಟು ಬರುವುದು ಇರಲಿ, ಆ ಮಾಲುಗಳನ್ನು ಬಹಳ ಹೆಚ್ಚಿನ ಸಂಖ್ಯೆಯಲ್ಲಿ ಅದನ್ನು ಅಧಿಕಾರಿಗಳು ತಡೆಗಟ್ಟುತ್ತಾರೆಂದರೆ ಅದು ಬಿಸಿಲುಗುದುರೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ, ಅದು ಸಾಧ್ಯವಿಲ್ಲ. ಗೋವಾದಿಂದ ಪಾಂಡುಚೇರಿಗೆ ಲೈಸೆನ್ಸ್ ತೆಗೆದುಕೊಳ್ಳುತ್ತಾರೆ. ದಾವಣಗೆರೆ, ಚಿತ್ರದುರ್ಗ, ತುಮಕೂರು, ಬೆಂಗಳೂರು ಮತ್ತು ಮೈಸೂರು ಇಲ್ಲಿ ಮಾರಾಟ ಮಾಡುತ್ತಾರೆ, ಇದು ಆಗುತ್ತಿರುವುದು. ದಯವಿಟ್ಟು ಇದರ ಬಗ್ಗೆ ಯೋಚನೆ ಮಾಡಿ, ಇದನ್ನು ಪುನರ್ ವಿಮರ್ಶೆ ಮಾಡಬೇಕೆಂದು ಹೇಳಿ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದಲ್ಲಿ ಆಗತಕ್ಕ ಐಎಮ್‌ಎಫ್‌ಎಲ್ ಒಂದು ಬಾಟ್ಲಿಗೆ ೪೭ ರೂಪಾಯಿ ಇದ್ದದ್ದು ಇವತ್ತು ೮೭ ರೂಪಾಯಿಯಾಗುತ್ತದೆ.

ಛೇರ್ಮನ್.—ಮಾನ್ಯ ಸದಸ್ಯರಾದ ಸಿಂಧ್ಯಾರವರು ತಮಗೆ ಇನ್ನು ಎಷ್ಟು ಸಮಯ ಬೇಕಾಗುತ್ತದೆ? ತಾವು ಬೇಗ ಮುಗಿಸಿ ಇನ್ನೂ ಬಹಳ ಜನ ಸದಸ್ಯರು ಮಾತನಾಡಬೇಕಾಗಿದೆ,

ಶ್ರೀ ವಾಟಾಳ್‌ನಾಗರಾಜ್,—ನಾನು ಮಾತನಾಡಲಿಕ್ಕೆ ಅವಕಾಶ ಸಿಗುತ್ತದೆಂದು ಹೇಳಿದರೆ ನೆಮ್ಮದಿಯಿಂದ ಕುಳಿತುಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ನನಗೆ ಸ್ವಲ್ಪ ಸಮಯ ಅವಕಾಶ ಕೊಡಿ ಬೇಗ ಮುಗಿಸುತ್ತೇನೆ ಡಿಫೆನ್ಸ್‌ಗೆ ಕೊಡತಕ್ಕದ್ದು ಏನಿದೆ ಅದರ ಮೇಲೂ ಸಹಿತ ಜಾಸ್ತಿ ಹಾಕಿದ್ದೀರಿ, ಒಂದು ಸಾರಿ ಬಿಸಿನೆಸ್ ಕಳೆದುಕೊಂಡರೆ, ಮತ್ತೆ ಬಿಸಿನೆಸ್ ಪ್ರಾರಂಭ ಮಾಡುವುದಕ್ಕೆ ಸಾಧ್ಯವಿಲ್ಲ. ಇದು ಕರ್ನಾಟಕ ರಾಜ್ಯದಿಂದ ಹೊರಟುಹೋಗುತ್ತದೆ ಎನ್ನುವುದು ತಮಗೆ ಗೊತ್ತಿರತಕ್ಕ ವಿಚಾರ. ಉತ್ತರಪ್ರದೇಶ ದವರು, ಇವರು ತಮ್ಮ ಬಿಸಿನೆಸನ್ನು ಕಳೆದುಕೊಳ್ಳಬೇಕೆಂದು ಕುಳಿತುಕೊಂಡು ಕಾಯುತ್ತಿದ್ದಾರೆ. ನಮ್ಮ ಇಂಡಸ್ಟ್ರಿಗಳು ಹಾಳಾಗಿ ಹೋಗುತ್ತವೆ. ಇದನ್ನು ತಾವು ಯೋಚನೆ ಮಾಡಿ. ಬೇರೆ ರಾಜ್ಯಗಳ ಇಂಡಸ್ಟ್ರಿಗಳು ಮುಂದೆ ಬರುತ್ತವೆ. ಸಾರಾಯಿಯ ಮೇಲೆ ತಾವು ೫ ರೂಪಾಯಿ ಇದ್ದದ್ದನ್ನು ೬ ರೂಪಾಯಿಗೆ ಏರಿಸಿದ್ದೀರಿ. ಅದನ್ನು ಇನ್ನು ಏತಕ್ಕೆ ಜಾಸ್ತಿ ಮಾಡಲಿಲ್ಲ? ಅದನ್ನು ತಾವು ಮಾಡಬಹುದಾಗಿತ್ತು, ಜಾಸ್ತಿಮಾಡಿಯೆಂದು ನಾನು ಹೇಳುತ್ತಿಲ್ಲ. ಅಲ್ಲೂ ಸಂಪನ್ಮೂಲಗಳನ್ನು ಹೆಚ್ಚು ಮಾಡಿಕೊಳ್ಳಬಹುದಾಗಿತ್ತು. ಆ ದೃಷ್ಟಿಯಿಂದ ಇವತ್ತು ತಮ್ಮ ಅಬಕಾರಿ ನೀತಿಯನ್ನು ಪುನರ್ ವಿಮರ್ಶೆಮಾಡಿ ಬಹಳ ದೀರ್ಘವಾಗಿ ಯೋಚನೆ ಮಾಡಿ. ನಮ್ಮ ರಾಜ್ಯದಲ್ಲಿ ಆಗತಕ್ಕ ಕೈಗಾರಿಕೆ ಗಳಿಗೆ ಅನುಕೂಲವಾಗತಕ್ಕ ಒಂದು ಹೊಸ ನೀತಿಯನ್ನು ತಾವು ಯೋಚನೆ ಮಾಡಿ ಕೆಲವು ಐಟಂಗಳ ಮೇಲೆ ತೆರಿಗೆಯನ್ನು ಕಡಿಮೆ ಮಾಡುವುದಕ್ಕೆ ಆಗದೇ ಇರಬಹುದು. ಹೆಂಡವನ್ನು ರದ್ದು ಮಾಡುವವರು ಇದ್ದೀರಿ. ಅದರಿಂದ ಸಾರಾಯಿ ಬೆಲೆ ಹೆಚ್ಚು ಆಗುತ್ತದೆ. ಹೊರರಾಜ್ಯಗಳಿಂದ ಬರತಕ್ಕದ್ದು ಜಾಸ್ತಿಯಾಗುತ್ತದೆ, ಕಳ್ಳಬಟ್ಟಿ ಜಾಸ್ತಿಯಾಗುತ್ತದೆ ತಮಿಳುನಾಡು, ಒರಿಸ್ಸಾ ನಮ್ಮಲ್ಲಿ ಕಳ್ಳಬಟ್ಟಿದುರಂತಗಳನ್ನು ನಾವು ನೋಡುತ್ತಿದ್ದೇವೆ. ಈ ದೃಷ್ಟಿಯಿಂದ ನಮ್ಮಲ್ಲಿಯೂ ಒಂದು ಚೀಪ್ ಲಿಕ್ಕರ್‌ನ್ನು ತಯಾರುಮಾಡಬೇಕು ತಮಿಳುನಾಡಿನಲ್ಲಿ ಜನತಾ ರಮ್ ಅಂತ ಹೇಳಿ ಮಾಡಿದ್ದಾರೆ ಅದರ ಮೇಲಿರತಕ್ಕಂಥ ಡ್ಯೂಟಿಯನ್ನು ರದ್ದುಮಾಡಿ ಅದನ್ನು ಕೊಡತಕ್ಕಂಥ ವಿಚಾರ ಮಾಡಿ. ಎಂ. ಎಸ್. ಐ. ಎಲ್. ಮೂಲಕ ಚಾನಲೈಸ್ ಮಾಡಬೇಕೆಂದು ಏನು ಇದ್ದೀರಿ, ಅದನ್ನು ನಾನು ವಿರೋಧ ಮಾಡುತ್ತಿಲ್ಲ. ಇದರಲ್ಲಿ ಸೀಲು ಹಾಕತಕ್ಕಂಥ ಕ್ರಮವನ್ನು ಸಹಿತ ನಾನು ವಿರೋಧ ಮಾಡುತ್ತಿಲ್ಲ. ಆದರೆ ಡಿಸ್ಟಲರಿಗಳನ್ನು ಸಂಪೂರ್ಣವಾಗಿ ಮುಗಿಸತಕ್ಕಂಥ ಒಂದು ಪ್ರಯತ್ನ ಏನಿದೆ, ಇದು ಸಮಂಜಸ ಅಲ್ಲ. ತಾವು ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ ತಮ್ಮ ಬಜೆಟ್‌ನಲ್ಲಿ ಹಿಂದುಳಿದ ವರ್ಗಗಳು ಮತ್ತು ಕಾರ್ಮಿಕರು ಇವರ ಬಗ್ಗೆ ಏನಾದರೂ ಮಾತು ಇರಬೇಕಿತ್ತು. ಬ್ಯಾಕ್‌ವರ್ಡ್‌ಕ್ಲಾಸ್ ಕಾರ್ಪೊರೇಷನ್ ಇದೆ. ಮೈನಾರಿಟೀಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ, ಎಸ್‌ಸಿ. ಎಸ್‌ಟಿ ಡೆವಲಪ್‌ಮೆಂಟ್ ಕಾರ್ಪೊರೇಷನ್ ಇದೆ. ಇಂಥಾದಕ್ಕೆ ಸ್ವಲ್ಪ ಹಣ ಕೊಡುತ್ತೇವೆ ಎಂದು ಹೇಳಿದ್ದರೆ ಕೊನೆಯ ಪಕ್ಷ ಈವರ್ಗದ ಜನರ ಸ್ಪಂದನವನ್ನು ಸರ್ಕಾರ ಮಾಡುತ್ತಿದೆ ಎಂದು ಹೇಳಬಹುದಾಗಿತ್ತು. ಅದನ್ನು ತಾವು ಮಾಡುತ್ತಿಲ್ಲ. ಆದ್ದರಿಂದ ನಾನು ಕೊನೆಯದಾಗಿ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ನೀರಾವರಿ ಯೋಜನೆಗಳನ್ನು ಪೂರೈಸಲು ಬೇಕಾದಷ್ಟು ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಒಂದು ಸದನದ ಸಮಿತಿಯನ್ನು ಮಾಡಬೇಕು. ಒಣಭೂಮಿ ಅಭಿವೃದ್ಧಿ ಮಂಡಳಿಗೆ ಹೆಚ್ಚಿನ ಅಧಿಕಾರ ಕೊಡಬೇಕು. ಖಾಸಗೀಕರಣದ ಬಗ್ಗೆ ಯೋಚನೆ ಮಾಡಿರತಕ್ಕದ್ದನ್ನು ಕೈಬಿಡಬೇಕು, ಜಿಲ್ಲಾ ಪರಿಷತ್ ಅಧ್ಯಕ್ಷರು ಉಪಾಧ್ಯಕ್ಷರ ಪ್ರಧಾನರು ಎದ್ದಿಗೆ ಮೀಸಲಾತಿ ಅಧಿಕಾರವನ್ನು ಕೊಡಬೇಕು, ಅಕ್ಕಿ ಬೆಲೆಯನ್ನು ಯಾವುದೇ ಕಾರಣದಿಂದಲೂ ಎರಡು ರೂಪಾಯಿಗಿಂತ ಹೆಚ್ಚು ಮಾಡಬಾರದು ಗ್ರಾನೈಟ್ ಕಲ್ಲಿನ ವ್ಯಾಪಾರದ ರಾಷ್ಟ್ರೀಕರಣ ಮಾಡಬೇಕು. ಕನ್ನಡ ಕಾವಲು ಸಮಿತಿಯನ್ನು ತಾವು ಪುನರ್‌ರಚನೆ ಮಾಡಬೇಕು. ಅಬಕಾರಿ ನೀತಿಯನ್ನು

ಬದಲಾವಣೆ ಮಾಡಬೇಕೆಂದು ನಾನು ಹೇಳಿ ಕೊನೆಯದಾಗಿ ಒಂದು ಅಂಶವನ್ನು ಹೇಳಬೇಕು ಈ ರೇಷ್ಮೆ ವ್ಯವಸಾಯ ಮಾಡತಕ್ಕಂಥ ನಮ್ಮ ರೈತರಿಗೆ ಇವತ್ತಿನ ದಿವಸಗಳಲ್ಲಿ ಬಹಳ ತೊಂದರೆಯಾಗಿದೆ ರೇಷ್ಮೆ ಬೆಲೆ ಕಡಿಮೆ ಬಹಳ ಕಡಿಮೆಯಾಗಿರುತ್ತಿದೆ. ಮಾನ್ಯ ಅಧ್ಯಕ್ಷಣಿಯವರೇ, ತಾವು ಕೂಡ ಈ ಕ್ಷೇತ್ರದಿಂದ ಬರುವವರು. ೧೧೦–೯೫ ರೂಪಾಯಿ ಇದ್ದ ಬೆಲೆ ಇವತ್ತು ೫೫–೬೦ ರೂಪಾಯಿಗೆ ಇಳಿದಿದೆ. ಒಂದು ಕಡೆ ಪವರ್ ಶಾರ್ಟೇಜ್ ನೀರು ಬರುವುದಿಲ್ಲ. ಏನು ಸೊಪ್ಪನ್ನು ಬೆಳೆದರೂ ಒಳ್ಳೆಯ ಹುಳ, ಮೊಟ್ಟೆ ಸಿಗುವುದಿಲ್ಲ. ಕಷ್ಟಪಟ್ಟು ಬೆಳೆಸಿ ನೂರು ಕೆ.ಜಿ. ಗೂಡನ್ನು ತೆಗೆದುಕೊಂಡು ಹೋದರೆ ಒಂದು ಸಾವಿರ ಬರಬೇಕಾಗಿದ್ದಕ್ಕೆ ಐನೂರು ಬರುತ್ತದೆ. ಇದು ನಮಗೆ ಆಗಿರತಕ್ಕಂಥ ತೊಂದರೆ. ಇದನ್ನು ನಿಯಂತ್ರಣ ಮಾಡಲಿಕ್ಕೆ ದಯವಿಟ್ಟು ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ನನಗೆ ಈ ಬಜೆಟನ್ನು ವಿರೋಧ ಮಾಡಬಾರದು ಎಂದು ಮನಸ್ಸು ಇದ್ದರೂ ಸಹಿತ ತಾವು ಏನು ೫೬ ಕೋಟಿ ಖೋತಾ ಬಜೆಟ್ ಆಗುತ್ತದೆ ಎಂದು ಹೇಳುತ್ತೀರಿ ಅದು ಅಲ್ಲ. ತಾವು ಮುಂದಿನ ವರ್ಷ ಕೂಡ ಬಜೆಟ್ ಮಂಡನೆ ಮಾಡುವುದಾದಲ್ಲಿ ಆಗ ೧೫೦ ಕೋಟಿ ಖೋತಾ ಆಗುವುದರಲ್ಲಿ ಯಾವ ಸಂಶಯವೂ ಇಲ್ಲ ಎಂದು ಹೇಳುತ್ತಾ, ತಾವು ಮಾಡಿರುವ ಹಲವಾರು ಒಳ್ಳೆಯ ಕೆಲಸಗಳನ್ನು ನಾನು ಸ್ವಾಗತ ಮಾಡಿದ್ದೇನೆ. ಆದರೆ ಎರಡು–ಮೂರು ನೀತಿಗಳು ಏನಿವೆ ತಾವು ಅದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಹೇಳಿ ಹಿಂದುಳಿದ ವರ್ಗದವರಿಗೆ ವಿಶೇಷವಾಗಿ ಕಾರ್ಮಿಕರ ವಿಚಾರದ ಬಗ್ಗೆ ಏನೂ ಹೇಳದೇ ಇರತಕ್ಕಂಥ ಈ ಬಜೆಟ್‌ಗೆ ಬೆಂಬಲ ಕೊಡಲಿಕ್ಕೆ ಮನಸ್ಸು ಒಪ್ಪುತ್ತಿಲ್ಲ. ಆದ್ದರಿಂದ ಇದನ್ನು ವಿರೋಧ ಮಾಡಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

3–33 p.m.

† SRI QUMURUL ISLAM (Gulbarga).— Madam, Hon. Minister for Finance presented a budget on 16-3-1990. The Hon. Members spoke on the budget and my friend Sri Scindhia in his speech revealed certain points regarding the per capita income of the minorities, scheduled castes, scheduled tribes and backward classes. I want to speak on para 38, which is beautifully worded. But, I want to bring certain points in this House. Hon. Minister has said that minorities, scheduled castes, scheduled tribes and backward classes are the back-bones of this government. But in this budget, regarding 'backbone', there is no mention. And regarding the 20Point Programme, we all welcome it but what about 15 point programme, which was annonnced by the former Prime Minister and which was accepted by the present Prime Minister regarding the development of minorities. There is no mention of the 15 point programme in this budget. Here the total budget is Rs. 1145 crores and it was said, in addition to 53 crores, 40 crores were given to Hyderabad Karnataka areas with 5 crores to the Border Districts. What remains is 1100 crores and out of that 300 crores is the District Allocation, In that we have got 53 crores for the development of Hyderabad-Karnataka area. That means one sixth share and justification was done as far as the sectoral allocation of the budget to Hyderabad-Karnataka area is concerned. But out of 800 crores, there are 20 districts and we get one sixth. How much budget was allocated to the plan schemes regarding Hyderabad-Karnataka area? out of 800 crores, we require 140 crores. I want to know from the Hon. Finance Minister whether 140 crores out of 800 crores were given to Hyderabad-Karnataka area. No. What has been done here is that whatever they want to give in the plan schemes fo

Hyderabad-Karnataka, that has been cut short. And it has been mentioned in para 38 that in addition to that 53 crores, this 40 crores is given. It is just to please this House, just to create an impression. First we want to know whether justice is being done to the Districts of Hyderabad-Karnataka area i.e., Gulbarga, Bidar, Raichur in general allocation and in the sectoral allocation. There are certain criteria for allotting budget, number of schemes like Bennethora, Lower Mullamari and Upper Krishna project which is financed by the World Bank. Whether it is irrigation, whether it is roads, schools, or construction of bridges, all this has been reduced and then in addition to these, they say we have been given 40 crores. Where this 40 crores will be spent? It will be spent only on the plan schemes, where justification was not being done? What the demand of the Hyderabad Karnataka area is that this area has not been developed. So justification should be done in the allocation of the budget. Then, in addition to that, a minimum of 100 crores should be given. In 1986, the Dharmsingh Committee, which was formed recommended that 356 crores should be given for 5 years, i.e., 70 crores per year. Now in the year 1990, we demanded, that is the Hyderabad-Karnataka Samithi demanded that in addition to that, a minimum of Rs. 100 crores should be given. Hence the Government should do the justification in allotting them. So justification was not being done. Only additional 40 crores has been given. Now, all of our friends say that we are against including Bellary. What I wanted is, even 53 and 40 you add it and if you divide by six, we require about Rs. 250 crores. That is called justification and that justification is not there in the budget.

I belong to Gulbarga and this is a Corporation area. Actually Corporations are not having any money with them. Whatever small taxes come, out of that 70% goes to the salary and the people in the city are expecting more. Now, the Hon'ble Chief Minister is also from Gulbarga. But I know even if he orders for small road, the Corporation Commissioner cannot even spend 5.000 or 10.000 rupees. When the elected body was there, till 1989 there was an Executive Engineer. But when the Administrator took charge, the post of Executive Engineer from the Corporation was abolished stating that the Corporation cannot bear the burden of paying salary to the Executive Engineer. Now what is happening is, even for any proposal or estimate for more than 10,000, it has to go to PWD and they have to pay 2%. Recently about 10-15 lakhs estimate has gone to PWD and they have paid more than 32,000 rupees. If you calculate the salary of the Executive Engineer including savings etc., it comes to about 25,000 rupees. Just for 25,000, it has been degraded in the period of the administrator. I want that the post of the Executive Engineer be created in the Corporation which was already there. Otherwise the Corporation, for more than 10,000 rupees estimate, has to send proposals to PWD and it will take a lot

of time and that is my demand as far as this Corporation is concerned. Here in 1978 Octroi was abolished. OK. Then the Entry Tax came and the compensation was fixed. In 1978, what was the income from the Octroi in the Corporations and Town Municipalities and that compensation has to be given every three months by the Government which they are not doing regularly, everybody knows it. Now in 1990, after 12 years, the same compensation is being given to the Corporations. If such thing is there, how the Corporation can get the money. What I wanted is, when this Government is introducing so many taxes why not they introduce the same octroi and abolish Entry Tax. Let the Corporations and Municipalities become independent. Let them have the sources. Lot of money it can get from the octroi. Why not Octroi be introduced and the Entry Tax abolished? This is my demand. I want that the Hon. Minister and the Government should sincerely think on that. I know if you ask the Members, from their heart they will say, whether they are sitting this side or that side, if the Corporations and Municipalities were to survive, we have to introduce again the Octroi. Every member irrespective of party affiliations will say that. Then only the finances of the Corporation will become sound. And this is the feeling of almost all the members to introduce again the Octroi. Why not we have to come forward with that. Three or four States are already having octroi. In Bombay, Octroi tax there I demand here in this House that the octroi has to be introduced and entry tax abolished. One more thing. If any one has to construct a house, he has to give application to the Corporation. In our case, the Gulbarga Corporation, it seems there is proposal that this Corporation is to be converted into a city municipality. Things have come to this stage, within 1½ years. Till five years it was going on, everything was there, executive engineer was there but nothing has come. But since the Administrator came, I do not know. if he has recommended that this Corporation should be converted into a city municipality. And for construction of a house, we have to go before the town planning. In other Corporations, if you go to Mysore, Hubli-Dharwar, in Bangalore, Town Planning Officer is there in the Corporation only. But here there is G.D.A. The man has to apply here and has to go to G.D.A. He has to spend a lot of time for getting CC from the G.D.A.

What I want is that the post should be created for the town planning in the corporation so that one can get his work done through single-window, so that it will be easy for him. It will be helpful to the people. The other point which I want to reveal here is in the Gulbarga Corporatron there is a super market committee and everybody knows and when we had auctioned the plot we got the highest amount, which is the highest one throughout Asia. We had collected more than Rs. 80 lakhs. This money of Gulbarga is credited into the consolidated fund of the Government.

Whenever we want to develop that area and whenever we want to take some schemes in that area, we are not getting it from the government. Our Committee is headed by the Divisional Commissioner, who is the Chairman. That money is being credited to the consolidated fund. For Ring Road we require that money and with that money we wanted to take up the construction of the Ring Road. What we wanted is that the money which was collected from that area should be credited to an autonomous body. It has to be formed and that money should be there so that, that body can utilise it for the development of Gulbarga, because that money was collected from the people of Gulbarga and it should be spent only on the development of the Gulbarga City and that justification is not being done continuously. There is a limit for tolerance. We can quote examples. Here just now so many people have said about Gulbarga. In Gulbarga, there is one District Employment Officer. Gulbarga is having a number of factorses in Shahapur, Vadi, Chittapur and Sedam Cement Factory. But, whenever the employment question, the District Employment Officer is not giving employment cards for appointment in the factories, because it does not come under the purview of the officer. We want the post of the District Employment Officer to be upgraded to the post of an Assistant Director, Employment Exchange so that all the employment in those factories of that district come under the Assistant Director, Employment Exchange. Then only action can be taken and we can get certain jobs. Otherwise our people will never get the job and I strongly demand here in this House that if you want to solve the problem of unemployment to a certain extent as there are number of cement factories. You will have to upgrade the post of the District Employment Officer to the post of Assistant Director, Employment Exchange and those factories can come under the purview of this Officer. Here, I have gone through the revenue budget. In wakfs there are properties. Always the government says that it is very much interested towards the development of the wakfs property so that if the money comes, it will be utilised for the development of the muslims of this State. I wanted to know why the amount of Re. 1 crore which was given last year to the Wakfs Department is reduced to Rs. 92.50 lakhs. People were expecting more. Our senior-most Minister Sri Azeez Sait, Hon. Minister for Revenue, always fighting for the muslims and other communities, who is dynamic for having initiated number of schemes in wakfs. He is under utter failure to get at least Rs. 1.25 crores. We were expecting that at least Re. 1 crores will be continued. But, it has been reduced Rs. 92.50 lakhs. Therefore, I want to tell our Hon. Minister to make note of one more point. There is a Central Revolving Fund Scheme in the Government of India, They are having Rs. 5 crores to Rs. 6 crores to Central Wakfs Fund and through that scheme they give finance to the projects throughout the country. If the

wakfs properties are not in a good condition it will be developed and income can be reduced and then that project will be taken up by the central wakfs department. 6% surcharge is collected. This has been created from the last 5 to 6 years. There are a number of projects in Karnataka. Karnataka is the maximum beneficiary under the scheme. So, I wanted as to why not in the state, such a revolving fund scheme for the development of the wakfs properties in Karnataka be created just like the centre, with Rs. 2 crores or Rs. 3 crores, so that money will be rotated and a number of projects are taken up We can develop wakfs properties that are there in the state and we can earn money from them, and that money can be spent on the educational and economic upliftment of the minorities in the state. I suggest that this scheme be taken up. As far as Minorities Finance Corporation is concerned, there is no mention of it, in the budget. How much money has been allotted to the Minorities Development Corporation? Sri Yahya pointed out that when he was the Minister, per capital income was 6.13 for the muslims which just a little more than vokkaligas and scheduled castes. Now the per capital income of the muslims has not increased 0.4 or 0.5. A number of schemes have come. So many things are there on the paper that we are doing for the minorities, we are doing for the scheduled castes and scheduled tribes. What is the neet result? The net result should be that there should be an increase in the per capita income. But, it remains the same. That means all these schemes are only on the paper. These schemes are not sincerely implemented. If these schemes should have been implemented, really the per capita income of the minorities, backward classes and Scheduled Castes should have been increased. What I wanted to tell the government and the Chief Minister is that the minorities, backward classes and the Scheduled Castes and Tribes are the poorest. He should pay attention to the strict implementation of whatever programmes that are there. He should initiate more programmes for their educational and economic upliftment, because they have also got equal rights in this state. We want that they should live on par wito others with a respectable life. Every citizen should lead a respectable life. Their economic condition should also be improved so that they live with equal respect. This should be the motive of the government.

As far as Urdu is concerned, it is a language which has played a very important role. I can say that the first Indian Mr. Rakesh Sharma, who has gone to the space, talked with the Prime Minister Smt. Indira Gandhi. When Smt. Indira Gandhi asked how Hindusthan looks, he replied 'Sare Jahaanse Achha, Ai Hindusthan Hai Hamara.' That was the Urdu sentence. In that one sentence he expressed his feeling. That language has played a very important role. After 43 years, at least now the Congress says. I. K. Gujral Commission recommendations are there. Sri I. K. Gujral is our

Foreign Minister. The report submitted by him was endorsed, Before he became the Foreign Minister, Bihar and Uttar Pradesh states gave second official language status to Urdu. But, it is most surprising for me here. I can say that it is much painful to everyone who is having a simple love for Urdu that the Chief Minister, who got his education from the Osmania University, who got his education in Urdu, said in the Mangalore that the Government has no proposal here to give the second official language status to Urdu.

For me he said that my manifesto is Quoran, my manifesto is Geetha, my manifesto is Bible and I am going to implement whatever is there in the manifesto, whatever is there in the Bible whatever is there in the Geetha, he is not going to implement. There fore, how can we believe that he has faith in Geetha, Bible and Quoran. When he say that this is the Manifesto of the Karnataka State Pradesh Congress Committee and say that right place will be given to the Urdu Language–when Congress Governments in Bihar and Uttarpradesh have given second offical Status for Urdu Language the Hon'ble Chief Minister in Mangalore in his 'Janavani' programme said my Government has no proposal to accord Second Official Status to Urdu Language–I want to know from theGoverment of Karnataka whether they don't have such proposal. I want a categorical clarification from the Hon'ble ChiefMinister on this point I want to know whether are you going to implement the recommendations of the I. K. Gujral Commission Report. Our demand is that Urdu is to be made Second Official Language in the State. There are some criteria fixed by the Govt. I think in 13 districts they ful fil the criteria fixed by the Commission to make Second Official Language Status and there are districts which have not crossed that criteria. Atleast I would like the Government in those districts where Urdu knowing people have crossed that criteria, in those districts Covernment can declare Second official language Status to Urdu. I want to have a categorical reply on this issue from the Government.

Coming to many other things and certain projects which have been left incomplete I request the Government to complete them early. And then, I feel it is my responsibility as I belong to Muslim League representing minorities, linguistic minorities, religious minorities and also respresenting backward classes to point out that there is no specific mention in the budget for the develop ment of those sections, I request the Government to give more attention to this aspect of the matter.

(MR. SPEAKER in the Chair.)

Then, regarding RTC division in Gulbarga there are only two divisions whereas in Hubli–Dharwad, Mangalore there are three divisions. Ther fore I urge upon the Government to create one more RTC division in Gulbarga and take steps to increase the schedules

and thus help the people of that area to move about without much difficulty. Another thing I want to point out is that there are no bus selters in many places in Gulbarga. People of that area are put to lot of inconvenience and they are asked to stand and wait for the buses in hot sun. Therefore, I request the Government to construct more and more busshelters in Gulbarga.

Now, coming to the end I should also say something about the good steps taken up by the Government in the budget. Regarding regularising the services of stipendiary graduates this is a very good step this Government has taken I must welcome it. The other one is ban on toddy. This is also very good step and I must appreciate the stand taken by the Government. Another good thing they have done is that they have raised boarding charges to the inmates of the Hostels and also construction of 100 maternity wards attached to the PHC. I welcome it. I must appreciate all these good things the Government has announced in the budget. As far as Hyderabad-Karnataka is concerned at page 38 of the budget it has been very beautifully worded and we had very high expectations about this. It was said that in addition to 53 crores 40 crores were given. It is not so. If we see the plan outlay there is no additional amount allotted for the improvement of Hyderabad-Karnataka Area. It remains the same. Being a neglected area. under developed area, more money should have been alloted. Now that the Government is saying that we will definitely do something for improvement of this area I must appreciate the stand taken up by the Government in this regard. With these words I thank the Hon.ble Speaker for having given me an opportunity to speak.

† ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಅಧ್ಯಕ್ಷರೇ ಈ ಮುಂಗಡ ಪತ್ರಕ್ಕೆ ನನ್ನ ವಿರೋಧವನ್ನು ವ್ಯಕ್ತಪಡಿಸುತ್ತ ಕೆಲವು ವಿಚಾರಗಳನ್ನು ಸದನದ ಮುಂದಿಡುವುದಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ. ಇದರಲ್ಲಿ ರೈತರ ಬಗ್ಗೆ ಆಗಲೀ ಕೃಷಿ ಕಾರ್ಮಿಕರ ಬಗ್ಗೆ ಆಗಲೀ ಹಿಂದುಳಿದವರ ಪರಿಶಿಷ್ಟ ಜಾತಿಯವರ ಅಥವಾ ಮಧ್ಯಮ ವರ್ಗದವರ ಬಗ್ಗೆ ಆಗಲೀ ಯಾವುದೇ ತರಹದ ರಿಯಾಯಿತಿಗಳು ಕಾಣುವುದಿಲ್ಲ. ಅವರಿಗೇ ಉತ್ತೇಜನ ಕೊಡುವಂತಹ ಯಾವುದೇ ಕಾರ್ಯಕ್ರಮವವೂ ಕಂಡುಬರುವುದಿಲ್ಲ. ಒಂದು ಮಾತು ಹೇಳಿದ್ದಾರೆ. ೧೯೮೬-೮೭ರಲ್ಲಿ while the State occupied first position in the State on 20 point programme during 1986-87 it has come down to 8th place in December, 1989. ಅಂದರೆ ಯಾವ ಸರ್ಕಾರ ೨೦ ಅಂಶಗಳ ಕಾರ್ಯಕ್ರಮ ಅನುಷ್ಠಾನದಲ್ಲಿ ಇಡೀ ದೇಶದಲ್ಲಿ ಮೊದಲನೆಯ ಸ್ಥಾನದಲ್ಲಿತ್ತೋ ಅದು ರಾಷ್ಟ್ರಪತಿ ಆಳ್ವಿಕೆಯ ಕಾಲದಲ್ಲಿ ೮ನೇ ಸ್ಥಾನಕ್ಕೆ ಬಂದಿದೆ ಎಂದರೆ ಯಾವ ಪ್ರಕಾರ ಅಭಿವೃದ್ಧಿ ಕೆಲಸ ರಾಷ್ಟ್ರಪತಿ ಆಳ್ವಿಕೆಯಲ್ಲಿ ನಡೆದಿದೆಯೆಂದು ಕನ್ನಡದ ಜನತೆ ನಿರ್ಣಯ ಮಾಡಬಹುದಾಗಿದೆ. ಈ ಮುಂಗಡ ಪತ್ರದಲ್ಲಿ ಕೃಷಿ ಬಗ್ಗೆ ನಾನು ತಿಳಿದುಕೊಂಡಿದ್ದ ಹೆಚ್ಚಿನ ಒಂದು ಆದ್ಯತೆ ಕೊಡುತ್ತಾರೆ ಎಂದು ರೈತರಿಗೆ ಸಾಕಷ್ಟು ರಿಯಾಯಿತಿ ಕೊಡಬಹುದೆಂದು, ಆದರೆ ರೈತರಿಗೆ ಕೊಟ್ಟ ರಿಯಾಯಿತಿಗಳನ್ನು ವಾಪಸ್ಸು ಪಡೆದುಕೊಂಡು ಹೊಸ ಯೋಜನೆಯನ್ನು ತರುತ್ತೇವೆಯೆಂದು ಅಷ್ಟೇ ಹೇಳಿದ್ದಾರೆ. ಆದೇನೆಂದರೆ ೨ನೇ ಅಕ್ಟೋಬರ್ ೧೯೮೯ನೇ ದಿವಸದಿಂದ ಕೇವಲ ಬೆಳೆ ಸಾಲದ ಬಗ್ಗೆ ಸ್ಮಾಲ್ ಅಂಡ್ ಮಾರ್ಜಿನಲ್ ಫಾರ್ಮರ್ಸ್‌ಗೆ ಸಬ್ಸಿಡಿ ಸಾಲ ಕೊಡುತ್ತೇವೆಂದು. ನಮ್ಮ ಸರ್ಕಾರ ಇದ್ದಾಗ ರೈತರಿಗೆ ಯಾವುದೇ ಭಿನ್ನಾಭಿಪ್ರಾಯ ಮಾಡಲಿಲ್ಲ ಯಾರು ಸರಿಯಾಗಿ ಸಾಲ ಮರುಪಾವತಿ ಮಾಡಿದ್ದಾರೆ ಅವರಿಗೆ ಏಳು ಪರ್‌ಸೆಂಟ್‌ನಂತೆ ಬಡ್ಡಿ ರಿಯಾಯಿತಿ ಕೊಟ್ಟಿದ್ದೇವೆ.

೪-೦೦ ಪಿ. ಎಂ.

ಅಷ್ಟೇ ಅಲ್ಲ, ಒಂದು ವರ್ಷ ಸಂಪೂರ್ಣವಾಗಿ ಬಡ್ಡಿ ರಿಯಾಯಿತಿಯನ್ನು ಕೊಡಬೇಕು. ಇದು ಕೇವಲ ಕ್ರಾಪ್ ಲೋನ್‌ಗೆ ಅಷ್ಟಕ್ಕೇ ಸೀಮಿತವಾದಂಥ ಒಂದು ಕಾರ್ಯಕ್ರಮ. ಕೇವಲ ಕ್ರಾಪ್ ಲೋನ್ ಅಷ್ಟೇ ರೈತರು ಸಾಲ ತೆಗೆದುಕೊಳ್ಳುವುದಿಲ್ಲ. ಆದ್ದರಿಂದ ಇದು ಸರಿಯಲ್ಲ. ಭೂ ಅಭಿವೃದ್ಧಿ ಬಗ್ಗೆಯೂ ಮತ್ತು ಹಾರ್ಟಿಕಲ್ಚರ್ ಸ್ಕೀಮ್‌ಗೂ ಕೂಡಾ ರೈತರು ಸಾಲವನ್ನು ತೆಗೆದುಕೊಳ್ಳುತ್ತಾರೆ. ಹೀಗಾಗಿ ಇದರ ಬಗ್ಗೆ ಇವತ್ತು ಸರ್ಕಾರ ಪುನರ್ ಪರಿಶೀಲನೆ ಮಾಡಬೇಕಾಗಿದೆ. ಮತ್ತು ಈ ಇಂಟರೆಸ್ಟ್ ಸಬ್ಸಿಡಿ ಏನು ಇದೆ, ಇದು ಎಲ್ಲಾ ವರ್ಗದ ರೈತರಿಗೂ ಸಿಗುವ ಹಾಗೆ ಸರ್ಕಾರ ಮಾಡಬೇಕು ಎಂದು ತಮ್ಮ ಮುಖೇನ ಸರ್ಕಾರದಲ್ಲಿ ಕೇಳಿಕೊಳ್ಳುತ್ತೇನೆ. ನೀರಾವರಿ ಬಗ್ಗೆ ಕಾವೇರಿಯಾಗಲಿ, ಕೃಷ್ಣ ಆಗಲಿ ಇದಕ್ಕೆ ಸಾಕಷ್ಟು ಹಣವನ್ನು ಕೊಡಿ. ಇದರ ಬಗ್ಗೆ ಯಾವುದೇ ಭಿನ್ನಾಭಿಪ್ರಾಯ ಇಲ್ಲ. ಆದರೆ ಇಡೀ ರಾಜ್ಯದಲ್ಲಿ ಕಾವೇರಿ, ಕೃಷ್ಣ ಇಂಥ ನೀರಾವರಿಗಳು ಎಲ್ಲಾ ಜಿಲ್ಲೆಯಲ್ಲಿಯೂ ಇಲ್ಲ. ನಿಜವಾಗಿ ರೈತರ ಏಳಿಗೆ ಆಗಬೇಕಾದರೆ ಸಣ್ಣ ಸಣ್ಣ ನೀರಾವರಿ ಆಗಬೇಕಾಗುತ್ತದೆ. ಲಿಫ್ಟ್ ಇರಿಗೇಷನ್‌ನ್ನು ಜಾರಿಯಲ್ಲಿ ತರಬೇಕಾಗುತ್ತದೆ. ಪಣ್ಣಿನ ಸಿಂಧ್ಯಾರವರು ಹೇಳಿದ ಹಾಗೆ ಡ್ರೈಲ್ಯಾಂಡ್ ಫಾರ್ಮಿಂಗ್‌ಗೆ ಹೆಚ್ಚಿನ ಮಹತ್ವವನ್ನು ಕೊಡಬೇಕಾಗಿದೆ. ಒಣ ಬೇಸಾಯ ಅಭಿವೃದ್ಧಿ ಯೋಜನೆಗೆ ನಮ್ಮ ಸರ್ಕಾರ ಇದ್ದಾಗ ವರ್ಲ್ಡ್ ಬ್ಯಾಂಕ್‌ನಿಂದಲೋ ಅಥವಾ ಮತ್ತೊಂದರಿಂದಲೋ ಸಾಲವನ್ನು ಸಾಕಷ್ಟು ತೆಗೆದುಕೊಂಡು ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದೆವು. ಈ ಕೆಲಸವನ್ನು ಕೇಂದ್ರ ಸರ್ಕಾರ ಸಹಾ ಮೆಚ್ಚಿ ತನ್ನ ೨೦ ಅಂಶದ ಕಾರ್ಯಕ್ರಮದಲ್ಲಿ it has been incorporated. ಮುಂಗಡಪತ್ರದಲ್ಲಿ ಡ್ರೈಲ್ಯಾಂಡ್ ಫಾರ್ಮಿಂಗ್ ಬಗ್ಗೆ ಏನೂ ಕಾಣುತ್ತಿಲ್ಲ. ಹಾಗಾದರೆ ರಾಜ್ಯದಲ್ಲಿದ್ದ ೧೪೧ ಲಕ್ಷ ಹೆಕ್ಟೇರ್ ಭೂಮಿಯಲ್ಲಿ ಕೇವಲ ೩೩-೩೪ ಪರ್ಸೆಂಟ್ ಅಷ್ಟು ನೀರಾವರಿಯಾದರೆ ರಾಜ್ಯದಲ್ಲಿದ್ದ ನೀರಾವರಿಗಾಗಿ ಬೇರೆ ಬೇರೆ ಭಾಗದಲ್ಲಿರುವ ರೈತರುಗಳು ಏನು ಮಾಡಬೇಕು? ಅದರ ಸಲುವಾಗಿ ನಾನು ಸರ್ಕಾರಕ್ಕೆ ತಮ್ಮ ಮುಖೇನ ಒತ್ತಾಯ ಮಾಡುತ್ತೇನೆ. ಡ್ರೈಲ್ಯಾಂಡ್ ಫಾರ್ಮಿಂಗ್‌ಗೆ ಹೆಚ್ಚಿನ ಪ್ರೈಯಾರಿಟಿಯನ್ನು ಕೊಡಿ. ನಮ್ಮ ಸರ್ಕಾರ ಇದ್ದಾಗ ಲಿಫ್ಟ್ ಇರಿಗೇಷನ್‌ನ್ನು ಕೂಡಾ ಮಾಡಿದ್ದೆವು. ನಾನು ಪ್ರಾಮಾಣಿಕವಾಗಿ ಮತ್ತು ಬಹಳ ವಿನಯದಿಂದ ಹೇಳುತ್ತಿದ್ದೇನೆ, ಅದನ್ನು ಅಬಾಲಿಷ್ ಮಾಡಬೇಕಾಗಿತ್ತು. ಕಾರ್ಪೊರೇಷನ್ ಆದ ನಂತರ ಒಂದು ಲಿಫ್ಟ್ ಇರಿಗೇಷನನ್ನು ಜಾರಿಯಲ್ಲಿ ತರಲಿಕ್ಕೆ ಆಗಲಿಲ್ಲ. ಒಂದು ಮಾತನ್ನು ತಾವು ಹೇಳಿದ್ದೀರಿ. ಇರಿಗೇಷನ್ ಸ್ಕೀಮ್‌ನಲ್ಲಿ ರೈತರು ಏನು ಮುಂಚಿತವಾಗಿ ಕಾಂಟ್ರಿಬ್ಯೂಟ್ ಮಾಡಬೇಕು, ಅದನ್ನು ವಸೂಲು ಮಾಡುವುದಿಲ್ಲ ಎಂದು ಹೇಳಿರುವುದನ್ನು ನೋಡಿ ಬಹಳ ಸಂತೋಷವಾಯಿತು. ನಮ್ಮ ಸರ್ಕಾರ ಇದ್ದಾಗ ಸಾಕಷ್ಟು ಒತ್ತಾಯ ಮಾಡಿ ಹೇಳಿದೆವು. ಏಕೆಂದರೆ ಕಾವೇರಿ, ಕೃಷ್ಣ ನೀರನ್ನು ಕೊಡುವಾಗಲೂ ರೈತರಿಂದ ಮುಂಚಿತವಾಗಿ ಹಣವನ್ನು ತೆಗೆದುಕೊಳ್ಳಲಿಲ್ಲ. ಅದೇ ಪ್ರಕಾರ ಯಾವ ಜಿಲ್ಲೆಯಲ್ಲಿ ಈ ಒಂದು ಮೈನರ್ ಇರಿಗೇಷನ್ ಅಥವಾ ಲಿಫ್ಟ್ ಇರಿಗೇಷನನ್ನು ತೆಗೆದುಕೊಳ್ಳುತ್ತೀರಿ, ಅಲ್ಲಿ ಮುಂಚಿತವಾಗಿ ಕಾಂಟ್ರಿಬ್ಯೂಷನ್ ಮಾಡಿ ಎಂದು ಹೇಳಿದರೆ ಅದು ತಪ್ಪಾಗುತ್ತದೆ. ಆ ದೃಷ್ಟಿಯಿಂದ ಒಳ್ಳೆಯ ಹೆಜ್ಜೆಯನ್ನು ಸರ್ಕಾರ ತೆಗೆದುಕೊಂಡಿದೆ. ಆ ದೃಷ್ಟಿಯಿಂದ ತಾವು ಹೆಚ್ಚಿನ ಪ್ರಮಾಣದಲ್ಲಿ ಇಂಥ ಯೋಜನೆಗಳನ್ನು ಜಾರಿಯಲ್ಲಿ ತರಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇವತ್ತು ಕಬ್ಬಿನ ಟ್ಯಾಕ್ಸ್ ಬಗ್ಗೆ ಈಗಾಗಲೇ ಪ್ರಸ್ತಾಪವಾಗಿದೆ. ಪ್ರತಿ ಟನ್‌ಗೆ ೨೦ ರೂಪಾಯಿ ಟ್ಯಾಕ್ಸ್ ಇದೆ. ಅದರಲ್ಲಿ ೧೨ ರೂಪಾಯಿ ಸಬ್ಸಿಡಿ ಎಂದು ರೈತರಿಗೆ ಪುನಃ ಬರುತ್ತದೆ. ಇವತ್ತು ನಾವು ಕಬ್ಬಿನ ದರದ ಮೇಲೆ ಈ ಟ್ಯಾಕ್ಸ್‌ನ್ನು ಹಾಕಲಿಕ್ಕೆ ಹೋದರೆ ಸಂಕೇಶ್ವರದಂಥ ಫ್ಯಾಕ್ಟರಿಗಳು ೫೦ ರೂಪಾಯಿ ಪ್ರತಿ ಟನ್‌ಗೆ ಟ್ಯಾಕ್ಸನ್ನು ಕೊಡಬೇಕಾಗುತ್ತದೆ. ಇವತ್ತು ಇದೇ ಟ್ಯಾಕ್ಸ್ ಮಹಾರಾಷ್ಟ್ರದಲ್ಲಿ ೧೬ ರೂಪಾಯಿ ಪ್ರತಿ ಟನ್‌ಗೆ ಇದ್ದರೆ, ಆಂಧ್ರ ಪ್ರದೇಶದಲ್ಲಿ ಒಂದು ಟನ್‌ಗೆ ೧೨ ರೂಪಾಯಿ ಇದೆ. ಮತ್ತು ನೀವು ಪ್ರತಿ ಟನ್‌ಗೆ ಟ್ಯಾಕ್ಸನ್ನು ತೆಗೆದುಕೊಂಡಾಗ ೫೦ ರೂಪಾಯಿ ಟ್ಯಾಕ್ಸ್ ಎಂದು ಹಾಕಿದಾಗ ಅದರಲ್ಲಿ ಸಾಕಷ್ಟು ಹಣ ರೈತರು ಕೊಡಬೇಕಾಗುತ್ತದೆ. ತಾವು ಹೇಳಬಹುದು, ಷುಗರ್ ಫ್ಯಾಕ್ಟರಿಯವರು ಟ್ಯಾಕ್ಸನ್ನು ಕೊಡುತ್ತಾರೆಂದು. ಅದು ಸಾಧ್ಯವಿಲ್ಲ. ಕಾಸ್ಟ್ ಆಫ್ ಪ್ರೊಡಕ್ಷನ್‌ನಲ್ಲಿ ಷುಗರ್‌ದು ಏನು ಇದೆ, ಅದು ಕಾಸ್ಟ್ ಆಫ್ ಪ್ರೊಡಕ್ಷನ್‌ನಲ್ಲಿ ೫೦ ರೂಪಾಯಿ ಹೋಗುತ್ತದೆ. ಆದ್ದರಿಂದ ರೈತರುಗಳಿಗೆ ಏನು ರೇಟ್ ಸಿಗಬೇಕೋ, ಕಬ್ಬಿನ ದರ ಏನು ಸಿಗಬೇಕೋ ಆ ದರ ಕಡಿಮೆಯಾಗುತ್ತಿದೆ.

ಆದ್ದರಿಂದ ರೈತ ಜನರ ಮೇಲೆ ಅನ್ಯಾಯವನ್ನು ಮಾಡಿದ ಹಾಗೆ ಆಗುತ್ತದೆ. ಮುಂಚಿತವಾಗಿ ಏನು ಪರಿಸ್ಥಿತಿ ಇತ್ತು ಅದೇ ಪರಿಸ್ಥಿತಿಯನ್ನು ಇಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ. ಬೆಳಗಾಂ ಜಿಲ್ಲೆಯಲ್ಲಿ ಸಾಕಷ್ಟು ಕಬ್ಬು ಇದೆ. ಇವೊತ್ತು ಶುಗರ್ ಫ್ಯಾಕ್ಟರಿಗಳು ಕೇನ್ ಕ್ರಶ್ ಮಾಡುವುದಕ್ಕೆ ಆಗುತ್ತಿಲ್ಲ. ಹೀಗಾಗಿ ಮಹಾರಾಷ್ಟ್ರಕ್ಕೆ ಹೋಗುತ್ತಿದೆ. ಈ ಪ್ರಕಾರವಾಗಿ ನಾವು ಟ್ಯಾಕ್ಸ್ ಹಾಕಿದರೆ

ಯಾವ ಕಬ್ಬು ಸಹ ನಮ್ಮ ಫ್ಯಾಕ್ಟರಿಗಳಿಗೆ ಬರುವುದಿಲ್ಲ. ಆದ್ದರಿಂದ ಇದರ ಬಗ್ಗೆ ತಾವು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕೈಗಾರಿಕೆ ಬಗ್ಗೆ ಗವರ್ನರ್ ಅಡ್ರೆಸ್‌ನಲ್ಲಿ ಒತ್ತಾಯ ಮಾಡಿ ಹೇಳಿದ್ದೀರಿ.

> " It is a matter of great concern to my Government that there has been a steady decline in investments in industries in the state for the past few years. My Government proposes to arrest this negative trend by providing......'.

ಸಂತೋಷ ಆದರೆ ನಿಮ್ಮ ಮುಂಗಡ ಪತ್ರದಲ್ಲಿ ಏನೂ ಇಲ್ಲ. ತಾವು ಇಂಡಸ್ಟ್ರಿಗಳಿಗೆ ಮಾಡಿರುವ ಪ್ರಾವಿಷನ್ ೬.೬೮ ಪರ್ಸೆಂಟ್ ಮಾಡಿದ್ದೀರಿ. ಇದರಿಂದ ಏನು ಮಾಡುವುದಕ್ಕೆ ಸಾಧ್ಯ ಇದೆ. This is against the spirit of your Governor's speech. ಇವೊತ್ತು ಏನು ಆಗುತ್ತಿದೆ ಅಂದರೆ ಕೈಗಾರಿಕೆ ಹಿಂದುಳಿದ ಪ್ರದೇಶದಲ್ಲಿ ಬೆಳೆಯಬೇಕು, ಹಿಂದುಳಿದ ಜಿಲ್ಲೆಯಲ್ಲಿ ಬೆಳೆಯಬೇಕು. ಗ್ರಾಮಾಂತರ ಪ್ರದೇಶದಲ್ಲಿ ಬೆಳೆಯಬೇಕು ಎಂದು ನಾವು ಹೇಳುತ್ತೇವೆ. ಆದರೆ ಎಲ್ಲಿಯತನಕ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡುವುದಿಲ್ಲವೋ ಯಾವ ತನಕ ಹೆಚ್ಚಿನ ಇಂಡ್ಯೂಸ್‌ಮೆಂಟ್ ಅನ್ನು ಕೈಗಾರಿಕೆಗಳಿಗೆ ಕೊಡುವುದಿಲ್ಲವೋ ಅಲ್ಲಿಯವರೆಗೆ ಕೈಗಾರಿಕೆಗಳು ಬೆಳೆಯುವುದಿಲ್ಲ. ಅದು ನಮ್ಮ ಅನುಭವ ಕೈಗಾರಿಕೆಗಳಿಗೆ ಬೆಂಗಳೂರು ಫೋಕಸ್ ಪಾಯಿಂಟ್. ಪ್ರತಿಯೊಬ್ಬರೂ ಬೆಂಗಳೂರಿನಲ್ಲಿ ಕೈಗಾರಿಕೆಗಳು ಬೆಳೆಯಬೇಕು ಎಂದು ಹೇಳುತ್ತೇವೆ. ಈಗ ಏನು ಆಗುತ್ತಿದೆ. ಇವೊತ್ತು ಕೈಗಾರಿಕೆಗಳು ಹೊಸೂರಿನಲ್ಲಿ ಆಂಧ್ರದಲ್ಲಿ ಬೆಳೆಯುತ್ತಿವೆ. ನಾವು ಬೆಂಗಳೂರಿನಲ್ಲಿ ಇಂಡಸ್ಟ್ರಿಗಳನ್ನು ಬ್ಯಾನ್ ಮಾಡಿದ್ದೇವೆ. ಇವೊತ್ತು ನಿಜವಾಗಿಯೂ ಸಣ್ಣ ಕೈಗಾರಿಕೆಗಳು, ಮತ್ತು ಮಧ್ಯಮ ಕೈಗಾರಿಕೆಗಳು ಹೆಚ್ಚಿನ ಪ್ರಮಾಣದಲ್ಲಿ ಬರಬೇಕಾದರೆ ಹಿಂದುಳಿದ ಪ್ರದೇಶಗಳಲ್ಲಿ ಹೆಚ್ಚಿನ ಇನ್‌ಫ್ರಾಸ್ಟ್ರಕ್ಚರ್ ಫೆಸಿಲಿಟೀಸ್ ಅನ್ನು ಕೊಡಬೇಕಾಗುತ್ತದೆ. ಇದರ ಬಗ್ಗೆ ತಮ್ಮ ಕಾರ್ಯಕ್ರಮ ಏನು ನೀವು ಹೆಚ್ಚಿನ ಇನ್‌ಸೆಂಟೀವ್ಸ್ ಕೊಡಬೇಕಾಗುತ್ತದೆ. ಆಗ್ರೋ ಬೇಸಡ್ ಇಂಡಸ್ಟ್ರೀಗಳಿಗೆ ಹೆಚ್ಚಿನ ಉತ್ತೇಜನ ಕೊಡಬೇಕಾಗುತ್ತದೆ. ಇವೊತ್ತು ಹುಬ್ಬಳ್ಳಿ ಇರಬಹುದು, ದಾವಣಗೆರೆ ಇರಬಹುದು ಇವೊತ್ತು ಉದ್ಯೋಗಗಳು ಇಲ್ಲವೆಂದು ಎಷ್ಟೋ ಜನ ದೊಡ್ಡ ದೊಡ್ಡ ಪಟ್ಟಣಗಳಿಗೆ ಬಂದಿದ್ದಾರೆ. ಬೆಂಗಳೂರಿನಲ್ಲಿ ಇವೊತ್ತು ಕೊಳಚೆ ಪ್ರದೇಶಗಳು ನಿರ್ಮಾಣ ಆಗಿವೆ. ಲಾ ಅಂಡ್ ಆರ್ಡರ್ ಪರಿಸ್ಥಿತಿ ನಿರ್ಮಾಣ ಆಗಿದೆ. ಹೀಗೆ ಜನರಿಗೆ ಉದ್ಯೋಗಗಳನ್ನು ಸೃಷ್ಟಿ ಮಾಡಬೇಕಾದರೆ, ಜನ ಗ್ರಾಮಾಂತರ ಪ್ರದೇಶದಲ್ಲಿ ಉಳಿಯಬೇಕಾದರೆ, ಹಳ್ಳಿಗಳಲ್ಲಿ. ಗ್ರಾಮಾಂತರ ಪ್ರದೇಶಗಳಲ್ಲಿ ಹೆಚ್ಚಿನ ಕೈಗಾರಿಕೆಗಳು ಶುರು ಮಾಡಬೇಕಾಗುತ್ತದೆ. Single windowಗಳು ಇವೊತ್ತು ಕೆಲಸ ಮಾಡುತ್ತಿದೆ ಆದರೆ ಇನ್ನೂ ಚುರುಕಾಗಿ ಆಗಬೇಕಾಗಿದೆ. ಇವೊತ್ತು ಸಿಂಗಲ್ windowಗೆ ಪವರ್, ಲೋನ್, ಶೆಡ್ ಒಂದೇ ಕಡೆ ಮಂಜೂರು ಮಾಡುತ್ತೇವೆಂದು ಹೇಳುತ್ತೇವೆ. ಆದರೆ ಅದು ಆಗುತ್ತಿಲ್ಲ. ಆ ಸಲುವಾಗಿ ತಾವು ಹೆಚ್ಚಿನ ಕ್ರಮವನ್ನು ಇದರ ಬಗ್ಗೆ ತೆಗೆದುಕೊಳ್ಳಬೇಕಾಗುತ್ತದೆ. ಅದರ ಪ್ರಕಾರ ಎಲೆಕ್ಟ್ರಾನಿಕ್ಸ್, ಸಾಫ್ಟ್‌ವೇರ್ ಮ್ಯಾಕ್ಸಿಮಮ್ ಸ್ಕೋಪ್ ನಮ್ಮ ಕರ್ನಾಟಕ ರಾಜ್ಯದಲ್ಲಿ ಇದೆ ಆದರೆ ಇಲ್ಲಿ ಏನೂ ಕಾಣಿಸುವುದಿಲ್ಲ. ಎಲೆಕ್ಟ್ರಾನಿಕ್ಸ್ ಇಂಡಸ್ಟ್ರಿಯಲ್ಲಿ ಮಲ್ಟಿಪಾಯಿಂಟ್ ಟ್ಯಾಕ್ಸ್ ಇದೆ. ಬೇರೆ ರಾಜ್ಯಗಳಿಗೆ ಟ್ಯಾಕ್ಸ್ ಕಂಪೇರ್ ಮಾಡಿದರೆ ಇಲ್ಲಿ ಟ್ಯಾಕ್ಸ್ ಜಾಸ್ತಿ ಇದೆ, export potentiality ಜಾಸ್ತಿ ಮಾಡಬೇಕಾದ ಅವಶ್ಯಕತೆ ಇದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ನಮ್ಮ ಪಬ್ಲಿಕ್ ಸೆಕ್ಟರ್ ಅಂಡರ್ ಟೇಕಿಂಗ್ಸ್ ಬಗ್ಗೆ ಒಂದು ಮಾತು. ನಾನು ಒಪ್ಪಿಕೊಳ್ಳುತ್ತೇನೆ, ಇಂಡಸ್ಟ್ರಿಗಳು ಸಿಕ್ ಆಗಿವೆ, ಅವಕ್ಕೆ ಸಾಕಷ್ಟು ಹಣ ಇನ್‌ವೆಸ್ಟ್‌ಮೆಂಟ್ ಆಗಿದೆ. Therefore, we should see that they come up again and start production instead of proposing to dispose of them. ಏಕೆ ಸಿಕ್ ಆಗಿದೆ. ಒಂದು ಮಾತನ್ನು ಹೇಳಿದ್ದೀರಿ. ಪ್ರೊಫೆಷನಲ್ ಮ್ಯಾನೇಜ್‌ಮೆಂಟ್ ಇರಬೇಕು ಎಂದು, ಹೌದು. Chairman and Managing Directors should be made accountable ಇವೊತ್ತು ಯಾರೋ ಒಬ್ಬ ಐ. ಎ. ಎಸ್. ಆಫೀಸರ್ ಅವರನ್ನು ಛೇರ್ಮನ್ ಅಥವಾ ಎಂ. ಡಿ. ಮಾಡುತ್ತೇವೆ. What is the accountability. ಪ್ರೊಫೆಷನ್ ಜನಾಂಗ ಹಾಕಿ ಪ್ರತಿಯೊಂದು ಇಂಡಸ್ಟ್ರಿಗಳನ್ನು ತಾವು ಸ್ಟಡಿ ಮಾಡಬೇಕಾಗುತ್ತದೆ. ಇಲ್ಲ ಇಂಡಸ್ಟ್ರಿಗಳು ಸಿಕ್ ಆಗಿವೆ, ಅದನ್ನು ಡಿಸ್ಪೋಸ್ ಮಾಡುತ್ತೇವೆ ಎಂದು ಹೇಳುವುದು ತಪ್ಪಾಗುತ್ತದೆ ಎಂದು ನನಗೆ ಅನಿಸುತ್ತದೆ..........

ಶ್ರೀ ಕಾಗೋಡು ತಿಮ್ಮಪ್ಪ.—ಒಂದು ನಿಮಿಷ ತಾವು ಯೀಲ್ಡ್ ಆದರೆ ಒಂದು ಮಾತು ಹೇಳುತ್ತೇನೆ. ಈ ಪಬ್ಲಿಕ್ ಸೆಕ್ಟಾರ್ ಅಂಡರ್‌ಟೇಕಿಂಗ್ ವಿಚಾರದಲ್ಲಿ ಪ್ರಸ್ತಾಪ ಇದೆ. ಸಿಕ್ ಯೂನಿಟ್ಸ್‌ಗಳನ್ನು ಏಕೆ ಖಾಸಗೀಯವರಿಗೆ ಕೊಡಬಾರದು ಎಂದು ಯೋಚನೆ ಮಾಡಲಾಗಿದೆ. ತಾವು ಇದ್ದಾಗ ಕೊಳ್ಳೆಗಾಲ ಶುಗರ್ ಫ್ಯಾಕ್ಟರಿಯನ್ನು, ಗೌರಿಬಿದನೂರು ಶುಗರ್ ಫ್ಯಾಕ್ಟರಿಯನ್ನು ಖಾಸಗಿಯವರಿಗೆ ಕೊಟ್ಟಿರಿ. ಹಾಗೆ ಕೊಡುವ ಕಾಲಕ್ಕೆ ತಮ್ಮ ವಿಚಾರ ಏನಿತ್ತು. ಆಲೋಚನೆ ಏನಿತ್ತು, ಯಾವ ಕೈಗಾರಿಕೆಗಳನ್ನು ಪುನರುಜ್ಜೀವನ ಮಾಡುವುದಕ್ಕೆ ಆಗುವುದಿಲ್ಲ ಕೊಡುವುದೇ ಲೇಸು ಎನ್ನುವ ಅಭಿಪ್ರಾಯಕ್ಕೆ ಬಂದೇ ಅವತ್ತಿನ ದಿವಸ ತಾವು ಮಾಡಿದಿರಿ, ಎಷ್ಟೇ ವಿರೋಧ ಬಂದರೂ ತಾವು ಕೇಳಲಿಲ್ಲ. ಆದುದರಿಂದ ಇದು ತಾವೇ ಪ್ರಾರಂಭ ಮಾಡಿರತಕ್ಕ ಒಂದು ನೀತಿ. ಇಂತಹ ಪ್ರಸ್ತಾಪ ಬಂದಾಗ ಅದಕ್ಕೆ ತಾವು ಖಚಿತವಾಗಿ ಯಾವ ಅಭಿಪ್ರಾಯವನ್ನು ಹೇಳುತ್ತೀರಿ ?

ಶ್ರೀ ಆರ್. ವಿ. ದೇಶಪಾಂಡೆ.—ನಾನು ಹೇಳಿದ್ದುದು ಒಂದು, ತಾವು ಮಾತನಾಡಿದ್ದುದು ಒಂದು. ಇವತ್ತು ವಿ.ಐ.ಎಸ್.ಎಲ್. ಅನ್ನು ಸೇಲ್‌ಗೆ ಕೊಟ್ಟಿದ್ದೇವೆ. ನಮ್ಮ ಕಾಲದಲ್ಲಿ ಅದು ಆಗಿದೆ. ನಾನು ಏನು ಹೇಳುತ್ತಿದ್ದೇನೆಂದರೆ, ಪ್ರತಿಯೊಂದು ಕೈಗಾರಿಕೆಯ ಬಗ್ಗೆ ಒಂದು ಅಭ್ಯಾಸ ಆಗಬೇಕು.

SRI KAGODU THIMMAPPA.—It was a transfer from State Sector to Central Sector. There was opposition for transfer of Gauribidanur factory to private sector.

ಶ್ರೀ ಆರ್. ವಿ. ದೇಶಪಾಂಡೆ.—ನಮ್ಮ ಸರ್ಕಾರ ಇದ್ದಾಗ ನಾವು ಕೊಟ್ಟಿದ್ದೇವೆ. ಇವತ್ತು ಮನಸ್ಸು ಬಂದಂತೆ ಇಂಡಸ್ಟ್ರೀಸನ್ನು ಕೊಡುವುದು ಬೇಡ. ಆ ಇಂಡಸ್ಟ್ರೀಸ್ ಸಿಕ್ ಏಕೆ ಆಯಿತು, ಅದಕ್ಕೆ ಕಾರಣ ಏನು, ಅದಕ್ಕೆ ಅಕೌಂಟಬಿಲಿಟಿ ಇರಬೇಕು ಎಂದಷ್ಟೇ ಹೇಳುತ್ತಿದ್ದೇನೆಯೇ ವಿನಃ ಈ ಪ್ರಕಾರ, ಈ ಪ್ರಕಾರ ಮಾಡಿರಿ ಎಂದು ಹೇಳುತ್ತಾ ಇಲ್ಲ. ಪ್ರತಿಯೊಂದು ಇಂಡಸ್ಟ್ರೀಸ್‌ದೂ ಪ್ರತ್ಯೇಕವಾಗಿ ಅಭ್ಯಾಸ ಮಾಡಬೇಕಾಗುತ್ತದೆ. ಅಷ್ಟೇ ನಾನು ಹೇಳುತ್ತಾ ಇದ್ದೇನೆ.

SRI KAGODU THIMMAPPA.—There was wide spread opposition for the transfer of Gouribidanur Sugar Factory to private sector. But this is entirely different.

ಶ್ರೀ ಆರ್. ವಿ. ದೇಶಪಾಂಡೆ.—ಇರಬಹುದು, ಆಗಿನ ಸರ್ಕಾರ ನಿರ್ಣಯ ಮಾಡಿ ಕೊಟ್ಟಿರಬಹುದು, ಇವತ್ತು ಹೌಸಿಂಗ್ ಬೋರ್ಡ್‌ದಿಂದ ೧೨ ಸಾವಿರ ಮನೆಗಳನ್ನು ಕಟ್ಟುವ ಕಾರ್ಯಕ್ರಮ ಹಾಕಿದ್ದೀರಿ, ಬಹಳ ಸಂತೋಷ. ೧೨ ಸಾವಿರ ಮನೆಗಳನ್ನು ಕಟ್ಟುವುದಕ್ಕಿಂತ ಮುಂಚಿತವಾಗಿ ಎಷ್ಟು ಭೂಮಿ ನಿಮ್ಮ ಕಡೆ ಇದೆ ಎಂದು ವಿಚಾರ ಮಾಡಿದ್ದೀರಿ. ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಲ್ಯಾಂಡ್ ಅಕ್ವಿಸಿಷನ್ ವೆರಿ ಇಂಪಾರ್ಟೆಂಟ್ ಪ್ರಾಬ್ಲಂ. ಭೂಮಿ ಸಿಗುವುದಿಲ್ಲ, ಸಿಕ್ಕಿದರೆ ಬಡ ಜನರ ಭೂಮಿ ಸಿಗಬಹುದು, ಇವತ್ತು ಲ್ಯಾಂಡ್ ಅಕ್ವಿಸಿಷನ್ ಮ್ಯಾಟರ್ಸ್ ೫–೧೦ ವರ್ಷಗಳಿಂದ ಇದೆ, ಯಾವುದೇ ನಿರ್ಣಯ ತೆಗೆದುಕೊಳ್ಳಲಿಕ್ಕೆ ಬರುತ್ತಾ ಇಲ್ಲ. ಹೀಗಾಗಿ ಹೌಸಿಂಗ್‌ನಲ್ಲಿ ನಿಜವಾಗಿ ಮನೆ ಕಟ್ಟಿಕೊಡುವ ಇಚ್ಛೆ ಇದ್ದರೆ ಲ್ಯಾಂಡ್ ಅಕ್ವಿಸಿಷನ್‌ಗೆ ಮೊದಲು ಪ್ರಾವಿಜನ್ ಮಾಡಿ. ಇವತ್ತು ಲ್ಯಾಂಡ್ ಅಕ್ವಿಸಿಷನ್ ಮಾಡಲಿಕ್ಕೆ ಯಾವುದೂ ಪ್ರೊವಿಜನ್ ಇಲ್ಲ. ಮನೆಗಳನ್ನು ಕಟ್ಟಲಿಕ್ಕೆ ಪ್ರೊವಿಜನ್ ಮಾಡಿದ್ದೀರಿ. ಕೆಲವು ಜಿಲ್ಲಾ ಪರಿಷತ್ತಿನಲ್ಲಿ ಡಿ.ಆರ್.ಡಿ.ಎ.ನಲ್ಲಿ ಮಾಡುತ್ತಿದ್ದೆವು. ಹೌಸಿಂಗ್‌ನಲ್ಲಿ ಮನೆ ಕಟ್ಟಿದ್ದೇವೆ. ಭೂಮಿ ಅಕ್ವೈರ್ ಮಾಡಿದೇವೆ. ಇನ್ನೂ ಕೋಟ್ಯಾಂತರ ರೂಪಾಯಿ ಕೊಡಬೇಕಾಗಿದೆ, ಇನ್ನೂ ಕೊಡಲಿಕ್ಕೆ ಬರುತ್ತಾ ಇಲ್ಲ, ಆದುದರಿಂದ ಲ್ಯಾಂಡ್ ಅಕ್ವಿಸಿಷನ್‌ಗೆ ಮುಂಚಿ ಪ್ರೊವಿಜನ್ ಮಾಡಿಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಕಾರ್ಯಕ್ರಮ ಹಾಕಿಕೊಂಡು ತಾವು ಮುಂದೆ ಹೋದರೆ ಮನೆಗಳನ್ನು ಕಟ್ಟಲಿಕ್ಕೆ ಸಾಧ್ಯವಾಗಬಹುದು. ಇವತ್ತು ಏನಾಗುತ್ತಿದೆ ಎನ್ನುವುದನ್ನು ಹೇಳುತ್ತೇನೆ. ತಾವು ತಪ್ಪು ತಿಳಿದುಕೊಳ್ಳಬೇಡಿ. ನನ್ನ ಜಿಲ್ಲೆಗೆ ಮೊನ್ನೆ ಹೋಗಿದ್ದೆ. ಇವತ್ತು ಜನತಾ ಮನೆಗಳು ಇವೆ. ನಾವು ನೀವು ಎಲ್ಲಾ ಕೂಡಿ ಹೇಳಿದ್ದೇವೆ; ಇದು ನಿನ್ನದೇ ಮನೆ ಸುಖವಾಗಿರು ಎಂದು ಹೇಳಿದ್ದೇವೆ. ಎರಡು ಸಾವಿರ ಮನೆಗಳಿವೆ. ಈಗ ವಸೂಲಿ ಶುರುವಾಗಿದೆ. ಇದನ್ನು ಕಡ್ಡಾಯವಾಗಿ ಮಾಡುತ್ತಾ ಇದ್ದಾರೆ. ಇದು ನಮ್ಮ ಜಿಲ್ಲೆಯಲ್ಲಿ ನಡೆಯುತ್ತಾ [illegible]. ೧೦–೨೦. ೩೦. ೪೦ ರೂಪಾಯಿ ವಸೂಲಿ ಮಾಡುವುದು ನಡೆಯುತ್ತಾ ಇದೆ.

(INTERRUPTION)

SRI R. V. DESHPANDE.—Mr. Speaker Sir, let him speak afterwards. This is my request. ನೋಡಿ ಸ್ವಾಮಿ ಇಲ್ಲಿ ಕುಳಿತು ನೀವು ಹೇಳಿದ್ದೇನು ವಸೂಲು ಮಾಡಬೇಡಿ ಎಂದು ಹೇಳಿದ್ದೀರಿ. ನಾವು ಬಂದ್ ಮಾಡಿದೆವು. ಇವತ್ತು ಏನು ಮಾಡುತ್ತಿದ್ದಿರಿ ನೀವು. ಅದರ ಫಲವಾಗಿ ನಾನು ಹೇಳುತ್ತೇನೆ. ಇವತ್ತು ತಕ್ಷಣ ವಸೂಲಿ ಮಾಡುವುದನ್ನು ನಿಲ್ಲಿಸಿ, ಎರಡು ಸಾವಿರ ಮನೆಗಳಿವೆ, ಅದರಲ್ಲಿ ನಿಮಗೆ ಬರುವುದು ೪೦೦-೫೦೦-೬೦೦ ರೂಪಾಯಿ. ಈ ರೀತಿ ಏಕೆ ಹೆರಾಸ್‌ಮೆಂಟ್ ಮಾಡುತ್ತಿದ್ದೀರಿ ಅದರ ಫಲವಾಗಿ ಇವತ್ತು ಈ ಒಂದು ಸಮಸ್ಯೆಯನ್ನು ಬಗೆಹರಿಸಬೇಕಾದರೆ ದಯಮಾಡಿ ಲ್ಯಾಂಡ್ ಅಕ್ವೈರ್ ಮಾಡಿ. ಬೆಂಗಳೂರಿನಂತಹ ಪಟ್ಟಣದಲ್ಲಿ ಇದು ಬಹಳ ಜ್ವಲಂತ ಸಮಸ್ಯೆ ಇದೆ ಈ ಸಮಸ್ಯೆಯನ್ನು ಬಗೆಹರಿಸಬೇಕಾದರೆ ಅನ್ ಅಥರೈಸ್ಡ್ ಕನ್‌ಸ್ಟ್ರಕ್ಷನ್ ಬಗ್ಗೆ ತಾವು ಹೇಳಿದಿರಿ, ಬಹಳ ಸಂತೋಷ. ಆದರೆ ಪ್ರಾಬ್ಲಂ ಏನಿದೆ ಅಂದರೆ, you were HUD Minister, re-conveyance has been struck down by the Supreme Court. You have to amend the Act. ಹೀಗಾಗಿ ಸಾವಿರಾರು ಜನ ಬೆಂಗಳೂರಿನಲ್ಲಿ ಹಣ ಕೊಟ್ಟಿದ್ದಾರೆ. ಅದರ ಬಗ್ಗೆ ಆಕ್ಟ್ ಅಮೆಂಡ್‌ಮೆಂಟ್ ಮಾಡಿ. ಆದಷ್ಟು ಬೇಗ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. change of land use ಬಗ್ಗೆ ಎಷ್ಟೋ ಇಂಡಿವಿಜುಯಲ್ಸ್ ಕೇಸಸ್ ಸಟ್ರುಕ್ ಆಗಿವೆ ನಾನು ಈ ಬಿಲ್‌ನ್ನು ಇಂಟರ್‌ಡ್ಯೂಸ್ ಮಾಡಿದಾಗ ತಾವು ವಿರೋಧ ಮಾಡಿದಿರಿ. ರಾಷ್ಟ್ರಪತಿ ಆಡಳಿತದಲ್ಲಿ ಅದೇ ಆಕ್ಟ್ It went to the president of India for assent. Fortunately or unfortunately, the assent was not given by the President of India. ಸಿಸ್ಟಮ್ಯಾಟಿಕ್ ಆಗಿ ಮಾಡದೇ ಹೋದರೆ, ಇದರಿಂದ ಬಹಳ ಜನರಿಗೆ ತೊಂದರೆಯಾಗುತ್ತದೆ. ಈ ತೊಂದರೆಯನ್ನು ಬಗೆಹರಿಸಬೇಕೆಂದರೆ, ತಿದ್ದುಪಡಿ ಮಾಡಲೇಬೇಕಾಗುತ್ತದೆ. levy of tax on urban vacant landನಿಂದ ೨೦ ಕೋಟಿ ಬರಬಹುದೆಂದು ಅಂದಾಜು ಮಾಡಿದ್ದೀರಿ. ನಾನು ಹೆಚ್.ಯು.ಡಿ. ಮಂತ್ರಿಯಾಗಿದ್ದಾಗ, ಈ ಫೈಲನ್ನು ಡೀಲ್ ಮಾಡಿದ್ದೇನೆ. ಇದನ್ನು ಡೀಲ್ ಮಾಡಿ ನಂತರ ರೆವಿನ್ಯೂ ಇಲಾಖೆಗೆ ಕಳುಹಿಸಿದ್ದೆನು. ಇದರಿಂದ ೨ ಕೋಟಿ ಕೂಡ ಬರುವುದಿಲ್ಲ. ಸಧ್ಯಕ್ಕೆ ವೇಕೆಂಟ್ ಲ್ಯಾಂಡ್ ಇಟ್ಟುಕೊಂಡಿದ್ದಾರೆ ಮುಂದೆ ಮನೆಗಳನ್ನು ಕಟ್ಟಿಸಿಕೊಳ್ಳುತ್ತಾರೆ. ಇದರಿಂದ ಮನೆಗಳ ಸಮಸ್ಯೆ ಕೂಡ ಬಗೆಹರಿಯುತ್ತದೆ. ಇಡೀ ರಾಜ್ಯದಲ್ಲಿ ಅರ್ಬನ್ ಏರಿಯಾದಲ್ಲಿ ಎಷ್ಟು ವೇಕೆಂಟ್ ಲ್ಯಾಂಡ್ ಇದೆ ಎನ್ನುವುದರ ಬಗ್ಗೆ ಸರ್ವೆ ಮಾಡಿಸಬೇಕು. ನಾವಿದ್ದಾಗಲೇ ಇಂಥ ಆಕ್ಟ್ ಜಾರಿಗೆ ತರಬೇಕೆಂದು ವಿಚಾರ ಮಾಡಿ ನಿರ್ಣಯಕ್ಕೆ ಬಂದಾಗ, ೧೫ × ೨೦, ೨೦ × ೩೦ ಹಾಗೂ ೩೦ × ೪೦ ಅಳತೆಯ ಸೈಟುಗಳಿಗೆ ಟ್ಯಾಕ್ಸ್‌ನಿಂದ ಮಾಫ್ ಮಾಡುವ ನಿರ್ಣಯಕ್ಕೆ ಬಂದಿದ್ದೇವು. ಈ ಅಳತೆಯ ಸೈಟುಗಳಲ್ಲಿ ಸಾಮಾನ್ಯವಾಗಿ ಬಡಜನ ಮನೆ ಕಟ್ಟುತ್ತಾರೆ. ಈ ವಿಚಾರವನ್ನು ಕೂಡ ತಾವು ಗಮನದಲ್ಲಿಟ್ಟುಕೊಳ್ಳಬೇಕು. ಇನ್ನು ಅರ್ಬನ್ ಏರಿಯಾದಲ್ಲಿರತಕ್ಕ ಅಗ್ರಿಕಲ್ಚರ್ ಲ್ಯಾಂಡ್ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಹೋದರೆ, ಅನೇಕ ಸಮಸ್ಯೆಗಳು ಶುರುವಾಗುತ್ತವೆ. ಒಂದು ಸ್ಕ್ವೆರ್ ಮೀಟರ್‌ಗೆ ಮೂರು ರೂಪಾಯಿ ಟ್ಯಾಕ್ಸ್ ಹಾಕುವುದಕ್ಕೆ ಹೊರಟಿದ್ದೀರಿ. ಯೂನಿಫಾರಂ ಟ್ಯಾಕ್ಸ್ ಹಾಕುವುದಕ್ಕೆ ಆಗುವುದಿಲ್ಲ. ಬೆಂಗಳೂರು ನಗರದಲ್ಲಿ ಹಾಕುವಂಥ ಟ್ಯಾಕ್ಸನ್ನು ಗುಲ್ಬರ್ಗಾ ಮತ್ತು ದಾವಣಗೆರೆ ನಗರಗಳಲ್ಲಿ ಹಾಕುವುದಕ್ಕೆ ಆಗುವುದಿಲ್ಲ. ಅಲ್ಲಿರತಕ್ಕ ಪಾಪ್ಯುಲೇಷನ್, ಮಾರ್ಕೆಟ್ ವ್ಯಾಲ್ಯೂ ವಿಚಾರ ಮಾಡಿ, ಬೇರೆ ಬೇರೆ ಪಟ್ಟಣಗಳಿಗೆ ಬೇರ ಬೇರೆ ರೀತಿಯಲ್ಲಿ ಟ್ಯಾಕ್ಸ್ ಹಾಕಬೇಕು. ತಾವು ಏನು ೨೦ ಕೋಟಿ ರೂಪಾಯಿ ಅಪೇಕ್ಷೆ ಮಾಡಿದ್ದೀರಿ. ಅದು ಸಾಧ್ಯವಿಲ್ಲ. ಮತ್ತೆ ೪೦ × ೬೦ ಹಾಗೂ ೬೦ × ೮೦ ಸೈಟುಗಳು ಖಾಲಿ ಇಟ್ಟುಕೊಂಡಿರುವವರಿಗೂ ಕೂಡ ಮನೆ ಕಟ್ಟಿಕೊಳ್ಳಲು ಒಂದೆರಡು ವರ್ಷ ಟೈಂ ಕೊಡಬೇಕು. ಕೊಟ್ಟಿರತಕ್ಕ ಅವಧಿಯೊಳಗೆ ಮನೆಗಳನ್ನು ಕಟ್ಟದೇ ಹೋದರೆ, ನಂತರ ಟ್ಯಾಕ್ಸ್ ಹಾಕುವುದು ಒಳ್ಳೆಯದು. ಇದರ ಬಗ್ಗೆ ಕೂಡ ಮಾನ್ಯ ಮಂತ್ರಿಗಳು ಪರಿಶೀಲಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಹೈದರಾಬಾದ್ ಕರ್ನಾಟಕದ ಬಗ್ಗೆ ಚರ್ಚೆ ನಡೆಯುತ್ತಿದೆ. ನಾನು ಹಿಂದೆ ಕೂಡ ಇದೇ ಮನೆಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಲಿ ಮಾಡಬೇಕೆಂದು ಒತ್ತಾಯ ಮಾಡಿದ್ದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾ ಮತ್ತು ಸೀಬರ್ಡ್‌ನಂತಹ ಯೋಜನೆಗಳು ಬಂದಿದ್ದರೂ ಕೂಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ಹಾಗೂ ಚಿಕ್ಕಮಗಳೂರು ಜಿಲ್ಲೆಗಳನ್ನು ಸೇರಿ ಒಂದು ಮಲೆನಾಡು ಅಭಿವೃದ್ಧಿ ಮಂಡಲಿ ರಚಿಸಬೇಕೆಂದು ಒತ್ತಾಯ ಮಾಡಿದ್ದೆವು. ಅದರ ಬಗ್ಗೆ ಮುಂಗಡ ಪತ್ರದಲ್ಲಿ ಏನೂ ಕಾಣಿಸಿಲ್ಲ. ಇದರ ಬಗ್ಗೆ ಪರಿಶೀಲಿಸಬೇಕೆಂದು ಹೇಳುತ್ತೇನೆ ನಮ್ಮ ಭಾಗದಲ್ಲಿ ಬಡತನ ತುಂಬಾ ಇದೆ. ಹಿಂದುಳಿದ ಪ್ರದೇಶವಾಗಿದೆ. ಜವಾಹರ್ ರೋಜ್‌ಗಾರ್ ಯೋಜನೆಯಲ್ಲಿ ಬರತಕ್ಕ ಹಣ ಕೂಡ ಕಡಿಮೆ ಬರುತ್ತದೆ. ನಮ್ಮ ಜಿಲ್ಲೆ ಭೌಗೋಳಿಕವಾಗಿ ವಿಸ್ತಾರವಾಗಿದ್ದರೂ ಜನಸಂಖ್ಯೆ ಕಡಿಮೆ ಇರುವುದರಿಂದ ಹಣ ಬರುತ್ತಿಲ್ಲ. ಬಸವಲಿಂಗಪ್ಪನವರು ಉತ್ತರ ಕೊಡುತ್ತಾ, ಜವಾಹರ್

ಯೋಜನೆಯಲ್ಲಿ ಬರುವಂಥ ಹಣವನ್ನು ಖರ್ಚು ಮಾಡಿಲ್ಲವೆಂದು ಹೇಳಿದರು, ಕೊಟ್ಟಿರತಕ್ಕ ಹಣ ಖರ್ಚು ಮಾಡಿದ್ದೇವೆ. ಕಳೆದ ಎರಡು ತಿಂಗಳಿಂದ ಹಣ ಬಂದಿಲ್ಲ. ಪ್ಲಾನ್‌ನಲ್ಲೂ ಬಂದಿಲ್ಲ. ನಾನ್‌ಪ್ಲಾನ್‌ನಲ್ಲಿಯೂ ಬಂದಿಲ್ಲ. ಆದರಿಂದ ಕೂಡಲೇ ಹಣಕಾಸಿನ ಸಚಿವರು ಹಣ ರಿಲೀಸ್ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಈ ಪಾಪ್ಯುಲಿಸ್ಟ್ ಸ್ಕೀಮ್ ಬಗ್ಗೆ ನಾನು ಹೆಚ್ಚು ಮಾತನಾಡುವುದಿಲ್ಲ. ಈ ಸೀರೆ, ಧೋತಿ ಬಗ್ಗೆ ಮಾನ್ಯ ಸಿಂಧ್ಯಾ ಅವರು ಹೇಳಿದರು ಸ್ಕೀಮ್ ಸರಿ ಇರಲಿಲ್ಲ ಎಂದು ಹೇಳಬಹುದು. ಪ್ರತಿಯೊಂದು ವ್ಯವಸ್ಥೆಯಲ್ಲಿ ಯಾವುದಾದರೂ ಒಂದು ಸಮಸ್ಯೆ ಇದ್ದೇ ಇರುತ್ತದೆ. ಆ ಒಂದು ಸೀರೆ ಧೋತಿ ಸ್ಕೀಮಿನಿಂದ ೨೫ ಸಾವಿರ ಕೈಮಗ್ಗಗಳನ್ನು ಉಪಯೋಗಿಸುವಂತ ಉದ್ಯೋಗವನ್ನು ನಾವು ಜನರೇಟ್ ಮಾಡಿದ್ದೆವು. ಆದರಲ್ಲಿ ೬೦-೬೫ ಸಾವಿರ ಜನರು ಕೆಲಸ ಮಾಡುತ್ತಿದ್ದರು. ಆದ್ದರಿಂದ ಇದರ ಬಗ್ಗೆ ವಿಚಾರ ಮಾಡಬೇಕು. ಇವೊತ್ತು ಆ ಜನರು ಎಲ್ಲಿಹೋಗಬೇಕು. ಅವರಿಗೆ ನಾವು ಉದ್ಯೋಗವಕಾಶ ಕೊಟ್ಟಿದ್ದೆವು, ಅವರ ಬಗ್ಗೆ ನಿಮ್ಮ ರೀಹೆಬಿಲಿಟೇಷನ್ ಪ್ರೋಗ್ರಾಮ್ ಏನು ? ಅದೇ ಪ್ರಕಾರ ಟೆಕ್ಸ್ಟ್‌ಬುಕ್ ಆಗಲಿ, ಯೂನಿಫಾರಮ್ ಆಗಲಿ, ಈ ಒಂದು ಸ್ಕೀಮುಗಳ ಜಾರಿಯಿಂದ ಸ್ಕೂಲಿಗೆ ಬರತಕ್ಕ ಮಕ್ಕಳ ಸಂಖ್ಯೆ ಯಾಸ್ತಿಯಾಗಿತ್ತು. ತಮ್ಮ ೨೦ ಅಂಶಗಳ ಕಾರ್ಯಕ್ರಮದಲ್ಲಿ ಇಂತಹ ಕಾರ್ಯಕ್ರಮವನ್ನು ಜಾರಿಗೆ ತರುತ್ತೇವೆಂದು ಹೇಳಿದ್ದೀರಿ. ಆದ್ದರಿಂದ ಇದರ ಬಗ್ಗೆ ಪುನರ್‌ಪರಿಶೀಲನೆ ಮಾಡಬೇಕಾಗುತ್ತದೆ. ಇನ್ನು ಕುಡಿಯುವ ನೀರಿನ ಬಗ್ಗೆ ಅರ್ಬನ್ ವಾಟರ್ ಸಪ್ಲೈಗೆ ೧೭ ಕೋಟಿ ರೂಪಾಯಿ ಅಲೋಕೇಷನ್ ಮಾಡಿದ್ದೀರಿ ಸಂತೋಷ. ಆದರೆ ಬೆಂಗಳೂರಿನ ಕಾವೇರಿ ಯೋಜನೆಗೆ ತಾವು ೮ ಕೋಟಿ ರೂಪಾಯಿ ಏನು ಪ್ರಾವಿಜನ್‌ಮಾಡಿದ್ದೀರಿ ಅದು ಬಹಳ ಕಡಿಮೆಯಾಗುತ್ತದೆ. ಲಾಸ್ಟ್‌ಟೈಮ್ ಪ್ರಾವಿಜನ್ ಹೆಚ್ಚು ಇತ್ತು. ಇವೊತ್ತು ತಾವು ೮ ಕೋಟಿ ರೂಪಾಯಿಗೆ ಇಳಿಸಿದಿರಿ. ಇವೊತ್ತು ಕಾವೇರಿಗೆ ಸಂಬಂಧಪಟ್ಟಂತೆ ಎಲ್ಲಾ ಟೆಂಡರ್ ಫೈನಲ್ ಆಗಿವೆ. ಈ ವರ್ಕ್ ಹೆಚ್ಚು ಸ್ಪೀಡ್ ಆಗಬೇಕಾದರೆ ಷೆಡ್ಯೂಲ್ ಪ್ರಕಾರ ಮುಗಿಯಬೇಕಾದರೆ ಪ್ರಾವಿಜನ್ ಹೆಚ್ಚು ಮಾಡಬೇಕಾಗುತ್ತದೆ. ಇಲ್ಲದೇ ಹೋದರೆ ಬೆಂಗಳೂರು ಜನರಿಗೆ ಷೆಡ್ಯೂಲ್‌ನಲ್ಲಿ ನೀರು ಕೊಡಲಿಕ್ಕೆ ನಿಮ್ಮಿಂದ ಅಸಾಧ್ಯ.

ಇನ್ನು ಸ್ಟೈಫಂಡರಿಯವರ ಬಗ್ಗೆ ರೆಗ್ಯುಲರೈಸ್ ಮಾಡುತ್ತೇವೆಂದು ಹೇಳಿದಿರಿ ಬಹಳ ಸಂತೋಷ. ಆದರೆ ಇದು ಟೈಮ್ ಬೌಂಡ್ ಫ್ರೇಮ್‌ನಲ್ಲಿ ಆಗಬೇಕು. ಇನ್ನು ಕೊನೆಯದಾಗಿ ಪವರ್ ಮತ್ತು ಇರಿಗೇಷನ್ ಸೆಕ್ಟಾರ್‌ಗೆ ಹೆಚ್ಚು ಮೊತ್ತ ಕೊಟ್ಟಿದ್ದೇವೆಂದು ಹೇಳಿದಿರಿ. ನಾವು ಆ ಮಾತು ಹೇಳಿದ್ದೆವು, ಆದರೆ ಇವೊತ್ತು ಏನಾಗಿದೆ, ಈ ಮುಂಗಡಪತ್ರದಲ್ಲಿ ಇರಿಗೇಷನ್ ಅಂಡ್ ಫ್ಲಡ್ ಕಂಟ್ರೋಲ್‌ಗೆ ೧೪.೫೪ ಪರ್ಸೆಂಟ್ ಅಲೋಕೇಷನ್ ನೀವು ಕೊಟ್ಟಿದ್ದೀರಿ. ನಿಮ್ಮ ಪ್ಲಾನ್ ಔಟ್‌ಲೇ ೧೧೫೫ ಕೋಟಿ ರೂಪಾಯಿ. ಕಳೆದ ವರ್ಷದ ಪ್ಲಾನ್ ಔಟ್‌ಲೇ ೧೦೫೫ ಕೋಟಿ ರೂಪಾಯಿ ಇದ್ದರೂ ಸಹ ೨೦೯.೯೦ ಕೋಟಿ ರೂಪಾಯಿ ಪ್ರೊವೈಡ್ ಮಾಡಿದ್ದೆವು. ಲಾಸ್ಟ್ ಔಟ್‌ಲೇ. ಅದೇ ಪ್ರಕಾರ ಪವರ್‌ಸೆಕ್ಟಾರ್‌ಗೆ ನಿಮ್ಮ ಔಟ್‌ಲೇ ೨೪.೧೧ ಪರ್ಸೆಂಟ್ ಕಳೆದ ವರ್ಷ ನಾವು ಕೊಟ್ಟಿದ್ದು ೨೬.೪೩ ಪರ್ಸೆಂಟ್ ಆದರೆ ಒಟ್ಟು ಹಣ ನಾವು ಪ್ರೊವೈಡ್ ಮಾಡಿದ್ದು ೨೭೫ ಕೋಟಿ ರೂಪಾಯಿ. ಈ ವರ್ಷ ತಾವು ಒಂದು ಕೋಟಿ ರೂಪಾಯಿ ಮಾತ್ರ ಹೆಚ್ಚು ಪ್ರೊವೈಡ್ ಮಾಡಿದ್ದೀರಿ ಈಗ ನಿಮ್ಮ ಪ್ಲಾನ್ ಔಟ್‌ಲೇ ಹೆಚ್ಚು ಇದ್ದಾಗ ಪವರ್‌ಗೆ ಆಗಲಿ, ಇರಿಗೇಷನ್‌ಗೆ ಆಗಲಿ, ಹೆಚ್ಚು ಹಣವನ್ನು ತಾವು ಕೊಟ್ಟಿಲ್ಲ. ಇನ್‌ಫ್ಲೇಷನ್ ಎಷ್ಟು ಆಗಿದೆ ಎನ್ನುವುದನ್ನು ಕನ್‌ಸಿಡರ್ ಮಾಡಬೇಕು. ಈಗ ತಾವು ಬಡ್ಜೆಟ್ ಸ್ಪೀಚ್‌ನಲ್ಲಿ ಏನು ಹೇಳಿದ್ದೀರಿ ? ಪವರ್ ಮತ್ತು ಇರಿಗೇಷನ್‌ಗೆ ಹೆಚ್ಚು ಹಣ ಕೊಡುತ್ತಿದ್ದೇವೆಂದು ಹೇಳಿದ್ದೀರಿ ನಿಜವಾಗಿ ನೀವು ಹಣ ಕೊಡಬೇಕಾಗಿದ್ದರೆ ಇನ್ನೂ ಹೆಚ್ಚಿನ ಹಣವನ್ನು ಅಲೋಕೇಟ್ ಮಾಡಬೇಕಾಗುತ್ತದೆ. ಇನ್ನು ತಮ್ಮ ಟ್ಯಾಕ್ಸೇಷನ್ ಪ್ರಪೋಸಲ್ ಬಗ್ಗೆ ನಾನು ಹೆಚ್ಚು ಹೊತ್ತು ತೆಗೆದುಕೊಳ್ಳುವುದಿಲ್ಲ. ಒಂದೆರಡು ಮಾತುಗಳಲ್ಲಿ ಮುಗಿಸುತ್ತೇನೆ. ತಮ್ಮ ಬಡ್ಜೆಟ್ ಪ್ರಪೋಸ್‌ನಲ್ಲಿ ಲಾಸ್ಟ್ ಪಾಯಿಂಟ್ ಆನ್ ಅರೇಕ್ ಅಬಾಲಿಷ್‌ನ ಬಗ್ಗೆ ಹೇಳಿದ್ದೀರಿ. ತಮ್ಮ ಬಡ್ಜೆಟ್ ಪ್ರಪೋಸಲ್ ಪೇಜ್ ನಂ. ೫೦ರಲ್ಲಿ ಹೇಳಿದ್ದೀರಿ. ೧೩ ಪರ್ಸೆಂಟ್ ಇದ್ದದ್ದು ೧೦ ಪರ್ಸೆಂಟ್‌ಗೆ ಬರೆದಿದೆ. ಅದರೆ ಈ ೧೩ ಪರ್ಸೆಂಟ್ ಜೊತೆಗೆ There was also 3% tax on last sale point. It has not been disclosed here. You should have disclosed here. What is the reason ? Why it has not been disclosed in the present rate of tax in Annexures ; You have to explain why you have not disclosed. ಇವೊತ್ತು ನೀವು ಅರೇಕ್ ಮೇಲೆ ಪರ್ಸೆಂಟ್ ಲಾಸ್ಟ್‌ಪಾಯಿಂಟ್‌ನಲ್ಲಿ ಕಡಿಮೆ ಮಾಡಿ ಅದೇ ಪ್ರಕಾರ ಅರೇಕ್ ಮೇಲೆ ತಾವು ಎಕ್ಸ್‌ಪೋರ್ಟ್ ಡ್ಯೂಟಿ ೫ ರೂಪಾಯಿಯಿಂದ ೬ ರೂಪಾಯಿ ಮಾಡಿದ್ದೀರಿ. ತಾವೇ ಟಾಡಿ ಅಬಾಲಿಷ್ ಮಾಡಿದ್ದೇವೆಂದು ಹೇಳುತ್ತೀರಿ. ಅದು ನಮ್ಮದು ಕಾರ್ಯಕ್ರಮ ಇತ್ತು. ಇವೊತ್ತು ಟಾಡಿ ಅಬಾಲಿಷ್

ಮಾಡಿರುವುದರಿಂದ, ೬೦ ಕೋಟಿ ರೂಪಾಯಿ ಹಾನಿಯಾಗಿದೆ ಎಂದು ಹೇಳುತ್ತೀರಿ, ಈ ತರಹ ಎಲ್ಲಾ ಎಕ್ಸೈಜ್ ಮಾಡಿಯೂ ಲೈಸೆನ್ಸ್ ಫೀ ಎರಡು ಲಕ್ಷದ್ದು, ಐದು ಲಕ್ಷ ರೂಪಾಯಿ ಮಾಡಿದ್ದೀರಿ. You are generating hardly Rs. 1 Crore in excise. To make up Rs.60 Crores, what is the exercise that you have made and to what extent you have burdened the liquor industry in the State. ಗ್ರಾಮಾಂತರ ಪ್ರದೇಶಗಳಲ್ಲಿ ಕೈಗಾರಿಕೆಗಳು ಹೆಚ್ಚು ಬೆಳೆಯಬೇಕು. ಆ ಸಣ್ಣ ಕೈಗಾರಿಕೆಗಳಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. Export duty for non-defence supplies has been increased from Rs. 1 per bulk litre to Rs. 20 per bulk litre. There must be some rationale behind fixing this amount. ಮಾನ್ಯ ಸಿಂಧ್ಯರವರು ಹೇಳಿದಹಾಗೆ ಮಹಾರಾಷ್ಟ್ರದಲ್ಲಿ ೫೦ ಪೈಸೆ ಇದೆ. ಬೇರೆ ರಾಜ್ಯದಲ್ಲಿ ೧ ರೂ. ೧.೫೦ ರೂಪಾಯಿ ಇದೆ. ನೀವು ಈಗಾಗಲೇ ೨೦ ರೂಪಾಯಿಯನ್ನು ಮಾಡಿದ್ದೀರಿ. You have said that you will get an additional revenue of Rs. 38 Crores per annum. For each bottle of 750 ml, you have to increase the rate by Rs. 35 and who will purchase your bottles ? ಒಂದು ರೂಪಾಯಿಯನ್ನು ೨೦ ರೂಪಾಯಿ ಮಾಡಿದರೆ. ೩೮ ಕೋಟಿ ಜನರೇಟ್ ಆಗುತ್ತದೆಂದು ಹೇಳಿದ್ದೀರಿ, ಅಂದರೆ ಒಂದು ರೂಪಾಯಿಗೆ ೨ ಕೋಟಿ ಜನರೇಟ್ ಆಗುತ್ತದೆ ಅಂದಹಾಗೆ ಆಯಿತು. Madras and Andhra people don't purchase. Nobody will purchase your bottle. If your export is less, automatically the sales tax revenue will go down. You are killing your own industry. By enhancing it from Rs. 1 to Rs. 2, you are generating Rs. 38 Crores. You have also said that the duty on arrack will be enhanced from the present Rs. 5 per bulk litre to Rs. 6 per bulk litre ; The additional revenue expected is Rs. 5 Crores, You have also said that because you have abolished toddy, the arrack sales will increase. The consumption of arrack is not increased in the State for the last 5-6 years. If you had enchanced from 5% to 8%, you would have got Rs. 15 Crores because one rupee increase will give Rs. 5 Crores which you have not done. By this method, you would have got Rs. 38 Crores or so, If you really want to help the poor people, you can do full prohibition. ಅರಾಕ್‌ಗೆ ಹೆಚ್ಚಿನ ಒಂದು ಇನ್‌ಸೆಂಟೀವ್ ಅನ್ನು ಹೆಚ್ಚಿನ ಒಂದು ಪ್ರೋತ್ಸಾಹವನ್ನು ಕೊಟ್ಟಾಂತಗುತ್ತದೆ, ಇದರ ಬಗ್ಗೆ ಪರಿಶೀಲನೆ ಮಾಡಬೇಕು. ನಾನು ಆಪಾದನೆ ಮಾಡಲು ಹೋಗುವುದಿಲ್ಲ. Small people also run distilleries. Whether it is possible for them to give this much of money every year ? In the case of molasses and rectified spirit, if the export is reduced, your stocks in molasses will increase. Then, you have to face another situation. ನಿಜವಾಗಿಯೂ ನಾವು ಏನು ಮಾಡಬೇಕೆಂದರೆ ಎಕ್ಸ್‌ಪೋರ್ಟ್‌ಗೆ ಎನ್‌ಕರೇಜ್ ಮಾಡಬೇಕು, ಇಂಪೋರ್ಟ್ ಅನ್ನು ಡಿಸ್‌ಕರೇಜ್ ಮಾಡಬೇಕು. ಆದರೆ ನೀವು ಇಂಪೋರ್ಟ್ ಮೇಲೆ ಏನೂ ಟ್ಯಾಕ್ಸ್ ಹಾಕಿಲ್ಲ. ತಮಿಳುನಾಡು ಆಂಧ್ರ ಕೇರಳದಿಂದ ಸಾರಾಯಿ ಬರುತ್ತದೆ. ಅದಕೆ ಸರ್‌ಚಾರ್ಜ್ ಹಾಕಿ. The policy of any Government is to encourrage exports and discourage imports. But here you have not done in that way. Why do you bother about the imports ? You put surchage. Why should you worry about those industries ? Let us worry about our industries. In Tamilnadu they have levied more tax on the imports. ಅಲ್ಲಿ ಎಕ್ಸ್‌ಪೋರ್ಟ್‌ಗೆ ಹೆಚ್ಚು ಎನ್‌ಕರೇಜ್ ಮಾಡಿದ್ದಾರೆ. ಇನ್ನು ಅಡ್ಮಿನಿಸ್ಟ್ರೇಷನ್ ಬಗ್ಗೆ ಟೈಟನ್ ಮಾಡುತ್ತೇವೆಂದು ಹೇಳಿದ್ದೀರಿ ಸಂತೋಷ ಅದನ್ನು ಮಾಡಬೇಕಾಗುತ್ತದೆ ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯನ್ನು ಸ್ವಲ್ಪ ಡೀಸೆಂಟ್ರಲೈಸೇಷನ್ ಮಾಡಬೇಕಾಗುತ್ತದೆ. ಬೆಳಗಾಂ ಡಿವಿಜನ್‌ನಲ್ಲಿ ೪೫ ಆಫೀಸುಗಳು ಇದೆ ಅಲ್ಲಿ ೬೦ ಕೋಟಿ ರೂಪಾಯಿ ರೆವಿನ್ಯೂದಿಂದ ಬರುತ್ತದೆ. ಧಾರವಾಡ ಡಿವಿಜನ್‌ನಲ್ಲಿ

೫೨ ಕಛೇರಿಗಳಿದ್ದು ೬೫ ಕೋಟಿ ರೂಪಾಯಿ ಬರುತ್ತದೆ. ದಾವಣಗೆರೆಯಲ್ಲಿ ೪೭ ಡಿವಿಜನ್‌ಗಳು ಇದ್ದು ೬೯ ಕೋಟಿ ರೂಪಾಯಿ ಬರುತ್ತದೆ. ಆ ಭಾಗದಲ್ಲಿ ಒಟ್ಟು ೧೪೦ ಆಫೀಸುಗಳು ಇದೆ ಅದರಿಂದ ೨೦೦ ಕೋಟಿ ರೆವಿನ್ಯೂ ಬರುತ್ತದೆ ಒಂದು ಸಣ್ಣ ಕೆಲಸಕ್ಕೆ ಅಲ್ಲಿರುವವರು ಬೆಂಗಳೂರಿಗೆ ಬರುತ್ತಾರೆ. ಇದನ್ನು ತಪ್ಪಿಸುವ ಸಲುವಾಗಿ ಧಾರವಾಡ–ಹುಬ್ಬಳ್ಳಿಯಲ್ಲಿ ಜೋನಲ್ ಆಫೀಸನ್ನು ಮಾಡಿದರೆ ಅಲ್ಲಿಯ ಜನರಿಗೆ ಅನುಕೂಲವಾಗುತ್ತದೆ. ಸ್ಟ್ರಿಕ್ಟ್ ಮಾನೀಟರಿಂಗ್ ಆಗಬಹುದು. ಇದರಿಂದ ಹಣಕಾಸಿನ ತೊಂದರೆ ಇಲ್ಲ. ಇಲ್ಲಿ ೪ ಜನ ಜಂಟಿ ಕಮೀಷನರ್‌ಗಳು ಈಗಾಗಲೇ ಇದ್ದಾರೆ ಇವರನ್ನು ತೆಗೆದು ಅಲ್ಲಿಗೆ ಶಿಫ್ಟ್ ಮಾಡಿದರೆ ಹಣಕಾಸಿನ ಹೊರೆ ಬರುವುದಿಲ್ಲ. ದೊಡ್ಡ ಕಟ್ಟಡ ಅಲ್ಲಿ ಬರುತ್ತಿದೆ. ಇದರಿಂದ ಸಾಕಷ್ಟು ಜನ ಟ್ರೇಡರ್ಸ್‌ಗೆ ಲಾಭವಾಗಬಹುದು. ಕೆಲಸ ಕೂಡ ಚೆನ್ನಾಗಿ ನಡೆಯುತ್ತದೆ. ಚುರುಕಾಗಿ ಕೆಲಸಗಳು ಸಾಗುತ್ತದೆ. ಇಷ್ಟು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ರಾಜ್ಯದ ಜನರ ಪರವಾಗಿ ಈ ಬಡ್ಜೆಟ್ ಇಲ್ಲವೆಂದು ಹೇಳುತ್ತಾ ಇದನ್ನು ವಿರೋಧ ಮಾಡುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

೪ ೩೦ ಪಿ.ಎಂ.

† ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).— ಮಾನ್ಯ ಸಭಾಧ್ಯಕ್ಷರೇ, ಈ ರಾಜ್ಯದ ಇಂದಿನ ಹಣಕಾಸಿನ ಸಚಿವರಾದ ಶ್ರೀ ರಾಜಶೇಖರ ಮೂರ್ತಿಯವರು ಅವರ ಆಡಳಿತದ ಅನುಭವದಲ್ಲಿ, ಹಿರಿತನದಲ್ಲಿ ಶ್ರೀಸಾಮಾನ್ಯ ಜನರು ಏನಿದ್ದಾರೆ ಗ್ರಾಮಾಂತರ ಪ್ರದೇಶದ ಜನರೇನು ಇದ್ದಾರೆ ಅವರಿಗೆ ಈ ಬಡ್ಜೆಟ್ ಸ್ಪಂದನ ಮಾಡತಕ್ಕಂತಹ ಆಯವ್ಯಯವನ್ನು ತಯಾರು ಮಾಡಿದ್ದಾರೆಂದು ಹೇಳಿದರೆ ತಪ್ಪಾಗುವುದಿಲ್ಲ. ಈ ಸಾರಿಯ ಬಡ್ಜೆಟ್ ಏನು ಮಾಡಿದ್ದಾರೆ ಇದು ಬಹಳ ಬೋಲ್ಡ್ ಸ್ಟೆಪ್ ಬಡ್ಜೆಟ್ ಎಂದು ಬಹಳ ಪ್ರಮುಖವಾಗಿರತಕ್ಕಂತಹ ದಿನಪತ್ರಿಕೆಗಳು ತಮ್ಮ ಎಡಿಟೋರಿಯಲ್ ಕಾಲಂನಲ್ಲಿ ಬರೆದಿವೆ. ಅದನ್ನು ನಾನೂ ಕೂಡ ಓದಿದ್ದೇನೆ. ಜನಸಾಮಾನ್ಯನ ಪ್ರಗತಿಗೆ ಆತನ ಶ್ರೇಯೋಭಿವೃದ್ಧಿಗೆ ಸ್ಪಂದನ ನೀಡತಕ್ಕಂತಹ ಈ ಬಡ್ಜೆಟನ್ನು ತಂದಿರುವ ಹಣಕಾಸು ಸಚಿವರನ್ನು ನಾನು ಅಭಿನಂದಿಸುತ್ತೇನೆ ಇದನ್ನು ಸ್ವಾಗತ ಮಾಡಿ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಯಾವುದೇ ಸರಕಾರವಾದರೂ ಕೂಡ ಸರಿಯಾಗಿ ಕೆಲಸ ಮಾಡಬೇಕಾದರೆ ಎಕ್ಸೈಸ್ ಲಾಬಿ ಜೂಟ್ ಲಾಬಿ ಮತ್ತು ಸರಕಾರವನ್ನು ನಿಯಂತ್ರಣ ಮಾಡತಕ್ಕಂಥ ಲಾಬಿಗಳು ಏನು ಇದೆ ಅದರ ಮುಲಾಜುಗಳಿಗೆ ಈ ಸರಕಾರ ಒಗ್ಗೊಡದೇ ಹೋದರೆ, ನೇರವಾಗಿ ಯಾವುದಕ್ಕೆ ತೆರಿಗೆಯನ್ನು ಹಾಕಬೇಕೋ ಅದಕ್ಕೆ ನೇರವಾಗಿ ತೆರಿಗೆ ಹಾಕಬಹುದು ಮತ್ತು ಎಲ್ಲಿ ನೇರವಾಗಿ ತೆರಿಗೆಯನ್ನು ವಸೂಲು ಮಾಡಬೇಕೋ ಅದನ್ನು ವಸೂಲು ಮಾಡಬಹುದು, ಈ ಎರಡೂ ಕೆಲಸವನ್ನು ಸಮರ್ಪಕವಾಗಿ ಮಾಡಿದ ಪಕ್ಷದಲ್ಲಿ ಈ ಸರಕಾರದಲ್ಲಿ ಹಣಕಾಸಿನ ಕೊರತೆಯಿರುವುದಿಲ್ಲ. ಜನರ ಹಿತದೃಷ್ಟಿಯಿಂದ ಶ್ರೀ ಸಾಮಾನ್ಯನ ಕಲ್ಪನೆಗೆ ಸಹಾಯವಾಗತಕ್ಕಂತಹ ಕೆಲಸ ಮಾಡತಕ್ಕಂತಹ ವ್ಯವಸ್ಥೆ ಇದರಲ್ಲಿ ಇದೆ. ೧೪೭ ಕೋಟಿ ರೂಪಾಯಿ ಹೆಚ್ಚು ಕರಭಾರವನ್ನು ಹಾಕಿರತಕ್ಕಂಥಾದ್ದನ್ನು ನಾವು ನೋಡುತ್ತಿದ್ದೇವೆ. ನಮ್ಮ ರಾಜ್ಯದ ಒಟ್ಟು ಆದಾಯ ೩೮೦೦ ಕೋಟಿ ರೂಪಾಯಿಗಳು ಇದೆ, ಇಂಥಾದ್ದರಲ್ಲಿ ಈ ೧೪೭ ಕೋಟಿ ಅಂಥಾ ಹೆಚ್ಚೇನೂ ಅಲ್ಲವೆಂಬುದು ನನ್ನ ಭಾವನೆ. ಆದರೂ ಸಹಿತ ಗ್ರಾಮಾಂತರ ಪ್ರದೇಶದಲ್ಲಿ ಇವತ್ತು ಬಹಳ ಮುಖ್ಯವಾಗಿ ಮಳೆಯನ್ನೇ ನೆಚ್ಚಿಕೊಂಡು ಮಳೆಯ ಆಧಾರದ ಮೇಲೆಯೇ ಬೆಳೆಯನ್ನು ಬೆಳೆಯತಕ್ಕ ಪದಾರ್ಥಗಳು ಏನಿವೆ ಅವುಗಳನ್ನು ಬಿಟ್ಟರೆ ಇನ್ನುಳಿದ ಮೆಣಸಿನಕಾಯಿ, ಬೆಲ್ಲ, ಹುಣಿಸೇ—ಹಣ್ಣು ಇವುಗಳ ಮೇಲೆ ನೀವು ಏನು ತೆರಿಗೆಯನ್ನು ಹಾಕಿದ್ದೀರಿ ಅದನ್ನು ಪುನರ್ ಪರಿಶೀಲಿಸಬೇಕೆಂದು ನಾನು ಸಲಹೆ ಮಾಡುತ್ತೇನೆ.

ಟ್ರ್ಯಾಕ್ಟರ್, ಟ್ರೈಲರ್ ಬಗ್ಗೆ ಹೇಳುವುದಾದರೆ ಇವುಗಳ ಮೇಲೆಯೂ ಕೂಡ ನೀವು ತೆರಿಗೆಯನ್ನು ಹಾಕಿದ್ದೀರಿ. ರೈತರು ಹೆಚ್ಚು ಹೆಚ್ಚು ಬೆಳೆಯನ್ನು ಬೆಳೆಯಬೇಕು, ರೈತರು ಮುಂದೆ ಬರಬೇಕು. ಎಂದು ನಾವು ಹೇಳುತ್ತಿರುತ್ತೇವೆ. ಆದರೆ ಆ ರೈತರು ಉಳುಮೆ ಮಾಡಲು ಉಪಯೋಗ ಮಾಡತಕ್ಕ ಟ್ರ್ಯಾಕ್ಟರ್. ಪವರ್ ಟಿಲ್ಲರ್, ಟ್ರೈಲರ್‌ಗಳ ಮೇಲೆ ನೀವು ಟ್ಯಾಕ್ಸನ್ನು ಹಾಕಿದ್ದೀರಿ, ಇದು ಸರಿಯಲ್ಲ. ಇದನ್ನು ಪುನರ್ ಪರಿಶೀಲಿಸಬೇಕೆಂದು ನಾನು ಮಾನ್ಯ ಹಣಕಾಸಿನ ಮಂತ್ರಿಗಳಲ್ಲಿ ವಿನಂತಿಮಾಡಿಕೊಳ್ಳುತ್ತೇನೆ.

ಇನ್ನು ಸಕ್ಕರೆ ಕಾರ್ಖಾನೆಗಳಲ್ಲಿ ಕಬ್ಬನ್ನು ತೆಗೆದುಕೊಳ್ಳುವಾಗ ಅದಕ್ಕೆ ಪರ್ಚೇಸ್ ಟ್ಯಾಕ್ಸ್‌ನ್ನು ಹಾಕಿದ್ದೀರಿ. ಈಗಾಗಲೇ ನಮ್ಮ ರಾಷ್ಟ್ರದಲ್ಲಿ ಈ ಸಕ್ಕರೆ ಕಾರ್ಖಾನೆಗಳಲ್ಲಿ ಸುಮಾರು ೭೦ ಕೋಟಿ ರೂಪಾಯಿ ಲಾಸ್ ಆಗಿದೆ ಎಂದು ಗೊತ್ತಿದೆ, ಈ ಕಾರ್ಖಾನೆಗಳು ಏತಕ್ಕೆ ಇಷ್ಟು ಲಾಸ್‌ನಲ್ಲಿವೆ ಎಂದರೆ

ಸರ್ಕಾರದವರು ಒಂದು ನೀತಿಯನ್ನು ಮಾಡಿ ಅಲ್ಲಿ ಕೆಲಸ ಮಾಡತಕ್ಕವರಿಗೆ ೩ನೇ ವೇಜಸನ್ನು ಕೊಡ ಬೇಕೆಂದು ಹೇಳಿದ್ದೀರಿ, ಅಲ್ಲದೆ ಇವತ್ತು ೧೨೦೦ ಟನ್ ಕಬ್ಬನ್ನು ಅರೆಯತಕ್ಕ ಒಂದು ಸಕ್ಕರೆ ಕಂಪೆನಿ ೧ ವರ್ಷಕ್ಕೆ ೪೦ ಲಕ್ಷ ರೂಪಾಯಿಗಳನ್ನು ಈ ವೇಜಸ್ ಆಗಿ ಕೊಡಬೇಕಾಗುತ್ತದೆ. ಇಂಥ ಕಠಿಣ ಪರಿಸ್ಥಿತಿ ಇರುವಾಗ ನೀವು ಪರ್ಚೇಸ್ ಟ್ಯಾಕ್ಸನ್ನೂ ಕೂಡ ಹಾಕಿದರೆ ಅವರು ಏನು ಮಾಡಬೇಕು ? ಈಗಾಗಲೇ ಅನಾರೋಗ್ಯಕರವಾದ ೨ ಸಕ್ಕರೆ ಕಾರ್ಖಾನೆಗಳನ್ನು ಈ ಹಿಂದಿನ ಸರ್ಕಾರದವರು ಮಾರಾಟ ಮಾಡಿರತಕ್ಕದ್ದು ನಿಮಗೆ ಗೊತ್ತೇ ಇದೆ. ಆ ಕಾರ್ಖಾನೆಗಳು, ಎಂದರೆ ಗೌರಿಬಿದನೂರು ಮತ್ತು ಕೊಳ್ಳೇಗಾಲ ಸಕ್ಕರೆ ಕಾರ್ಖಾನೆಗಳು. ಇವುಗಳನ್ನು ನಾವು ನಡೆಸುವುದಕ್ಕಾಗುವುದಿಲ್ಲ ಎಂದು ಹಿಂದಿನ ಸರ್ಕಾರದವರು ಬಹಳ ಕಡಿಮೆ ಬೆಲೆಗೆ ಮಾರಾಟ ಮಾಡಿದರು. ಮತ್ತೆ ನೀವು ಆ ಒಂದು ಪರಿಸ್ಥಿತಿಗೆ ಹೋಗಬಾರದು. ಆದ್ದರಿಂದ ದಯಮಾಡಿ ತಾವು ಕಬ್ಬಿನ ಮೇಲೆ ಏನು ಪರ್ಚೇಸ್ ಟ್ಯಾಕ್ಸನ್ನು ಹಾಕಿದ್ದೀರಿ ಇದನ್ನು ಪುನರ್ ಪರಿಶೀಲಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ಮತ್ತೊಂದು ಬಹಳ ಸಂತೋಷದ ವಿಚಾರ ಎಂದರೆ ಶ್ರೀಸಾಮಾನ್ಯನ ಪರವಾಗಿ ಹೇಳುವಂಥಾದ್ದು. ಇವತ್ತು ಈ ಸದನದಲ್ಲಿ ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ನೋಡಿದಾಗ ೫೮೮ ಕೋಟಿ ರೂಪಾಯಿಗಳನ್ನು ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಾಬಿಗೋಸ್ಕರ ಒದಗಿಸಿರತಕ್ಕದ್ದನ್ನು ನಾವು ನೋಡುತ್ತಿದ್ದೇವೆ ಗ್ರಾಮಾಂತರ ಪ್ರದೇಶದಲ್ಲಿರತಕ್ಕ ಜನರು ತಮಗೆ ಏನು ನೀರಾವರಿ ಅನುಕೂಲವಿಲ್ಲ. ನಮಗೆ ವಿದ್ಯುಚ್ಛಕ್ತಿ ಇಲ್ಲ ಎಂದು ಹೇಳುತ್ತಿದ್ದಾರೆ ಆ ಸೌಲಭ್ಯಗಳನ್ನು ಶೀಘ್ರವಾಗಿ ಒದಗಿಸುವ ಸಲುವಾಗಿ ೫೮೮ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರತಕ್ಕ ಮೊಟ್ಟಮೊದಲ ಸರ್ಕಾರ ಇದು ಎಂದು ಹೇಳಿದರೆ ತಪ್ಪಾಗಲಾರದು. ಈ ೫೮೮ ಕೋಟಿ ರೂಪಾಯಿಗಳ ಪೈಕಿ ನೀರಾವರಿ ಬಾಬಿಗೋಸ್ಕರ ೩೧೨ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿರುವುದಲ್ಲದೆ ವಿದ್ಯುಚ್ಛಕ್ತಿ ಬಾಬಿಗೂ ಕೂಡ ಹೆಚ್ಚಿನ ಹಣವನ್ನೇ ಇಟ್ಟಿರತಕ್ಕದ್ದು ಸಂತೋಷದ ಸಂಗತಿ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದಾದರೆ, ಹಿಂದಿನ ಸರ್ಕಾರದವರೂ ಕೂಡ ಈ ವಿದ್ಯುಚ್ಛಕ್ತಿ ಬಾಬಿಗೋಸ್ಕರ ೮೨—೮೩ರಲ್ಲಿ ಮಾನ್ಯ ಗುಂಡೂರಾಯರ ಆಡಳಿತ ಕಾಲದಲ್ಲಿ ೧೮೧ ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿತ್ತು. ಆ ಪೈಕಿ ೧೮೦ ಕೋಟಿ ರೂಪಾಯಿಗಳನ್ನು ಖರ್ಚುಮಾಡಿ ವಿದ್ಯುಚ್ಛಕ್ತಿಯ ಕೊರತೆಯನ್ನು ಸಾಕಷ್ಟು ಮಟ್ಟಿಗೆ ನಿವಾರಣೆ ಮಾಡಿತ್ತು. ಅನಂತರ ೮೪—೮೫ನೇ ಸಾಲಿನಲ್ಲಿದ್ದ ಸರ್ಕಾರದವರು ೮೭ ಕೋಟಿ ರೂಪಾಯಿ ಗಳನ್ನು ತೆಗೆದಿಟ್ಟು ಅದರಲ್ಲಿ ಸ್ವಲ್ಪಮಟ್ಟಿನ ಹಣವನ್ನು ಖರ್ಚು ಮಾಡಿದರು. ೧೯೮೭—೮೮ನೇ ಸಾಲಿನಲ್ಲಿ ೧೪೯ ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಆ ಪೈಕಿ ಕೇವಲ ೭೨ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚುಮಾಡಿ ತಮ್ಮ ಗುರಿಯನ್ನು ಮುಟ್ಟಲು ವಿಫಲರಾದರು. ೧೯೮೮—೮೯ನೇ ಸಾಲಿನಲ್ಲಿ ೨೧೦ ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ಆ ಪೈಕಿ ಖರ್ಚು ಮಾಡಿದುದು ಕೇವಲ ೬೦ ಕೋಟಿ ರೂಪಾಯಿಗಳು ಮಾತ್ರ. ಹಿಂದಿನ ಸರ್ಕಾರದವರಂತೆ ನೀವೂ ಕೂಡ ಇಲ್ಲಿ ೩೧೨ ಕೋಟಿ ರೂಪಾಯಿ ಗಳನ್ನು ತೆಗೆದಿಟ್ಟು ಅದನ್ನು ಖರ್ಚು ಮಾಡದೆ ತಮ್ಮ ಗುರಿಯನ್ನು ಮುಟ್ಟದೇ ಹೋದರೆ ಅವರಿಗೂ ನಿಮಗೂ ವ್ಯತ್ಯಾಸವಿಲ್ಲದಂತಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ೪೭ ಸಾವಿರ ಸಣ್ಣ ಕೈಗಾರಿಕೆಗಳು ೬ ಲಕ್ಷ ಐ. ಪಿ.ಸೆಟ್ಟುಗಳು ಇವೆ. ಬಹಳ ವರ್ಷಗಳಿಂದಲೂ ಕೂಡ ರಾಜ್ಯದಲ್ಲಿರತಕ್ಕ ರೈತರು ತಮಗೆ ಸರಿಯಾಗಿ ವಿದ್ಯುಚ್ಛಕ್ತಿ ಸಿಗುತ್ತಿಲ್ಲ, ವಿದ್ಯುಚ್ಛಕ್ತಿ ಸಿಗುತ್ತಿಲ್ಲ ಎಂದು ಕೂಗು ಹಾಕುತ್ತಿದ್ದಾರೆ ಕಳೆದ ೨ ವರ್ಷಗಳಿಂದ ನಮ್ಮ ರಾಜ್ಯದ ರೈತರು ೬೭ ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡಿಕೊಡಿ ಎಂದು ಅರ್ಜಿಗಳನ್ನು ಹಾಕಿಕೊಂಡು ಕುಳಿತಿದ್ದಾರೆ. ಅವರು ಬಾವಿಗಳನ್ನು ತೆಗೆಸಿಕೊಂಡಿದ್ದಾರೆ, ಬೋರ್‌ಗಳನ್ನು ಹಾಕಿಸಿಕೊಂಡಿದ್ದಾರೆ. ಬ್ಯಾಂಕ್‌ಗಳಿಂದ ಸಾಲವನ್ನು ತಂದಿದ್ದಾರೆ ಆದರೆ ಇವತ್ತಿನವರೆಗೂ ಅವರಿಗೆ ವಿದ್ಯುಚ್ಛಕ್ತಿಯನ್ನು ಕೊಡುವುದಕ್ಕೆ ನಮ್ಮಿಂದಾಗಿಲ್ಲ. ಇದನ್ನು ನೋಡಿದರೆ ಇವತ್ತು ಏನು ಈ ಬಜೆಟ್‌ನಲ್ಲಿ ನೀವು ನೀರಾವರಿ ಮತ್ತು ವಿದ್ಯುಚ್ಛಕ್ತಿ ಬಾಬಿಗೋಸ್ಕರ ಹಣವನ್ನು ತೆಗೆದಿಟ್ಟಿದ್ದೀರಿ ಇದನ್ನು ಸಂಪೂರ್ಣವಾಗಿ ಖರ್ಚುಮಾಡಿ ನಿಮ್ಮ ಗುರಿಯನ್ನು ಮುಟ್ಟಲು ತೀವ್ರ ಪ್ರಯತ್ನವನ್ನು ಮಾಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ವಿದ್ಯುಚ್ಛಕ್ತಿ ಪ್ರಾಜೆಕ್ಟ್‌ಗಳು ಏನು ಇರುತ್ತವೆ ಅವುಗಳನ್ನು ಮುಗಿಸಬೇಕಾದರೆ ಸಧ್ಯದಲ್ಲಿ ನಮ್ಮ ರಾಜ್ಯದಲ್ಲಿರತಕ್ಕಂಥ ೪—೫ ಯೋಜನೆಗಳು ಅವುಗಳಿಗೆ ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ. ಆದರೆ ನೀವು ಈ ರೀತಿ ಬರೀ ೨೦—೩೦ ಕೋಟಿ ರೂಪಾಯಿಗಳನ್ನು ಕೊಟ್ಟು ಈ ಕ್ಷಣದಲ್ಲಿಯೇ ನಾವು ವಿದ್ಯುಚ್ಛಕ್ತಿಯನ್ನು ಸರಿಹೊಂದಿಸುತ್ತೇವೆಂದು ಹೇಳಿದರೆ ಅದು ಆಗದೆ ಇರತಕ್ಕಂಥ ಮಾತು. ಆಯವ್ಯಯ ಮುಂಗಡ ಪುಸ್ತಕದಲ್ಲಿ ಹೇಳಿರುವ ಪ್ರಕಾರ ೧೯೯೫ನೇ ಇಸವಿಗೆ ೩೬,೮೦೦ ಮಿಲಿಯನ್ ಯೂನಿಟ್ಸ್ ವಿದ್ಯುಚ್ಛಕ್ತಿ ನಮಗೆ ಬೇಕಾಗುತ್ತದೆ. ಅದರ ಪ್ರಕಾರ ನಮ್ಮಲ್ಲಿ ತಯಾರಾಗತಕ್ಕಂಥದ್ದು ೧೨ ಸಾವಿರ ಯೂನಿಟ್ಸ್‌ಗಳು ಮಾತ್ರ, ನಾಲ್ಕೂವರೆ ಸಾವಿರ, ನಾಲ್ಕು

ಸಾವಿರದ ಎಂಟನೂರು ಯೂನಿಟ್ಸ್‌ಗಳಷ್ಟು ವಿದ್ಯುಚ್ಛಕ್ತಿಯನ್ನು ನಾವು ಹೊರರಾಜ್ಯಗಳಿಂದ ತರಿಸಿಕೊಳ್ಳುತ್ತಿದ್ದೇವೆ. ಮಹಾರಾಷ್ಟ್ರದವರಿಂದಲೂ ತರಿಸಿಕೊಳ್ಳುತ್ತಿದ್ದೇವೆ. ಅವರೇನಾದರೂ ವಿದ್ಯುಚ್ಛಕ್ತಿಯನ್ನು ಕೊಡಲಿಕ್ಕೆ ಆಗುವುದಿಲ್ಲವೆಂದರೆ ಬಹುಶಃ ವಿದ್ಯಾರ್ಥಿಗಳು ಓದುವುದಕ್ಕೂ ಕರೆಂಟ್ ಇರುವುದಿಲ್ಲ. ಹಳ್ಳಿಗಳಲ್ಲಿರುವ ರೈತರಿಗೂ ನೀರನ್ನು ಬಿಡುವುದಕ್ಕೆ ಕರೆಂಟ್ ಇಲ್ಲ ಎನ್ನತಕ್ಕಂಥ ಮಾತನ್ನು ಹೇಳಬೇಕಾಗುತ್ತದೆ, ಅದು ಇನ್ನೂ ಹೆಚ್ಚಿನ ರೀತಿಯಲ್ಲಿ ಉಲ್ಬಣಗೊಳ್ಳತಕ್ಕ ವ್ಯವಸ್ಥೆಯಾಗುತ್ತದೆ. ಇಷ್ಟೆಲ್ಲ ಆದರೂ ಸಹ ೧೬,೮೦೦ ಯೂನಿಟ್ಸ್ ವಿದ್ಯುಚ್ಛಕ್ತಿಯನ್ನು ತಯಾರು ಮಾಡದೆ ಇರತಕ್ಕಂಥದ್ದನ್ನು ಅದನ್ನು ಸರಿಪಡಿಸಿಕೊಳ್ಳಬೇಕಾದರೆ ಇದು ನಮ್ಮ ಕೈಯಲ್ಲಿ ಇದೆ ನಮ್ಮ ರಾಜ್ಯದ ವ್ಯವಸ್ಥೆಯಲ್ಲಿ ಈಗಾಗಲೇ ಅಂಕಿ ಅಂಶಗಳಿಂದ ಯೋಜನೆಗಳನ್ನು ಹಾಕಿಕೊಂಡಿದ್ದೇವೆ. ಈ ಯೋಜನೆಗಳನ್ನು ಮುಗಿಸದೇ ಹೋದರೆ ನೀವು ಗುರಿಯನ್ನು ಮುಟ್ಟಲಿಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ಯಲಹಂಕದಲ್ಲಿ ನಾಲ್ಕು ಡೀಸೆಲ್ ಸೆಟ್ಟುಗಳನ್ನು ಸ್ಥಾಪನೆ ಮಾಡಿ, ವಿದ್ಯುಚ್ಛಕ್ತಿಯನ್ನು ತಯಾರು ಮಾಡುತ್ತೇವೆಂದು ಹೇಳಿ ಅಂಕಿಅಂಶಗಳನ್ನು ಹಾಕಿಕೊಂಡು ಸುಮಾರು ೧೪ ಕೋಟಿ ರೂಪಾಯಿಗಳನ್ನು ಸಣ್ಣ ಕೈಗಾರಿಕೆಗಳ ಮಾಲೀಕರುಗಳಿಂದ, ಜನತೆಯಿಂದ ವಸೂಲು ಮಾಡಿದಂಥ ಹಣ ಎಲ್ಲೋ ಒಂದು ಕಡೆ ಇಟ್ಟಿದ್ದೀರಿ. ಆ ಹಣಕ್ಕೆ ಬಡ್ಡಿಯನ್ನೂ ಕೂಡ ಕೊಡುತ್ತಿಲ್ಲ. ಮತ್ತು ಆ ಕೆಲಸಕ್ಕೆ ಪ್ರಯತ್ನವನ್ನೂ ಕೂಡ ಮಾಡುತ್ತಿಲ್ಲ. ದಯವಿಟ್ಟು ಹಣಕಾಸಿನ ಮಂತ್ರಿಗಳನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ ವಿದ್ಯುಚ್ಛಕ್ತಿಯ ಉತ್ಪಾದನೆಗಾಗಿ ಹಣ ಏನು ಇಟ್ಟಿದ್ದೀರಿ ಆ ಹಣವನ್ನು ಉಪಯೋಗಿಸಿಕೊಂಡು ಡಿಸೆಲ್ ಸೆಟ್‌ಗಳನ್ನು ಪ್ರಾರಂಭ ಮಾಡಿ. ಹಾಗೆ. ರಾಯಚೂರು ಥರ್ಮಲ್ ಯೂನಿಟ್ ಇವುಗಳನ್ನು ಶೀಘ್ರವಾಗಿ ಮುಗಿಸಿ. ದುಡ್ಡು ನಮ್ಮಲ್ಲಿ ಇಲ್ಲದಿದ್ದರೆ ಹೊರದೇಶಗಳಿಂದ ತನ್ನಿ, ಅವರು ತರುವುದಕ್ಕೆ ಹೋಗಿದ್ದರು ಆ ರೀತಿಯಲ್ಲಿ ನಿಜವಾಗಿಯೂ ಹಣವನ್ನು ತಂದು ಈ ಪ್ರಾಜೆಕ್ಟ್‌ಗಳನ್ನು ಮುಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಇತ್ತೀಚೆಗೆ ಕರ್ನಾಟಕದಲ್ಲಿ ವಿದ್ಯುಚ್ಛಕ್ತಿಯನ್ನು ತಯಾರು ಮಾಡಲಿಕ್ಕೆ ಒಂದು ಏಜೆನ್ಸಿ ಇದೆ ಕರ್ನಾಟಕ ಪವರ್ ಕಾರ್ಪೊರೇಷನ್ ಎಂದು. ಇನ್ನೊಂದು ವಿದ್ಯುತ್ತನ್ನು ಸರಬರಾಜು ಮಾಡತಕ್ಕಂಥದ್ದು ಕೆ.ಇ.ಬಿ. ಎಂದು, ಎರಡು ಏಜೆನ್ಸಿಗಳು ಏತಕ್ಕೆ ಬೇಕು ? ಇವತ್ತು ಇರತಕ್ಕಂಥ ಚೀಫ್ ಇಂಜಿನೀಯರ್ಸ್‌ಗಳು ಜಾಸ್ತಿ ಸಿಬ್ಬಂದಿ ಜಾಸ್ತಿ ಎಂದು ಹೇಳುವಾಗ ಇವೆರಡನ್ನು ಸಹಿತ ಮರ್ಜ್‌ಮಾಡಿ ಎರಡನ್ನು ಒಂದೇ ಮಾಡಿ ಒಂದೇ ಒಂದು ಇಲಾಖೆಯಲ್ಲಿ ಇಡುವ ಕೆಲಸ ಮಾಡಬೇಕು. ಇದರಿಂದ ಸಹಸ್ರಾರು ಕೋಟಿ ರೂಪಾಯಿಗಳನ್ನು ಉಳಿಸುವುದಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ದಯವಿಟ್ಟು ಸರ್ಕಾರ ಇದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಕೆ.ಇ.ಬಿ. ಮತ್ತು ಪವರ್ ಕಾರ್ಪೊರೇಷನ್ ಇವೆರಡನ್ನೂ ಒಂದೇ ಮಾಡಬೇಕೆಂದು ನಾನು ಸಲಹೆಯನ್ನು ತಮ್ಮ ಮುಂದಿಡಲು ಬಯಸುತ್ತೇನೆ.

ಇದಾದ ಮೇಲೆ ಈ ರಾಜ್ಯದಲ್ಲಿ ಸುಮಾರು ೫೬ ಪಬ್ಲಿಕ್ ಸೆಕ್ಟಾರ್ ಕೈಗಾರಿಕೆಗಳು ಇವೆ. ಮಾನ ಪಿ.ಜಿ.ಆರ್. ಸಿಂಧ್ಯರವರು ಹೇಳಿದಂತೆ ಎಷ್ಟೋ ಸಹಸ್ರಾರು ಕೋಟಿ ರೂಪಾಯಿಗಳ ಬಂಡವಾಳವನ್ನು ಹೂಡಿರತಕ್ಕಂಥ ನಮ್ಮ ಸರ್ಕಾರ ೭೫೦–೮೦೦ ಕೋಟಿ ರೂಪಾಯಿಗಳಷ್ಟು ಲಾಸ್‌ನಲ್ಲಿದೆ. ಯಾವುದಾದರೂ ಕೈಗಾರಿಕೆಗಳನ್ನು ಸುಮಾರು ಹತ್ತು ಲಕ್ಷ ರೂಪಾಯಿ ಬಂಡವಾಳವನ್ನು ಹಾಕಿ ಸ್ಥಾಪನೆ ಮಾಡಿದರು ಆ ಕೈಗಾರಿಕೆಗಳು ಮುಳುಗಡೆಯಾಗಿ ಮನೆಮಾರಗಳನ್ನು ಮಾರಿಕೊಂಡು ಹೋಗಬೇಕಾದ ಸಂದರ್ಭವಿರುತ್ತದೆ. ಬೃಹತ್ ಪ್ರಮಾಣದಲ್ಲಿ ಬಂಡವಾಳವನ್ನು ಹಾಕಿರತಕ್ಕಂಥ ಕೈಗಾರಿಕೆಗಳು ಏತಕ್ಕೆ ನಷ್ಟ ಅನುಭವಿಸುತ್ತದೆಂದರೆ ವಿದ್ಯುಚ್ಛಕ್ತಿಯ ಅಭಾವವೇ ಮುಖ್ಯ ಕಾರಣವಾಗಿರುತ್ತದೆ. ಇದಲ್ಲದೆ ಆ ಒಂದು ಕಂಪನಿಯಲ್ಲಿ ಉತ್ಪಾದನೆ ಮಾಡತಕ್ಕಂಥ ವಸ್ತುಗಳು ಏನು ಇರುತ್ತವೆ ಆ ವಸ್ತುಗಳಿಗೆ ಮಾರ್ಕೆಟ್ ಸರಿಯಾಗಿ ಸಿಕ್ಕದಿರುವಾಗ ಲಾಸ್ ಆಗುತ್ತವೆ, ಅಲ್ಲಿ ಕೆಲಸ ಮಾಡತಕ್ಕಂಥ ನೌಕರರು ಸರಿಯಾಗಿ ಕೆಲಸ ಮಾಡದೆ ಹೋದರೆ ಆ ಕಂಪನಿಗಳು ಲಾಸ್ ಆಗತಕ್ಕಂಥದ್ದು ಇರುತ್ತದೆ. ವಿದ್ಯುಚ್ಛಕ್ತಿಗೆ ಸಾಕಷ್ಟು ಹಣವನ್ನು ಕೊಟ್ಟಿದ್ದರೂ ೫೬ ಯೂನಿಟ್‌ಗಳಲ್ಲಿ ೨೩–೨೪ ಕೈಗಾರಿಕೆಗಳು ನಷ್ಟ ಅನುಭವಿಸುತ್ತಿದೆ. ಇದಕ್ಕೆ ಏನು ಕಾರ್ಯಕ್ರಮವನ್ನು ಸರ್ಕಾರದವರು ಹಾಕಿಕೊಂಡಿರುತ್ತಾರೆಂಬುದನ್ನೂ ಕೂಡ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳನ್ನು ನೇಮಕ ಮಾಡಿಕೊಳ್ಳುತ್ತಿರುತ್ತೀರಿ. ಬಹುಶಃ ಯಾವ ಸರ್ಕಾರ ಬಂದರೂ ಸಹ ಅವರ ಜೊತೆಯಲ್ಲಿಯೇ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಬಂದುಬಿಡುತ್ತಾರೆ. ಅವರನ್ನು ಜೊತೆಯಲ್ಲಿಯೇ ತೆಗೆದುಕೊಂಡು ಬಂದು ಬಿಡುತ್ತಾರೆ. ೧೭೮ ಜನ ಬೆಂಬಲ ಇರತಕ್ಕಂಥ ನಮ್ಮ ಮಾನ್ಯ ಮುಖ್ಯಮಂತ್ರಿಗಳಾದ ವೀರೇಂದ್ರ ಪಾಟೀಲ್‌ರವರು ಯೋಚನೆ ಮಾಡಬೇಕು. ಸರ್ಕಾರ ಒಂದು ದಿಟ್ಟವಾದ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಈ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳನ್ನು ಬಲಿಯಾಗಬೇಕು. ನಗರದಲ್ಲಿ ಅವರುಗಳು ಕಟ್ಟಿಕೊಂಡಿರುವ ಮನೆಗಳನ್ನು ನೋಡಿದರೆ ಸಣ್ಣ ಮಿನಿ ವಿಧಾನಸೌಧಗಳನ್ನು ನೋಡಿದಂತಾಗುತ್ತದೆ.

ಒಬ್ಬ ಸದಸ್ಯರು.—ತಾವು ಎಷ್ಟು ಮನೆಗಳನ್ನು ವಿಸಿಟ್ ಮಾಡಿದ್ದೀರಿ ?

ಶ್ರೀ ಎಲ್. ಆರ್. ಶಿವರಾಮೇಗೌಡ.—ಈ ಸಂದರ್ಭದಲ್ಲಿ ಅದನ್ನು ಹೇಳುವುದು ಬೇಡ. ನೀವು ಇಲ್ಲಿಯೇ ಇರತಕ್ಕಂಥವರು. ನಿಮಗೆ ಚೆನ್ನಾಗಿ ಗೊತ್ತಿದೆ. ಆದ್ದರಿಂದ ಎಷ್ಟೋ ಜನ ಇದ್ದಾರೆ. ಇವತ್ತು ಕೈಗಾರಿಕೆಗಳು ಲಾಸ್‌ನಲ್ಲಿ ನಡೆಯುವುದಕ್ಕೆ ಅವರ ಅದಕ್ಷತೆಯೇ ಕಾರಣವಾಗಿರುತ್ತದೆ. ಇವತ್ತಿಗೂ ಸಹಿತ ಎಂ.ಡಿ.ಗಳು ಯಾರನ್ನು ನೋಡಿದರು ಐ.ಎ.ಎಸ್. ಅಧಿಕಾರಿಗಳೇ ಐ.ಪಿ.ಎಸ್. ಅಧಿಕಾರಿಗಳೇ ಚೇರ್‌ಮನ್‌ಗಳು ಇದ್ದಾರೆ. ಅವರಮೇಲೆ ನೀವು ಸರಿಯಾದ ಕಡಿವಾಣವನ್ನು ಹಾಕದೆ ಹೋದರೆ ಯಾವ ಕಾರಣಕ್ಕೂ ಕೈಗಾರಿಕೆಗಳ ದುಸ್ಥಿತಿಗೆ ಹೋಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ. ಇದು ಸರಿಯಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತಿನ ದಿವಸ ಹಿಂದೆಂದೂ ಇಲ್ಲವಷ್ಟು ೧೭೭ ಮಂದಿಯನ್ನು ಇವರು ಮಾಡಿರತಕ್ಕ ಪಾಪಕ್ಕೆ ಗೆಲ್ಲಿಸಿ ವಿಧಾನ ಸೌಧಕ್ಕೆ ಹೋಗಿ ಎಂದು ಕಳುಹಿಸಿದ್ದಾರೆ.

ಒಬ್ಬ ಮಾನ್ಯ ಸದಸ್ಯರು.—ಪಾಪಕ್ಕೆ ಅಲ್ಲ. ಕರ್ಮಕ್ಕೆ

ಆಡಳಿತ ಪಕ್ಷದ ಸದಸ್ಯರು.—ನಮ್ಮ ಕರ್ಮ ಅಲ್ಲ, ನಿಮ್ಮ ಕರ್ಮ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ.—ಆರ್ಥಿಕ ಚಿಂತನೆಯನ್ನು ಮಾಡುವಾಗ ರಾಜಕೀಯ ಚಿಂತನೆಯೂ ಬೇಕು. ಈ ರಾಜ್ಯವನ್ನು ಹೆಂಡದ ದೊರೆಗಳಿಗೆ ಮಾರಾಟ ಮಾಡಿದ್ದಾರೆ. ನನಗೆ ಇದು ಚೆನ್ನಾಗಿ ಗೊತ್ತು, ನಾನು ಇರುವುದನ್ನು ಹೇಳುತ್ತಿದ್ದೇನೆ, ಅದಕ್ಕೆ ಏಕೆ ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಳ್ಳುತ್ತೀರಿ.

(ಗೊಂದಲ)

ಆಡಳಿತ ಪಕ್ಷದ ಸದಸ್ಯರು.—ಅವರು ಮಾತನಾಡುವಾಗ ಹಳಬರು ಏಕೆ ಅಡ್ಡ ಬರುತ್ತಾರೆ ? ಅವರು ಉತ್ತರ ಕೊಡೋಣ ಬಿಡಿ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು.—ಓವರ್‌ಲೋಡ್ ಆಗಿದೆ. ಯಾವತ್ತು ಪಂಚೇರ್ ಆಗುತ್ತದೋ ಗೊತ್ತಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಆರ್ಥಿಕ ಚಿಂತನೆ ಮಾಡುವಾಗ ರಾಜಕೀಯ ಚಿಂತನೆ ಇಲ್ಲದಿದ್ದರೆ ಆಯವ್ಯಯ ಆಗುವುದಿಲ್ಲ. ರಾಜಕೀಯದಿಂದಲೇ ನೀವು ನಾವೆಲ್ಲ ಬಂದಿರುವುದು ಯಾವುದೇ ಸರ್ಕಾರ ತೆಗೆದುಕೊಂಡರೂ ಹತ್ತಿಪ್ಪತ್ತು ಏರುಪೇರು ಇರುತ್ತಿತ್ತು ಯಾವ ಇತಿಹಾಸದಲ್ಲೂ ೧೭೭ ಜನರನ್ನು ಗೆಲ್ಲಿಸಿರಲಿಲ್ಲ. ಈಗ ಏತಕ್ಕೆ ಇಷ್ಟು ಮಂದಿಯನ್ನು ಒಟ್ಟಿಗೆ ಗೆಲ್ಲಿಸಿದರು ಎಂಬ ಪ್ರಶ್ನೆಯನ್ನು ನೀವು ಹಾಕಿಕೊಳ್ಳಬೇಕಾಗುತ್ತದೆ. ನಿಮ್ಮ ಅಧಿಕಾರ ಅವಧಿಯಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳು ಯಾವ ಮಟ್ಟಕ್ಕೆ ಹೋಗಿದ್ದಾರೆಂದು ನೋಡಿ. ಅವರ ಭ್ರಷ್ಟಾಚಾರ ಯಾವ ಮಟ್ಟಕ್ಕೆ ಹೋಗಿದೆ ಎಂದರೆ ಇಂದಿರಾ ನಗರದಲ್ಲಿ ಮನೆ ಕಟ್ಟಿ ಕೊಂಡಿದ್ದಾರೆಂದು ಅಲ್ಲ, ಕಂಪನಿಗಳಲ್ಲಿ, ಸರ್ಕಾರದಲ್ಲಿ ಲೂಟಿ ಹೊಡೆದ ಹಣದಲ್ಲಿ ಕಾಂಪ್ಲೆಕ್ಸ್ ಕಟ್ಟಿದ್ದಾರೆ. ಇಷ್ಟೇ ಅಲ್ಲದೆ ಹೊರ ದೇಶದಲ್ಲಿ ಹಣವನ್ನು ಇಡುವ ಮಟ್ಟಕ್ಕೆ ಕೂಡಾ ಹೋಗಿದ್ದಾರೆ. ಅದಕ್ಕೆಲ್ಲ ದಾಖಲೆ ಇದೆ. ದಯಮಾಡಿ ಸರ್ಕಾರ ಈ ಬಗ್ಗೆ ಬಿಗಿ ನಿಲುವು ತೆಗೆದುಕೊಳ್ಳದಿದ್ದರೆ ಹಿಂದಿನ ಸರ್ಕಾರ ಕೆಟ್ಟ ಹೆಸರು ತೆಗೆದುಕೊಂಡ ಹಾಗೆ ನಿಮಗೂ ಕೆಟ್ಟ ಹೆಸರು ಬಂದೀತು. ಇನ್ನೂ ಪ್ರಾರಂಭಿಕ ಹಂತದಲ್ಲಿದ್ದೀರಿ. ಹುಷಾರಾಗಿ ಇವರನ್ನು ಹತೋಟಿಯಲ್ಲಿಟ್ಟುಕೊಳ್ಳಿ ಎಂದು ಹೇಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರಾದ ಶಿವರಾಮೇಗೌಡರು ಬಹಳ ಗಹನವಾದ ವಿಚಾರವನ್ನು ಹೇಳಿದ್ದಾರೆ. ಐ.ಎ.ಎಸ್. ಅಧಿಕಾರಿಗಳು ಮತ್ತು ಐ.ಪಿ.ಎಸ್. ಅಧಿಕಾರಿಗಳು ಭ್ರಷ್ಟಾಚಾರ ಮಾಡಿದ್ದಾರೆ, ಆ ಬಗ್ಗೆ ನನ್ನ ಹತ್ತಿರ ದಾಖಲೆ ಪತ್ರ ಇದೆ ಎಂದು ಹೇಳಿದ್ದಾರೆ. ಅಲ್ಲದೆ ಹೊರ ದೇಶದಲ್ಲಿ ಅಕೌಂಟ್ಸ್ ಇಟ್ಟಿದ್ದಾರೆಂಬ ಮಾತನ್ನು ಕೂಡ ಹೇಳಿದ್ದಾರೆ. ಆದ್ದರಿಂದ ಅವರ ಹತ್ತಿರ ಇರತಕ್ಕ ದಾಖಲೆಪತ್ರಗಳನ್ನು ದಯವಿಟ್ಟು ಸದನದ ಮುಂದೆ ಇಟ್ಟರೆ ಒಳ್ಳೆಯದು.

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾನು ಏನು ಮಾತನಾಡಿದ್ದೇನೆ ಅದೆಲ್ಲ ರೆಕಾರ್ಡ್ ಹೋಗಿದೆ. ಒಂದೇ ಒಂದು ಅಕ್ಷರವನ್ನು ನಾನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ನಿಮ್ಮ ಸರ್ಕಾರ ಅಧಿಕಾರ ನಡೆಸತಕ್ಕ ಸಂದರ್ಭದಲ್ಲಿ ಐಎಎಸ್ ಮತ್ತು ಐಪಿಎಸ್ ಅಧಿಕಾರಿಗಳು ವಿದೇಶದಲ್ಲಿ ಹಣ ಇಟ್ಟಿರ

ತಕ್ಕ ಬಗ್ಗೆ ಮತ್ತು ಹೆಚ್ಚಿನ ಭ್ರಷ್ಟಾಚಾರವನ್ನು ಮಾಡಿರತಕ್ಕದ್ದರ ಬಗ್ಗೆ ನನ್ನ ಹತ್ತಿರ ದಾಖಲೆ ಇದೆ. ನಾನು ದಾಖಲೆ ಸಮೇತ ಎಲ್ಲ ವಿವರಗಳನ್ನು ಕೊಡುತ್ತೇನೆ. ಅದಕ್ಕೆ ಒಂದು ಪ್ರತ್ಯೇಕ ಆಯೋಗವನ್ನು ರಚನೆ ಮಾಡಿ. ನಾನು ದಾಖಲೆ ಪತ್ರಗಳನ್ನು ಕೊಡುವುದಕ್ಕೆ ಸಿದ್ಧನಿದ್ದೇನೆ.

ಅಧ್ಯಕ್ಷರು.—ಆಯಿತು. ಮುಂದಿನ ಪಾಯಿಂಟ್‌ಗೆ ಬನ್ನಿ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಒಂದು ಒಳ್ಳೆಯ ಕಾರ್ಯಕ್ರಮವನ್ನು ಸರ್ಕಾರ ಹಾಕಿ ಕೊಂಡಿದೆ ಐದಾರು ವರ್ಷಗಳಿಂದ ಯಾವುದಾದರೂ ಹಳ್ಳಿಗೆ ಹೋದಾಗ ಒಂದು ಸ್ಕೂಲ್ ಕಟ್ಟಿಸಿ ಎಂದರೆ ಅದನ್ನು ಕಟ್ಟಿಸತಕ್ಕ ಯೋಗ್ಯತೆ ಒಬ್ಬ ಎಂ.ಎಲ್.ಎ.ಗೆ ಇರಲಿಲ್ಲ. ಜಿಲ್ಲಾ ಪರಿಷತ್ತು ಮತ್ತು ಮಂಡಲ ಪಂಚಾಯಿತಿ ಮಾಡಿದರೂ ಅದರ ವತಿಯಿಂದಲೂ ಒಂದು ರೂಮ್ ಕಟ್ಟಿಸತಕ್ಕ ಯೋಗ್ಯತೆ ಇರಲಿಲ್ಲ. ತಾವು ಅಧಿಕಾರಕ್ಕೆ ಬಂದಮೇಲೆ ಸುಮಾರು ೧೦ ಕೋಟಿ ರೂಪಾಯಿಗಳನ್ನು ಇಟ್ಟು ೫ ಸಾವಿರ ಸ್ಕೂಲ್ ರೂಮುಗಳನ್ನು ಕಟ್ಟಿಸುತ್ತೇವೆಂದು ಹೇಳಿ ಒಳ್ಳೆಯ ಚಿಂತನೆ ಮಾಡಿದ್ದೀರಿ. ಈ ವಿಷಯದಲ್ಲಿ ಮಾನ್ಯ ಆರ್ಥಿಕ ಸಚಿವರು ಹೊಸ ಬೆಳಕನ್ನು ಚೆಲ್ಲಿದ್ದೀರಿ. ಅದು ಬಹಳ ಪ್ರಾಮುಖ್ಯವಾಗಿರತಕ್ಕ ಕೆಲಸ. ಗ್ರಾಮೀಣ ಪ್ರದೇಶದ ಮಕ್ಕಳಿಗೆ ವಿದ್ಯಾಭ್ಯಾಸ ಕೊಡುವುದಕ್ಕಿಂತ ಮುಖ್ಯವಾದ ಕೆಲಸ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಮತ್ತೊಂದಿಲ್ಲ. ಹಳ್ಳಿಗಳಿಗೆ ಹೋದಾಗ ಮರದ ಅಡಿ ಕುಳಿತುಕೊಂಡು ಪಾಠ ಮಾಡುತ್ತಾ ಇದ್ದುದನ್ನು ನಾವು ಕಣ್ಣಾರೆ ಕಂಡಿದ್ದೇವೆ. ಆದ್ದರಿಂದ ಈ ಸ್ಕೂಲ್ ರೂಮ್ ಕಟ್ಟಿಸುವ ಕೆಲಸ ಒಳ್ಳೆಯ ಕೆಲಸ ಎಂದು ಈ ಸಂದರ್ಭದಲ್ಲಿ ನಾನು ಅಭಿನಂದಿಸುತ್ತೇನೆ.

(ಅಧ್ಯಕ್ಷರು ಗಂಟೆ ಬಾರಿಸಿದರು)

ಶ್ರೀ ಎಲ್. ಆರ್. ಶಿವರಾಮೇಗೌಡ.—ನಾವು ಐದು ಜನರು ಪಕ್ಷೇತರರಿದ್ದೇವೆ. ಐದು ಜನರ ಪರವಾಗಿ ನನಗೊಬ್ಬನಿಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್.—ಇವರು ಪಕ್ಷೇತರರಲ್ಲ,

ಶ್ರೀ ಆರ್. ಎಲ್. ಜಾಲಪ್ಪ.—ಅಧ್ಯಕ್ಷರೆ. ಇವರು ಕಾಂಗ್ರೆಸ್ಸಿಗೆ ವಿರುದ್ಧವಾಗಿ ನಿಂತು ಓಟನ್ನು ಪಡೆದು ಆರಿಸಿ ಬಂದರು. ಈಗ ಶಿವರಾಮೇಗೌಡರು ಪಕ್ಷೇತರು ಎಂದು ಹೇಳುತ್ತಿದ್ದಾರೆ. ಅಲ್ಲಿನ ಜನರು ಕಾಂಗ್ರೆಸ್ಸನ್ನು ಸೋಲಿಸಿ ಇವರನ್ನು ಚುನಾಯಿಸಿದ್ದಾರೆ ಇವತ್ತು ಕಾಂಗ್ರೆಸ್ಸಿನವರನ್ನು ಕೊಂಡಾಡುವುದಕ್ಕೆ ಅಲ್ಲಿ ಹೋಗಿ ಸೇರಿಕೊಳ್ಳುವುದಕ್ಕೆ ಸೋಪಾನ ಹಾಕಿಕೊಳ್ಳುತ್ತಿದ್ದಾರೆ. ಹೋಗಿ ಸೇರಿಕೊಳ್ಳಲಿ, ಸಂತೋಷ, ನಮಗೇನೂ ಇಲ್ಲ. ಆದರೆ ಇವರನ್ನು ಓಟು ಕೊಟ್ಟು ಕಳುಹಿಸಿದರಲ್ಲ ಆ ಮಂದಿ ಏನನ್ನಬಹುದು ಎಂದು ನಾನು ಕೇಳುತ್ತಿದ್ದೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಹಿರಿಯ ಸದಸ್ಯರಾದ ಜಾಲಪ್ಪನವರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ. ನನ್ನಂಥ ಚಿಕ್ಕವನಿಗೆ ಹೊಸದಾಗಿ ಈ ಮನೆಯನ್ನು ಪ್ರವೇಶ ಮಾಡಿದವನಿಗೆ ಇಂಥ ಪ್ರಶ್ನೆ ಬಹಳ ಆಗತ್ಯ.

ಒಬ್ಬ ಆಡಳಿತ ಪಕ್ಷದ ಸದಸ್ಯರು.—ಕಾಂಗ್ರೆಸ್ ಪಾರ್ಟಿಯಲ್ಲೇ ತಯಾರಾದವರು ಜಾಲಪ್ಪನವರು

ಶ್ರೀ ಎಲ್. ಆರ್. ಶಿವರಾಮೇಗೌಡ.—ಕಾಂಗ್ರೆಸ್ ಪಕ್ಷದ ಹೈಕಮಾಂಡ್‌ನಲ್ಲಿ ನನಗೆ ಮೋಸ ಮಾಡಲಿಲ್ಲ. ಜಾಲಪ್ಪನವರಂಥ ಸ್ನೇಹಿತರು ಇದ್ದಾರಲ್ಲ ಅವರು ಪಿತೂರಿ ಮಾಡಿ ನನಗೆ ಟಿಕೆಟ್ ಕೊಡದಂತೆ ಮಾಡಿದರು. ಅದಕ್ಕಾಗಿ ನಾನು ಕಾಂಗ್ರೆಸ್ ಪಕ್ಷದಲ್ಲಿ ರೆಬೆಲ್ ಕ್ಯಾಂಡಿಡೇಟಾಗಿ ನಿಂತು ಗೆದ್ದಿದ್ದೇನೆ, ನೀವು ಈ ಸಂದರ್ಭದಲ್ಲಿ ಪ್ರಶಂಸೆ ಮಾಡಬೇಕು. * * * * ಇವರನ್ನು ಕಾಂಗ್ರೆಸ್ ಪಕ್ಷಕ್ಕೆ ತೆಗೆದು ಕೊಳ್ಳುವಾಗ ಹುಷಾರಾಗಿ ತೆಗೆದು ಕೊಳ್ಳಿ.

ಶ್ರೀ ಟಿ. ಬಿ. ಜಯಚಂದ್ರ.—ಕಾಂಗ್ರೆಸ್ಸಿಗೆ ವಿರೋಧವಾಗಿ ಅಲ್ಲಿ ಓಟು ಕೊಟ್ಟಿಲ್ಲ. ಶಿವರಾಮೇಗೌಡರು ಕಾಂಗ್ರೆಸ್ ಅಭ್ಯರ್ಥಿ ಎಂದು ಓಟು ಕೊಟ್ಟಿದ್ದಾರೆ ಜನ. * * *

ಶ್ರೀ ಎಲ್. ಆರ್. ಶಿವರಾಮೇಗೌಡ.—ಹಿರಿಯ ಸದಸ್ಯರು ಕಿರಿಯರನ್ನು ಅರ್ಥ ಮಾಡಿಕೊಳ್ಳಬೇಕು. ಅಷ್ಟು ಲಘುವಾಗಿ ಮಾತನಾಡಬಾರದು.

---

* Expunged as orderedby the Chair

ಒಬ್ಬ ಸದಸ್ಯರು.—ಮಾನ್ಯ ಜಾಲಪ್ಪನವರು ತಮ್ಮ ಎಕ್ಸ್‌ಪೀರಿಯೆನ್ಸ್ ಹೇಳುತ್ತಿದ್ದಾರೆ.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಸದಸ್ಯರು ಹೊಸದಾಗಿ ಬಂದಿದ್ದಾರೆ. ನೇರವಾಗಿ ಮಾತನಾಡುತ್ತಿದ್ದಾರೆ. ಅದರಲ್ಲಿ ಸುಳ್ಳಿಲ್ಲ. ದಾಖಲೆ ಕೊಡುವುದು ಬೇಕಾಗಿಲ್ಲ. ಅವರು ಹೇಳತಕ್ಕದ್ದು ಸತ್ಯವಾಗಿರತಕ್ಕದ್ದು. ಜನರಿಗೆ ಗೊತ್ತಿದೆ. ಅವರು ಹೇಳತಕ್ಕ ಧಾಟಿ ಬದಲಾವಣೆಯಾಗಿರಬಹುದು. ಹೊಸದಾಗಿ ಬಂದಿದ್ದಾರೆ. ಹುರುಪಿದೆ. ಆದ್ದರಿಂದ ಅಧ್ಯಕ್ಷರು ಅವರಿಗೆ (ಶಿವರಾಮೇಗೌಡರಿಗೆ) ಜಾಸ್ತಿ ಅವಕಾಶ ಕೊಡಬೇಕು.

ಶ್ರೀ ಆರ್ ಎಲ್. ಜಾಲಪ್ಪ.—ಇದು ಅತಿ ಆಯಿತು. ಅವರು ಹೇಳಿದ್ದನ್ನು ಇವರು ಸರ್ಟಿಫೈ ಮಾಡುತ್ತಿದ್ದಾರೆ.

ಅಧ್ಯಕ್ಷರು.—ಅದಕ್ಕೆ ನಾನು ಅವಕಾಶ ಕೊಡುವುದಿಲ್ಲ, ಅದಕ್ಕೋಸ್ಕರವೇ ಒಬ್ಬ ಸದಸ್ಯರು ಭಾಷಣ ಮಾಡುವ ಅವಧಿಯಲ್ಲಿ ಇನ್ನೊಬ್ಬರು ಮಧ್ಯ ಪ್ರವೇಶ ಮಾಡಿದರೆ ಪರಿಸ್ಥಿತಿ ಇಂತಹ ವಿಕೋಪಕ್ಕೆ ಹೋಗುವುದು ಸರ್ವೇ ಸಾಧಾರಣ. ಮಾನ್ಯ ಸದಸ್ಯರು ಹೊಸದಾಗಿ ಚುನಾಯಿತರಾಗಿ ಬಂದಿರುವ ಸರಾಗಿದ್ದಾರೆ. ಆದುದರಿಂದಲೇ ನಾನು ಸ್ವಲ್ಪ ಅವರಿಗೆ ಹೆಚ್ಚು ಅವಕಾಶವನ್ನು ಕೊಟ್ಟೆ. ಹೊಸ ಸದಸ್ಯರಿಗೆ ಅವಕಾಶ ಕೊಡಬೇಕು. ಆದರೆ ನೂತನ ಸದಸ್ಯರಲ್ಲಿ ನನ್ನ ವಿನಂತಿ ಎಂದರೆ, ಪ್ರಥಮ ಭಾಷಣದಲ್ಲಿಯೇ ನೀವು ಇಡೀ ಪ್ರಪಂಚವನ್ನು ಮೇಲೆ ಎತ್ತುವುದಕ್ಕೆ ಪ್ರಯತ್ನ ಮಾಡಬೇಡಿ. ನಿಮಗೆ ಇನ್ನೂ ೫ ವರ್ಷಗಳ ಕಾಲ ಇದೆ. ಆಗ ತಾವು ಸಾಕಷ್ಟು ಹೇಳಬಹುದಾಗಿದೆ. ನಿಮ್ಮ ಪ್ರಥಮ ಭಾಷಣದಲ್ಲಿ ಆದಷ್ಟು ನಿಮ್ಮ ಸಹ ಸದಸ್ಯರಿಗೆ ನೋವು ಆಗದ ರೀತಿಯಲ್ಲಿ ತಮ್ಮ ಭಾಷಣವನ್ನು ಮುಂದುವರಿಸಿದರೆ ಒಳ್ಳೆಯದಾಗುತ್ತದೆ. ಮಾನ್ಯ ಜಾಲಪ್ಪನವರು ಅವರ ಮೇಲೆ ಹೇಳಿರುವ ಹಾಗೂ ಶಿವರಾಮೇಗೌಡರು ಇವರ ಬಗ್ಗೆ ಹೇಳಿರುವುದೆಲ್ಲವನ್ನೂ ಕಡತದಿಂದ ತೆಗೆದುಹಾಕುತ್ತೇನೆ.

ಶ್ರೀ ಎಲ್. ಆರ್. ಶಿವರಾಮೇಗೌಡ.—ಮಾನ್ಯ ಅರ್ಥ ಮಂತ್ರಿಗಳು ರಸ್ತೆಗಳ ಬಗ್ಗೆ ಚರ್ಚೆ ಮಾಡಿದ್ದಾರೆ ಹಿಂದೆ ರಸ್ತೆಗಳ ಬಗ್ಗೆ ೪೦ ಕೋಟಿ. ೪೨ ಕೋಟಿ. ೩೨ ಕೋಟಿ, ರೂಪಾಯಿಗಳನ್ನು ಕೊಟ್ಟಿದ್ದನ್ನು ನೋಡಿದ್ದೇವೆ, ಆದರೆ ಈ ವರ್ಷ ಕೂಡಾ ಮಾನ್ಯ ಹಣಕಾಸಿನ ಸಚಿವರು ದೊಡ್ಡ ಮನಸ್ಸು ಮಾಡಿ ಹಳ್ಳಿಗಳ ರಸ್ತೆ ಬಗ್ಗೆ ಗಮನ ಹರಿಸಿದ್ದಾರೆ. ಇವತ್ತು ರಾಜ್ಯದಲ್ಲಿ ಹಳ್ಳಿಗಾಡಿನ ರಸ್ತೆ ನೋಡಿದರೆ ಬಂಡೀ ರಸ್ತೆಗಳೇ ಎಷ್ಟೋ ಒಳ್ಳೆಯವು. ಎಂದೆನಿಸುತ್ತದೆ. ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆಗಳಲ್ಲಿ ಗುಂಡಿಗಳು ಬಿದ್ದಿದ್ದು ಅವುಗಳಿಗೆ ಒಂದು ಹಿಡಿ ಮಣ್ಣು ಹಾಕಿ ೫–೬ ವರ್ಷಗಳು ಆಗಿವೆ. ಇವತ್ತು ಇದನ್ನು ಅರ್ಥ ಮಾಡಿಕೊಂಡು ೪೯ ಕೋಟಿ ರೂಪಾಯಿಗಳನ್ನು ಈ ವರ್ಷದ ಆಯವ್ಯಯದಲ್ಲಿ ಇಟ್ಟು, ಆರ್‌ಎಪಿಸಿಎಂಎಸ್ ಹಣದಲ್ಲಿ ೧ ಪರ್ಸೆಂಟ್ ವಹಿವಾಟಿನಿಂದ ಬರತಕ್ಕ ಹಣವನ್ನು ಕೂಡಾ ಇದಕ್ಕೆ ಇಟ್ಟಿರತಕ್ಕದ್ದನ್ನು ಎಲ್ಲರೂ ಕೂಡಾ ಒಪ್ಪಿಕೊಳ್ಳುತ್ತಾರೆ. ಆದ್ದರಿಂದ ಶೀಘ್ರವಾಗಿ ಈಗಲೇ ಈ ಕೆಲಸಗಳನ್ನು ಪ್ರಾರಂಭ ಮಾಡಿ ಗುರಿಯನ್ನು ಮುಟ್ಟಬೇಕು ಎಂದು ನಾನು ಹೇಳುತ್ತೇನೆ. ಇವತ್ತು ಬೆಂಗಳೂರು ನಗರದಲ್ಲಿ ೪೨ ಲಕ್ಷ ಜನಸಂಖ್ಯೆ ಇದೆ. ಇವತ್ತು ಬೆಂಗಳೂರು ನಗರದ ಕುಡಿಯುವ ನೀರಿನ ಯೋಜನೆಗೋಸ್ಕರ ೪೨ ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಆದರೆ ಈ ರಾಜ್ಯದಲ್ಲಿ ಇರುವ ಪಟ್ಟಣಗಳು ಏನಿವೆ, ಅದು ಮಂಡ್ಯ ಇರಬಹುದು, ಮೈಸೂರು ಇರಬಹುದು. ಹುಬ್ಬಳ್ಳಿ ಇರಬಹುದು, ಧಾರವಾಡ ಇರಬಹುದು, ನಾಗಮಂಗಲ ಇರಬಹುದು, ಮದ್ದೂರು ಇರಬಹುದು, ಈ ರೀತಿಯ ಪಟ್ಟಣಗಳಿಗೆ ಕೇವಲ ೧೫ ಕೋಟಿ ರೂಪಾಯಿ ಇಟ್ಟಿದ್ದಾರೆ. ೮೦ ಲಕ್ಷ ಜನಸಂಖ್ಯೆ ಇರುವ ಪಟ್ಟಣಗಳಿಗೆ ೧೫ ಕೋಟಿ ರೂಪಾಯಿ ಇಟ್ಟು, ಬರೀ ೪೨ ಲಕ್ಷ ಜನಸಂಖ್ಯೆ ಇರುವ ನಗರಕ್ಕೆ ೪೨ ಕೋಟಿ ಇಟ್ಟಿರುವುದು ಬಹುಶಃ ಯಾವ ಹಂತದಲ್ಲಿ ವ್ಯತ್ಯಾಸ ಆಗಿದೆಯೋ ನನಗೆ ಅರ್ಥವಾಗುತ್ತಿಲ್ಲ. ದಯಮಾಡಿ ಪಟ್ಟಣದಲ್ಲಿ ಇರುವವರೂ ಕೂಡಾ ಚೆನ್ನಾಗಿ ನೀರು ಕುಡಿಯಬೇಕೆಂದು ಹೇಳಿ ನಾನು ಈ ಬಗ್ಗೆ ಹೆಚ್ಚಿನ ಒತ್ತಾಯ ಮಾಡುತ್ತೇನೆ. ಮತ್ತೆ ೨೦ ಸಾವಿರ ಜನಸಂಖ್ಯೆ ಮೇಲ್ಪಟ್ಟು ಇರುವ ಪಟ್ಟಣಗಳಿಗೆ ನೀರು ಸರಬರಾಜು ಮಾಡುವ ಸಲುವಾಗಿ ೨೫ ಪರ್ಸೆಂಟ್ ಹಣವನ್ನು ರಾಜ್ಯ ಸರ್ಕಾರದಿಂದ, ಎಲ್‌ಐಸಿಯಿಂದ ೫೦ ಪರ್ಸೆಂಟ್ ಹಾಗೂ ಇನ್ನುಳಿದ ೨೫ ಪರ್ಸೆಂಟ್ ಮುನಿಸಿಪಾಲಿಟಿಯಿಂದ ಕೊಡಬೇಕೆನ್ನುವ ವ್ಯವಸ್ಥೆ ಮಾಡಿದ್ದಾರೆ. ಆದರೆ ನಾನು ಕೇಳುವುದು ಇಷ್ಟೇ. ಕಳೆದ ನಾಲ್ಕೈದು ವರ್ಷಗಳಿಂದ ಮುನಿಸಿಪಾಲಿಟಿಗಳಲ್ಲಿರುವ ಜಾಡಮಾಲಿಗಳಿಗೆ ಕೊಡತಕ್ಕದ್ದಕ್ಕೆ ದುಡ್ಡು ಇಲ್ಲ. ಇಂತಹ ಪರಿಸ್ಥಿತಿಯಲ್ಲಿ ನಮ್ಮ ರಾಜ್ಯದಲ್ಲಿರುವ ಮುನಿಸಿಪಾಲಿಟಿಗಳು ಅಲ್ಲಿನ ನೀರಿನ ಸೌಲಭ್ಯಕ್ಕೆ ೨೫ ಪರ್ಸೆಂಟ್ ಹಣ ಕೊಡಬೇಕೆಂದರೆ ಅದು ಆಗದ ವಿಷಯ. ಆದ್ದರಿಂದ ೨೦ ಸಾವಿರ ಜನಸಂಖ್ಯೆಗೆ ಮೇಲ್ಪಟ್ಟು ಇರುವ ಪಟ್ಟಣಗಳಲ್ಲಿ ಏನು ಮ್ಯಾಚಿಂಗ್ ಗ್ರ್ಯಾಂಟನ್ನು ತಾವು ಕೇಳಿದ್ದೀರಿ ಅದನ್ನು ತಪ್ಪಿಸಿ ಅಲ್ಲಿ ಆಕ್ಟ್ರಾಯ್ ವ್ಯವಸ್ಥೆ ಜಾರಿಗೆ ತರಬೇಕೆಂದು ಹೇಳುತ್ತೇನೆ. ಆಕ್ಟ್ರಾಯ್ ವ್ಯವಸ್ಥೆ ತಂದರೆ ಮುನಿಸಿಪಾಲಿಟಿಗಳಿಗೆ ಒಳ್ಳೆಯದು ಆಗುತ್ತದೆ. ಸರ್ಕಾರ ಇದನ್ನು ಪುನರ್ ಪರಿಶೀಲನೆ ಮಾಡಿ, ಆಕ್ಟ್ರಾಯ್

ಜಾರಿಗೆ ತರಬೇಕೆಂದು ಹೇಳಿ. ಏನು ೪೦ ಸಾವಿರ ಜನಸಂಖ್ಯೆಗೂ ಮೇಲೆ ಇರುವ ಪಟ್ಟಣಗಳಿಗೆ ನೀವು ಏನು ಫ್ರೀ ವಾಟರ್ ಸಪ್ಲೈ ವ್ಯವಸ್ಥೆ ಮಾಡಿದ್ದೀರಿ ಆ ವ್ಯವಸ್ಥೆಯನ್ನು ಇವಕ್ಕೂ ವಿಸ್ತರಿಸಿದರೆ ರಾಜ್ಯದ ೬೨ ಪಟ್ಟಣಗಳು ಆ ವ್ಯಾಪ್ತಿಗೆ ಬಂದು ಅದರ ಲಾಭ ಪಡೆಯುತ್ತವೆಂದು ಹೇಳುತ್ತೇನೆ.

೫-೦೦ ಪಿ. ಎಂ.

ಕೊನೆಯದಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ಕುಡಿಯುವ ನೀರಿನ ಸಲುವಾಗಿ ಜಿಲ್ಲಾಪರಿಷತ್‌ನ ಮೂಲಕ ಮಿನಿವಾಟರ್ ಸಪ್ಲೈ ಮತ್ತು ಮೇಜರ್ ವಾಟರ್ ಸಪ್ಲೈ ಸ್ಕೀಮ್‌ಗಳು ಇವೆ. ಈ ಎರಡೂ ಸ್ಕೀಮ್‌ಗಳಿಗೆ ನಾರ್ಮ್ಸ್ ಬದಲಾವಣೆ ಮಾಡದೇ ಹೋದರೆ ಹಳ್ಳಿಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ೨೦೦೦ದ ಇಸವಿಯ ಹೊತ್ತಿಗೆ ಸಹ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನಾಗಮಂಗಲ ತಾಲ್ಲೂಕಿನಲ್ಲಿ ೪೯೬ ಹಳ್ಳಿಗಳಿವೆ. ಆ ಹಳ್ಳಿಗಳಿಗೆ ಮಾನ್ಯ ಗ್ರಾಮೀಣ ಸಚಿವರು ಕೊಟ್ಟಿರ ತಕ್ಕ ಉತ್ತರದ ಪ್ರಕಾರ ೪೩ ಹಳ್ಳಿಗಳಿಗೆ ಮಿನಿ ಮತ್ತು ಮೇಜರ್ ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ನಮ್ಮ ತಾಲ್ಲೂಕಿಗೆ ಕೊಡಲಾಗಿದೆ. ನಮ್ಮ ತಾಲ್ಲೂಕಿನಲ್ಲಿ ಇನ್ನು ಉಳಿದಂತಹ ೪೫೦ ಹಳ್ಳಿಗಳಿಗೆ ಯಾವಾಗ ನೀರು ಕೊಡುತ್ತೀರಿ? ೨೦೦೦ನೇ ಇಸವಿಯ ಹೊತ್ತಿಗೆ ಗ್ರಾಮೀಣ ಪ್ರದೇಶಗಳಿಗೆ ಕುಡಿಯುವ ನೀರಿನ ವ್ಯವಸ್ಥೆಯನ್ನು ಕೊಡಲಾಗುವುದು ಎನ್ನುವ ಅಂಕಿಅಂಶಗಳನ್ನು ಇಟ್ಟುಕೊಂಡಿದ್ದೀರಿ ಉದಾಹರಣೆಗೆ ಹೇಳುವುದಾದರೆ, ಮಂಡ್ಯ ಜಿಲ್ಲಾಪರಿಷತ್ತಿಗೆ ೬೦ ಮಿನಿ ವಾಟರ್ ಸಪ್ಲೈ ಸ್ಕೀಮ್‌ಗಳನ್ನು ಕೊಟ್ಟಿದ್ದೀರಿ. ಆ ರೀತಿ ಕೊಟ್ಟರೆ ನಮ್ಮ ತಾಲ್ಲೂಕಿಗೆ ಒಂದು ಸ್ಕೀಮ್ ಸಹ ಬರುವುದಿಲ್ಲ. ಏಕೆಂದರೆ ನಾರ್ಮ್ಸ್ ಆ ರೀತಿ ಇದೆ. ೧೫೦೦ ಜನಸಂಖ್ಯೆ ಇರತಕ್ಕ ಹಳ್ಳಿಗಳಿಗೆ ವಾಟರ್‌ಸಪ್ಲೈ ಸ್ಕೀಮ್‌ಗಳನ್ನು ಕೊಡಬೇಕೆಂದು ನಾರ್ಮ್ಸ್ ಇದೆ. ಈಗ ಅದನ್ನು ಮೇಜರ್ ವಾಟರ್‌ಸಪ್ಲೈ ಸ್ಕೀಮ್‌ಗೆ ೧೩೦೦ ಜನಸಂಖ್ಯೆ, ಮಿನಿ ವಾಟರ್ ಸಪ್ಲೈ ಸ್ಕೀಮ್‌ಗೆ ೯೦೦ ಜನಸಂಖ್ಯೆಗೆ ಇಳಿಸಿದ್ದಾರೆಂದು ಗೊತ್ತಾಗಿದೆ. ಈ ನಾರ್ಮ್ಸ್ ಪ್ರಕಾರ ನಮ್ಮ ಊರುಗಳಿಗೆ ವಾಟರ್‌ಸಪ್ಲೈ ಸ್ಕೀಮ್‌ಗಳು ಸಿಗುವುದಿಲ್ಲ. ನಮ್ಮ ತಾಲ್ಲೂಕಿನಲ್ಲಿ ಒಂದು ಹಳ್ಳಿಯಲ್ಲಿ ೪೦೦-೩೫೦ ಹೀಗೆ ಜನಸಂಖ್ಯೆ ಇದೆ. ನಮ್ಮ ಜಿಲ್ಲಾಪರಿಷತ್‌ನಿಂದ ಸರ್ಕಾರಕ್ಕೆ ಒಂದು ಸ್ಕೀಮ್ ಕಳುಹಿಸಿದ್ದೇವೆ. ಅದೇನೆಂದರೆ ನಾಗಮಂಗಲ ತಾಲ್ಲೂಕಿನಲ್ಲಿ ೧ ಕಿಲೋ ಮೀಟರ್ ವ್ಯಾಪ್ತಿಯಲ್ಲಿ ಬರುವ ಎರಡು ಹಳ್ಳಿಗಳು ಅಂದರೆ ಒಂದು ಊರಿನಲ್ಲಿ ೪೫೦ ಮತ್ತು ಮತ್ತೊಂದು ಊರಿನಲ್ಲಿ ೩೫೦ ಜನಸಂಖ್ಯೆಯನ್ನು ಸೇರಿಸಿ ಮಿನಿ ವಾಟರ್‌ಸಪ್ಲೈ ಸ್ಕೀಮ್ ಮಂಜೂರು ಮಾಡಿ ಕೊಡಬೇಕೆಂದು ಕಳುಹಿಸಿದ್ದೇವೆ. ನಾನು ಜಿಲ್ಲಾ ಪರಿಷತ್‌ನ ಸದಸ್ಯನಾಗಿದ್ದಾಗ ಲೋಕೋಪಯೋಗಿ ಇಲಾಖೆಯ ಸ್ಥಾಯಿ ಸಮಿತಿ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಒಂದು ರಿಸೊಲ್ಯೂಶನ್ ಪಾಸ್ ಮಾಡಿ ಕೊಟ್ಟಿದ್ದೇವೆ. ಯಾವ ಕಾರಣಕ್ಕೂ ಅದನ್ನು ಕೊಡುವುದಕ್ಕಾಗುವುದಿಲ್ಲವೆಂದು ವಾಪಸ್ಸು ಕಳುಹಿಸಿದ್ದಾರೆ. ದಯವಿಟ್ಟು ಗ್ರಾಮೀಣಾಭಿವೃದ್ಧಿ ಸಚಿವರು ನಮ್ಮ ಜಿಲ್ಲೆಗೆ ಭೇಟಿ ಕೊಟ್ಟಿದ್ದಾಗ ಈ ವಿಚಾರವನ್ನು ತಮ್ಮ ಗಮನಕ್ಕೆ ತಂದಿದ್ದೇವೆ. ತಾವು ಭರವಸೆಯನ್ನು ಕೊಟ್ಟಿದ್ದೀರಿ. ಅದನ್ನು ಈಡೇರಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಇಂತಹ ದುಸ್ಥಿತಿಯ ಹಣಕಾಸಿನ ಪರಿಸ್ಥಿತಿಯಲ್ಲಿ ಜನಸಾಮಾನ್ಯರ ಕೆಲಸಕಾರ್ಯಗಳನ್ನು ಅಭಿವೃದ್ಧಿ ಕಾರ್ಯಗಳನ್ನು ಅವರು ಹತ್ತಿರಕ್ಕೆ ಕೊಂಡೊಯ್ಯತಕ್ಕ ಆಯವ್ಯಯ ಪತ್ರವನ್ನು ಮಂಡಿಸಿರತಕ್ಕ ಮಾನ್ಯ ಹಣಕಾಸಿನ ಸಚಿವರಿಗೆ ಈ ಸಂದರ್ಭದಲ್ಲಿ ಅಭಿನಂದನೆಯನ್ನು ಸಲ್ಲಿಸಿ, ನಾನು ಮಾತನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು).—ಸನ್ಮಾನ್ಯ ಅಧ್ಯಕ್ಷರೆ, ಈ ದಿವಸ ಮಾತನಾಡಲು ಅವಕಾಶ ಕೊಟ್ಟಿರತಕ್ಕ ಅಧ್ಯಕ್ಷರಿಗೆ ವಂದನೆಗಳನ್ನು ಅರ್ಪಿಸುತ್ತೇನೆ. ಈಗ ಮಾನ್ಯ ಹಣಕಾಸಿನ ಸಚಿವರು ಮಂಡಿಸಿರತಕ್ಕ ಆಯವ್ಯಯ ಪತ್ರವನ್ನು ನಾನು ಸ್ವಾಗತ ಮಾಡುತ್ತೇನೆ. ಒಂದು ವಿಷಯವನ್ನು ಹೇಳಬೇಕಾದರೆ, ನಮ್ಮ ರಾಜ್ಯದ ಎಲ್ಲಾ ಮಕ್ಕಳಿಗೂ ಬಟ್ಟೆಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಹಿಂದಿನ ಸರ್ಕಾರದವರು ಮಾಡಿದ್ದರು. ಎಲ್ಲಾ ವರ್ಗದವರ ಮಕ್ಕಳಿಗೂ ಬಟ್ಟೆಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಲಾಗಿತ್ತು. ಬಡವರು ಶ್ರೀಮಂತರು ಎಲ್ಲರಿಗೂ ಕೊಟ್ಟಿದ್ದರು. ಆದರೆ ಆ ಬಟ್ಟೆಗಳನ್ನು ಬಡವರು ಮಾತ್ರ ಉಪಯೋಗ ಮಾಡಿಕೊಳ್ಳುತ್ತಿದ್ದರು. ಸಾಹುಕಾರರ ಮಕ್ಕಳು ಆ ಬಟ್ಟೆಗಳನ್ನು ಹಾಕಿಕೊಳ್ಳದೆ ಬಿಸಾಡಿ ಬಿಡುತ್ತಿದ್ದರು. ಇದು ಸರ್ಕಾರದ ವೃಥಾ ವೆಚ್ಚವೆಂದು ಹೇಳುತ್ತೇನೆ. ಈಗ ಅದನ್ನು ನಮ್ಮ ಹಣಕಾಸಿನ ಸಚಿವರು ಮನಗಂಡು ತೆಗೆದು ಹಾಕಿರುವುದು ನನಗೆ ಬಹಳ ಸಂತೋಷವಾಗಿದೆ. ನಾನು ಜನತೆಯ ಪರವಾಗಿ ಈ ಕೆಲಸವನ್ನು ಮಾಡಿರುವುದಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಹಳ್ಳಿಗಳಲ್ಲಿ ಬಹಳ ಜನ ಹೆಂಡ ಕುಡಿದು ಹಾಳಾಗುತ್ತಿದ್ದರು. ಆದರಿಂದ

ಎಷ್ಟೋ ಕೊಲೆಗಳು ಆಗುತ್ತಿದ್ದವು. ಎಷ್ಟೋ ಜನ ತಮ್ಮ ಆಸ್ತಿಯನ್ನು ಮಾರಿಕೊಂಡಿದ್ದಾರೆ. ಬೇಕಾದಷ್ಟು ಹಾನಿಯಾಗುತ್ತಿತ್ತು. ಐಶ್ವರ್ಯವಂತರು ಹೆಂಡ ಕುಡಿಯುವುದಿಲ್ಲ, ಅವರು ಕುಡಿಯುವುದು ಬ್ರಾಂದಿ, ವಿಸ್ಕಿ. ಹೆಂಡವನ್ನು ರಾಜ್ಯದ ೯ ಜಿಲ್ಲೆಗಳಲ್ಲಿ ತೆಗೆಯುತಕ್ಕ ಕೆಲಸವನ್ನು ಮಾಡಿದ್ದಾರೆ ಇದು ಬಹಳ ಒಳ್ಳೆಯದೆಂದು ನಾನು ಹೇಳುತ್ತೇನೆ. ಬಡವರ ಉದ್ಧಾರಕ್ಕೋಸ್ಕರ ಶ್ರೀಮತಿ ಇಂದಿರಾಗಾಂಧಿಯವರು ಗರಿಬೀ ಹಟಾವೋ ವಿಷಯದಲ್ಲಿ ಹೇಳಿರುವುದು ಒಳ್ಳೆಯ ವಿಷಯವೆಂದು ನಾನು ಹೇಳುತ್ತಿದ್ದೇನೆ. ನಮ್ಮ ಕ್ಷೇತ್ರದ ಬಗ್ಗೆ ಹೇಳಬೇಕೆಂದರೆ ನಮ್ಮದು ಬಹಳ ಹಿಂದುಳಿದ ಕ್ಷೇತ್ರ. ಕರ್ನಾಟಕದಲ್ಲೇ ಬಹಳ ಹಿಂದುಳಿದ ಕ್ಷೇತ್ರ ಇದು. ಹರಿಜನ ಗಿರಿಜನರು, ಹಿಂದುಳಿದ ವರ್ಗದವರು ಜಾಸ್ತಿ ಇರತಕ್ಕಂಥ ಕ್ಷೇತ್ರ. ಇಂತಹ ಕ್ಷೇತ್ರವನ್ನು ಹಿಂದಿನ ಸರ್ಕಾರದವರು ನಿರ್ಲಕ್ಷ್ಯ ಮಾಡಿದ್ದರು. ಈ ಕ್ಷೇತ್ರಕ್ಕೆ ಯಾರೂ ಬಂದಿಲ್ಲ, ಯಾವ ಮಂತ್ರಿಗಳೂ ಬಂದಿಲ್ಲ. ಒಂದು ಸಲ ಮಾತ್ರ ಶ್ರೀ ರಾಮಕೃಷ್ಣ ಹೆಗಡೆಯವರು ಬಂದಿದ್ದರು. ಆಗ ಅವರು ಅಪ್ಪರ್ ಭದ್ರಾ ಚಾನಲ್ ಮಾಡುತ್ತೇವೆ ಎಂದು ಹೇಳಿದವರು ತಮ್ಮ ಮಾತಿನಂತೆ ನಡೆಯಲಿಲ್ಲ. ಈಗ ಅವರು ಡೆಲ್ಲಿಯಲ್ಲಿ ಇದ್ದಾರೆ. ಈಗಲಾದರೂ ಅವರು ಈ ವಿಷಯವನ್ನು ಅಲ್ಲಿ ತಿಳಿಸಿ ಮಾಡಿದರೆ ಖಾಡಿತವಾಗಿಯೂ ಅವರು ಕೊಟ್ಟಿರತಕ್ಕಂಥ ಮಾತನ್ನು ಉಳಿಸಿಕೊಂಡಂತಾಗುತ್ತದೆ ಎಂದು ಈ ಸಂದರ್ಭದಲ್ಲಿ ನಾನು ನಮ್ಮ ಸರ್ಕಾರಕ್ಕೆ ಹೇಳುತ್ತೇನೆ. ಇನ್ನು, ನಮ್ಮ ಕ್ಷೇತ್ರವನ್ನು ಡಾರ್ಕ್ ಏರಿಯಾ ಅಂತ ಮಾಡಿದರು. ಬಹಳ ಹಿಂದುಳಿದ ಜನರು ಇಲ್ಲಿ ಇದ್ದಾರೆ. ಇವರು ವ್ಯವಸಾಯ ಮಾಡತಕ್ಕಂಥವರು. ಇವರು ಮುಂದೆ ಬರಬಾರದೆಂದು ಈ ಏರಿಯಾವನ್ನು ಡಾರ್ಕ್ ಏರಿಯಾ ಅಂತ ಮಾಡಿದ್ದಾರೆ. ಇಲ್ಲಿ ಬಾವಿಗಳನ್ನು ತೋಡಿದ್ದಾರೆ, ನೀರು ಬಂದಿದೆ. ಆದರೂ ಕೂಡ ಹಿಂದಿನ ಸರ್ಕಾರದವರು ಇದನ್ನು ಡಾರ್ಕ್ ಏರಿಯಾ ಎಂದು ಅನೌನ್ಸ್ ಮಾಡಿರುವುದು ಬಡವರಿಗೆ ಮಾಡಿರುವ ಅನ್ಯಾಯವೆಂದು ನಾನು ಹೇಳುತ್ತೇನೆ. ಈಗಲಾದರೂ ನಮ್ಮ ಸರ್ಕಾರದವರು ಆದಷ್ಟುಬೇಗ ಈ ವಿಷಯದಲ್ಲಿ ಡಾರ್ಕ್ ಏರಿಯಾ ಇರುವುದನ್ನು ರಿಮೂವ್ ಮಾಡಿದರೆ ಬಡವರು ವ್ಯವಸಾಯದಿಂದ ಜೀವನ ಮಾಡತಕ್ಕವರು ಏನಾದರೂ ಮಾಡಿ ಸಣ್ಣ ಬಾವಿಗಳನ್ನು ತೆಗೆದು ಜೀವನ ಮಾಡುತ್ತಾರೆ. ಇದುವರೆಗೂ ಯಾವ ಪಿ.ಎಲ್.ಡಿ. ಬ್ಯಾಂಕ್ ಆಗಲೀ, ಜಿಲ್ಲಾ ಸಹಕಾರ ಬ್ಯಾಂಕ್ ಆಗಲೀ ಅವರಿಗೆ ಸಾಲ ಕೊಡುತ್ತಿಲ್ಲ ಐಶ್ವರ್ಯವಂತರಿಗೆ ಸಿಗುತ್ತಿದೆ. ಆದ್ದರಿಂದ ಡಾರ್ಕ್ ಏರಿಯಾ ಎನ್ನುವುದನ್ನು ಆದಷ್ಟು ಬೇಗ ತೆಗೆದು ಬಡಜನರ ಉದ್ಧಾರ ಮಾಡಬೇಕೆಂದು ಹೇಳುತ್ತೇನೆ.

(ಶ್ರೀಮತಿ ಚಂದ್ರಪ್ರಭಾ ಅರಸು ಅವರು ಅಧ್ಯಕ್ಷ ಪೀಠವಲ್ಲಿ ಉಪಸ್ಥಿತರಾದರು)

ಇನ್ನು ಕುಡಿಯುವ ನೀರಿನ ಬಗ್ಗೆ ಹೇಳಬೇಕೆಂದರೆ ಕೆಲವು ಹಳ್ಳಿಗಳಲ್ಲಿ ಬೇಕಾದಷ್ಟು ನೀರಿದೆ. ಬೋರ್‌ವೆಲ್‌ಗಳನ್ನು ಕೂಡ ಸರಿಯಾಗಿ ಹಾಕಿಲ್ಲ. ನಮ್ಮದು ಬಹಳ ಹಿಂದುಳಿದ ತಾಲ್ಲೂಕು. ಅದಕ್ಕೋಸ್ಕರ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಬಹಳ ಬಡವರು ಇದ್ದಾರೆ. ಬೇಕಾದಷ್ಟು ಹರಿಜನ–ಗಿರಿಜನರು, ದುರ್ಬಲ ವರ್ಗದವರು ಇದ್ದಾರೆ. ಒಳ್ಳೆಯ ಆಸ್ಪತ್ರೆಗಳು ಬೇಕು, ಶಾಲಾ ಕಾಲೇಜುಗಳು ಬೇಕು, ಎರಡು ಕಾಲೇಜುಗಳನ್ನಾದರೂ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ವಿದ್ಯುಚ್ಛಕ್ತಿ ವಿಚಾರ ೧೯೮೨ರಲ್ಲಿ ೬೬ ಲಕ್ಷ ರೂಪಾಯಿಗಳನ್ನು ಒದಗಿಸಬೇಕೆಂದು ಶ್ರೀ ಗುಂಡೂರಾವ್ ಸರ್ಕಾರ ಇದ್ದಾಗ ಒತ್ತಾಯ ಮಾಡಿದ್ದೆವು. ಆದರೆ ಇದುವರೆಗೂ ಕೆಲವು ಹಳ್ಳಿಗಳಲ್ಲಿ ವಿದ್ಯುಚ್ಛಕ್ತಿ ಹಾಕಿಲ್ಲ. ಎಲ್ಲಾ ಲ್ಯಾಪ್ಸ್ ಮಾಡಿದ್ದಾರೆ. ಮೊನ್ನೆ ಕೂಡ ನಾನು ಜಿಲ್ಲಾ ಪರಿಷತ್ ಸಭೆಯಲ್ಲಿ ಈ ವಿಚಾರ ಎತ್ತಿ ಮಾತನಾಡಿದೆ. ಅದಕ್ಕೆ ಅವರು ಆದಷ್ಟು ಬೇಗ ಮಾಡಿಕೊಡುತ್ತೇವೆ ಎಂದು ಹೇಳಿದ್ದಾರೆ. ಈಗಲೂ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ, ಈ ಹಳ್ಳಿಗಳಿಗೆ ಆದಷ್ಟು ಬೇಗ ವಿದ್ಯುಚ್ಛಕ್ತಿ ಒದಗಿಸಿಕೊಡಬೇಕು. ಇನ್ನೂ ಒಂದು ವಿಷಯ. ನಾನು ಹೇಳಿದಹಾಗೆ ನನ್ನ ತಾಲ್ಲೂಕು ಬಹಳ ಹಿಂದುಳಿದ ತಾಲ್ಲೂಕು. ಕೆ.ಇ.ಬಿ. ಯವರು ಇನ್ನೂ ಲಾರಿ ಕೊಟ್ಟಿಲ್ಲ. ಈಗಲೂ ಬೇಕಾದಷ್ಟು ಲಾರಿಗಳು ದೊಡ್ಡ ದೊಡ್ಡ ಊರುಗಳಿಗೆ ಹೋಗುತ್ತಿವೆ. ಆದರೆ ನಮ್ಮ ಕ್ಷೇತ್ರಕ್ಕೆ ಮಾತ್ರ ಗಮನ ಕೊಟ್ಟಿಲ್ಲ. ಈಗಲಾದರೂ ಕೆ.ಇ.ಬಿ. ಯವರು ಆದಷ್ಟು ಜಾಗ್ರತೆ ನನ್ನ ಕ್ಷೇತ್ರದ ಕಛೇರಿಗೆ ಒಂದು ಲಾರಿ ಕೊಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ.

ಏತಕ್ಕೆಂದರೆ, ನಮ್ಮ ಬಡ ರೈತರೇ ಈ ಲೈಟ್ ಕಂಬಗಳನ್ನು ಫಿಕ್ಸ್ ಮಾಡಿಕೊಳ್ಳಬೇಕಾಗುತ್ತಿದೆ. ಅಧಿಕಾರಿಗಳನ್ನು ಕೇಳಿದರೆ. ನಮಗೆ ಸಾಕಷ್ಟು ಪವರ್ ಮೆಟೀರಿಯಲ್ ಒದಗಿಸುತ್ತಿಲ್ಲವೆಂದು ಹೇಳುತ್ತಿದ್ದಾರೆ. ಜೊತೆಗೆ, ಧಾರವಾಡದಲ್ಲಿ ಡಿವಿಜನಲ್ ಆಫೀಸ್ ಇದೆ, ಇಲ್ಲಿ ಕೇಳಬೇಕು ಎಂದು ಹೇಳುತ್ತಾರೆ. ಮಾನ್ಯ ಸಚಿವರು, ಇದು ಹಿಂದುಳಿದ ತಾಲ್ಲೂಕು ಎಂದು ತಿಳಿದುಕೊಂಡು, ಆದಷ್ಟು ಬೇಗ ವಿದ್ಯುಚ್ಛಕ್ತಿಯ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ. ಹರಿಜನ ಗಿರಿಜನರಿಗೆ ಆದಷ್ಟು ಜಾಗ್ರತೆ, ಈಗಿರುವ ಕಾನೂನು ಪ್ರಕಾರ, ಪವರ್ ಸಪ್ಲೈ ಮಾಡಬೇಕೆಂದು ಇದೆ,

ಇದನ್ನು ಸರಿಯಾಗಿ ಮಾಡುತ್ತಾ ಇಲ್ಲ. ಇಲ್ಲಿಗೆ ಆದಷ್ಟು ಒಳ್ಳೆಯ ಅಧಿಕಾರಿಗಳನ್ನು ಹಾಕಿ, ಉತ್ತಮ ರೀತಿಯಲ್ಲಿ ಬಡವರಿಗೆ ಅನುಕೂಲ ಮಾಡಿಕೊಡಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಇನ್ನು ನಮ್ಮಲ್ಲಿ ರೇಷ್ಮೆ ಬೆಳೆಯನ್ನು ಚೆನ್ನಾಗಿ ಬೆಳೆಯುತ್ತಿದ್ದಾರೆ, ಬಳ್ಳಾರಿ. ಕೂಡ್ಲಿಗಿ ಮತ್ತು ಸುತ್ತ ಮುತ್ತಲಿನ ಹಳ್ಳಿಗಳಲ್ಲಿ ರೇಷ್ಮೆ ಬೆಳೆ ಚೆನ್ನಾಗಿ ಆಗುತ್ತಿದೆ. ಬಡ ರೈತರು ಈ ಬೆಳೆಯನ್ನು ಬೆಳೆದು, ಇದನ್ನು ತೆಗೆದುಕೊಂಡು ಹೋಗಿ. ಬೆಂಗಳೂರು ತಾಲ್ಲೂಕಿನ ರಾಮನಗರಕ್ಕೆ ಕೊಡಬೇಕಾದರೆ, ಎಷ್ಟೋ ಹಣ ಖರ್ಚಾಗುತ್ತದೆ. ಈ ಖರ್ಚಿನಿಂದ ಬಡ ರೈತರಿಗೆ ಅನ್ಯಾಯವಾಗುತ್ತದೆ. ಅದಕ್ಕೋಸ್ಕರ ಅಲ್ಲಿಯೇ ಒಂದು ಕೇಂದ್ರವನ್ನು ಮಾಡಿದರೆ ಉತ್ತಮವೆಂದು ಹೇಳುತ್ತೇನೆ. ಅಲ್ಲಿ ರೇಷ್ಮೆ ಫಾರಂ ಇದೆ, ಆದ್ದರಿಂದ ರೇಷ್ಮೆಯನ್ನು ಕೊಂಡುಕೊಳ್ಳಲು, ಅಲ್ಲಿಯೇ ಒಂದು ಮಾರ್ಕೆಟನ್ನು ತೆರೆಯಬೇಕೆಂದು ನಾನು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ಮೊಳಕಾಲ್ಮೂರು ತಾಲ್ಲೂಕು ರೇಷ್ಮೆಗೆ ಬಹಳ ಹೆಸರು ವಾಸಿಯಾದ ತಾಲ್ಲೂಕು. ಅಲ್ಲಿನ ರೇಷ್ಮೆ ಹೊರ ದೇಶಗಳಿಗೂ ಹೋಗುತ್ತಿದೆ. ಇದರ ಮೇಲೆ ಹಾಕಿರ ತಕ್ಕ ಟ್ಯಾಕ್ಸ್ ಬಹಳ ಜಾಸ್ತಿ ಇದೆ, ಇದನ್ನು ಆದಷ್ಟು ಕಡಿಮೆ ಮಾಡಬೇಕು. ೩-೪ ಪರ್ಸೆಂಟ್ ಈ ರೇಷ್ಮೆ ಮೇಲೆ ಹಾಕಿರುವಂಥ ಟ್ಯಾಕ್ಸ್ ಕಡಿಮೆ ಆಗಬೇಕೆಂದು ನನ್ನ ಭಾವನೆ. ದಯಮಾಡಿ, ಈ ವಿಷಯ ದಲ್ಲಿ. ಈ ಇಂಡಸ್ಟ್ರೀಗೆ ಉತ್ತೇಜನ ಕೊಡಬೇಕು, ಆದ್ದರಿಂದ ಇದನ್ನು ಆದಷ್ಟು ಕಡಿಮೆ ಮಾಡಬೇಕೆಂದು ಸರ್ಕಾರದಲ್ಲಿ ಒತ್ತಾಯ ಮಾಡುತ್ತೇನೆ. ನನ್ನ ಕ್ಷೇತ್ರದಲ್ಲಿ ಕಲ್ಲು ಬಹಳ ಚೆನ್ನಾಗಿ ಸಿಗುತ್ತದೆ. ೮೦೦ ರೂಪಾಯಿ ಬೆಲೆಯ ಒಂದು ಕಲ್ಲು ಇಲ್ಲಿಂದ ಜಪಾನ್‌ಗೆ ಹೋಗುತ್ತದೆ. ಜಪಾನ್‌ನವರು ಈ ಕಲ್ಲು ಗಳನ್ನು ಪಾಲಿಷ್ ಮಾಡಿ, ೮,೦೦೦ ರೂಪಾಯಿಗಳಿಗೆ ಮಾರುತ್ತಾರೆ. ಆದ್ದರಿಂದ, ಇಲ್ಲಿಯೇ ಒಂದು ಕಾರ್ಖಾನೆ ಮಾಡಿದರೆ, ಬೇಕಾದಷ್ಟು ಕಲ್ಲಿನಲ್ಲಿ ಬರತಕ್ಕ ಲಾಭವನ್ನು ನಾವೇ ಪಡೆಯಬಹುದು. ಇದಕ್ಕಾಗಿ ನಮ್ಮ ಸರ್ಕಾರದಲ್ಲಿ ನಾನು ಒತ್ತಾಯ ಮಾಡುತ್ತೇನೆ. ಮೊಳಕಾಲ್ಮೂರು ಕ್ಷೇತ್ರದಲ್ಲಿ ಇರತಕ್ಕ ಹಾನಗಲ್‌ನಲ್ಲಿ ಈ ಇಂಡಸ್ಟ್ರೀಸ್ ಮಾಡಿದರೆ ಒಳ್ಳೆಯದೆಂದು ಕಾಣುತ್ತದೆ, ಸರ್ಕಾರದವರು ಈ ಬಡ ಕ್ಷೇತ್ರಕ್ಕೆ ಅತ್ಯಂತ ಹೆಚ್ಚಿನ ಉತ್ತೇಜನ ಕೊಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇಷ್ಟು ಹೊತ್ತು ಮಾತನಾಡಲು ನನಗೆ ಅವಕಾಶ ಕೊಟ್ಟಿರತಕ್ಕ ಅಧ್ಯಕ್ಷರಿಗೆ ಮತ್ತು ಮಾನ್ಯ ಮುಖ್ಯಮಂತ್ರಿಗಳಿಗೆ ನನ್ನ ವಂದನೆಗಳನ್ನು ಹೇಳಿ, ನನ್ನ ಮಾತುಗಳನ್ನು ಮುಗಿಸುತ್ತೇನೆ. ಜೈಹಿಂದ್.

† ಶ್ರೀ ಹೆಚ್. ಏಕಾಂತಯ್ಯ (ಚಿತ್ರದುರ್ಗ).—ಸನ್ಮಾನ್ಯ ಅಧ್ಯಕ್ಷಿಣಿಯರೇ, ಮಾನ್ಯ ಹಣಕಾಸಿನ ಮಂತ್ರಿಗಳು ೧೯೯೦-೯೧ನೇ ಸಾಲಿಗೆ ಮಂಡಿಸಿರತಕ್ಕ ಆಯವ್ಯಯ ಪತ್ರಕ್ಕೆ ನಾನು ವಿರೋಧ ಸೂಚಿಸುತ್ತಾ, ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಮಂತ್ರಿಗಳು ಮೊಟ್ಟಮೊದಲಿಗೆ. ''ಗ್ಲಾಸ್‌ನಾಸ್ಟ್'' ಮತ್ತು "ಪೆರಿಸ್ಟ್ರೋಯಿಕ' ಗಳ ಹಿನ್ನೆಲೆಯಲ್ಲಿ ವಿಶ್ವದ ಹಲವಾರು ಪ್ರದೇಶಗಳಲ್ಲಿ ಅಲ್ಲಿಯ ಜನಾಭಿಪ್ರಾಯ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ ಗಳನ್ನು ಒಮ್ಮಿಂದೊಮ್ಮೆಗೆ ಬದಲಾಯಿಸುತ್ತಿದೆ'' ಎಂದು ಹೇಳಿದ್ದಾರೆ. ಈ ಹಿನ್ನೆಲೆಯಲ್ಲಿ ವಿಶ್ವದ ಅನೇಕ ಭಾಗಗಳಲ್ಲಿ ಅದರಲ್ಲೂ ಪೂರ್ವ ಯೂರೋಪಿಯನ್ ಕಮ್ಯುನಿಸ್ಟ್ ರಾಷ್ಟ್ರಗಳಲ್ಲಿ ಜನಾಭಿಪ್ರಾಯ ಬದಲಾಗಿದೆ, ಅಲ್ಲಿ ಆರ್ಥಿಕ ಮತ್ತು ಸಾಮಾಜಿಕ ಬದಲಾವಣೆಯಾಗಿದೆ ಎಂಬ ಮಾತನ್ನು ಹೇಳಿದ್ದಾರೆ. ಆ ಬದಲಾವಣೆಗೆ ಏನು ಕಾರಣಗಳು ಇವೆಯೋ ಗೊತ್ತಿಲ್ಲ. ಅಂತಹ ಕಾರಣಗಳು ಇರಬಹುದು ಅಥವಾ ಇಲ್ಲದಿರಬಹುದು. ಅಂತಹ ಬದಲಾವಣೆಗಳು ನಮ್ಮ ರಾಜ್ಯದಲ್ಲೂ, ನಮ್ಮ ರಾಷ್ಟ್ರದಲ್ಲೂ ಆಗಿದೆ ಎಂಬ ಮಾತನ್ನು ಹೇಳಿದ್ದಾರೆ. ಹಾಗೆ ಹೇಳುತ್ತಾ ನಮ್ಮ ರಾಜ್ಯದಲ್ಲಿ ಅಧಿಕಾರ ಬದಲಾವಣೆಯಾಗಿದೆ. ಈ ರಾಜ್ಯದ ಜನತೆಯು ಕಾಂಗ್ರೆಸ್ ಪಕ್ಷದ ರಚನಾತ್ಮಕ ಕಾರ್ಯನೀತಿಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ವಿಶ್ವಾಸ ಇರಿಸಿ ತಮ್ಮನ್ನು ಅಧಿಕಾರಕ್ಕೆ ತಂದಿದ್ದಾರೆ ಎನ್ನುವ ಮಾತನ್ನು ಹೇಳಿದ್ದಾರೆ. ಇದು ಎಷ್ಟರ ಮಟ್ಟಿಗೆ ಸರಿ ಎಂಬುದನ್ನು ನಾವು ಯೋಚನೆ ಮಾಡಬೇಕಾಗಿದೆ. ಹಾಗಾದರೆ ರಾಷ್ಟ್ರಮಟ್ಟದಲ್ಲಿ ಸರಕಾರ ಬದಲಾವಣೆಯಾಗಿದ್ದರೆ, ಕಾಂಗ್ರೆಸ್ಸೇತರ ಪಕ್ಷಗಳಲ್ಲಿ ಅಥವಾ ಆ ಪಕ್ಷಗಳ ಕಾರ್ಯನೀತಿಯಲ್ಲಿ ಏನಾದರೂ ಜನ ವಿಶ್ವಾಸ ಇಟ್ಟು ಮತ ಕೊಟ್ಟಿದ್ದಾರೆ ಎಂಬುದನ್ನು ಇವರು ಒಪ್ಪುವುದಕ್ಕೆ ತಯಾರಾಗಿದ್ದಾರೆಯೋ ಎಂಬ ಮಾತನ್ನು ಕೇಳುತ್ತೇನೆ. ರಾಷ್ಟ್ರದಲ್ಲಿ, ರಾಜ್ಯಗಳಲ್ಲಿ ಅಧಿಕಾರ ಬದಲಾವಣೆಯಾಗಿದೆ. ಅಲ್ಲಿ ಆಡಳಿತ ಮಾಡುತ್ತಿದ್ದಂಥ ಸರಕಾರಗಳ ಬಗ್ಗೆ ಜನ ಅವಿಶ್ವಾಸವನ್ನು ತೋರಿಸುವುದಕ್ಕೆ ತೀರ್ಮಾನ ಮಾಡಿ ಬದಲಾವಣೆಯಾಗಿದೆಯೇ ಹೊರತು ಇವರ ಮೇಲಿನ ಪ್ರೀತಿಯಿಂದ ಅಲ್ಲ ಎಂಬ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ ನಮ್ಮ ರಾಜ್ಯದ ಸಂಪನ್ಮೂಲ ಕೊರತೆ ಬಹಳ ಜಾಸ್ತಿಯಾಗಿದೆ, ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕು ಎಂಬ ಮಾತನ್ನು ಹೇಳಿದ್ದಾರೆ. ಜನತಾ ದಳದ ಸರಕಾರ ಏನು ಹೋಯಿತು ಅದು ಹೋಗುವಾಗ ನಮಗೆ ಬಳುವಳಿಯಾಗಿ ೧೭೬.೩೦ ಕೋಟಿ ಕೊರತೆ ಬಜೆಟ್ ಮತ್ತು ೧೨೮.೫೭ ಕೋಟಿ ಬಿಲ್‌ಗಳನ್ನು ಪಾವತಿ ಮಾಡದೇ ಬಿಟ್ಟು ಹೋಗಿದ್ದಾರೆ ಎಂಬ ಮಾತನ್ನು ಹೇಳಿದ್ದಾರೆ. ಈ ಬಳುವಳಿ ಎಂಬ ಮಾತನ್ನು ಪದೇ ಪದೇ ನಮ್ಮ ಮಂತ್ರಿಗಳು ಹಾಗೂ ಕಾಂಗ್ರೆಸ್ ಪಕ್ಷದ ಸದಸ್ಯರುಗಳು ಹೇಳಿದ್ದಾರೆ. ಖಜಾನೆಯನ್ನು ಲೂಟಿ

ಮಾಡಿದ್ದರು ಎಂಬ ಮಾತನ್ನು ಹೇಳುತ್ತಾರೆ. ಇದು ಸರಿಯಲ್ಲ ಎನ್ನುವ ಮಾತನ್ನು ಹೇಳಬೇಕಾಗುತ್ತದೆ. ೧೯೮೩ರಲ್ಲಿ ಕಾಂಗ್ರೆಸ್ ಪಕ್ಷದ ಸರಕಾರ ಇತ್ತಲ್ಲ ಅದು ಅಧಿಕಾರ ಬಿಟ್ಟು ಹೋಗುವಾಗ ಏನು ಬಿಲ್‌ಗಳು ಪಾವತಿ ಆಗದೇ ಇರಲಿಲ್ಲವೇ, ಆಗ ಕೊರತೆ ಬಜೆಟ್ ಇರಲಿಲ್ಲವೇ ಎನ್ನುವ ಮಾತನ್ನು ಕೇಳಬೇಕಾಗುತ್ತದೆ ೧೯೮೩ನೇ ಇಸವಿಯಲ್ಲಿ ಆಗ ಇದ್ದಂಥ ಕಾಂಗ್ರೆಸ್ ಸರಕಾರ ಹೋದಾಗ ೧೧೩.೨೫ ಕೋಟಿ ರೂಪಾಯಿಗಳ ಕೊರತೆ ಬಜೆಟ್ ಇತ್ತು. ೭೨.೫೦ ಕೋಟಿ ರೂಪಾಯಿಗಳ ಪೆಂಡಿಂಗ್ ಬಿಲ್ಸ್ ಇದ್ದವು ಇವಕ್ಕೆ ತಾವು ಏನು ಹೇಳುತ್ತೀರಿ. ಅವರು ಖಜಾನೆಯನ್ನು ಲೂಟಿ ಮಾಡಿಕೊಂಡು ಹೋದರು ಎಂದು ಹೇಳುವುದಕ್ಕೆ ಸಾಧ್ಯವೇ ? ಇದು ಸರಿಯಲ್ಲ. ೧೯೮೪-೮೫ರಲ್ಲಿ ಕೇಂದ್ರ ಸರಕಾರದ ಪಾವತಿ ಆಗದ ಬಿಲ್‌ಗಳ ಮೊತ್ತ ನಾಲ್ಕು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚು ಇತ್ತು. ಯಾವುದೇ ಸರಕಾರ ಇದ್ದರೂ ಕೂಡಾ ಆಯವ್ಯಯ ವರ್ಷದ ಕೊನೆಯಲ್ಲಿ ಇಂತಹ ಪಾವತಿ ಆಗದಿರುವ ಬಿಲ್‌ಗಳು ಇರುವುದು ಸರ್ವೇಸಾಮಾನ್ಯ ಎಂಬ ಮಾತನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇಂತಹ ಸಂದರ್ಭದಲ್ಲಿ ಏನೋ ಮಾಡಿದ್ದಾರೆ ಎಂಬ ಭಾವನೆ ಬರುವ ರೀತಿಯಲ್ಲಿ ಸರಕಾರದ ಬಳುವಳಿ ಎಂಬ ಮಾತನ್ನು ಹೇಳುತ್ತಿದ್ದಾರೆ, ಅದು ಸರಿಯಲ್ಲ. ಯಾವುದೇ ಸರಕಾರ ಇದ್ದರೂ ಸಹ ಪಾವತಿ ಆಗದ ಬಿಲ್‌ಗಳು ಪ್ರವೃತ್ತಿಯಾಗಿ ಬಂದಿರುವ ಕೊರತೆ ಬಜೆಟ್ ಇರುವುದು ವಾಸ್ತವ ಸ್ಥಿತಿ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾಗಿದೆ. ಇದಕ್ಕೆ ಒಂದು ರಾಜಕಾರಣದ ಬಣ್ಣವನ್ನು ಕೊಡುವ ಪ್ರಯತ್ನ ಏನು ಮಾಡುತ್ತಿದ್ದಾರೆ ಅದು ಸರಿಯಲ್ಲ ಎಂಬ ಮಾತನ್ನು ಹೇಳುತ್ತೇನೆ. ೬ ಮತ್ತು ೭ನೇ ಪಂಚವಾರ್ಷಿಕ ಯೋಜನೆಗಳ ಮೊತ್ತ ಕಡಿಮೆ ಆಯಿತು ಎಂಬ ಮಾತನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದರು. ಜನತಾ ದಳದ ಸರಕಾರ ಇದ್ದಾಗ ಅಭಿವೃದ್ಧಿ ಪಥದಲ್ಲಿ ಸಾಗಲಿಲ್ಲ ಎಂಬ ಮಾತನ್ನು ಹೇಳುವುದಕ್ಕೆ ಪ್ರಯತ್ನ ಮಾಡಿದರು. ೧೯೮೫-೮೬ನೇ ಸಾಲಿನಲ್ಲಿ ಪ್ರಾರಂಭವಾದ ೭ನೇ ಯೋಜನೆಯ ಮೊತ್ತ ಏನು ಇತ್ತು ಎಂದರೆ ೩೫೭೫ ಕೋಟಿ ರೂಪಾಯಿಗಳಿತ್ತು. ಅದು ಪರಿಷ್ಕೃತವಾದಾಗ ಅದರ ಅಂದಾಜು ೩೮೫೦ ಕೋಟಿ ರೂಪಾಯಿಗಳಾಯಿತು. ಹಾಗಾದರೆ ಕಳೆದ ಯೋಜನಾವಧಿಯಲ್ಲಿ ನಮ್ಮ ಸರಕಾರ ಯೋಜನಾ ವೆಚ್ಚದಲ್ಲಿ ಏನಾದರೂ ಕಡಿಮೆ ಮಾಡಿದಿಯೋ ಎಂದರೆ ಆ ಬಗ್ಗೆ ೩೯೬೦ ಕೋಟಿ ರೂಪಾಯಿಗಳ ವೆಚ್ಚವನ್ನು ನಾವು ಮಾಡಿದ್ದೇವೆ. ಹಾಗಾದರೆ ಸಂಪನ್ಮೂಲಗಳನ್ನು ಕ್ರೋಢೀಕರಿಸಿಕೊಳ್ಳುವುದಕ್ಕೆ ನಾವು ಬೇಕಾದಷ್ಟು ಪ್ರಯತ್ನ ಮಾಡಿದ್ದೇವೆ. ೧೯೮೫-೮೬ನೇ ಸಾಲಿನಲ್ಲಿ ಪ್ರಾರಂಭವಾದ ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ನಿಗದಿತ ಸಂಪನ್ಮೂಲಗಳನ್ನು ನಾವು ರೂಢಿಸಿಕೊಳ್ಳಬೇಕಾಗಿತ್ತೋ ಅದಕ್ಕಿಂತ ಹೆಚ್ಚು ಸಂಪನ್ಮೂಲಗಳನ್ನು ರೂಢಿಸಿಕೊಂಡಿದ್ದೇವೆ. ೭ನೇ ಪಂಚವಾರ್ಷಿಕ ಯೋಜನೆಯಲ್ಲಿ ೭೫೪ ಲಕ್ಷ ಕೋಟಿ ರೂಪಾಯಿಗಳ ಹೆಚ್ಚುವರಿ ಸಂಪನ್ಮೂಲಗಳನ್ನು ರೂಢಿಸಿಕೊಂಡಿದ್ದೇವೆ. ೭ನೇ ಪಂಚವಾರ್ಷಿಕ ಯೋಜನೆಯ ಅವಧಿಯ ಮೊದಲ ೪ ವರ್ಷಗಳಲ್ಲಿ ೧೧೪೭ ಕೋಟಿ ರೂಪಾಯಿಗಳ ಹೆಚ್ಚುವರಿ ಹಣ ರೂಢಿಸಿಕೊಂಡಿದ್ದೇವೆ. ೫ನೇ ವರ್ಷದಲ್ಲಿ ಬಂದ ಸಂಪನ್ಮೂಲಗಳನ್ನು ಗಣನೆಗೆ ತೆಗೆದುಕೊಂಡರೆ ಇದು ಇನ್ನು ಹೆಚ್ಚಾಗುತ್ತದೆ. ಆದ್ದರಿಂದ ಹೆಚ್ಚುವರಿ ಸಂಪನ್ಮೂಲಗಳನ್ನು ರೂಢಿಸಿಕೊಂಡಿಲ್ಲವೆಂದಾಗಲಿ, ಯೋಜನೆ ವೆಚ್ಚ ಕಡಿಮೆ ಆಯಿತು ಎಂದು ಹೇಳುವ ಮಾತಿನಲ್ಲಿ ಅರ್ಥವಿಲ್ಲ ಎಂದು ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ. ಇದಾದ ಮೇಲೆ ಈ ಒಂದು ಆಯವ್ಯಯದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈಗಾಗಲೇ ಅನೇಕ ಸ್ನೇಹಿತರು ಹೇಳಿದಂತಹ ವಿಚಾರಗಳನ್ನು ಹೊರತುಪಡಿಸಿ ಕೆಲವು ವಿಚಾರಗಳನ್ನು ಮಾತ್ರ ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಯೋಜನೆಯು ಕೇಂದ್ರ ಬಿಂದು ಶ್ರೀಸಾಮಾನ್ಯನಾಗಬೇಕೆಂದು ಹೇಳಿದ್ದಾರೆ. ಇಡೀ ಯೋಜನಾ ಕಾರ್ಯಾಚರಣೆ ಮತ್ತು ಅಭಿವೃದ್ಧಿ ಪ್ರಯತ್ನಗಳು ಏನು ಇವೆ ಇವು ಶ್ರೀಸಾಮಾನ್ಯನನ್ನು ಗಮನದಲ್ಲಿರಿಸಿಕೊಂಡೆ ರೂಪಿಸಬೇಕೆನ್ನುವ ಮಾತನ್ನು ಹೇಳಿದ್ದಾರೆ. ಈ ದಿಸೆಯಲ್ಲಿ ನಮ್ಮ ಎಲ್ಲಾ ಪ್ರಯತ್ನಗಳು ಸಾಮಾಜಿಕ ನ್ಯಾಯದಿಂದ ಕೂಡಿದ ಆರ್ಥಿಕ ಬೆಳವಣಿಗೆಯ ಧ್ಯೇಯಕ್ಕೆ ಸಾಧಕ ಮತ್ತು ಪೂರಕವಾಗಬೇಕೆನ್ನುವ ಮಾತನ್ನು ಹೇಳಿದ್ದಾರೆ. ಈ ರೀತಿಯ ಕಾರ್ಯಕ್ರಮಗಳು ನಿಮ್ಮ ಬಜೆಟ್‌ನಲ್ಲಿ ಇವೆಯೇ ಎಂದು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಇವತ್ತಿನ ದಿವಸ ನಮ್ಮ ರಾಜ್ಯದ ಆರ್ಥಿಕ ನೀತಿ ಏನು ? ಈ ಮಾತನ್ನು ನಾನು ಹೇಳುತ್ತಾ ಮಾನ್ಯ ಹಣಕಾಸಿನ ಮಂತ್ರಿಗಳು ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ. ಅದೇನೆಂದರೆ ಈ ದೇಶದಲ್ಲಿ ಕಮ್ಯುನಿಸ್ಟ್ ಸಿದ್ಧಾಂತವನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ. ಬಂಡವಾಳ ಶಾಹಿಯ ವ್ಯವಸ್ಥೆಯ ಮುಕ್ತ ಆರ್ಥಿಕ ವ್ಯವಸ್ಥೆ ಏನು ಇದೆ ಅದನ್ನು ನಾವು ಮಾಡಲಿಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ಹೇಳುತ್ತಾ ತಮ್ಮದೆ ಆದ ರೀತಿಯಲ್ಲಿ ಸೂಚ್ಯವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಈ ರೀತಿ ಪ್ರಸ್ತಾಪ ಮಾಡುತ್ತಾ ಅವರು ಏನು ಹೇಳಿದ್ದಾರೆಂದರೆ ಖಾಸಗೀ ಉದ್ಯಮವಲಯ ಏನಿದೆ ಅದಕ್ಕೆ ಹೆಚ್ಚು ಒತ್ತು ಕೊಡುವಂತಹ ರೀತಿಯಲ್ಲಿ, ಪ್ರೋತ್ಸಾಹ ಕೊಡುವಂತಹ ರೀತಿಯಲ್ಲಿ ಹೇಳಿರುವಂತಾದ್ದು. ಕೈಗಾರಿಕೆಗಳನ್ನು ಖಾಸಗೀಕರಣ ಮಾಡುತ್ತೇವೆ ಎನ್ನುವ ಅರ್ಥದಲ್ಲಿ ಹೇಳಿದ್ದಾರೆಂದು ನಾನು ಭಾವಿಸುತ್ತೇನೆ. ನಮ್ಮ ಮಾನ್ಯ ಮುಖ್ಯ

ಮಂತ್ರಿಗಳು ನಾವು ಏನೇನು ಮಾಡಿದರೂ ಜನರಿಗೆ ವಂಚನೆ ಮಾತ್ರ ಮಾಡಬಾರದು ಎಂದು ಹೇಳಿದರು. ನಮ್ಮ ಬೈಬಲ್‌ನಲ್ಲಿ ಏನು ಹೇಳುತ್ತೇವೆಯೋ ಅದಕ್ಕೆ ವಿರುದ್ಧವಾದ ರೀತಿಯಲ್ಲಿ ಮಾಡಿದರೆ ಅದು ಜನರಿಗೆ ವಂಚನೆ ಮಾಡಿದಂತಾಗುತ್ತದೆ, ಬೈಬಲ್ ಅಂದ್ರೆ ಯಾವುದಪ್ಪ ? ಅಂದರೆ ಅದು ನಮ್ಮ ಚುನಾವಣೆ ಘೋಷಣೆ. ಈ ಚುನಾವಣೆ ಘೋಷಣೆಯಲ್ಲಿ ರಾಷ್ಟ್ರೀಯ ರಂಗ ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುತ್ತೇವೆಂದು ಹೇಳಿ ಮಾಡದಿದ್ದರೆ ಅದು ಜನತೆಗೆ ವಂಚನೆ ಮಾಡಿದಂತಾಗುತ್ತದೆ ಎನ್ನುವ ಮಾತನ್ನು ಅವರು ಪದೇ ಪದೇ ಹೇಳಿದ್ದಾರೆ. ಹಾಗಾದರೆ ಈ ಸಾಲ ಮನ್ನಾ ಮಾಡುವ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ನೀತಿ ಏನು ? ಇದರ ಬಗ್ಗೆ ತಾವು ಏನು ಆಲೋಚನೆ ಮಾಡಿದ್ದೀರಿ ಎನ್ನುವ ಮಾತನ್ನು ನಾನು ಕೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನದಿವಸ ಅವರು ಹೇಳಿದ್ದಾರೆ. ಅವರ ಚುನಾವಣೆ ಘೋಷಣೆಯಲ್ಲಿ, ಏನು ಹೇಳಿದ್ದಾರೆ ಎಂದರೆ ಬರಗಾಲ ಮತ್ತು ಇತರ ನೈಸರ್ಗಿಕ ತೊಂದರೆಗಳಿಗೆ ಒಳಗಾಗದಂತಹ ರೈತರಿಗೆ ಸಾಲವನ್ನು ಒದಗಿಸಲು ರಾಷ್ಟ್ರೀಯ ವ್ಯವಸಾಯ ಸಾಲ ಪರಿಹಾರ ನಿಧಿಯನ್ನು ಸ್ಥಾಪಿಸುತ್ತದೆ ಎಂದು ಇದಕ್ಕೆ ಒಂದು ಯೋಜನೆಯನ್ನು ಹಾಕಿಕೊಳ್ಳುತ್ತೇವೆಂದು ಅದರ ಆಧಾರದ ಮೇಲೆ ಸಾಲದ ಮರು ಪಾವತಿ ಪರಿಶೀಲನೆ ಮಾಡಿ ಬಡ್ಡಿ ರದ್ಧತಿ ಹಾಗೂ ನಿರ್ದಿಷ್ಟ ಸಂದರ್ಭಗಳಲ್ಲಿ ಅಸಲು ರದ್ದು ಮಾಡುವುದು, ಅಂದರೆ ಇದರ ಅರ್ಥ ಏನು ? ವಿಶೇಷವಾದ ಸಂದರ್ಭಗಳಲ್ಲಿ ಸಾಲ ಮನ್ನಾ ಮಾಡುವಂತಹ ನೀತಿಯನ್ನು ಅನುಸರಿಸಬೇಕು ಅದಕ್ಕಾಗಿ ವಿಶೇಷವಾದ ಕಾರ್ಯಕ್ರಮ ತೆಗೆದುಕೊಳ್ಳಬೇಕೆನ್ನುವ ಮಾತನ್ನು ಹೇಳಿದ್ದಾರೆ. ಮತ್ತು ಇನ್ನು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡುತ್ತಾ ಸಾಲ ತೆಗೆದುಕೊಂಡು ಬರಪೀಡಿತರಾದವರ ಸಾಲವನ್ನು ಮರು ಪರಿಶೀಲನೆ ಮಾಡಲಾಗುತ್ತದೆ ಹಾಗಾದರೆ ಇದರ ಅರ್ಥ ಏನು ? ತಾವು ಸಾಲ ಮನ್ನಾ ಮಾಡುವ ವಿಚಾರದಲ್ಲಿ ಅರ್ಹರಾದ ಎಲ್ಲರಿಗೂ ಅಲ್ಲದಿದ್ದರೂ ವಿಶೇಷವಾದ ಸಂದರ್ಭಗಳಲ್ಲಿ ಸಾಲ ಮನ್ನಾ ಮಾಡುವ ಬಗ್ಗೆ ಯೋಚನೆ ಮಾಡಿದ್ದೀರಾ ? ಅದಕ್ಕೆ ಬದ್ಧರಾಗಿದ್ದೀರಾ ? ಇನ್ನು ನಮ್ಮ ಹಣಕಾಸಿನ ಸಚಿವರು ಒಂದು ಮಾತನ್ನು ಹೇಳಿದ್ದಾರೆ ಅದೇನೆಂದರೆ ಖಾಸಗೀ ಮತ್ತು ಸಾರ್ವಜನಿಕ ಉದ್ದಿಮೆಗಳ ಬಗೆ ಮಾತನಾಡುತ್ತಾ ಈ ದೇಶದ ಕೈಗಾರಿಕಾ ವ್ಯವಸ್ಥೆಯಲ್ಲಿ ಏಕಮೇವಾ ದ್ವಿತೀಯ ಸ್ಥಾನವನ್ನು ಹೊಂದಿರಬೇಕು ಮತ್ತು ಎಲ್ಲಾ ಪ್ರಮುಖ ಕೈಗಾರಿಕಾ ವಲಯಗಳ ಮೇಲೆ ಸ್ವಾಮ್ಯವನ್ನು ಹೊಂದಿರಬೇಕು ಎಂಬ ಅಭಿಪ್ರಾಯ ಇತ್ತು. ಇದು ಇವರದ್ದು ಅಲ್ಲ. ಮುಂದೆ ಹೋಗಿ ಹೇಳುತ್ತಾರೆ ಹೆಚ್ಚಿನ ಉದಾರ ನೀತಿಯ ಕಡೆಗೆ ಒಲವು ನಿಧಾನ ಗತಿಯಿಂದ ಸಾಗುತ್ತಿದೆ. ಇದೇ ಬಗೆಯ ಒಲವು ವಿಶ್ವಾದ್ಯಂತ ಈಗ ಪ್ರಚಲಿತ ಎಂದು ಹೇಳಿದ್ದಾರೆ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ಸಾರ್ವಜನಿಕ ಉದ್ದಿಮೆಗಳನ್ನು ಕೈಗಾರಿಕಾಕರಣ ಮಾಡುವುದಕ್ಕೆ ಸರ್ಕಾರದ ಕಡೆಯಿಂದ ಪ್ರಯತ್ನ ಏನಾದರೂ ನಡೆದಿದೆಯೇ ? ಎನ್ನುವ ಭಾವನೆ ಬರುತ್ತದೆ. ಹಾಗಾದರೆ ಈ ಸರ್ಕಾರದ ನೀತಿ ಏನು ? ಆ ನೀತಿಯ ಬಗ್ಗೆ ಹೇಳುತ್ತಾ ಅವರ ಪಕ್ಷದ ಚುನಾವಣೆ ಘೋಷಣೆಯ ಒಂದೆರಡು ಪದಗಳನ್ನು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಾಂಗ್ರೆಸ್ ಪಕ್ಷ ಸಮಾಜವಾದವನ್ನು ಕುರಿತು ನೀಡಿದ ವಚನ ಬದ್ಧತೆಯಲ್ಲಿ ಸ್ಥಿರವಾಗಿ ನಿಂತಿದೆ ನಮ್ಮ ಸಂವಿಧಾನದ ಸಮಾಜದ ಆರ್ಥಿಕ ನೀತಿ ತಳಹದಿ. ಇದು ಭಾರತದ ಅಧಿಕೃತ ತತ್ವವಾಗಿದೆ.

ಇನ್ನು ಸಾರ್ವಜನಿಕ ಘಟಕಗಳ ಬಗ್ಗೆ ಮಾತನಾಡುತ್ತಾ ಸಾರ್ವಜನಿಕ ಘಟಕಗಳನ್ನು ತಾಂತ್ರಿಕತೆಯಿಂದ ನವೀಕರಣ ಮಾಡುವುದು ಬಹಳ ಪ್ರಮುಖವಾಗಿದೆ. ಏನು ರಾಷ್ಟ್ರೀಕರಣ ಮಾಡಬೇಕೆಂದು ಇದ್ದಾರೆ. ಇದರಿಂದ ಸಾರ್ವಜನಿಕ ಘಟಕಗಳನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಬಹುದು. ಇವತ್ತಿನ ದಿವಸ ಮಾನ್ಯ ಮಂತ್ರಿಗಳು ಹೇಳುತ್ತಾ, ಯಾವುದೇ ಕಾರಣ ಇರಬಹುದು ಸಾರ್ವಜನಿಕ ಕೈಗಾರಿಕೆಗಳು ಲಾಭದಾಯಕವಾಗಿ ನಡೆಯುತ್ತಿಲ್ಲ ಎಂದು ನೆಪ ಹೂಡಿ ಕೈಗಾರಿಕೆಗಳನ್ನು ಖಾಸಗೀಯವರಿಗೆ ಕೊಡುವ ಪ್ರಯತ್ನ ಏನು ನಡೆದಿದೆ ಇದನ್ನು ಎಲ್ಲರೂ ವಿರೋಧಿಸಬೇಕು ಹಾಗೂ ಅದನ್ನು ಮೊಟಕುಗೊಳಿಸಬೇಕು. ಖಾಸಗೀ ಉದ್ಯಮಗಳಿಗೂ ನಾವು ಬೆಂಬಲವನ್ನು ಕೊಡಬೇಕು, ಅದು ಹೇಗೆ ? ನಮ್ಮ ಸಾರ್ವಜನಿಕ ವಲಯದ ಉದ್ದಿಮೆಗಳು ಏನಿವೆ ಅವುಗಳಿಗೆ ಒಳ್ಳೆಯ ಪರಿಸರವನ್ನು ಮೊದಲು ಕಲ್ಪಿಸಿಕೊಟ್ಟು ನಂತರ ಖಾಸಗೀ ಉದ್ದಿಮೆಗಳ ಬಗ್ಗೆ ಚಿಂತನೆ ಮಾಡಬೇಕು ಇವತ್ತಿನ ದಿವಸ ಸಾರ್ವಜನಿಕ ವಲಯದ ಉದ್ದಿಮೆಗಳಲ್ಲಿ ೪ ಸಾವಿರ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದಾರೆ. ಈ ಉದ್ದಿಮೆಗಳಿಂದ ಸುಮಾರು ೭೨೦ ಕೋಟಿ ರೂಪಾಯಿಯಷ್ಟು ನಷ್ಟವಾಗುತ್ತಿದೆ. ಈ ರೀತಿ ನಮ್ಮ ಸಾರ್ವಜನಿಕ ವಲಯದ ಕೈಗಾರಿಕೆಗಳು ನಷ್ಟ ಅನುಭವಿಸುವುದಕ್ಕೆ ಕಾರಣ ಏನು ಎನ್ನುವುದನ್ನು ಪತ್ತೆ ಮಾಡಬೇಕಾಗಿದೆ. ಈ ನಷ್ಟಕ್ಕೆ ಯಾರು ಕಾರಣರಾಗಿದ್ದಾರೆ ಎಂಬುದನ್ನು ಪತ್ತೆ ಮಾಡುವುದಕ್ಕೆ ಸಾಧ್ಯವಿದೆ. ಸಾರ್ವಜನಿಕ ವಲಯದ ಕೈಗಾರಿಕೆಗಳು ಯಾವ ರೀತಿ ನಷ್ಟ ಅನುಭವಿಸುತ್ತವೆ ಎಂಬುದಕ್ಕೆ ಒಂದು ಉದಾಹರಣೆಯನ್ನು ಕೊಡಲಿಕ್ಕೆ ನಾನು ಇಷ್ಟಪಡುತ್ತೇನೆ. ನಮ್ಮಲ್ಲಿ ಮಂಗಳೂರು ಫರ್ಟಿಲೈಸರ್ ಎನ್ನುವ ಒಂದು ಸಾರ್ವಜನಿಕ ಉದ್ದಿಮೆ ಇದೆ. ಅಲ್ಲಿ ದೊಡ್ಡ ದೊಡ್ಡ ಅಧಿಕಾರಿಗಳೇ

ನಿರ್ದೇಶಕರಾಗಿದ್ದಾರೆ. ಒಂದು ಸಾರಿ ಅಲ್ಲಿ ಡೈ ಅಮೋನಿಯಮ್ ಫ್ಹಾಸ್ಪೇಟ್ ಪ್ಲಾಂಟ್‌ನ್ನು ತರಲಿಕ್ಕೆ ಪ್ರಯತ್ನ ಮಾಡಿದರು.

ಶ್ರೀ ಎನ್. ಜಿ. ನಾಯಕ್.—ಅವರ ಸರ್ಕಾರ ಇದ್ದಾಗೆ ಏನು ಮಾಡುತ್ತಿದ್ದರು ? ಕೋತಿ ಮೊಸರು ತಿಂದು ಮೇಕೆಯ ಬಾಯಿಗೆ ಒರೆಸಿದ ಹಾಗೆ ಅವರು ಹೇಳುತ್ತಿದ್ದಾರೆ. ಲಕ್ಷಾಂತರ ರೂಪಾಯಿಗಳ ಸಾಲ ತೆಗೆದುಕೊಂಡಿರುವವರಿಗೆ ಸಾಲ ಮನ್ನಾ ಮಾಡಿ ಎಂದು ಇವರು ಹೇಳುತ್ತಾರೆ. ನಾನು ಆಗಲೇ ಇದರ ಬಗ್ಗೆ ಎಲ್ಲಾ ಮಾತನಾಡಬೇಕೆಂದು ಇದ್ದೆ. ಆದರೆ ನಾನು ಪ್ರಿಪೇರ್ಡ್ ಆಗಿರಲಿಲ್ಲ. ಸಡನ್ ಆಗಿ ಅವಕಾಶ ಬಂದಿದ್ದರಿಂದ ಸರಿಯಾಗಿ ಮಾತನಾಡುವುದಕ್ಕೆ ಆಗಿರಲಿಲ್ಲ, ಅವರ ಸರ್ಕಾರ ಇದ್ದಾಗ ರೈತರುಗಳಿಗೆ ದ್ರೋಹ ಮಾಡಿದ್ದಾರೆಂದು ನಾನು ಹೇಳುತ್ತೇನೆ. ಈಗ ಇವರು ರೈತರುಗಳಿಗೆ ಸಾಲ ಮನ್ನಾ ಮಾಡಬೇಕೆಂದು ಹೇಳುತ್ತಿದ್ದಾರೆ. ಅವರು ಇದ್ದಾಗೆ ನಮ್ಮ ಬಡ ರೈತರುಗಳಿಗೆ ಅನ್ಯಾಯಂ ಮಾಡಿದ್ದಾರೆ.

ಶ್ರೀ ಹೆಚ್. ಏಕಾಂತಯ್ಯ.—ಸನ್ಮಾನ್ಯ ಅಧ್ಯಕ್ಷಣಿಯವರೇ, ನಾನು ಹೇಳುತ್ತಿದ್ದದ್ದು ಏನೆಂದರೆ, ಸಾರ್ವಜನಿಕ ವಲಯದಲ್ಲಿರುವಂಥ ಉದ್ಯಮಗಳಲ್ಲಿ ಕೆಲಸ ಮಾಡುವಂಥ ಅಧಿಕಾರಿಗಳ ಬೇಜವಾಬ್ದಾರಿಯಿಂದ ಮತ್ತು ಅವರ ಹೊಣೆಗೇಡಿತನದಿಂದ ಅನೇಕ ಸಂದರ್ಭಗಳಲ್ಲಿ ನಷ್ಟ ಉಂಟು ಮಾಡುವ ಸಂದರ್ಭಗಳಿವೆ. ಉದಾಹರಣೆಗೆ, ಮಂಗಳೂರು ಫರ್ಟಿಲೈಸರ್ ಸಾರ್ವಜನಿಕ ಉದ್ಯಮ ಇದೆ. ಈ ಉದ್ಯಮದಲ್ಲಿ ನಡೆದ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಈ ಉದ್ಯಮದಲ್ಲಿ ಡೈ ಅಮೋನಿಯಮ್ ಫಾಸ್ಪೇಟ್ ತಯಾರು ಮಾಡುವುದಕ್ಕೆ ಒಂದು ಪ್ಲಾಂಟ್‌ನ್ನು ಜಪಾನ್‌ನಿಂದ ತರಿಸಿಕೊಂಡಿದ್ದರು. ಆ ಪ್ಲಾಂಟನ್ನು ತರಿಸಿಕೊಂಡ ಕಾಲದಲ್ಲಿ ಅದು ಸರಿಯಾಗಿಲ್ಲವೆಂದು ಅಲ್ಲಿನ ಅಧಿಕಾರಿಗಳು ವರದಿ ಮಾಡಿದ್ದರು. ಅದು ಸರಿಯಾಗಿಲ್ಲವೆಂದ ಮೇಲೆ ಬೇರೆ ಪ್ಲಾಂಟ್‌ನ್ನು ಕೊಡುತ್ತೇವೆಂದು ಜಪಾನ್ ಕಂಪನಿಯವರು ಹೇಳಿದರು. ನಂತರ, ಮೊದಲು ತರಿಸಿಕೊಂಡಿದ್ದ ಪ್ಲಾಂಟ್‌ನ್ನು ಮಾರಾಟ ಮಾಡುವುದಕ್ಕೆ ತೀರ್ಮಾನ ಮಾಡಿದರು. ಮಾರಾಟ ಮಾಡಿ ಬಂದ ಹಣವನ್ನು ಕಂಪನಿಯು ಲಾಭಾಂಶದ ಲೆಕ್ಕದಲ್ಲಿ ಸೇರಿಸಿಕೊಂಡು ಕಂಪನಿಯು ಲಾಭದಲ್ಲಿ ಇದೆಯೆಂದು ಹೇಳಿದರು. ಆಮೇಲೆ, ಅಷ್ಟು ಸಾಲದು ಎಂಬಂತೆ ಮುಂದೆ ಏನು ಮಾಡಿದರು ಎಂದರೆ, ಯಾವ ಪ್ಲಾಂಟ್ ಅನುಪಯುಕ್ತವೆಂದು ಹೇಳಿ ಮಾರಾಟ ಮಾಡಿದ್ದರೋ ಅದೇ ಪ್ಲಾಂಟ್‌ನ್ನು ಪುನಃ ಬಾಡಿಗೆ ರೂಪದಲ್ಲಿ ತಂದು ಅದೇ ಕಂಪನಿಯವರು ಉಪಯೋಗಿಸುತ್ತಿದ್ದಾರೆ, ಅವರು ಹೆಚ್ಚಿನ ಹಣವನ್ನು ಬಾಡಿಗೆ ರೂಪದಲ್ಲಿ ಕೊಡುತ್ತಿದ್ದಾರೆ. ಇದು ಎಷ್ಟರಮಟ್ಟಿಗೆ ಸರಿ ಸ್ವಾಮಿ ? ಇಂಥಾ ಪ್ರಕರಣಗಳು ಒಂದಲ್ಲ. ಎನ್. ಜಿ. ಇ. ಎಫ್‌ನಲ್ಲೂ ಅನೇಕ ಸಾಮಾನುಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ. ಅಲ್ಲಿ ತಮಗೆ ಗೊತ್ತಿದ್ದ ಹಾಗೆ ಮೋಟಾರ್ ಇರಬಹುದು ಅಥವಾ ಬೇರೆ ಬೇರೆ ವಸ್ತುಗಳು ಇರಬಹುದು, ಪೂರ್ಣಗೊಂಡಿರದ ಅನೇಕ ವಸ್ತುಗಳನ್ನು ಪೂರ್ಣಗೊಂಡಿದೆ ಎಂದು ತಿಳಿಸಿ ಬ್ಯಾಲೆನ್ಸ್ ಶೀಟ್‌ನಲ್ಲಿ ತೋರಿಸಿ ಲಾಭ ಬಂದಿದೆ ಎಂದು ಹೇಳಿ ಆ ಹಣವನ್ನು ಬೇರೆ ಬೇರೆ ರೂಪದಲ್ಲಿ ಉಪಯೋಗಿಸಿದ್ದಾರೆ.

೫-೩೦ ಪಿ. ಎಂ.

ಅಷ್ಟೇ ಅಲ್ಲ ಇನ್‌ಕಂಟ್ರಾಕ್ಟ್‌ನ್ನು ಸಹ ಕೊಟ್ಟಿದ್ದಾರೆ. ನಿಜವಾದ ಸ್ಥಿತಿ ಎಂದರೆ ಅವರು ಹೇಳಿದಂಥ ಯಾವ ವಸ್ತುಗಳೂ ಪೂರ್ಣವಾಗಿ ಇವೊತ್ತಿನ ದಿವಸ ಉತ್ಪಾದನೆಯಾಗಲಿಲ್ಲ. ಅಂಥ ಅನೇಕ ಅಕ್ರಮಗಳು ನಮ್ಮ ಅಧಿಕಾರಿಗಳಿಂದ ನಡೆದಾಗ, ಅದರ ಬಗ್ಗೆ ಸೂಕ್ತ ವಿಚಾರಣೆ ನಡೆಸಿ ಕ್ರಮ ತೆಗೆದುಕೊಳ್ಳುವ ಬಗ್ಗೆ ನಮ್ಮ ಸರಕಾರದವರು ಮನಸ್ಸು ಮಾಡದಿದ್ದರೆ, ಅದು ಯಾವುದೇ ಪಕ್ಷದ ಸರಕಾರ ಇದ್ದರೂ ಸಹ ಸಾರ್ವಜನಿಕ ಕ್ಷೇತ್ರದಲ್ಲಿರುವ ಉದ್ಯಮಗಳು ಚೆನ್ನಾಗಿ ಕೆಲಸ ಮಾಡಲು ಸಾಧ್ಯವಿದೆಯೇ ? ಉದಾಹರಣೆಗೆ ಎನ್‌ಜಿಇಎಫ್‌ನವರು ಬೋರ್‌ವೆಲ್‌ಗಳಿಗೆ ಬೇಕಾದಂಥ ಪಂಪ್ ಸೆಟ್‌ಗಳನ್ನು ಒದಗಿಸುತ್ತಾರೆ ಅವರು ಅದನ್ನು ತಯಾರು ಮಾಡುವುದಿಲ್ಲ. ಬೇರೆ ಕಂಪನಿಗಳಿಂದ ತರಿಸಿ ತಮ್ಮ ಸೀಲ್ ಹಾಕಿ ಜಿಲ್ಲಾ ಪರಿಷತ್‌ಗಳಿಗೆ ಅದನ್ನು ಮಾರಾಟ ಮಾಡುತ್ತಾರೆ. ಮಾರಾಟ ಮಾಡುವುದಕ್ಕೆ ಬೇರೆಯವರಿಗೆ ಕಮೀಶನ್ ಕೊಡುತ್ತಾರೆ. ಇಂಥ ಅಕ್ರಮಗಳು ಒಂದಲ್ಲ, ಎರಡಲ್ಲ, ಬಹಳಷ್ಟು ಇವೆ. ನಮ್ಮಲ್ಲಿರುವ ೫೮ ಸಾರ್ವಜನಿಕ ಉದ್ಯಮಗಳಲ್ಲಿ ಬಹುತೇಕ ಉದ್ಯಮಗಳಿಗೆ ಐಎಎಸ್ ಅಧಿಕಾರಿಗಳೇ ನಿರ್ದೇಶಕರಾಗಿರುತ್ತಾರೆ. ಅಂಥ ಸಂದರ್ಭದಲ್ಲಿ, ಅವರ ಅವಧಿಯಲ್ಲಿ ಏನಾದರೂ ತಪ್ಪು ಮಾಡಿದಾಗ ಆ ತಪ್ಪುಗಳನ್ನು ಕಂಡುಹಿಡಿದು ಅದಕ್ಕೆ ಅವರನ್ನು ಹೊಣೆಗಾರರನ್ನಾಗಿ ಮಾಡುವ ಒಂದು ಕ್ರಮವನ್ನು ಸರಕಾರದವರು ತೆಗೆದುಕೊಳ್ಳದಿದ್ದರೆ ಈ ಉದ್ಯಮಗಳು ನಷ್ಟವಾಗುವುದಕ್ಕೆ ಕಾರಣವಾಗುತ್ತದೆ. ಉದ್ದಿಮೆಗಳಲ್ಲಿ ನಷ್ಟ ಏಕೆ ಆಗುತ್ತದೆ ಎಂದು ಕಂಡುಹಿಡಿದು, ಅದನ್ನು ಅರ್ಥಮಾಡಿಕೊಂಡು ಸರಿಪಡಿಸುವ ಕಡೆಗೆ ಗಮನ ಕೊಡಬೇಕು. ಮಾನ್ಯ ಕಾಗೋಡು

ತಿಮ್ಮಪ್ಪನವರು ಹೇಳಿದ ಹಾಗೆ ನಮ್ಮ ಸರಕಾರದ ಅವಧಿಯಲ್ಲಿ ಕೂಡ ಕೆಲವು ತಪ್ಪು ತೀರ್ಮಾನಗಳು ಆಗಿರಬಹುದು. ಅದನ್ನೇ ನೆಪವಾಗಿ ಇಟ್ಟುಕೊಂಡು ನೀವು ಗೌರೀಬಿದನೂರು ಸಕ್ಕರೆ ಕಾರ್ಖಾನೆಯನ್ನು ಹಿರಿಯೂರು ಸಕ್ಕರೆ ಕಾರ್ಖಾನೆಯನ್ನು ಮಾರಾಟ ಮಾಡಬಾರದಿತ್ತು. ಅಂದರೆ ಅದು ಸರಿಯಾದ ಉತ್ತರವಾಗುವುದಿಲ್ಲ. ನಾವು ಮಾಡಿದ ತಪ್ಪುಗಳಿಗೆ ಸಾಮೂಹಿಕವಾಗಿ ನಾವೆಲ್ಲರೂ ಜವಾಬ್ದಾರರಾಗಿರಬಹುದು. ಇವೊತ್ತಿನ ದಿವಸ ಅಂತಹ ತಪ್ಪುಗಳು ಪುನರಾವರ್ತನೆಯಾಗದ ಹಾಗೆ ತಾವುಗಳು ಆಡಳಿತ ಮಾಡಬೇಕೇ ಹೊರತು ನೀವು ಮಾಡಿದ್ದೀರಿ ನಾವು ಮಾಡುತ್ತೇವೆ ಎಂದರೆ ಅದು ಸರಿಯಾಗುವುದಿಲ್ಲ. ಆದುದರಿಂದ ಇವೊತ್ತಿನ ದಿವಸ ಸಾರ್ವಜನಿಕ ಉದ್ಯಮಗಳು ಏನಿವೆ ಅವುಗಳನ್ನು ಲಾಭದಾಯಕವಾಗಿ ಮಾಡುವ ಬಗ್ಗೆ ಪೂರ್ಣ ಪ್ರಯತ್ನಗಳನ್ನು ಮಾಡಬೇಕು. ಅದನ್ನು ಬಿಟ್ಟು ಅವುಗಳನ್ನು ಖಾಸಗೀಯವರಿಗೆ ಕೊಡುವ ವಿಚಾರವನ್ನು ಮಾಡುವುದು ಖಂಡನೀಯ, ಎಂದು ಹೇಳಬೇಕಾಗುತ್ತದೆ. ಹಾಗೆ ಮಾಡುವುದು ತಪ್ಪಬೇಕು. ನಾವು ಪ್ರಜಾತಂತ್ರ ವ್ಯವಸ್ಥೆಯಲ್ಲಿರುವಾಗ ನಮ್ಮಲ್ಲಿ ಸಮಾಜವಾದವು ಉಳಿದು ಬೆಳೆದು ಬರಬೇಕಾದರೆ ಸಾರ್ವಜನಿಕ ಉದ್ದಿಮೆಗಳನ್ನು ನಾವು ಪರಿಪೂರ್ಣವಾದ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕಾಗಿದೆ. ಆ ಬಗ್ಗೆ ಪ್ರಾಮಾಣಿಕ ಯತ್ನಗಳನ್ನು ನಾವು ಮಾಡಬೇಕಾಗಿದೆ ಅಂತಹ ಒಂದು ಪ್ರಯತ್ನವನ್ನು ಮಾನ್ಯ ಹಣಕಾಸಿನ ಸಚಿವರು ಮಾಡುತ್ತಾರೆ ಎಂದು ನಂಬಿ, ಆ ಉದ್ದಿಮೆಗಳನ್ನು ಲಾಭದಾಯಕ ಉದ್ದಿಮೆಗಳನ್ನಾಗಿ ನಡೆಸಿಕೊಂಡು ಹೋಗಬೇಕೆಂದು ಕೇಳಿಕೊಳ್ಳುತ್ತೇನೆ.

ಮಾನ್ಯ ಆರ್ಥಿಕ ಸಚಿವರು ಮಂಡಿಸಿದ ಬಜೆಟ್‌ನಲ್ಲಿ ಸಹಕಾರಿ ಕ್ಷೇತ್ರದ ಬಗ್ಗೆ ಒಂದೇ ಒಂದು ಶಬ್ದ ಕೂಡ ಇಲ್ಲ. ರೈತರಿಗೆ ಎಲ್ಲಾ ವಿಧವಾದ ನೆರವುಗಳನ್ನು ಕೊಡುತ್ತೇವೆ ಎಂದು ಹೇಳಿದವರು ತಮ್ಮ ಬಜೆಟ್‌ನಲ್ಲಿ ರೈತರಿಗಾಗಲಿ, ಸಹಕಾರ ಕ್ಷೇತ್ರಕ್ಕಾಗಲಿ, ಏನೂ ಹೇಳಿಲ್ಲ. ನಮ್ಮ ಸರಕಾರ ಆಡಳಿತದಲ್ಲಿದ್ದಾಗ ಅನೇಕ ವಿಧವಾದ ಸಹಾಯಗಳನ್ನು ನಾವು ಈ ದಿಸೆಯಲ್ಲಿ ಮಾಡಿದ್ದೇವೆ. ಅವುಗಳನ್ನು ಇಲ್ಲಿ ಪಟ್ಟಿ ಮಾಡಿ ಹೇಳುವುದು ಸರಿಯಲ್ಲ. ಅದು ಬಡ್ಡಿ ರಿಯಾಯಿತಿ ಆಗಿರಬಹುದು, ಅಥವಾ ಇನ್ನಾವುದೇ ರೀತಿಯ ಸಹಾಯವಾಗಿರಬಹುದು. ಮಾನ್ಯ ಮುಖ್ಯಮಂತ್ರಿಯವರು ಒಂದು ಮಾತನ್ನು ಹೇಳಿದ್ದರು. ನಿಮ್ಮ ಸರಕಾರ ೨೫-೩-೮೯ರಲ್ಲಿ ಬಡ್ಡಿ ರಿಯಾಯಿತಿಯನ್ನು ತೆಗೆದುಹಾಕಿದೆ ಎಂದು ಹೇಳಿದರು. ನಾನು ಅವೊತ್ತು ಆ ಮಾತಿನ ಬಗ್ಗೆ ಪ್ರತಿಭಟನೆ ಮಾಡಿದ್ದೆ. ೨೮-೩-೮೯ರಂದು ಬಡ್ಡಿ ರಿಯಾಯಿತಿಯನ್ನು ತೆಗೆದುಹಾಕುವುದಕ್ಕೆ ಆದೇಶವಾಗಿಲ್ಲ. ಅದು ನಬಾರ್ಡ್‌ನವರಿಗೆ ಬರೆದ ಪತ್ರ ಇರಬಹುದು, ನೀವು ತಪ್ಪು ಹೇಳುತ್ತಾ ಇದ್ದೀರಿ ಎಂದು ಹೇಳಿದೆ. ಅದಕ್ಕೆ ಅವರು ನೇರವಾಗಿ ಉತ್ತರವನ್ನು ಆ ಸಮಯದಲ್ಲಿ ಕೊಟ್ಟಿಲ್ಲ. ಆ ವಿಚಾರದಲ್ಲಿ ನಾನು ವಿವರವಾಗಿ ಹೇಳ ಬಯಸುತ್ತೇನೆ. ಈ ಬಗ್ಗೆ ರಿಯಾಯಿತಿಯನ್ನು ತೆಗೆದುಹಾಕುವ ಆಜ್ಞೆ ೧೧-೧-೯೦ರಲ್ಲಿ ಆಗಿದೆ. ಆಗ ನಮ್ಮ ಸರಕಾರ ಇರಲಿಲ್ಲ ಎಂಬ ಬಗ್ಗೆ ತಾವು ಜ್ಞಾಪಿಸಿಕೊಳ್ಳಬೇಕು. ಬಡ್ಡಿ ರಿಯಾಯಿತಿ ಆದೇಶವನ್ನು ರದ್ದು ಮಾಡಿದ ಸರಕಾರ ಮಾನ್ಯ ವೀರೇಂದ್ರಪಾಟೀಲ್‌ರವರ ಸರಕಾರ, ನಮ್ಮ ಸರ್ಕಾರ ಅಲ್ಲ ಎಂದು ಹೇಳ ಬಯಸುತ್ತೇನೆ.

ಅದರ ಜೊತೆಗೆ ಅನೇಕ ರಿಯಾಯಿತಿಗಳನ್ನು ಕೊಡುತ್ತಿರುವುದನ್ನು ಮುಂದುವರೆಸುವ ಬಗ್ಗೆ ಯಾವುದೇ ಒಂದು ಮಾತನ್ನೂ ಹೇಳಿಲ್ಲ. ಕೇವಲ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಬೆಳೆ ಸಾಲಕ್ಕೆ ಮಾತ್ರ ಮಿತಿಗೊಳಿಸಿ ಒಂದು ಮಾತನ್ನು ಹೇಳಿದ್ದಾರೆ. ಇಲ್ಲಿನ ಸಾಲ ಮನ್ನಾ ಮಾಡುವ ಬಗ್ಗೆ ನಮಗೆ ಸಾಕಷ್ಟು ಸಂಪನ್ಮೂಲಗಳಿಲ್ಲ ಆದ್ದರಿಂದ ಅವುಗಳನ್ನು ಮಾಡಲು ಅಸಾಧ್ಯವೆಂದು ಕೇಂದ್ರಕ್ಕೆ ಇದನ್ನು ಮಾಡಬೇಕೆಂದು ಹೇಳಿದರೆ ಅದಕ್ಕೆ ಅರ್ಥವಿದೆ. ಆದರೆ ನಿಮ್ಮ ಸಂಪನ್ಮೂಲಗಳಲ್ಲಿ ಸ್ವಲ್ಪ ಭಾಗವನ್ನಾದರೂ ಸಹ ಈ ದೇಶದ ರೈತರಿಗೆ ಕೊಡದಿರುವಂತಹ ಒಂದು ಪರಿಸ್ಥಿತಿ ನಮ್ಮಲ್ಲಿದೆಯೇ ? ಹಾಗಿದ್ದರೆ ೧೯೮೩ರಿಂದ ೮೯ವರೆಗೆ ಸುಮಾರು ೧೫೫೫ ಕೋಟಿಗಿಂತಲೂ ಹೆಚ್ಚು ಹಣವನ್ನು ನಾವು ಕೊಟ್ಟಿವಲ್ಲ ಆಗ ಸರ್ಕಾರಕ್ಕೆ ಮನಸಿರಲಿಲ್ಲವೇ ? ಮನಸಿದ್ದರೆ ಖಂಡಿತವಾಗೂ ಸ್ವಲ್ಪ ಭಾಗವನ್ನಾದರೂ ಕೊಡಲು ಸಾಧ್ಯವಾಗುತ್ತದೆ. ಇವತ್ತು ಸಾಲ ಮನ್ನಾ ಮಾಡುವ ಬಗ್ಗೆ ಯಾವುದೇ ಚಿಂತನೆ ಇದ್ದರೂ ಸಹ ಕೇಂದ್ರವನ್ನು ಒತ್ತಾಯ ಮಾಡಬೇಕೆಂಬ ಭಾವನೆ ಇದ್ದರೂ ಸಹ ಈ ದೇಶದ ರೈತನಿಗೆ ಕಡಿಮೆ ಬಡ್ಡಿ ದರದಲ್ಲಿ ಸಾಲವನ್ನು ಕೊಡುವಂತಹ ನೀತಿ ಏನಿದೆ ಅದನ್ನು ತಾವು ಮುಂದುವರೆಸಿಕೊಂಡು ಹೋಗಬೇಕೆಂಬ ಮಾತನ್ನು ಹೇಳುತ್ತೇನೆ ನಿಜ. ಸಾಲ ಮನ್ನಾ ಮಾಡುವುದರಿಂದ ಇಡೀ ರೈತ ಸಮೂಹಕ್ಕೆ ಉಪಯೋಗವಾಗದಿರಬಹುದು ಯಾರು ಸಾಲ ಮಾಡಿದ್ದಾರೆ, ಯಾರು ತೊಂದರೆಯಲ್ಲಿದ್ದಾರೆ ಅವರಿಗೆ ಸಹಾಯವಾಗಬೇಕು. ಆದರೆ ಕಡಿಮೆ ಬಡ್ಡಿ ದರದಲ್ಲಿ ನೀವು ಸಾಲ ರೈತನಿಗೆ ವಿತರಣೆ ಮಾಡುವಂತಹ ಮನಸ್ಸು ಇದ್ದರೆ ಅದನ್ನಾದರೂ ಮುಂದುವರೆಸುವುದೇ ಆದರೆ ಎಲ್ಲಾ ರೈತರಿಗೂ ಅನುಕೂಲವಾಗುತ್ತದೆ ಆದ್ದರಿಂದ ಇದನ್ನು ವಿಚಾರ ಮಾಡಬೇಕೆಂದು ಹೇಳುತ್ತೇನೆ. ಮತ್ತು ಆ

ಆದೇಶವನ್ನು ಏನು ರದ್ದು ಮಾಡಿದ್ದೀರಿ ಅದನ್ನು ಹಿಂತೆಗೆದುಕೊಂಡು ಪುನಃ ಕೊಡುವಂತಹ ವ್ಯವಸ್ಥೆಯನ್ನು ಮಾಡಬೇಕು. ದುರದೃಷ್ಟಕರ ಸಂಗತಿಯೆಂದರೆ ತಾವು ಆಯವ್ಯಯದಲ್ಲಿ ಹೇಳಿರುವ ಮಾತು ಏನಿದೆ ಅದನ್ನನುಸರಿಸಿ ನಬಾರ್ಡ್‌ನವರು ಒಂದು ಪತ್ರ ಬರೆದಿದ್ದಾರೆ. ಅವರು ಹೇಳುತ್ತಾರೆ ಅಪೆಕ್ಸ್ ಬ್ಯಾಂಕಿನವರಿಗೆ :

> 'We learn from the news item published in local news paper that while presenting the State Budget for 1990–91 in the State Assembly on March 16th 1990, the Hon'ble Finance Minister of Karnataka indicate interalia that the State Government was proposing to introduce new scheme for providing interest subsidy in respect of crop loans availed by small and mariginal farmers retrospectively with effect from 2nd October, 1989 and modalities of the proposed scheme were being worked out by the State Government. We have not received formal communation from the State Government, pending which we deem that if this report, if correct, would amount to violation of instructions contained in the National Bank Circular dated 29th Nov. 1988 by Co-opertive Bank. In view of this, refinance is suspended until we hear from the State Government that they will not implement the proposed scheme.'

ಇಂತಹ ಪತ್ರ ಬರೆಯುವ ದಾರ್ಷ್ಟ್ಯ ನಮ್ಮ ದೇಶದ ಅಧಿಕಾರಿಗಳಿಗೆ ಇದೆ. ಅವರು ಸರ್ಕಾರದವರಿರಬಹುದು ಅಥವಾ ಕೇಂದ್ರವರಿರಬಹುದು ಇಲ್ಲ ನಬಾರ್ಡ್‌ನವರಿರಬಹುದು. ಅಧಿಕಾರಿಗಳು ಕೇವಲ ಒಂದು ಪತ್ರಿಕೆಯಲ್ಲಿ ಬಂದಿರುವ ವರದಿ ಆಧಾರದ ಮೇಲೆ ಮುಂದೆ ಯಾವ ಮಾಡಲಿಟೀಸ್ ಮಾಡುತ್ತೀವೆಂಬುದನ್ನು ಸಹ ಗಮನಕ್ಕೆ ತಂದುಕೊಳ್ಳದೆ ಇದ್ದಕ್ಕಿದ್ದ ಹಾಗೇ ಈ ದೇಶದ ರೈತರಿಗೆ ಕೊಡುತ್ತಿರುವ ಫೈನಾನ್ಸನ್ನು ನಿಲ್ಲಿಸುತ್ತೀವೆಂದು ಹೇಳುವ ದಾರ್ಷ್ಟ್ಯ ಅಧಿಕಾರಿಗಳಿಗಿದೆ, ಇದರ ಬಗ್ಗೆ ಸರ್ಕಾರ ತೀವ್ರವಾಗಿ ಗಮನಹರಿಸಿ ಕೂಡಲೇ ಸಂಬಂಧಪಟ್ಟ ಹಿರಿಯ ಅಧಿಕಾರಿಗಳ ಜತೆ ಮಾತನಾಡಬೇಕು. ಸಮಸ್ಯೆ ಇದ್ದರೆ ಕೇಂದ್ರದ ಹಣಕಾಸಿನ ಸಚಿವರೊಡನೆ ಮಾತನಾಡಿ ಕೂಡಲೇ ಇದನ್ನು ಬಗೆಹರಿಸುವ ಪ್ರಯತ್ನ ಮಾಡಬೇಕೆಂದು ಹೇಳುತ್ತೇನೆ. ಅಧ್ಯಕ್ಷರೇ. ಈ ಆಯವ್ಯಯದಲ್ಲಿ ಏನು ನಮೂದು ಮಾಡಲಾಗಿದೆ ರೈತರ ಬಗ್ಗೆಯಾಗಲೀ ಸಹಕಾರ ಕ್ಷೇತ್ರದ ಬಗ್ಗೆಯಾಗಲೀ ವಿಶೇಷವಾದ ರೀತಿಯಲ್ಲಿ ಕಾರ್ಯಕ್ರಮವನ್ನು ಅವರು ನಮೂದು ಮಾಡಿಲ್ಲ. ಅವರಿಗೆ ಸಹಕಾರಿ ತತ್ವದಲ್ಲಿ ನಂಬಿಕೆ ಇದೆಯೋ ಇಲ್ಲವೋ. ಗೊತ್ತಿಲ್ಲ. ಆದರೆ ಕಾಂಗ್ರೆಸ್ ಪಕ್ಷದ ಘೋಷಣೆ ಏನಿದೆ ಅದನ್ನು ನೋಡಿದಾಗ ನಾನು ಅರ್ಥಮಾಡಿಕೊಂಡಿದ್ದೇನೆ ಇವರಿಗೂ ಸಹ ಸಹಕಾರಿ ಕ್ಷೇತ್ರದ ಬೆಳವಣಿಗೆ ಬಗ್ಗೆ ನಂಬಿಕೆ ಇದೆ ಅದರ ಮೂಲಕ ಹೊಸ ಸಮಾಜ ವ್ಯವಸ್ಥೆಯನ್ನು ತರುವುದಕ್ಕೆ ಸಾಧ್ಯವಿದೆ. ಕೇವಲ ಬಂಡವಾಳಶಾಹಿ ವ್ಯವಸ್ಥೆಯಾಗಲಿ ಅಥವಾ ಕಮ್ಯುನಿಸಮ್ ಮೂಲಕವಾಗಲಿ ಸಾಮಾಜಿಕ ವ್ಯವಸ್ಥೆಯನ್ನು ತರುವುದಕ್ಕೆ ಸಾಧ್ಯವಾಗಲಾರದೆಂದು ನಮ್ಮ ದೇಶದ ಪರಿಸರದಲ್ಲಿ ಎಂದು. ಆದ್ದರಿಂದ ಸಹಕಾರಿ ತತ್ವದ ಆಧಾರದ ಮೇಲೆ ಹೊಸ ಸಾಮಾಜಿಕ ವ್ಯವಸ್ಥೆಯನ್ನು ತರಬೇಕೆಂಬ ಅನೇಕ ಸಂದರ್ಭಗಳಲ್ಲಿ ನಮ್ಮೆಲ್ಲರ ಹಿರಿಯರೂ ಆದ ನೆಹರೂ ಅವರು ಹೇಳಿದ್ದಾರೆ. ಈ ದಿಸೆಯಲ್ಲಿ ಅವರು ಹೇಳಿದಂತ ಮಾತುಗಳೆಂದರೆ : 'Socialism without higher production would below level Poor socialism.'...

ಈಗಾಗಲೆ ಅನೇಕ ಸಂದರ್ಭಗಳಲ್ಲಿ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ಹಣಕಾಸಿನ ಮಂತ್ರಿಗಳು ಮತ್ತು ಹಿರಿಯ ಸ್ನೇಹಿತರುಗಳು ಹೇಳುತ್ತಿದ್ದರು ನಮ್ಮ ಆರ್ಥಿಕ ನೀತಿಯನ್ನು ಬೈಬಲ್ ಎಂದು ತಾವು ಏನು ಹೇಳುತ್ತೀರೋ, ಅದು ೨೦ ಅಂಶದ ಕಾರ್ಯಕ್ರಮ ಎನ್ನುವ ಮಾತನ್ನು ಹೇಳುತ್ತೇನೆ ೨೦ ಅಂಶದ ಕಾರ್ಯಕ್ರಮವನ್ನು ಕಟ್ಟುನಿಟ್ಟಾಗಿ ಜಾರಿಗೆ ತಂದಲ್ಲಿ ಅದಕ್ಕೆ ಖಂಡಿತವಾಗಿಯೂ ನಮ್ಮಲ್ಲಿ ವಿರೋಧವಿಲ್ಲ. ಆದರೆ ಅದನ್ನು ಕಟ್ಟುನಿಟ್ಟಾಗಿ ಜಾರಿಗೆ ತರದೆ ಕೇವಲ ಘೋಷಣೆಗೆ ಅದನ್ನು ಉಪಯೋಗಿಸುವುದಾದರೆ ಅದನ್ನು ಎಷ್ಟರಮಟ್ಟಿಗೆ ಮೆಚ್ಚಬೇಕು ಎಂಬುದಾಗಿ ತಾವೇ ಯೋಚನೆ ಮಾಡಬೇಕು ಇವತ್ತಿನ ದಿವಸ ೨೦ ಅಂಶದ ಕಾರ್ಯಕ್ರಮದ ಆಧಾರದಲ್ಲಿ ಹೇಳುತ್ತಾರೆ.

We should expand the public distribution system opening of more fair price shops. Continue strict action against smugglers hoarders tax evaders and blackmarketeers and improve the working of Public Enterprise by increasing the capacity and generate income. ಎಲ್ಲವೂ ಸಹಾ ಇದೆ. ಕೇವಲ ೨೦ ಅಂಶದ ಕಾರ್ಯಕ್ರಮವನ್ನು ಹಿರಿಮೆಗೋಸ್ಕರ ಹೇಳಿಕೊಳ್ಳದೆ ಒಂದು ತತ್ವದ ಆಧಾರದ ಮೇಲೆ ಹೊಸ ಕಾರ್ಯಕ್ರಮವನ್ನು ರೂಪಿಸಿ ಪರಿಣಾಮಕಾರಿಯಾಗಿ ಜಾರಿಗೆ ತರುವುದಕ್ಕೆ ತಾವು ಪ್ರಯತ್ನವನ್ನು ಮಾಡಬೇಕು ಎನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಕೊನೆಗೆ ತೆರಿಗೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಈಗಾಗಲೇ ನಮ್ಮ ಸ್ನೇಹಿತರುಗಳು ಇದರ ಬಗ್ಗೆ ಹೇಳಿದ್ದಾರೆ ಹೇಳಿದ ಆ ವಿಷಯಗಳನ್ನೇ ಮತ್ತೆ ಹೇಳುವುದಕ್ಕೆ ನಾನು ಇಷ್ಟಪಡುವುದಿಲ್ಲ. ತಾವು ಅನುಬಂಧ ಐರಲ್ಲಿ ಏನು ಹೇಳಿದ್ದೀರಿ, ಮಲ್ಟಿಪಲ್ ಟ್ಯಾಕ್ಸ್ ಪಾಯಿಂಟ್ ಬಗ್ಗೆ. ಕೊನೆಯ ಹಂತದ ಮಾರಾಟ ತೆರಿಗೆಯನ್ನು ತಾವು ಹಾಕಿದ್ದೀರಿ. ಆದರೆ ಕೆಲವು ಸಂದರ್ಭಗಳಲ್ಲಿ ಕೊನೆಯ ಹಂತದ ಮಾರಾಟ ತೆರಿಗೆಯನ್ನು ಉಳಿಸಿಕೊಂಡಿದ್ದೀರಿ ಇನ್ನು ಕೆಲವು ಸಂದರ್ಭಗಳಲ್ಲಿ ಕೊನೆಯ ಹಂತದ ಮಾರಾಟ ತೆರಿಗೆಯನ್ನು ತೆಗೆದಿದ್ದೀರಿ ಎಂದರೆ ನಿಮ್ಮ ನೀತಿ ಒಂದೇ ಇರಬೇಕಾಗಿತ್ತು. ಕೊನೆಯ ಹಂತದ ಮಾರಾಟ ತೆರಿಗೆಯನ್ನು ಹಾಕುವ ಉದ್ದೇಶ ಏನೆಂದರೆ ಟ್ಯಾಕ್ಸ್ ಇವೇಷನ್ ಆಗಬಾರದು, ಅದನ್ನು ಸರಿಯಾದ ರೀತಿಯಲ್ಲಿ ರಿಕವರಿ ಮಾಡಬೇಕು ಎನ್ನುವ ದೃಷ್ಟಿಯಲ್ಲಿ ತಾವು ಮಾಡಿದ್ದೀರಿ ಎಂದು ನಾನು ಭಾವಿಸಿದ್ದೇನೆ ತಾವು ಸಾರಾಯಿ ಬಗ್ಗೆ ಏನು ಹೇಳಿದ್ದೀರಿ, ೧೫ ರಿಂದ ೨೦ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದೀರಿ ೧೫ ರಿಂದ ೧೮ ಮಾಡಿ ಅಥವಾ ೧೭ ಮಾಡಿ, ಕೊನೆಯ ಹಂತದ ಹೊಸ ವ್ಯವಸ್ಥೆ ಏನು ಇದೆ, ಅದನ್ನು ಹಾಗೆಯೇ ಇಡಿ ಏನಾಗುತ್ತದೆ ? ಇವತ್ತಿನ ದಿವಸ ನನಗೆ ಬರುವಂಥ ಅನುಮಾನ, ಈ ದೇಶದ ಜನಸಾಮಾನ್ಯರಿಗೆ ಬರುವ ಅನುಮಾನವನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಹೆಂಡದ ಲಾಬಿಯಿಂದ ಮುಕ್ತರಾಗಿದ್ದೀರಿ ಎಂದು ತಾವುಗಳು ಹೇಳಿಕೊಳ್ಳಬಹುದು. ಆದರೆ ಹೆಂಡದ ಲಾಬಿಯಿಂದ ಮುಕ್ತರಾಗುವುದರ ಜೊತೆಗೆ ನೀವು ಸಾರಾಯಿ ಲಾಬಿಯ ಜೊತೆಯಲ್ಲಿ ಶಾಮೀಲಾಗಿದ್ದೀರಿ ಎಂಬ ಭಾವನೆ ಬರುವಂಥ ರೀತಿಯಲ್ಲಿ ತಾವು ನಡೆದುಕೊಳ್ಳಬೇಡಿ ಅಂಥ ಪರಿಸರವನ್ನು ನಿರ್ಮಾಣ ಮಾಡಬೇಡಿ ಎಂದು ಹೇಳುತ್ತೇನೆ. ನಿಜ, ನಮ್ಮ ರಾಜ್ಯದಲ್ಲಿರುವಂಥ ರಾಜಕೀಯ ವ್ಯವಸ್ಥೆ ಮತ್ತು ಆಡಳಿತ ವ್ಯವಸ್ಥೆಯಲ್ಲಿ ಯಾವುದೇ ಸರ್ಕಾರ ಇದ್ದರೂ ಸಹಾ ಯಾವ ಒಂದು ಲಾಬಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಶರಣಾಗುವಂಥ ಸಂಭವ ಇದೆ.

ಶ್ರೀ ಕಾಗೋಡು ತಿಮ್ಮಪ್ಪ.—ಅಧ್ಯಕ್ಷರೇ, ಸೇಂದಿ ಮತ್ತು ಸಾರಾಯಿ ಎರಡಕ್ಕೂ ಇರುವುದು ಒಂದೇ ಲಾಬಿಯೇ.

ಶ್ರೀ ಹೆಚ್. ಏಕಾಂತಯ್ಯ.—ನನಗೆ ಅಷ್ಟೊಂದು ಗೊತ್ತಿಲ್ಲ ನಾನು ತಿಂದುಕೊಂಡಿದ್ದೇನೆ. ನನಗಿಂತಲೂ ಹೆಚ್ಚಾಗಿ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆ ಆದರೆ ವ್ಯಕ್ತಿಗಳು ಬೇರೆ ಎಂದು ಅರ್ಥ ಮಾಡಿಕೊಳ್ಳಬೇಕು. ಒಂದು ರಾಜಕೀಯ ಲಾಭವನ್ನು ಪಡೆಯಲಿಕ್ಕೆ ಅಥವಾ ಯಾವುದೇ ರಾಜಕೀಯ ಕಾರಣಕ್ಕಾಗಿ ಅಥವಾ ಕಾಗೋಡು ತಿಮ್ಮಪ್ಪನವರು ನನ್ನ ಸ್ನೇಹಿತರು ಎನ್ನುವ ಒಂದೇ ಕಾರಣಕ್ಕಾಗಿ ಹೆಂಡದ ಒಂದು ವಹಿವಾಟನ್ನು ನಡೆಸುವುದಾದರೆ ಅಥವಾ ಕಾಗೋಡು ತಿಮ್ಮಪ್ಪನವರು ನಮ್ಮ ಸ್ನೇಹಿತರು ಎನ್ನುವ ಒಂದೇ ಕಾರಣಕ್ಕಾಗಿ ಸಾರಾಯಿ ಮಾರುವಂಥದ್ದಕ್ಕೆ ಅವರೇ ಪರೋಕ್ಷವಾಗಿ ನೆರವಾಗುವಂಥ ಈ ನೀತಿಯನ್ನು ಅನುಸರಿಸುವುದಾದರೆ ಆಗ ವಿಧಿ ಇಲ್ಲದೆ ನಾವು ಅಥವಾ ನೀವು ಯಾರು ಸಹ ಇಂಥವರ ಜೊತೆಯಲ್ಲಿ ಶಾಮೀಲಾಗಿದ್ದಾರೆ ಎಂಬ ಭಾವನೆ ಅಥವಾ ಸಂಶಯ ಬರಲಿಕ್ಕೆ ಕಾರಣವಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೇನೆಯೇ ಹೊರತು ಬೇರೇನೂ ಅಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಶಿವಮೊಗ್ಗ ಜಿಲ್ಲೆಯಲ್ಲಿ ಸೇಂದಿ ಮಾರಾಟ ಮಾಡುವುದನ್ನು ಎರಡು ವರ್ಷಗಳಿಂದ ನಿಲ್ಲಿಸಿಬಿಟ್ಟಿದ್ದಾರೆ. ಬೇರೆ ಕಡೆಗಳಲ್ಲಿಯೂ ಕೂಡಾ ಅಂದರೆ ಕೊಡಗು ಜಿಲ್ಲೆಯಲ್ಲಿಯೂ ನಿಲ್ಲಿಸಿಬಿಟ್ಟಿದ್ದಾರೆ. ವಾಸ್ತವಿಕವಾಗಿ ಈಚಲು ಮರಗಳು ಇಲ್ಲ. ಬಯಲುನಾಡಿನಲ್ಲಿ ಈಚಲು ಸೇಂದಿಯನ್ನು ಕಂಡಿಯತಕ್ಕಂಥದ್ದು ಇದೆ. ಸೇಂದಿ ಮಾರಾಟ ಮಾಡುವವರೇ ಹೇಳುತ್ತಾರೆ ಅಲ್ಲಿ ಸೇಂದಿ ಇಲ್ಲದಿದ್ದರೆ ಬೇರೆಯದನ್ನು ಸೇರಿಸಿ ಮಾಡಬೇಕಾಗುತ್ತದೆ. ಜನರೂ ಅದಕ್ಕೆ ಅಡಿಕ್ಟ್ ಆಗಿಬಿಟ್ಟಿದ್ದಾರೆ ಸೇಂದಿಯನ್ನು ತೆಗೆಯುವುದರಿಂದ ಉದ್ದೇಶ ಏನೂ ಇಲ್ಲ. ವಾಸ್ತವಿಕವಾಗಿ ಈಚಲು ಮರಗಳಿಲ್ಲ.

ಶ್ರೀ ಹೆಚ್. ಏಕಾಂತಯ್ಯ.—ಉದ್ದೇಶ ಇದ್ದಿದ್ದರೆ...

ಶ್ರೀ ಕಾಗೋಡು ತಿಮ್ಮಪ್ಪ.—ಅದಕ್ಕೆ ನಾನು ಹೇಳಿದೆ. ಇದಕ್ಕೆ ರಾಜಕೀಯ ಬೆರಸಬೇಕಾದಂಥ ಅಗತ್ಯ ಇಲ್ಲ. ಬೆರೆಸುವಂಥ ಅವಕಾಶ ಇದೆ.

ಶ್ರೀ ಹೆಚ್. ಏಕಾಂತಯ್ಯ.—ಅಷ್ಟೆ ಧನ್ಯವಾದಗಳು ಏಕೆಂದರೆ ನಮ್ಮ ಪರವಾಗಿ ಮಾತನಾಡಿದ್ದೀರಿ ಯಾವ ಮಾತನ್ನು ಹೇಳಿದ್ದೀರಿ ನೀವು ಹೇಳುವಂಥ ಅಭಿಪ್ರಾಯವನ್ನು ನಾನು ಪುಷ್ಟೀಕರಿಸುತ್ತಿದ್ದೇನೆ. ಇವತ್ತಿನ ದಿವಸ ಹೆಂಡದ ಮಾರಾಟದ ಬಳಕೆಯನ್ನು ನೀವು ಸಂಪೂರ್ಣವಾಗಿ ನಿಷೇಧ ಮಾಡಿದ್ದೀರಿ ಅದಕ್ಕೆ ನಮ್ಮ ಅಭಿಪ್ರಾಯ ಬೇರೆ ಇಲ್ಲ. ಆದರೆ ಇವತ್ತು ಹೆಂಡವನ್ನು ಬಿಟ್ಟ ತಕ್ಷಣ ಏನಾಗಿದೆ. ಅದು ನಮಗೂ ನಿಮಗೂ ಗೊತ್ತಿದೆ. ಹೆಂಡವನ್ನು ಬಿಟ್ಟವರು ಸ್ವಲ್ಪ ದುಡ್ಡನ್ನು ಇಟ್ಟುಕೊಂಡು ಸಾರಾಯಿ ಕುಡಿಯಲಿಕ್ಕೆ ಹೋಗುತ್ತಾರೆ. ಅಭ್ಯಾಸದ ಚಟ ಇರುವವರು ಯಾರಾದರೂ ಹೋಗುತ್ತಾರೆ. ದೊಡ್ಡ ಪ್ರಮಾಣದಲ್ಲಿ ಅಲ್ಲದಿದ್ದರೂ ಸ್ವಲ್ಪ ಪ್ರಮಾಣದಲ್ಲಿ ಅಥವಾ ಬಹಿರಂಗವಾಗಿ ಅಲ್ಲದಿದ್ದರೂ ಕಳ್ಳತನದಿಂದ ಹಣವನ್ನು ಖರ್ಚುಮಾಡಿ ಕುಡಿಯುವಂಥ ಒಂದು ಪ್ರವೃತ್ತಿ ಬೆಳೆದುಬಂದಿದೆ. ಆಗ ಏನಾಗುತ್ತದೆ ಎಂದರೆ ಸಾರಾಯಿ ಬಳಕೆ ಜಾಸ್ತಿಯಾಗಲೇಬೇಕು.

ಆದ್ದರಿಂದ ನಾನು ಹೇಳುತ್ತಿದ್ದೇನೆ, ಈವೊತ್ತಿನ ದಿವಸ ಹೆಂಡದ ಲಾಬಿಯಿಂದ ಮುಕ್ತರಾಗಬಹುದು ಅಥವಾ ಯಾವುದೇ ದುರುದ್ದೇಶ ಇಲ್ಲದೆ ಸಾರ್ವಜನಿಕರ ಹಿತದೃಷ್ಟಿಯಿಂದ ಈ ನಿಲುವನ್ನು ಅನುಸರಿಸುತ್ತಿದ್ದೇವೆ ಎಂದು ನೀವು ಹೇಳಿಕೊಂಡರೂ ಸಹ, ಯಾವುದೇ ರೀತಿಯ ಅನುಮಾನವೂ ಬರದಂತೆ ತಾವು ವ್ಯವಹಾರ ಮಾಡಬೇಕೆಂದು ಕೇಳಿಕೊಳ್ಳುತ್ತಿದ್ದೇನೆ ಏಕೆ ಅನುಮಾನ ಬರುತ್ತದೆ ಎಂದು ಹೇಳುತ್ತಿದ್ದೇನೆ. ಮೊದಲನೇ ಹಂತದಲ್ಲಿ ಮಾರಾಟ ತೆರಿಗೆ ೧೪ ಪರ್ಸೆಂಟ್ ಇದ್ದುದು ೨೦ಕ್ಕೆ ಮಾಡಿದ್ದೀರಿ. ಕೊನೆ ಹಂತದ ಮಾರಾಟ ತೆರಿಗೆಯಲ್ಲಿ ೪ ಪರ್ಸೆಂಟ್ ರದ್ದು ಪಡಿಸಿದ್ದೀರಿ. ಇದಕ್ಕೆ ಕಾರಣ ಏನು ಕೇಳುತ್ತಿದ್ದೇನೆ. ನೇರವಾಗಿ ಉತ್ತರವನ್ನು ಮಾನ್ಯ ಹಣಕಾಸಿನ ಮಂತ್ರಿಗಳಿಂದ ನಾನು ಬಯಸುತ್ತೇನೆ. ಇದನ್ನು ಸರಳಗೊಳಿಸುವುದಕ್ಕೆ ಅಥವಾ ಸೋರುವಿಕೆಯನ್ನು ತಡೆಗಟ್ಟುವುದಕ್ಕೆ ಮಾಡಿದ್ದೀರಿ ಎಂದು ಹೇಳುವುದಾದರೆ ಇದೇ ನೀತಿಯನ್ನು ತಾವು ಬೇರೆ ಸರಕುಗಳಿಗೆ ಏಕೆ ಅನ್ವಯ ಮಾಡಿಲ್ಲ ಎಂದು ಅನುಮಾನ ಬರುವುದು ಸ್ವಾಭಾವಿಕ. ಆದ್ದರಿಂದ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೇ. ಇವೊತ್ತಿನ ದಿವಸ ಯಾವುದೇ ಲಾಬಿಯ ವಶದಲ್ಲಿ ಇದ್ದೀರೆಂದು ಹೇಳುತ್ತಿಲ್ಲ, ಅದಕ್ಕೆ ಹೊರತಾಗಿರಬೇಕು ಎಂದು ನನ್ನ ಆಸೆ. ಅದು ಎಷ್ಟರಮಟ್ಟಿಗೆ ಸಾಧ್ಯ ಈ ದೇಶದ ಸಾಮಾಜಿಕ ಮತ್ತು ರಾಷ್ಟ್ರೀಯ ವ್ಯವಸ್ಥೆಯಲ್ಲಿ ಎಂದು ನೋಡಬೇಕು ಯಾವುದೇ ರಾಜ್ಯದ, ರಾಷ್ಟ್ರದ ಒಂದಲ್ಲ ಒಂದು ಸರ್ಕಾರಗಳು ಲಾಬಿಯ ಪ್ರಭಾವದಲ್ಲಿ ಇರುವಂತಹ ಆಡಳಿತ ಮತ್ತು ರಾಜಕೀಯ ವ್ಯವಸ್ಥೆ ನಮ್ಮ ದೇಶದಲ್ಲಿ ಇದೆ ಎಂಬುದನ್ನು ನಾವು ಯಾರೂ ಮರೆಯಬಾರದು. ಇದರ ಜೊತೆಯಲ್ಲಿ ನಾನಾಗಲೀ ಅಥವಾ ತಿಮ್ಮಪ್ಪನವರಾಗಲಿ ಪ್ರಾಮಾಣಿಕವಾಗಿ ಇದರಲ್ಲಿ ಪ್ರಯತ್ನ ಪಟ್ಟರೂ ಸಹ ಅದನ್ನು ಛಿದ್ರ ಮಾಡತಕ್ಕ ಸಾಮಾಜಿಕ ವ್ಯವಸ್ಥೆ ನಮ್ಮ ದೇಶದಲ್ಲಿ ಇದೆ ಎಂದು ನಾವು ಮರೆಯಬಾರದು. ಇದನ್ನು ನಿಜಕ್ಕೂ ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು.

ಛೇರ್ಮನ್.—ಬಹಳ ಜನ ಇದ್ದಾರೆ ಬೇಗ ಮುಗಿಸಿ......

ಶ್ರೀ ಹೆಚ್. ಏಕಾಂತಯ್ಯ.—ಯಾವುದೇ ದುರುದ್ದೇಶದಿಂದ ನಾನು ಇದನ್ನು ಹೇಳುತ್ತಿಲ್ಲ. ದೇಶದ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಸಂಶಯ ಇಲ್ಲದಂತಹ ರೀತಿಯಲ್ಲಿ ನಾವು ನೀವು ಇರುವುದು ಬಹಳ ಮುಖ್ಯ. ಇದರ ಬಗ್ಗೆ ನೀವು ಕಷ್ಟ ನಿಷ್ಠೂರವಾಗಿ ನಡೆದುಕೊಂಡರೆ ಒಳ್ಳೆಯದು. ಇಲ್ಲದಿದ್ದರೆ ನೀವು ಹಣಕಾಸಿನ ಮಂತ್ರಿಗಳಾಗಿ ಮುಂದುವರಿಯುತ್ತೀರೋ ಅಥವಾ ಇಲ್ಲವೋ ಗೊತ್ತಿಲ್ಲ. ಆದ್ದರಿಂದ ಇಂತಹ ಯಾವುದೇ ಲಾಬಿಗಳಿಗೆ, ಒತ್ತಾಯಕ್ಕೆ ಮಣಿಯದೆ ತಾವು ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇದಾದಮೇಲೆ ನೋಂದಣಿ ಮತ್ತು ಸ್ಟ್ಯಾಂಪ್ ಶುಲ್ಕದ ಬಗ್ಗೆ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಟ್ರಾಕ್ಟರ್ಸ್ ಮೇಲೆ ಶುಲ್ಕವನ್ನು ವಿನಾಯಿತಿ ಮಾಡಿದ್ದೀರಿ. ವಹಿವಾಟು ತೆರಿಗೆಯನ್ನು ತೆಗೆದಿದ್ದೀರಿ ಆದರೆ ಮಾರಾಟ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಆದರೆ ಟ್ರಾಕ್ಟರ್‌ಗೆ ಸಂಬಂಧಪಟ್ಟಂತೆ ಮೋಟಾರು ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ...

ಶ್ರೀ ಎನ್.ಜಿ. ನಾಯಕ್.—ಈಗಾಗಲೇ ಮಾತನಾಡಿರತಕ್ಕ ಮಾನ್ಯ ಸದಸ್ಯರು ಇದು ಬೈಬಲ್ ಎಂದು ಹೇಳಿದರು. ಈ ಆಯವ್ಯಯ ಬೈಬಲ್ ಅಲ್ಲ, ಭಗವದ್ಗೀತೆ...

ಶ್ರೀ ಹೆಚ್. ಏಕಾಂತಯ್ಯ.—ಸಭಾಧ್ಯಕ್ಷಣಿಯವರೇ...

ಛೇರ್ಮನ್.—ಬೇಗ ಮುಗಿಸಿ, ಇನ್ನೂ ಮಾತನಾಡುವವರು ಬಹಳ ಜನ ಇದ್ದಾರೆ...

ಶ್ರೀ ಹೆಚ್. ಏಕಾಂತಯ್ಯ.—ಇವೊತ್ತು ಅಡಮಾನ ಪತ್ರ ಅಥವಾ ಆಧಾರ ಪತ್ರ ಸಿಂಪಲ್ ಮಾರ್ಟಿಗೇಜ್‌ಗೆ ಹಣ ಹೆಚ್ಚು ಮಾಡಿದ್ದೀರಿ. ಮುಂದಾದರೂ ಇದರಿಂದ ರೈತರಿಗೆ ಕಷ್ಟ ಉಂಟುಮಾಡುತ್ತದೆ. ಅದರಲ್ಲೂ ಬ್ಯಾಂಕ್ ಅಥವಾ ಸೊಸೈಟಿಗಳಲ್ಲಿ ಆಧಾರ ಪತ್ರ ಕೊಟ್ಟು ಸಾಲ ತೆಗೆದುಕೊಳ್ಳಬೇಕು ಎಂದರೆ ತಮಗೆ ಗೊತ್ತಿದೆ ಎಷ್ಟು ಹಣವನ್ನು ಖರ್ಚು ಮಾಡುವುದಕ್ಕೆ ಸಾಧ್ಯ ? ಆದ್ದರಿಂದ ನೋಂದಣಿ ಹಣ ಕಡಿಮೆ ಮಾಡಬೇಕು ಇದರ ಜೊತೆಗೆ ೧೦ ಸಾವಿರ ರೂಪಾಯಿಗಳ ವಿನಾಯಿತಿ

ಕೊಡುವ ಪದ್ಧತಿ ಇದೆ ಎಲ್ಲಾ ರೈತರಿಗೆ ಕನಿಷ್ಟ ಪಕ್ಷ ೫೦ ಸಾವಿರ ರೂಪಾಯಿಂಗಳ ಸಾಲವನ್ನು ಪಡೆಯುವುದಕ್ಕೆ ಈ ಒಂದು ಶುಲ್ಕದ ವಿನಾಯಿತಿಯನ್ನು ತಾವು ಕೊಡಬೇಕೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಸಭಾಧ್ಯಕ್ಷಣಿಯವರೇ, ನಾನು ಮಾತನಾಡುವುದು ಇನ್ನೂ ಹಲವು ವಿಚಾರ ಇತ್ತು. ಆದರೂ ಸಹ ತಾವು ಬೇರೆ ಸದಸ್ಯರ ಹೆಸರನ್ನು ಸೂಚಿಸಿರುವುದರಿಂದ ತಮ್ಮ ಆಣತಿಯಂತೆ ನಾನು ನನ್ನ ಭಾಷಣವನ್ನು ಮುಗಿಸುತ್ತಾ ಇಷ್ಟರವರೆಗೆ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಎನ್.ಜಿ. ನಾಯಕ್.—ಮಾನ್ಯ ಸಭಾಧ್ಯಕ್ಷಣಿಯವರೇ, ನನ್ನ ಕ್ಷೇತ್ರ ಶಿವಮೊಗ್ಗದಲ್ಲಿ ಮಾನ್ಯ ಸದಸ್ಯರು ಮಾಜೀ ಸಚಿವರು. ಅವರು ಮಕ್ಕಳಿಗೆ ಬಹಳ ಅನ್ಯಾಯ ಮಾಡಿದ್ದಾರೆ ಎಂದು ಹೇಳುತ್ತಿದ್ದೇನೆ ಈಗಾಗಲೇ ಐದು ಲಕ್ಷ ರೂಪಾಯಿ ಹಣ ಹಾಗೆಯೇ ನಿಂತಿದೆ. ಜಿಲ್ಲಾ ಪರಿಷತ್ ಸದಸ್ಯರು ಸರ್ಕಾರಕ್ಕೆ ಒಂದು ರಿಪೋರ್ಟ್ ಕೊಟ್ಟಿದ್ದಾರೆ ಇವರು ಮಾಡಿರುವ ಅನ್ಯಾಯದ ಬಗ್ಗೆ. ಆದ್ದರಿಂದ ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುವುದೇನೆಂದರೆ ಆದಷ್ಟು ಜಾಗ್ರತೆಯಾಗಿ ಇದರ ಬಗ್ಗೆ ಪರಿಶೀಲಿಸಿ ಬಡ ಮಕ್ಕಳಿಗೆ ಸ್ಕಾಲರ್‌ಶಿಪ್ ಬರುವಂತೆ ಮಾಡಬೇಕೆಂದು ಹೇಳುತ್ತಿದ್ದೇನೆ.

† ಶ್ರೀ ಕೆ. ಶಿವಮೂರ್ತಿ (ಬರಮಸಾಗರ).—ಸನ್ಮಾನ್ಯ ಅಧ್ಯಕ್ಷಿಣಿಯವರೆ, ೧೯೯೦–೯೧ ರ ಆಯವ್ಯಯವನ್ನು ಈ ಸದನದಲ್ಲಿ ಮಂಡಿಸಿರತಕ್ಕಂಥಾದ್ದನ್ನು ನಾನು ಸಮರ್ಥನೆಮಾಡಿ ಕೆಲವು ವಿಚಾರಗಳನ್ನು ಹೇಳುತ್ತೇನೆ. ಈಗ ಒಂದು ವಿಷಯವನ್ನು ಹೇಳುತ್ತೇನೆ. ನಾವು ಬೆಳಿಗ್ಗೆಯಿಂದ ರಿಕ್ವೆಸ್ಟ್ ಮಾಡಿದ್ದೇವೆ. ನಾವು ಯುವಕರು, ಕೊನೆಯ ಬೆಂಚಿನಲ್ಲಿರತಕ್ಕವರಿಗೆ ಅವಕಾಶ ಕೊಡಿ ಎಲ್ಲರಿಗೂ ಅವಕಾಶ ಕೊಡಿ ನನಗೆ ಸ್ವಲ್ಪ ಜಾಸ್ತಿ ಕೊಡಿ ಎಂದು ಮೊದಲನೆಯದಾಗಿ ಪ್ರಾರ್ಥನೆ. ಈಗ ನಮ್ಮ ಸರ್ಕಾರ ಬಂದಮೇಲೆ.........

ಶ್ರೀ ವಾಟಾಳ್ ನಾಗರಾಜ್.—ತಮ್ಮಲ್ಲಿ ಒಂದು ಅರಿಕೆ ಮಾಡಿಕೊಳ್ಳುತ್ತೇನೆ. ಮಾನ್ಯ ಲೋಕೋಪಯೋಗಿ ಸಚಿವರು ಸಂಜೆಯೊಳಗೆ ಒಂದು ಹೇಳಿಕೆ ಕೊಡುತ್ತೇನೆ ಎಂದು ಹೇಳಿದರು. ಅದು ಏನು ಆಯಿತು ಎಂದು ಗೊತ್ತಾಗಲಿಲ್ಲ. ಬೆಳಿಗ್ಗೆ ಈ ಸಭೆಯಲ್ಲಿ ನಿಷೇಧಾಜ್ಞೆ ಬಗ್ಗೆ ನಾವು ಪ್ರಸ್ತಾಪ ಮಾಡಿದೆವು

ಶ್ರೀ ಜಿ. ಪುಟ್ಟಸ್ವಾಮಿಗೌಡ.—ಸಂಜೆಯೊಳಗೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೇನೆ. ಈ ಸಭೆಯ ಮುಗಿಯುವುದರೊಳಗೆ ಕೊನೆಯಲ್ಲಿ ಹೇಳುತ್ತೇನೆ. ಐ ಆಂ ರೆಡಿ ವಿತ್ ದಟ್.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಹಣಕಾಸಿನ ಸಚಿವರು ಇಟ್ಟಿರತಕ್ಕಂಥ ಆಯವ್ಯಯ ಪತ್ರದ ಬಗ್ಗೆ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರುಗಳಾಗಿರತಕ್ಕ ಸಿಂಧ್ಯರವರು, ಚಂದ್ರೇಗೌಡರು, ನಮ್ಮ ದೇಶಪಾಂಡೆ ಸಾಹೇಬರು ಮತ್ತು ನಮ್ಮ ರೈತ ನಾಯಕರುಗಳು ಎಲ್ಲಾ ಮಾತನಾಡಿದ್ದಾರೆ. ನಮ್ಮ ಕಾಂಗ್ರೆಸ್ ಪಕ್ಷದ ನಾಯಕರುಗಳೆಲ್ಲಾ ಮಾತನಾಡಿದ್ದಾರೆ. ನಮ್ಮ ಪಕ್ಷ, ನಾವು ಅಧಿಕಾರಕ್ಕೆ ಬಂದು ಮೂರು ತಿಂಗಳು ಮುಗಿದು ನಾಲ್ಕನೇ ತಿಂಗಳಿಗೆ ಕಾಲಿಟ್ಟಿದ್ದೇವೆ. ಈಗ ಅವರ ಸರ್ಕಾರದಲ್ಲಿದ್ದ ಫೈನಾನ್ಷಿಯಲ್ ಪೊಸಿಷನ್ ಬಗ್ಗೆ ನಾವು ಯಾರೂ ಹೇಳಲಿಲ್ಲ, ಅವರು ಅಲಿಗೇಷನ್ ಮಾಡುತ್ತಾ ಇದ್ದಾರೆ ಲೂಟಿ ಮಾಡಿದರು, ಖಜಾನೆ ಬರಿದು ಮಾಡಿಹೋದರು ಎಂದು ಹೇಳಿದ್ದೆವೆಂದು ಮಾನ್ಯ ಏಕಾಂತಯ್ಯನವರು ಈಗತಾನೆ ಪ್ರಸ್ತಾಪ ಮಾಡಿದರು. ನಾವು ಹೇಳುವುದಲ್ಲ. ಆ ಸಮಯದಲ್ಲಿ ಜನ ಬೀದಿ ಬೀದಿಯಲ್ಲಿ ಮಾತನಾಡಿದರು. ಏನೆಂದರೆ ನೌಕರರಿಗೆ ಸಂಬಳ ಇಲ್ಲ, ಚೆಕ್ಸ್ ಕ್ಯಾಷ್ ಆಗುತ್ತಾ ಇಲ್ಲ, ಗವರ್ನಮೆಂಟ್ ಚೆಕ್ಸ್‌ಗೆ ವ್ಯಾಲ್ಯು ಇಲ್ಲ ಎಂದು ಹೇಳತಕ್ಕ ಸಂದರ್ಭಗಳು ಉದ್ಭವವಾಯಿತು. ಈಗ ಅದನ್ನು ರಿಪೇರಿ ಮಾಡುತ್ತಾ ಇದ್ದೇವೆ. ಆ ರಿಪೇರಿ ಮಾಡತಕ್ಕ ಮಹಾ ಕಾರ್ಯವನ್ನು ಫೈನಾನ್ಸ್ ಮಿನಿಸ್ಟರ್ ಮಾಡುತಾ ಇದ್ದಾರೆ. ಅದಕ್ಕಾಗಿ ನಮ್ಮ ಪಕ್ಷದ ಪತಿಯಿಂದ ಮತ್ತು ನನ್ನ ಪತಿಯಿಂದ ಅವರನ್ನು ಅಭಿನಂದಿಸುತ್ತೇನೆ ಈ ಬಡ್ಜೆಟ್ ಬಗ್ಗೆ ನಾನು ಅಂಕಿಸಂಖ್ಯೆ ಇಟ್ಟು ಮಾತನಾಡಲಿಕೆ ಹೋಗುವುದಿಲ್ಲ. ಕೆಲವು ವಿಚಾರಗಳ ಬಗ್ಗೆ ಹೇಳುತ್ತೇನೆ. ಈಗ ಎಸ್ ಸಿ.ಎಸ್.ಟಿ. ಹಾಸ್ಟೆಲ್ಸ್ ಇವೆ. ಅಲ್ಲಿ ಊಟ ಮಾಡತಕ್ಕ ವ್ಯವಸ್ಥೆ ಬಗ್ಗೆ ಜಾಸ್ತಿ ಮಾಡಿದಿರಿ. ಕಾಸ್ಟ್ ಆಫ್ ಮೆಟೀರಿಯಲ್, ಫುಡ್ ಕಮಾಡಿಟಿ ಜಾಸ್ತಿಯಾಗಿರುವುದರಿಂದ ಕೊಡತಕ್ಕಂಥ ದುಡ್ಡು ಸಾಕಾಗದೆ ಇರತಕ್ಕಂಥ ಸಂದರ್ಭದಲ್ಲಿ ನಮ್ಮ ಸರ್ಕಾರದವರು ಹೆಚ್ಚಿಗೆ ಮಾಡಿದ್ದಾರೆ. ಇದನ್ನು ನಿಜವಾಗಲೂ ಅವರು, ಒಪ್ಪಿಕೊಳ್ಳುತ್ತಾರ ಎಂದು ನಾನು ಭಾವಿಸಿದ್ದೇನೆ. ನನ್ನ ಕ್ಷೇತ್ರವಾದ ಬರಮಸಾಗರದಲ್ಲಿ ಒಂದು ದೊಡ್ಡ ಆಂದೋಲನ ನಡೆಯುತ್ತಾ ಇದೆ. ಸಿರಿಗೆರೆ ಸ್ವಾಮಿಗಳು ಮಧ್ಯಪಾನ ನಿಶೇಧ ಮಾಡೇಮಾಡಬೇಕು ಎಂದು ಹೇಳತಕ್ಕಂಥ ಆಂದೋಲನ ಮಾಡುತ್ತಾ ಇದ್ದಾರೆ, ಹಳ್ಳಿಹಳ್ಳಿಯಲ್ಲಿ ಮಾಡುತ್ತಾರೆ. ಯಾರಾದರೂ ರಾಜಕೀಯದವರು ಬಂದುಬಿಟ್ಟು ಹೆಂಡ ಸಾರಾಯಿ ಕೊಟ್ಟರೆ ಬಹಿಷ್ಕರಿಸಿ ಎನ್ನತಕ್ಕ ಮಾತನ್ನು ಹೇಳುತ್ತಾ ಇದ್ದಾರೆ. ಅದಕ್ಕೆ ಇವತ್ತು ಪುಷ್ಟೀಕರಣ ಸಿಕ್ಕಿದೆ. ಅದಕ್ಕೋಸ್ಕರ ಹೆಮ್ಮೆಯಿಂದ ಈ ಮಾತನ್ನು ಹೇಳಬೇಕಾಗಿದೆ. ಹೆಂಡ ನಿಶೇಧ ಮಾಡತಕ್ಕ ಬಗ್ಗೆ ಜನರ ಆರೋಗ್ಯದ ಮೇಲೆ ಏನು ಪರಿಣಾಮವಾಗುತ್ತದೆ ಎನ್ನುವುದರ ಬಗ್ಗೆ ಯೋಚನೆಮಾಡಿ, ಅದು ಉತ್ಪತ್ತಿ

ಯಾಗುತ್ತದೋ ಇಲ್ಲವೋ ಎನ್ನುವುದರ ಬಗ್ಗೆ ಯೋಚನೆಮಾಡಿ ಇವತ್ತು ಇದರ ಬಗ್ಗೆ ತೀರ್ಮಾನ ತೆಗೆದುಕೊಂಡಿರುವುದು ಸ್ವಾಗತಾರ್ಹ. ಆದರೆ ಇದರಲ್ಲಿ ಕೆಲವಾರು ಅಂಶಗಳು ಒಳಗೊಂಡಿದೆ. ಇನ್ನೂ ಕೆಲವಾರು ಅಂಶಗಳನ್ನು ನಮ್ಮ ಮಂತ್ರಿಯವರು ಮರೆತು ಹೋಗಿದ್ದಾರೆ. ಅದನ್ನು [illegible]ಮಾಡಿ ಸೇರಿಸಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ಈ ಮಹಿಳೆಯರ ಬಗ್ಗೆ ಮಕ್ಕಳ [illegible] ಅಭಿವೃದ್ಧಿ ಬಗ್ಗೆ, ಯುವಕರ ಬಗ್ಗೆ ಸ್ಪೋರ್ಟ್ಸ್ ಆಕ್ಟಿವಿಟೀಸ್ ಬಗ್ಗೆ ಸ್ಪೆಷಲಿ ಯೂತ್ಸ್ [illegible]ತಕ್ಕಂಥ ಆಕ್ಟಿವಿಟೀಸ್, ಸ್ಪೋರ್ಟ್ಸ್ ಬಗ್ಗೆ ಎನ್‌ಕರೇಜ್ ಮಾಡಲಿಕ್ಕೆ ನೀವು ಏನು ವ್ಯವಸ್ಥೆ ಮಾಡಿದಿರಿ. ಚಿಲ್ಡ್ರನ್ ಅವರು ಯಾರ ಮಕ್ಕಳೇ ಆಗಿರಬಹುದು, ನಮ್ಮ ಮಕ್ಕಳು ಆಗಿರಬಹುದು, ಬಡವರ ಮಕ್ಕಳು ಆಗಿರಬಹುದು, ಮಕ್ಕಳು ಮಕ್ಕಳೇ, ಅವರ ಅಭಿವೃದ್ಧಿಗೋಸ್ಕರ, ವಿಶೇಷವಾಗಿ ಮಾತೆಯರ ಅಭಿವೃದ್ಧಿಗೋಸ್ಕರ, ನಾವು ಏನು ಕಾರ್ಯಕ್ರಮವನ್ನು ಮಾಡಿದ್ದೇವೆ, ಎಷ್ಟು ಹಣವನ್ನು ಇಟ್ಟಿದ್ದೇವೆ ಎನ್ನುವುದರ ಬಗ್ಗೆ ತಾವು ನಿಗಾವಹಿಸಬೇಕು, ಆಸಕ್ತಿ ಕೊಡಬೇಕು ಎಂದು ನನ್ನ ಪ್ರಾರ್ಥನೆ, ತಾವು ಸಚಿವರಾದ ಮೇಲೆ ಕೆಲವು ಕಡೆ ಹೋಗಿದ್ದೀರಿ, ಸರ್‌ಪ್ರೈಸ್ ವಿಸಟ್ ಕೊಟ್ಟಿದ್ದೀರಿ ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಮ್ಮ ಸರ್ಕಾರ ಈಗಿರತಕ್ಕ ಹಣಕಾಸಿನ ಪರಿಸ್ಥಿತಿಯಿಂದ ನಾವು ಯಾರೂ ಮರ್ಯಾದೆ ಉಳಿಸಿಕೊಳ್ಳಲಿಕ್ಕೆ ಸಾಧ್ಯವಿಲ್ಲ. ಯಾವ ಪಕ್ಷದ ಶಾಸಕರು ಆಗಿರಬಹುದು. ನಾನು ಬಹಳ ಆಶ್ಚರ್ಯದಿಂದ ಈ ಮಾತನ್ನು ಹೇಳಬೇಕಾಗಿದೆ. ನಾವು ಪವರ್ ಕೊಡುವುದಕ್ಕೆ ಆಗುವುದಿಲ್ಲ, ರಸ್ತೆ ಕೊಡುವುದಕ್ಕಾಗುವುದಿಲ್ಲ. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳು ಬಂದಮೇಲೆ ಶಾಸಕರುಗಳಿಗೆ ಪುಡಿಗಾಸಿನ ಬೆಲೆಯೂ ಇಲ್ಲ. ನಮ್ಮ ಹತ್ತಿರ ಏನೇನು ಅಧಿಕಾರವೂ ಇಲ್ಲ. ಜಿಲ್ಲಾ ಪರಿಷತ್ ಮಂಡಲ ಪಂಚಾಯಿತಿ ವೆಚ್ಚವನ್ನು ಪರಿಶೀಲನೆ ಮಾಡಿದರೆ ಗೊತ್ತಾಗುತ್ತದೆ. ಎಷ್ಟು ಪೇಪರ್ ಬೇಕಾಗುತ್ತದೆ. ಎಷ್ಟು ಮೀಟಿಂಗ್‌ಗಳಿಗೆ ಆಫೀಸರ್ಸ್ ಅಟೆಂಡ್ ಮಾಡಬೇಕು. ಸಾಮಾನ್ಯವಾಗಿ ಜಿಲ್ಲಾ ಪರಿಷತ್‌ನಲ್ಲಿರತಕ್ಕ ಅಧಿಕಾರಿಗಳು, ಡೆವಲಪ್‌ಮೆಂಟ್ ಆಫೀಸರುಗಳೇ. ಎಷ್ಟು ಸಿಬ್ಬಂದಿ ಕೊಟ್ಟಿದ್ದಾರೆ, ಅಧಿಕಾರಿಗಳು ಎಷ್ಟು ದಿನ ಆಫೀಸಿನಲ್ಲಿ ಇರುತ್ತಾರೆ. ಒಂದು ತಿಂಗಳಿಗೆ ೨೦ ಮೀಟಿಂಗ್‌ಗೆ ಅಟೆಂಡ್ ಮಾಡಬೇಕು. ಸರ್ಕಾರದವರು ಕೊಡತಕ್ಕ ಹಣ ಸಂಬಂಧಪಟ್ಟವರಿಗೆ ಮುಟ್ಟಿದೆಯೋ, ಇಲ್ಲವೋ ಖಾತರಿ ಇಲ್ಲ. ಜನತಾ ಮನೆಗಳಿಗೆ ಹಣ ಬಂದಿದೆಯೆ ? ಕುಡಿಯುವ ನೀರಿನ ಬಾವಿಗೆ ಹಣ ಬಂದಿದೆಯೇ ಎಂದು ನಾವು ಹೋಗಿ ಕೇಳಬೇಕು. ಈಗ ಇಟ್ಟಿರತಕ್ಕ ಹಣದಲ್ಲಿ ಎಷ್ಟು ಭಾಗ ತಲುಪಿದೆ ಎನ್ನುವುದೇ ತಿಳಿಯುವುದಿಲ್ಲ. ಆಯವ್ಯಯ ಪತ್ರದಲ್ಲಿ ಹೌಸಿಂಗ್ ಬಗ್ಗೆ ಹೇಳಿದ್ದಾರೆ. ಜನತಾ ಮನೆಗಳಿಗೆ ಕೊಡತಕ್ಕ ಹಣವನ್ನು ಒಂದೇ ಸಾರಿ ಕೊಡುವುದಿಲ್ಲ. ಹಣ ಇಲ್ಲಿಂದ ಹೋದ ಮೇಲೆ, ಎಷ್ಟಿಮೇಟಾಗಿ, ಫಲಾನುಭವಿಯ ಕೈಗೆ ಬರುವಷ್ಟರಲ್ಲಿ ಅರ್ಧ ಭಾಗವೂ ಸಿಗುವುದಿಲ್ಲ. ಬಜೆಟ್‌ನಲ್ಲಿ ಇಟ್ಟಿರತಕ್ಕ ಹಣ ಬರೀ ಸ್ಯಾಲರಿಗೆ ಹೋಗುತ್ತದೆ. ನಾನು ಜಿಲ್ಲಾ ಪರಿಷತ್ ಸ್ಕೀಮು ಮತ್ತು ಪ್ಲಾನು ಕೂಡ ನೋಡಿದ್ದೇನೆ, ಮಂಡಲ್ ಪಂಚಾಯಿತಿ ಬಜೆಟ್ ಅಲೋಕೇಷನ್ ನೋಡಿದ್ದೇನೆ. ಸರ್ಕಾರ ಕೊಟ್ಟಂಥ ಹಣ ಫೀಲ್ಡ್ ತಲುಪುವುದು ಮುಖ್ಯ. ಸ್ಥಳದಲ್ಲಿ ಏನು ಅಭಿವೃದ್ಧಿಯಾಗಿದೆ ಎನ್ನುವುದನ್ನು ಲೆಕ್ಕಕ್ಕೆ ತೆಗೆದುಕೊಳ್ಳಬೇಕು ಆಗ ಮಾತ್ರ ಫಲಪ್ರದವಾಗಿ ಕೆಲಸವಾಗುತ್ತದೆ ಮತ್ತು ನಾವು ಇಲ್ಲಿ ಮಾತನಾಡಿದ್ದಕ್ಕೂ ಸಾರ್ಥಕವಾಗುತ್ತದೆ ಮಾನ್ಯ ಅರ್ಥಮಂತ್ರಿಗಳು ಯಾವರೀತಿ ಹಣವನ್ನು ಸಂಗ್ರಹಿಸಬೇಕೆಂದರೆ, ಇದರ ಬಗ್ಗೆ ಯಾರೇ ವಿರೋಧ ಮಾಡಲಿ ಚಿಂತೆ ಇಲ್ಲ. ಲಕ್ಸುರಿ ಐಟಂಗಳನ್ನು ಕೊಂಡುಕೊಳ್ಳತಕ್ಕ ಶಕ್ತಿಯಾರಿಗಿದೆಯೋ ಅಂಥ ವ್ಯಕ್ತಿಗಳ ಮೇಲೆ ಮೂರರಷ್ಟು ತೆರಿಗೆ ಹಾಕಬೇಕು. ಸಾಲ ವಾಪಸ್ಸು ಕೊಡುವುದಿಲ್ಲ, ಟ್ಯಾಕ್ಸ್ ಕಟ್ಟುವುದಿಲ್ಲ, ಸಾಲ ಮನ್ನಾ ಮಾಡಿ ಅಂದರೆ ಹೇಗೆ ? ಭೂಮಿ ಇದ್ದು, ವ್ಯವಸಾಯ ಮಾಡತಕ್ಕ ಜನಕ್ಕೆ ಸಾಲ ಮನ್ನಾ ಮಾಡಿದರೆ, ಭೂಮಿ ಇಲ್ಲದೆ, ಕೂಲಿ ನಾಲಿ ಮಾಡತಕ್ಕ ಜನಗಳ ಪರಿಸ್ಥಿತಿ ಏನು ?

(ಅಧ್ಯಕ್ಷರು ಪೀಠದಲ್ಲಿದ್ದರು)

ವಾಸ್ತವಿಕವಾಗಿ ಸಾಲ ಪಡೆದವರು ಅನುಕೂಲಸ್ಥರೇ ಆಗಿರುತ್ತಾರೆ. ಬಡವರು ಇಂದಿಗೂ ಸಾಲ ಪಡೆದಿರುವುದಿಲ್ಲ. ತಾವು ಫೈನಾನ್ಸ್ ಮೊಬಲೈಜೇಷನ್ ಮಾಡಬೇಕಾದರೆ ನಿಮಗೆ ಧೈರ್ಯ ಬೇಕು. ಬಡವರ ಮೇಲೆ ಮಾತ್ರ ಹೊರೆ ಹಾಕಬೇಡಿ. ಎಷ್ಟೋ ಕಡೆ ಹಣ ಸೋರಿಹೋಗುತ್ತದೆ. ಅದನ್ನು ನಿಲ್ಲಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನಮಾಡಿ. ಕರ್ನಾಟಕ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ನಲ್ಲಿ ಒಬ್ಬ ಅಧಿಕಾರಿ ೨-೩ ಕೋಟಿ ರೂಪಾಯಿ ಲಪಟಾಯಿಸಿದಾನೆ. ಆತನ ಹೆಂಡತಿ ಹೆಸರಿನಲ್ಲಿ ಕೋಟಿಗಟ್ಟಲೆ ವ್ಯವಹಾರ ನಡೆದಿದೆ. ಅವನನ್ನು ಇನ್ನೂ ಆ ಜಾಗದಲ್ಲಿಯೇ ಇಟ್ಟಿದ್ದಾರೆ.

೬-೦೦ ಪಿ. ಎಂ.

ಇದು ಮೊದಲು ಬಹಳ ಪ್ರಾಫಿಟ್‌ನಲ್ಲಿ ನಡೆಯುತ್ತಿತ್ತು. ಅಲ್ಲಿ ಒಂದು ಕೋಟಿ ರೂಪಾಯಿ ಟ್ರಾನ್‌ಸ್ಯಾಕ್ಷನ್ ಆಗುತ್ತಿತ್ತು. ಈಗ ಎಷ್ಟು ಲಾಸ್ ಆಗುತ್ತಿದೆ. ಇವೊತ್ತು ಸಿಲ್ಕ್ ಅಂದರೆ ಗೋಲ್ಡ್

ತರಹ ನಾನು ಭಾವಿಸುತ್ತೇನೆ. ಅಂತಹ ಸಿಲ್ಕ್ ಮಾರ್ಕೆಟಿಂಗ್ ಬೋರ್ಡ್‌ಗೆ ತೆಗೆದುಕೊಂಡು ಹೋಗಿ ಒಬ್ಬ ಟೆಕ್ನಿಕಲ್ ಹ್ಯಾಂಡ್ ಹಾಕುವುದು ಬಿಟ್ಟು ಐ.ಪಿ.ಎಸ್. ಆಫೀಸರ್ ಏತಕ್ಕೆ ಹಾಕಿದ್ದೀರಿ. ಇದು ಟ್ಯೂನಿಂಗ್ ಅಪ್ ಆಫ್ ಅಡ್ಮಿನಿಸ್ಟ್ರೇಷನ್ ಏನು ? ಎಷ್ಟು ಹಣ ಸೋರಿ ಹೋಗುತ್ತಿದೆ. ಇನ್ನು ಗ್ರಾನೈಟ್ ವ್ಯವಹಾರದಲ್ಲಿ ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಯ ಅಧಿಕಾರಿಗಳು ಕೋಟ್ಯಾಧೀಶರಾದರು. ಎಂ.ಎಲ್.ಎ. ನಮ್ಮನ್ನು ಬಿಡಿ. ಆಫೀಸರ್ಸ್ ಯಾವ ಪಾರ್ಟಿ ಅಧಿಕಾರಕ್ಕೆ ಬಂದರೂ ಅಲ್ಲಿ ಅಡ್ಜಸ್ಟ್ ಆಗುತ್ತಾರೆ. ಆಯಾ ಪಾರ್ಟಿಗೆ ತಕ್ಕಂತೆ ಮಾತನಾಡುತ್ತಾರೆ. ಕೊನೆಗೆ ರಾಜಕಾರಣಿಗಳನ್ನು ನೋಡಿಕೊಂಡು ನಗುತ್ತಾ ಇವರಿಗೆ ಏನೂ ಗೊತ್ತಿಲ್ಲ ಎಂದು ಹೇಳಿಕೊಳ್ಳುತ್ತಾರೆ. However I condemn the attitude of IAS and IPS Officers. ನಮ್ಮ ಸಮಾಜದಲ್ಲಿ ಯಾರೋ ಒಂದು ದೊಡ್ಡ ಪದವಿ ಇಟ್ಟಿಬಿಟ್ಟಿದ್ದಾರೆ. ಇವರು ಸರ್ವಾಂಗೀಣ ಪಂಡಿತರು, ಇವರಿಗೆ ಯಾರು ಹೇಳುವವರು, ಕೇಳುವವರು ಇಲ್ಲ, ಇವರಿಗೆ ಫೋನ್ ಮಾಡಿದರೆ, ಅಧ್ಯಕ್ಷರೆ, ತಮ್ಮ ಗಮನವನ್ನು ಸೆಳೆಯುತ್ತೇನೆ. ಈ ಐ.ಎ.ಎಸ್. ಆಫೀಸರ್ ಯಾವ ರೀತಿ ಮಾತನಾಡುತ್ತಾರೆ ಅಂದರೆ ''I will look into that'' ನಾವು ಏನು ದನ ಕಾಯುವವರು ಏನು ? I feel very bad. ಐ.ಎ.ಎಸ್, ಆಫೀಸರ್ಸ್ ನಮ್ಮೊಂದಿಗೆ ಮಾತನಾಡಲಿಕ್ಕೆ ತಯಾರಿರುವುದಿಲ್ಲ. ಅವರೂ ಸಹ ಸಮಾಜದಲ್ಲಿರತಕ್ಕ ವ್ಯಕ್ತಿಗಳು, ಅವರಿಗೆ ಕೆಲಸ ಮಾಡಿ ಎಂದು ಒಂದು ಪದವಿ ಕೊಟ್ಟಿದ್ದೇವೆ. ನಾವು ಎಲ್ಲಾದರೂ ಹೋದರೆ, ಇಂಟರ್‌ವ್ಯೂ ತೆಗೆದುಕೊಳ್ಳಬೇಕು. ಎಂ.ಎಲ್.ಎ. ಆಗಿ ನಾವು ಹೊರಗಡೆ ನಿಂತುಕೊಳ್ಳಬೇಕು, ಸಾವಿರಾರು ಜನ ಪ್ರತಿನಿಧಿಗಳು ಹಳ್ಳಿಯಿಂದ ಬಂದಿರುತ್ತಾರೆ. ಕೆಲವು ಸಾರಿ ಫೋನ್ ಮಾಡಿದರೆ, ಅವರು ರೂಮಿನಲ್ಲಿ ಇದ್ದುಕೊಂಡು ಇಲ್ಲ ಎಂದು ಹೇಳುತ್ತಾರೆ. ವಿಧಾನಸೌಧ ಮೀಟಿಂಗ್‌ಗೆ ಹೋಗಿದ್ದಾರೆ ಎಂದು ಜನತಾ ಪ್ರತಿನಿಧಿಗಳಾದ ನಮಗೆ ಸುಳ್ಳು ಹೇಳುತ್ತಾರೆ. ಈ ಅಡ್ಮಿನಿಸ್ಟ್ರೇಷನ್ ಮಾಡತಕ್ಕ ಐ.ಎ.ಎಸ್. ಮತ್ತು ಐ.ಪಿ.ಎಸ್. ಆಫೀಸರ್ಸ್ ಎಂತಹ ಪಂಡಿತರು ಅಂದರೆ ಯಾವ ಮಿನಿಸ್ಟರ್ಸ್ ಆಗಲಿ ಯಾವ ಪಾರ್ಟಿಯವರಾಗಲಿ ಇವರನ್ನು ಬಗ್ಗಿಸಲಿಕ್ಕೆ ಆಗುವುದಿಲ್ಲ. ಒಂದು ಫೈಲನ್ನು ಅವರು ಬೇಗ ಕಳುಹಿಸಿದರೂ ಲಂಚ ಸಿಕ್ಕುತ್ತದೆ. ಒಂದು ಫೈಲ್ ಸುಮ್ಮನೆ ಹಾಗೆ ಇಟ್ಟುಕೊಂಡರೂ ಲಂಚ ಸಿಕ್ಕುತ್ತದೆ. ಕೆಲವರು ಪ್ರಾಮಾಣಿಕ ಅಧಿಕಾರಿಗಳು ಇದ್ದಾರೆ ಇಲ್ಲ ಎಂದು ಹೇಳುವುದಿಲ್ಲ. They are the Implementing Agencies. We are the mouth-piece ಎಂದು ತಿಳಿದುಕೊಂಡಿದ್ದಾರೆ. They can manipulate but you cannot manipulate. ಅವರಿಗೆ ಪ್ರತಿಯೊಂದು ಗೊತ್ತಿದೆ. ಅವರಿಗೆ ಯಾವ ರೀತಿ ಇಂಟರ್‌ಪ್ರಿಟ್ ಮಾಡಬೇಕು, ಹೇಗೆ ಬರೆಯಬೇಕು, ಯಾವ ರೀತಿ ಮಾಡಬೇಕೆಂದು ಅವರಿಗೆ ಗೊತ್ತು. ತಾವು ಇದನ್ನು please don't take it as a party issue. It is a matter concerning to all. ನಮಗೆ ಗೊತ್ತಿಲ್ಲ. ಗೊತ್ತಾಗುವಷ್ಟರ ಹೊತ್ತಿಗೆ ನಮ್ಮನ್ನು ಸೋಲಿಸಿಬಿಡುತ್ತಾರೆ.

ಶ್ರೀ ಸಿ. ಬೈರೇಗೌಡ.—ಅವರು ಏನು ಮಾಡುತ್ತಾರೆ.

ಶ್ರೀ ಕೆ. ಶಿವಮೂರ್ತಿ.—ಬೈರೇಗೌಡರೆ, ಒಬ್ಬ ಎಂ.ಎಲ್.ಎ. ಫೋನ್ ಮಾಡಿದರೆ ಒಬ ಐ.ಎ.ಎಸ್. ಆಫೀಸರ್ ಯಾವ ರೀತಿ ಮಾತನಾಡಬೇಕು. ಒಬ್ಬ ಎಂ.ಎಲ್.ಎ, ಒಬ್ಬ ಡೈರೆಕ್ಟರ್ ಆಫೀಸ್ ಹತ್ತಿರ ಹೋದರೆ ಎಷ್ಟು ಹೊತ್ತು ನಿಲ್ಲಬೇಕು. Let it be any party. ಬೈರೇಗೌಡರೆ, ನೀವು ಸೀನಿಯರ್ ಹ್ಯಾಂಡ್, ನಿಮಗೆ ಅವರು ಹೆದರುತ್ತಾರೆ, ನಾವು ರಾ ಹ್ಯಾಂಡ್ಸ್ ಏನು ಮಾಡಬೇಕು ಹೇಳಿ.

ಶ್ರೀ ಸಿ. ಬೈರೇಗೌಡ.—ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಆದರೆ ಅವರು ಸೋಲಿಸಿಬಿಡುತ್ತಾರೆ ಅಂದರೆ ಅದಕ್ಕೋಸ್ಕರ ಅವರ ಕೈಲಿ ಏನು ಮಾಡಲಿಕ್ಕೆ ಆಗುತ್ತದೆ, ಎಂದು ಹೇಳಿದೆ. ತಾವು ಹೇಳಿದ್ದನ್ನು ನೂರಕ್ಕೆ ನೂರರಷ್ಟು ಒಪ್ಪುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ನಾವು ಹೊಸದಾಗಿ ಬಂದಿರುತ್ತೇವೆ, ನಾವು ಕೆಲಸಕಾರ್ಯ ಮಾಡಬೇಕಾದರೆ ಕಾಲಿಕಾಯಿಕೊಳ್ಳಿ ಎಂದು ಹೇಳುವುದಿಲ್ಲ. ಯಾವುದೇ ಪಾರ್ಟಿ ಆಗಿರಲಿ, ನಮ್ಮ ಪಾರ್ಟಿ, ನಿಮ್ಮ ಪಾರ್ಟಿ ವಿಚಾರ ಅಲ್ಲ. ಅವರಿಂದ ನನಗೆ ಬಹಳ ಬೇಜಾರಾಗಿದೆ. ಮಿನಿಸ್ಟರ್ ಹತ್ತಿರ ಹೋಗಿ ಅವರ ಹತ್ತಿರ ಬೈಸಿಕೊಂಡು ಕೆಲಸ ಮಾಡಿಸಿಕೊಂಡು ಬರಬಹುದು. ಅವರು ಈ ಕೆಲಸ ಆಗುತ್ತದೆ ಅಥವಾ ಇಲ್ಲ ಎನ್ನುವುದನ್ನು ಕ್ಲಿಯರ್ ಆಗಿ ಹೇಳಿಬಿಡುತ್ತಾರೆ.

ಶ್ರೀ ಸಿ. ಬೈರೇಗೌಡ.—ನೀವು ಮಂತ್ರಿಗಳ ಹತ್ತಿರ ನೇರವಾಗಿ ಹೋಗಬಹುದು, ಮನೆಗೆ ಹೋಗಬಹುದು ಅವರು ಬೆಡ್‌ರೂಮ್‌ನಲ್ಲಿದ್ದರು ಹೋಗಬಹುದು. ಈಗ ತಾವು ಏನು ಹೇಳುತ್ತಿದ್ದೀರಿ ಇದು ಎಲ್ಲರ ಅನುಭವವೂ ಆಗಿದೆ, ಎಂದು ನಾನು ತಿಳಿದುಕೊಂಡಿದ್ದೇನೆ.

ಶ್ರೀ ಎಂ. ವಿ ವೆಂಕಟಪ್ಪ.—ಎದ್ದು ನಿಲ್ಲುವುದು ಇರಲಿ, ಅವರು ನಮ್ಮ ಮುಂದೆ ಚುಟ್ಟಾ ಕುಡಿಯದಿದ್ದರೆ ಸಾಕು,

ಶ್ರೀ ಕೆ. ಶಿವಮೂರ್ತಿ.—ಅವರು ಸೇದುತ್ತಾರೆ. ನಾವೆಲ್ಲರೂ ತಲೆತಗ್ಗಿಸಬೇಕಾಗಿದೆ. ಈ ಪರಿಸ್ಥಿತಿಯನ್ನು ನಾವೇ ಉದ್ಭವ ಮಾಡಿದ್ದೇವೆ. ಲಂಚ ಹೊಡೆಯುವವರು ಹೆಚ್ಚಾಗಿದ್ದಾರೆ. ಫೈಲ್ ಡಿಲೇ ಮಾಡಿದರೂ ಲಂಚ ಸಿಗುತ್ತದೆ. ಫೈಲ್ ಮ್ಯಾನಿಪುಲೇಟ್ ಮಾಡಿದರೂ ಲಂಚ ಸಿಗುತ್ತದೆ. ಫೈಲ್ ಅನ್ನು ಫಾಸ್ಟ್ ಆಗಿ ಮೂವ್ ಮಾಡಿದರೂ ಲಂಚ ಸಿಗುತ್ತದೆ. ಯಾವ ರೀತಿ ಆಡಳಿತವನ್ನು ಟ್ಯೂನ್ ಆಫ್ ಮಾಡಬೇಕೆಂಬುದನ್ನು ಸರ್ಕಾರ ಯೋಚಿಸಬೇಕು. ಇದು ಎಲ್ಲಾ ಕಾಲದಲ್ಲಿಯೂ ನಡೆದುಕೊಂಡು ಬಂದಿದೆ. ಈಗ ಜಿಲ್ಲಾ ಪರಿಷತ್ತು ಮತ್ತು ಮಂಡಲ್ ಪಂಚಾಯತ್‌ಗಳು ಅಸ್ತಿತ್ವಕ್ಕೆ ಬಂದಿದೆ. ಅಲ್ಲಿಯೂ ಸಹ ಲಂಚ ಕೊಡದೆ ಏನು ಕೆಲಸವೂ ಆಗುವುದಿಲ್ಲ. ಈಗ ಮಾರ್ಚಿ ಎಂಡ್ ಒಂದೊಂದು ಬಿಲ್ಲು ೪-೫ ಲಕ್ಷ ರೂಪಾಯಿಯ ಬಿಲ್ಲುಗಳನ್ನು ಪಾಸು ಮಾಡಿಬಿಡುತ್ತಾರೆ. ಈಗ ಅವರಿಗೆ ಸುಗ್ಗಿ ಕಾಲ. ೫ ಗಂಟೆಯ ಮೇಲೆ ಬಿಲ್ಲು ಮಾಡುತ್ತಾರೆ. ಕೆಲಸ ಮಾಡಿರಲಿ, ಬಿಡಲಿ ಈಗ ಬಿಲ್ಲು ಮಾಡಿ ಹಣವನ್ನು ತೆಗೆದುಕೊಳ್ಳುತ್ತಾರೆ. ಐ.ಎ.ಎಸ್. ಅಧಿಕಾರಿಗಳು, ನಾವು ಹೇಳುವ ಎಲ್ಲಾ ಕೆಲಸಗಳನ್ನು ಮಾಡುವುದಿಲ್ಲ. ಮೂರು ಕೆಲಸ ಹೇಳಿದರೆ ಒಂದೊ-ಎರಡು ಕೆಲಸವನ್ನು ಮಾತ್ರ ಮಾಡುತ್ತಾರೆ. ಅವರಿಗೆ ಒಂದು ಕಿರೀಟ ಬಂದಿದೆ. ಅವರೆಲ್ಲಾ ಶ್ರೀಮಂತರ ಮಕ್ಕಳು. ಕೆಲವರು ಶ್ರೀಮಂತರಲ್ಲದೆ ಇರುವವರು ಶ್ರೀಮಂತರ ಮಗಳನ್ನು ಮದುವೆಯಾಗಿರುತ್ತಾರೆ. ಅವರು ಮೊಗಲರಂತೆ ದರ್ಬಾರ್ ಮಾಡುತ್ತಿರುತ್ತಾರೆ. ಏನು ಹೇಳಿದರೂ ''ಐ ವಿಲ್ ಲುಕಿಂಗ್ ಇನ್ ಟು ದಟ್'' ಎಂದು ಹೇಳುತ್ತಾರೆ. ನಾನು ನೋಡುತ್ತೇನೆ ಹೋಗಿ ಎಂದು ಹೇಳುತ್ತಾರೆ. ಈ ರೀತಿ ಆಡಳಿತ ನಡೆಯುತ್ತಾ ಇದೆ. ಶಾಸಕರು ಹೋದ ತಕ್ಷಣ ಅವರು ಎದ್ದು ನಿಂತುಕೊಂಡು ಗೌರವ ಕೊಡಬೇಕೆಂಬ ಸೂಚನೆಯನ್ನು ಸರ್ಕಾರ ಇವರಿಗೆ ಮತ್ತೊಮ್ಮೆ ಕೊಡಬೇಕು. ಅದು ನಮ್ಮ ಹಕ್ಕು, ಬೇರೆ ವಿಚಾರಗಳನ್ನು ಬಿಟ್ಟು, ನಾವು ಹೋದರೆ ನಮ್ಮ ಬಗ್ಗೆ ಅವರು ಚರ್ಚಿಸಬೇಕು. ಅವರು ಮಾತನಾಡುವ ಧಾಟಿಯನ್ನು ನೋಡಿದರೆ ಬಹಳ ಬೇಜಾರಾಗುತ್ತದೆ. ಹೀಗೆ ಬಿಟ್ಟರೆ ಆಡಳಿತ ಇನ್ನು ಹದಗೆಡುತ್ತದೆ. ಶ್ರೀ ಬಸವಲಿಂಗಪ್ಪನವರು ಅಂತವರು ದಬಾಯಿಸಿ ಮಾತನಾಡುತ್ತಾರೆ. ಅವರಿಗೆ ಇವರು ಹೆದರುತ್ತಾರೆ. ಮಿಕ್ಕವರ ಬಗ್ಗೆ ಇವರು ಅಷ್ಟು ಹೆದರುವುದಿಲ್ಲ. ಒಬ್ಬ ಶಾಸಕರ ಅರ್ಧ ಗಂಟೆ ಇವರ ಛೇಂಬರ್‌ಗಳ ಮುಂದೆ ಕಾಯಬೇಕು. ಈ ಪದ್ಧತಿ ಕೂಡಲೇ ಹೋಗಬೇಕು. ೩ ರಿಂದ ೪ ಗಂಟೆ ಸಂದರ್ಶನ ವೇಳೆಯೆಂದು ಬರೆದಿರುತ್ತಾರೆ ; ಆದರೆ ಆ ವೇಳೆಯಲ್ಲಿ ಇವರುಗಳು ಇರುವುದಿಲ್ಲ. ಫೋನ್ ಮಾಡಿದರೆ ಟೈಮ್ ಇಲ್ಲವೆಂದು ಹೇಳುತ್ತಾರೆ. ಹಾಗೂ ಛೇಂಬರ್‌ನಲ್ಲಿಲ್ಲವೆಂದು ಹೇಳಿಸಿಬಿಡುತ್ತಾರೆ. ಇನ್ನು ಟಾಡಿ ಇಳಿಸುವವರ ಬಗ್ಗೆ ಕ್ರಮ ಕೈಗೊಳ್ಳಬೇಕಾಗಿದೆ, ಈಗ ಟಾಡಿಯನ್ನು ತೆಗೆದುಹಾಕಿ ಒಂದು ದೊಡ್ಡ ಮಹತ್ ಕಾರ್ಯ ಮಾಡಿದ್ದಾರೆ. ಈ ಟಾಡಿ ಇಳಿಸುವವರ ಬಗ್ಗೆ ಪುನರ್ ವಸತಿ ಕೆಲಸ ಮಾಡಬೇಕಾಗಿದೆ. ಈಗ ಸರಬರಾಜು ಮಾಡುತ್ತಿರುವ ಲಿಕ್ಕರ್ ಬಹಳ ಕೆಟ್ಟದಾಗಿರುತ್ತದೆ. ಇದರ ಬಗ್ಗೆ ಸರ್ಕಾರ ಗಮನ ಕೊಡಬೇಕು.

ನಾವು ಕೆಮಿಕಲ್ಸ್ ಅನ್ನು ಹಾಕುವುದಿಲ್ಲ ಹದವಾಗಿ ಮಾಡಿ ಇಳಿಸುತ್ತೇವೆ. ಎಲ್ಲಿ ಅಡಲ್ಟರೇಷನ್ ಆಗಿದೆ ಅದನ್ನು ನಿಲ್ಲಿಸಬೇಕು. ಇದರ ದಿಸೆಯಲ್ಲಿ ಮೊದಲನೇ ಹೆಜ್ಜೆಯನ್ನು ಇಟ್ಟಿದ್ದೀರಿ ನೋಡೋಣ ಮುಂದೆ ಎಲ್ಲಿಗೆ ಹೋಗುತ್ತದೆ ಎಂದು. ಇನ್ನು ಲಿಕ್ಕರ್, ಟಾಡಿಯನ್ನು ಎಲ್ಲಿ ಜಾತ್ರೆಯಾಗುತ್ತದೆ ಅಲ್ಲಿಯೇ ಟಾಡಿ ಷಾಪ್ ಅನ್ನು ತೆಗೆಯುತ್ತಾರೆ ಇದಕ್ಕೆ ಲೈಸನ್ಸ್ ಪಾಲಿಸಿ ಏನೂ ಇಲ್ಲವೇ ಇಲ್ಲ. ಬ್ರಾಂದಿ ಬೀರ್ ಷಾಪ್ ಅನ್ನಂತೂ ಮೂಲೆ ಮೂಲೆಯಲ್ಲಿ ಇಟ್ಟಿದ್ದಾರೆ. ಮಾನ್ಯ ಜೆ. ಹೆಚ್. ಪಟೇಲರ ಕೈಗೆ ಈ ಖಾತೆ ಸಿಕ್ಕಿತು ಅವರು ಬ್ರಾಂದಿ, ಬೀರು ಷಾಪನ್ನು ಇಡಲು ಅವಕಾಶ ಕೊಟ್ಟಿದ್ದಾರೆ. ಅದನ್ನು ಈಗ ತಹಬಂದಿಗೆ ತರಬೇಕು. ಹಳ್ಳಿಯಲ್ಲಿ ಸೇಂದಿ ಸಾರಾಯಿ ಅಂಗಡಿ ತೆರೆಯುವುದಕ್ಕೆ ನಿಯಮಗಳು ಇದೆ ಆದರೆ ಅದನ್ನು ಬದಿಗೊತ್ತಿ ಎಲ್ಲಿ ಜನ ಸೇರುತ್ತಾರೆ ಎಲ್ಲಿ ಹೆಣ್ಣು ಮಕ್ಕಳು ಹೆಚ್ಚು ಓಡಾಡುತ್ತಾರೆ. ಎಲ್ಲಿ ಹರಿಜನ ಕಾಲೋನಿ, ತಾಂಡಾಗಳು, ಶಿಶುವಿಹಾರಗಳು ಎಲ್ಲಿ ಇವೆ ಅಲ್ಲಿ ಈ ಬ್ರಾಂದಿ, ಸಾರಾಯಿ ಅಂಗಡಿಯನ್ನು ಇಟ್ಟಿದ್ದಾರೆ.

ಇನ್ನು ಕೆ.ಇ.ಬಿ.ಯವರು ವೋಲ್ಟೇಜ್ ಕಡಿಮೆಯಾಗಿದೆ ಇದರಿಂದಾಗಿ ಉತ್ಪಾದನೆ ಕಡಿಮೆ ಇದೆ ಎಂದು ಹೇಳುತ್ತಾರೆ. ಇಲ್ಲಿ ಕರಪ್ಷನ್ ನಡೆಯುತ್ತಿದೆ ಅದನ್ನು ತಹಬಂದಿಗೆ ತರಬೇಕು. ನಮ್ಮ ಕ್ಷೇತ್ರದಲ್ಲಿಯಂತೂ ಕರೆಂಟ್ ಇಲ್ಲದೇ ವಿದ್ಯಾರ್ಥಿಗಳು ಓದುವುದನ್ನು ನಿಲ್ಲಿಸಿದ್ದಾರೆ. ನಾನು ಕರಪ್ಷನ್ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದರ ಬಗ್ಗೆ ಮಾತನಾಡುವುದಕ್ಕೆ ಹೋದರೆ ನಾವು ಸಿಕ್ಕಿಬೀಳುತ್ತೇವೆ. ಕರಪ್ಷನ್ ಬಗ್ಗೆ ಯಾರೂ ಕೂಡ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾಡುವುದಿದ್ದರೆ ಮಾಡುತ್ತೇವೆಂದು ಹೇಳಬೇಕು ಆಗದಿದ್ದರೆ ಇಲ್ಲವೆಂದು

ಹೇಳಬೇಕು. ದೊಡ್ಡ ಅಧಿಕಾರಿಗಳೇ ಆಗಲೀ ಮಾಡುತ್ತೇವೆಂದು ಹೇಳಬೇಕು ಇಲ್ಲವೇ, ಇಲ್ಲವೆಂದು ಹೇಳಬೇಕು. ಮಾಡುತ್ತೇವೆಂದು ಹೇಳಿ ಹೇಳಿ ನಮ್ಮನ್ನು ಏಕೆ ಗೋಳು ಹುಯ್ಯಿಸಿಕೊಳ್ಳಬೇಕು. ಇನ್ನು ಸೋರಿ ಹೋಗತಕ್ಕಂತಹ ಇಲಾಖೆ ಇದೆ ತಾವು ದಯವಿಟ್ಟು ಮನಸ್ಸು ಮಾಡಿ ಇದನ್ನು ನಿಲ್ಲಿಸಬೇಕು, ಹಿಂದೆ ಮಾನ್ಯ ದೇಶಪಾಂಡೆಯವರು ಹೆಚ್‌ಯುಡಿ ಮಂತ್ರಿಗಳಾಗಿದ್ದರು. ಆಗ ಅವರ ಕಾಲದಲ್ಲಿ ಆಗಬಾರದ್ದೆಲ್ಲಾ ಆಯಿತು. ಬೆಂಗಳೂರು ನೆಲವನ್ನೆಲ್ಲಾ ಬೇರೆಯವರಿಗೆ ಮಾರಿದರು ಇದರ ಬಗ್ಗೆ ಸ್ಕ್ಯಾಂಡಲ್ಸ್ ಎಲ್ಲಾ ಇದೆ. ಯಾರು ಯಾರು ಎಲ್ಲೆಲ್ಲಿ ಸಿಕ್ಕಿ ಹಾಕಿಕೊಂಡಿದ್ದಾರೆ ಎಂಬ ಬಗ್ಗೆ ಎಲ್ಲವನ್ನೂ ಎನ್‌ಕ್ವೈರಿ ಮಾಡಬೇಕು.

ಒಬ್ಬ ಮಾನ್ಯ ಸದಸ್ಯರು.—ಬಹಳ ನಾಜೂಕಾಗಿ ಹಸಿರು ಪಟ್ಟಿಯ ಹೆಸರಿನಲ್ಲಿ ಮಾಡಿದರು, ನಗರದ ಸುತ್ತಮುತ್ತ ೧-೨ ಎಕರೆ ಜಮೀನನ್ನು ರೈತರು ಏನು ಇಟ್ಟುಕೊಂಡಿದ್ದರು ಅದನ್ನು ತೆಗೆದುಕೊಂಡು ಹಲವಾರು ಸಂಘಗಳನ್ನು ಸೃಷ್ಟಿ ಮಾಡಿ ಅದರ ಮುಖಾಂತರವಾಗಿ ರೈತರ ಕೊಲೆಯನ್ನು ಬಹು ನಯವಾಗಿ ಮಾಡಿದರು.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಪಾಂಡೆಯವರು ರೂಲಿಂಗ್ ಪಾರ್ಟಿಯಲ್ಲಿ ಇದ್ದಾಗ ಬಹಳ ಜೋರಾಗಿ ಮಾತನಾಡುತ್ತಿದ್ದರು ಆದರೆ ಈಗ ಇಲ್ಲಿ ಕುಳಿತು ಮಾತನಾಡುವಾಗ ಹೆಚ್‌ಯುಡಿ ಬಗ್ಗೆ ಬಹಳ ಮೆತ್ತಗೆ ಮಾತನಾಡಿದರು. ಮಾನ್ಯ ಸಿಂಧ್ಯರವರು ಒಬ್ಬರೇ ಜೋರಾಗಿ ಮಾತನಾಡಿದ್ದುದು.

* * *

ಶ್ರೀ ಡಿ. ಬಿ. ಚಂದ್ರೇಗೌಡ.—ಶಾಸನ ಸಭೆಯೊಳಗೆ ಚರ್ಚೆಯಾಗುತ್ತಿದೆ ಇದಕ್ಕೆ ಒಂದು ಘನತೆ, ಗಾಂಭೀರ್ಯ ಬೇಡವೇ ? ಮಂತ್ರಿಗಳು ಕೋಟಿಗಟ್ಟಲೆ ಹಣ ಮಾಡಿದ್ದಾರೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. It has gone on record. ಆಪಾದನೆಗಳನ್ನು ಮಾಡಬೇಕಾದರೆ ಜವಾಬ್ದಾರಿಯಿಂದ ಮಾಡಬೇಕಾಗುತ್ತದೆ. ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಇಟ್ಟು ಮಾಡಬೇಕಾಗುತ್ತದೆ. ಅವರು ಹೇಳಿದ್ದುದು ಕಡತದಲ್ಲಿದೆ ಅದನ್ನು ತಾವು ತೆಗೆಸಬೇಕು.

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಮಂತ್ರಿಗಳು ಕೋಟಿಗಟ್ಟಲೆ ಹಣ ಮಾಡಿದ್ದಾರೆಂದು ನಾನು ಹೇಳಿದೆನೇ ? ಅದು ಕಡತದಲ್ಲಿದೆಯೇ ? ನಾನೂ ಕೂಡ ಜವಾಬ್ದಾರಿಯಿಂದ ಮಾತನಾಡುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ಆಪಾದನೆಗಳನ್ನು ಮಾಡುವುದಿದ್ದರೆ ದಾಖಲೆಗಳನ್ನು ಇಟ್ಟು ಸರಕಾರದ ವತಿಯಿಂದ ಎನ್‌ಕ್ವೈರಿ ಮಾಡಿಸಿ. ಬೇಕಾದರೆ ಸುಪ್ರೀಂ ಕೋರ್ಟ್ ಒಂದನ್ನು ತಂದು ಇಲ್ಲಿ ಇಡಿ. This is not the way of attacking the ministry. We cannot tolerate such insults. ಯಾರಾದರೂ ಸದಸ್ಯರು ಏನಾದರೂ ಹೇಳುವುದಿದ್ದರೆ ಆಧಾರಗಳನ್ನು ಇಟ್ಟು ಹೇಳಲಿ. ಜನರಲ್ ಆಗಿ ಯಾರು ಬೇಕಾದರೂ ಹೇಳಿ ಎಸ್ಕೇಪ್ ಆಗುವುದಲ್ಲ,

ಅಧ್ಯಕ್ಷರು.—ಆಪಾದನೆಗಳನ್ನು ಮಾಡಬೇಕಾದರೆ...

(ಗೊಂದಲ)

ಶ್ರೀ ಕೆ. ಶಿವಮೂರ್ತಿ.—ಪತ್ರಿಕೆಯಲ್ಲೆಲ್ಲಾ ಬಂದಿದೆ. ಇವರು ಲೂಟಿ ಹೊಡೆದಿರುವುದು ಗೊತ್ತಿಲ್ಲವೇ ? ನಾನು ಚಂದ್ರೇಗೌಡರ ಮೇಲೆ ಹೇಳುತ್ತಿದ್ದೇನೆಯೇ ? ಮಾನ್ಯ ಸಿಂಧ್ಯರವರ ಮೇಲೆ ಹೇಳುತ್ತಿದ್ದೇನೆಯೇ ? ಯಾರು ಎಷ್ಟು ಲೂಟಿ ಹೊಡೆದಿದ್ದಾರೆ...

(ಗೊಂದಲ)

ಶ್ರೀ ಪಿ.ಜಿ.ಆರ್. ಸಿಂಧ್ಯ.—ಯಾರು ಎಷ್ಟು ಲೂಟಿ ಹೊಡೆದಿದ್ದಾರೆ ಎಂಬುದನ್ನು ಬೇಕಾದರೆ ವಿಚಾರಣೆ ಮಾಡಿ. ನಾವು ಮೊದಲನೇ ದಿವಸವೇ ಹೇಳಿದ್ದೇವೆ ತನಿಖೆ ಮಾಡಿ ಎಂದು. ನೀವೇನಾದರೂ ಎನ್‌ಕ್ವೈರಿ ಕಮೀಷನ್ ಮಾಡುವುದಿದ್ದರೆ ಮಾಡಿ. ನಾವೆಲ್ಲಾ ತಪ್ಪು ಮಾಡಿದರೆ ದುಡ್ಡು ಹೊಡೆದಿದ್ದರೆ ವಿಧಾನ ಸೌಧದ ಮುಂದೆ ನಮ್ಮನ್ನೆಲ್ಲಾ ನೇಣು ಹಾಕಿ. ದೇಶಪಾಂಡೆಯವರು ಇರತಕ್ಕಂತಹ ಸಂದರ್ಭದಲ್ಲಿ ಹೇಳದೆ ಅವರು ಹೋದ ತಕ್ಷಣ ಪಾಂಡೆಯವರು ಹೀಗೆ ಮಾಡಿದಾರೆ ಹಾಗೆ ಮಾಡಿದ್ದಾರೆಂದು ಕೊಂಕು ನುಡಿಯುವುದು ಸರಿಯಲ್ಲ. ನಾವು ಇದನ್ನೆಲ್ಲಾ ಸಹಿಸುವುದಕ್ಕಾಗುವುದಿಲ್ಲ.

** ಮೇಲಿನ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ತೆಗೆದು ಹಾಕಲಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರು ಭಾಷಣ ಮಾಡತಕ್ಕ ವೇಳೆಯಲ್ಲಿ ಮತ್ತೊಬ್ಬ ಸದಸ್ಯರ ವಿಚಾರದಲ್ಲಿ ಅವಹೇಳನಕರವಾದ ಮಾತುಗಳನ್ನಾಡ ಬೇಕಾದರೆ ಆ ಬಗ್ಗೆ ನನಗೆ ನೋಟೀಸ್‌ನ್ನು ಕೊಡಬೇಕು, ನಾನು ಆ ಸದಸ್ಯರಿಗೆ ನೋಟೀಸ್ ಕೊಟ್ಟು ಇಂಥವರು ನಿಮ್ಮ ಮೇಲೆ ಆಪಾದನೆ ಮಾಡುತ್ತಾರಂತೆ ಆಗ ನೀವು ಸದನದಲ್ಲಿರಬೇಕು, ನೀವು ಉತ್ತರ ಕೊಡುವುದಕ್ಕೆ ನಾನು ಅವಕಾಶ ಕೊಡುತ್ತೇನೆಂದು ಹೇಳತಕ್ಕ ನಿಯಮಾವಳಿ ನಮ್ಮ ರೂಲ್ಸ್ ಆಫ್ ಪ್ರೊಸೀಜರ್‌ನಲ್ಲಿದೆ. ಬಜೆಟ್ ಡಿಸ್ಕಷನ್ ಸಮಯದಲ್ಲಿ ಈ ರೀತಿ...

ಶ್ರೀ ಕೆ. ಶಿವಮೂರ್ತಿ.—೧೯೭೨ರ ಚುನಾವಣೆಯ ನಂತರ ನಡೆದಿರತಕ್ಕ ಈ ಸದನದ ಕಾರ್ಯ ಕಲಾಪಗಳ ಕಡತಗಳನ್ನು ನೋಡಬೇಕು. ಈಗ ವಿರೋಧಪಕ್ಷದ ನಾಯಕರಾಗಿರುವ ಶ್ರೀಮಾನ್ ಚಂದ್ರೇಗೌಡರು ಆಗ ಸ್ಪೀಕರ್ ಆಗಿದ್ದರು, ಆಗ ಏನು ನಡೆಯುತ್ತಿತ್ತು ಅವರು ಏನೇನು ಹೇಳುತ್ತಿದ್ದರು ಎಂಬುದನ್ನು ತಾವು ನೆನಪಿಗೆ ತಂದುಕೊಳ್ಳಬೇಕು.

** ** **

ಶ್ರೀ ಡಿ. ಬಿ. ಚಂದ್ರೇಗೌಡ.—ಈಗಲೇ ಹೇಳಿ. ನಾನು ಆಗ ಏನು ಹೇಳಿದ್ದೇನೆ ಎನ್ನುವುದನ್ನು ಈಗಲೇ ಹೇಳಿ.

ಶ್ರೀ ಕೆ. ಶಿವಮೂರ್ತಿ.—ನೀವು ಏನು ಹೇಳಿದ್ದೀರಿ ಎಂಬುದು ಕಡತದಲ್ಲಿದೆ. ಅದನ್ನು ತಾವು ತೆಗೆಸಿನೋಡಿ. ಅನಂತರ ನಾನು ಹೇಳುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ.—ನಾನು ಏತಕ್ಕೆ ತೆಗೆಸಲಿ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರು ಮಾತನಾಡುವ ಸಂದರ್ಭದಲ್ಲಿ ಆ ಕಡತದ ರೆಫರೆನ್ಸ್‌ನ್ನು ತೆಗೆದಿಟ್ಟುಕೊಂಡು ಹೇಳಬೇಕು.........

(ಗೊಂದಲ)

ಶ್ರೀ ಕೆ. ಶಿವಮೂರ್ತಿ.—೭೩ ರಿಂದ ೭೭ರ ವರೆಗೆ ಈ ಮಧ್ಯದಲ್ಲಿ ನಡೆದಿರತಕ್ಕ ಪ್ರೊಸೀಡಿಂಗ್ಸ್‌ನಲ್ಲಿ ಏನೇನು ಬಂದಿದೆ ಅದನ್ನು ಮುಂದೆ ಮಾತನಾಡುವಾಗ ಹೇಳೋಣ.

ಶ್ರೀ ಪಿ. ಜಿ. ಆರ್, ಸಿಂಧ್ಯ.—ಈಗಲೇ ಹೇಳಿ, ನಾವು ವೆಲ್‌ಕಂ ಮಾಡುತ್ತೇವೆ.

ಶ್ರೀ ಡಿ.ಬಿ. ಚಂದ್ರೇಗೌಡ.—ಸ್ವಾಮಿ ನನದೊಂದು ಪಾಯಿಂಟ್ ಆಫ್ ಆರ್ಡರ್. Sir, I am on a point of order. ತಾವು ಇಲ್ಲಿ ಅಧ್ಯಕ್ಷರಾಗಿ ಕುಳಿತಿದ್ದೀರಿ. ಚಂದ್ರೇಗೌಡರು ೭೩ ರಿಂದ ೭೭ ರವರೆಗೆ ಅಧ್ಯಕ್ಷರಾಗಿ ಕೆಲಸ ಮಾಡಿದಾಗ ಅವರು ಏನೇನು ಮಾಡಿದ್ದಾರೆ ಎಂಬುದನು ಕಡತದಿಂದ ತೆಗೆಸಿನೋಡಿ ಎಂದು ಹೇಳಿದರೆ ಹೇಗೆ? He is charging the Chair. There should be some limit, I performed my duty with utmost respech.

ಶ್ರೀ ಪಿ.ಜಿ.ಆರ್. ಸಿಂಧ್ಯ.—ಈಗ ನಾವು ವಿರೋಧಪಕ್ಷದಲ್ಲಿದ್ದೇವೆ. ಲೆಜಿಸ್ಲೇಚರ್ ಏನಿದೆ ಇದು ಮಾನ್ಯ ಸ್ಪೀಕರ್‌ರವರ ವಶದಲ್ಲಿದೆ, ಬೇಕಾದರೆ ಅವರು ಕಡತವನ್ನು ತೆಗೆದು ನೋಡುತ್ತಾರೆ. ನಾವು ನೋಡತಕ್ಕ ಅಗತ್ಯವಿಲ್ಲ. ನೀವು ಬೇಕಾದರೆ ತೆಗೆದುನೋಡಿ. ಆಚೆ, ಈಚೆ ಜನರಿಗೆಲ್ಲಾ ಗೊತ್ತಿದೆ.

(ಗೊಂದಲ)

ಶ್ರೀ ಕೆ. ಪ್ರತಾಪಚಂದ್ರಶೆಟ್ಟಿ.—ಮಾನ್ಯ ಅಧ್ಯಕ್ಷರೆ ತಾವು ನಮ್ಮ ರಕ್ಷಣೆಗೆ ಬರಬೇಕು.

SRI D.B. CHANDREGOWDA.—That should not be questioned by any other hon'ble member....

SRI C. BHYREGOWDA.—Sir...

SRI P. G. R. SINDYA.—There is a limit for everything.

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಆಗಲೇ ಏನು ಹೇಳಿದರೋ ನನಗೆ ಗೊತ್ತಿಲ್ಲ. ಆಗ ನಾನು ಸದನದಲ್ಲಿ ಇರಲಿಲ್ಲ. ಅವರಿಗೆ ಏನೇನು ಗೊತ್ತಿದೆ

ಆದೇಶದ ಮೇರೆಗೆ ತೆಗೆದುಹಾಕಲಾಗಿದೆ.

ಹೇಳಲಿ. ಅದಕ್ಕೆ ನಾನು ಉತ್ತರ ಕೊಡುವುದಕ್ಕೆ ಅನುಕೂಲವಾಗುತ್ತದೆ. ಅವರು ಏನು ಆಪಾದನೆ ಮಾಡಿದ್ದಾರೆ ಅದನ್ನು ಪ್ರೂವ್ ಮಾಡಲಿ. ಅವರು ಆಪಾದನೆ ಮಾಡುವುದಕ್ಕೆ ಅಧಿಕಾರವಿದೆ. ಅವರ ಆಪಾದನೆಗೆ ನಾನು ಉತ್ತರ ಕೊಡಲು ತಾವು ಅವಕಾಶ ಕೊಡಬೇಕು.

ಅಧ್ಯಕ್ಷರು.—ಮಾನ್ಯ ಶಿವಮೂರ್ತಿಯವರಿಗೆ ಹೇಳುತ್ತಿದ್ದೇನೆ. ನಿಯಮ ೩೧೧.

"ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ, ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂಥದ್ದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು."

ಶ್ರೀ ಕೆ. ಶಿವಮೂರ್ತಿ.—ಮಾನ್ಯ ಅಧ್ಯಕ್ಷರೇ ನಾನು ಒಪ್ಪಿಕೊಂಡಿರುತ್ತೇನೆ.

ಅಧ್ಯಕ್ಷರು.—ತಾವು ಮಾನ್ಯ ಸದಸ್ಯರು ಅವರ ಹೆಸರನ್ನು ಹೇಳಿ ಏನು ಮಾತನಾಡಿದ್ದಾರೆ ಅದನ್ನು ನಾನು ರೆಕಾರ್ಡ್‌ನಿಂದ ತೆಗೆಸಿಹಾಕುತ್ತೇನೆ.

(ಗೊಂದಲ)

ಶ್ರೀ ಆರ್. ವಿ. ದೇಶಪಾಂಡೆ.—ಮಾನ್ಯ ಅಧ್ಯಕ್ಷರೇ ಇದನ್ನು ಕಡತದಿಂದ ತೆಗೆಸುವುದು ಒಂದು ಪ್ರಶ್ನೆ. ಮತ್ತೆ ಇನ್ನೊಂದು ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ ಯಾವುದೇ ಇಲಾಖೆಯಲ್ಲಿ ನಾನು ಸಣ್ಣ ಕೈಗಾರಿಕಾ ಮಂತ್ರಿಯಾಗಿ. ಕೃಷಿ, ರೂರಲ್ ಡೆವಲಪ್‌ಮೆಂಟ್ ಹೆಚ್.ಯು.ಡಿ. ಯಾವ ಇಲಾಖೆಯಲ್ಲಿಯೇ ಆಗಲಿ, ಒಂದು ವಿಷಯವನ್ನು ತಾವು ಪ್ರೂವ್ ಮಾಡಿದರೆ ನಾನು ಪೊಲಿಟಿಕಲ್ ಆಗಿ ರಿಟೈರ್ ಆಗುತ್ತೇನೆ. ನಾನು ಚಾಲೆಂಜ್ ತೆಗೆದುಕೊಳ್ಳುತ್ತೇನೆ. ತಾವು ಚಾಲೆಂಜ್ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

(ಗೊಂದಲ)

(ಈ ನಿಟ್ಟಿನಲ್ಲಿ ಹಲವಾರು ಜನ ಮಾನ್ಯ ಸದಸ್ಯರು ಎದ್ದು ನಿಂತು ಮಾತನಾಡುತ್ತಿದ್ದುದರಿಂದ ಯಾರ ಮಾತುಗಳು ಸ್ಪಷ್ಟವಾಗಿ ಕೇಳುತ್ತಿರಲಿಲ್ಲ)

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಅಧ್ಯಕ್ಷರೆ ಮೊದಲನೆಯ ಅಧಿವೇಶನದ ಸಂದರ್ಭದಲ್ಲಿ ೮ನೇ ತಾರೀಖು ಡಿಸೆಂಬರ್‌ನಲ್ಲಿ ರಾಜ್ಯಪಾಲರ ಮೂಲಕ ಭಾಷಣವನ್ನು ರಾಜ್ಯಪಾಲರು ಮಾಡಿಕ್ಕಂಥದ್ದನ್ನು ೨–೩ ಜನ ಸಚಿವರು ಇದ್ದಾರೆ ಅವರ ಗಮನಕ್ಕೆ ತರುತ್ತಿದ್ದೇನೆ.

"The overwhelming support given to my Government in the Legislature casts upon it an increased responsibility. A constructive Opposition, no matter how small, is a prerequisite for a healthy democracy. My Government will therefore extend to the opposition due respect and courtesy. In return my Government requests the Opposition to function in a constructive manner and hopes that required cooperation would be forthcoming."

ಮಾನ್ಯ ಅಧ್ಯಕ್ಷರೇ ನಮ್ಮ ನಾಯಕರು ಮಾತನಾಡಿದ್ದಾರೆ. ನಾವು ಎಲ್ಲಾ ಸದಸ್ಯರು ಮಾತನಾಡಿದ್ದೇವೆ. ನಾವು ಯಾವುದೇ ಸಂದರ್ಭದಲ್ಲಿ ಮುಖ್ಯಮಂತ್ರಿಗಳ ಬಗ್ಗೆ ಮತ್ತು ಯಾವುದೇ ಮಂತ್ರಿಗಳ ಬಗ್ಗೆ ಅಥವಾ ಸದನಕ್ಕೆ ಹೊಸದಾಗಿ ಬಂದಿರುವ ಸದಸ್ಯರ ಬಗ್ಗೆ ನಾವು ಅಗೌರವವಾಗಿ ನಡೆದುಕೊಳ್ಳಲಿಲ್ಲ. ನಮಗೆ ಬಹಳ ಖೇದವಾಗುತ್ತದೆ, ನಮಗೆ ಮಾತನಾಡಲಿಕ್ಕೆ ಬರುವುದಿಲ್ಲವೆಂದಲ್ಲ. ನಾವೂ ಕೂಡ ರಾಜಕೀಯ ನೋವು ಏರುಪೇರುಗಳನ್ನು ಅನುಭವಿಸಿ ಇಲ್ಲಿಗೆ ಬಂದಿರುತ್ತೇವೆ. ಒಂದು ಕಡೆ ಈ

ಕಡೆಯಿಂದ ಒಂದು ಕಡೆ ಆ ಕಡೆಯ ಸ್ನೇಹಿತರಿಂದ ಬಹಳ ತೊಂದರೆಯಾಗಿದೆ ಈ ರೀತಿ ಮಾತನಾಡುವುದ ರಿಂದ. If you don't want to respect our feelings, we will certainly go out. Why should we be here? We have also been elected by the people. ಮಾನ್ಯ ಅಧ್ಯಕ್ಷರೇ ನನ್ನದೇನೆಂದರೆ we will go out.

(INTERRUPTION)

ಮಾನ್ಯ ಮಂತ್ರಿಗಳು ಇದನ್ನು ಹೇಳಬೇಕು ಮತ್ತು ಗಮನಿಸಬೇಕು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ ರೂಲಿಂಗ್ ಇದರ ಬಗ್ಗೆ ಕೊಟ್ಟಿದ್ದೀರಿ. ರೂಲಿಂಗ್ ಕೊಟ್ಟಮೇಲೆ ದಯವಿಟ್ಟು ರೂಲಿಂಗನ್ನು ಮತೆ ರಿಓಕ್ ಮಾಡಲಿಕ್ಕೆ ಯಾರಿಗೂ ಅಧಿಕಾರ ಇಲ್ಲ.

ಶ್ರೀ ಆರ್. ವಿ. ದೇಶಪಾಂಡೆ.—ರಿಓಕ್ ಮಾಡಲಿಕ್ಕೆ ಸಾಕು. ಹಾಗೆ ಮಾಡದಿದ್ದರೆ ನೇರವಾಗಿ ಚಾರ್ಜ್ ಮಾಡಲಿ. ಮಾನ್ಯ ಮುಖ್ಯಮಂತ್ರಿಗಳಿಗೆ ರೆಪ್ರಸೆಂಟೇಷನ್ ಕೊಟ್ಟು ನಮ್ಮಮೇಲೆ ಕಮಿಷನ್ ಎನ್‌ಕ್ವಯರಿ ಮಾಡಿಸಿ. ಏತಕ್ಕೆಂದರೆ ಇಲ್ಲೊಂದು ಮಾತನಾಡುತ್ತೀರಿ ಅಲ್ಲೊಂದು ಮಾತನಾಡುತ್ತೀರಿ. ನಾವು ಕೂಡ ಜವಾಬ್ದಾರಿ ಸ್ಥಾನದಲ್ಲಿ ಬಂದಿದ್ದೇವೆ. ನಾವು ಅಲ್ಲಿ ಕುಳಿತಿದ್ದಾಗ ನೀವು ಇಲ್ಲಿ ಕುಳಿತಿದ್ದಿರಿ. ಆಪಾದನೆ ಮಾಡುವುದಾದರೆ ಮಾಡಿ. ನೇರವಾಗಿ ಸ್ಪಷ್ಟವಾಗಿ ವಿಚಾರಣೆ ಮಾಡಿ. ಬೇಕಾದರೆ ಹೌಸ್ ಕಮಿಟಿ ಮಾಡಿ. ಮಾನ್ಯ ಮುಖ್ಯಮಂತ್ರಿಗಳಿಗೆ ಆ ಅಧಿಕಾರವನ್ನು ಕೊಡುತ್ತೇವೆ. ವಿಚಾರಣೆ ಮಾಡಲಿ. ಬೇಜವಾಬ್ದಾರಿಯಾಗಿ ಸುಮ್ಮನೆ ಮಂತ್ರಿಗಳಾಗಿದ್ದಿರೆಂದು ಆಪಾದನೆ ಮಾಡಿದರೆ ಯಾರೂ ಮಂತ್ರಿಗಳಾಗಿ ಕೆಲಸ ಮಾಡುವುದಕ್ಕೆ ಡಿಫಿಕಲ್ಟ್ ಆಗುತ್ತದೆ. ಆದ್ದರಿಂದ ತಾವು ಯುವಕರಿದ್ದೀರಿ, ದಯವಿಟ್ಟು ಜವಾಬ್ದಾರಿಯಿಂದ ಆಪಾದನೆ ಮಾಡಿ ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಕೇವಲ ಒಂದು ಮಾತು.

ಅಧ್ಯಕ್ಷರು.—ಈಗಾಗಲೇ ಬಹಳ ಗೊಂದಲವಾಗಿದೆ.

ಶ್ರೀ ವಾಟಾಳ್ ನಾಗರಾಜ್.—ನಾನ ಎದ್ದರೆ ಗೊಂದಲವೆಂದು ಅರ್ಥಮಾಡಿಕೊಂಡರೆ ಹೇಗೆ? ಆ ಭಾವನೆ ಇರಬಾರದೆಂದು ನನ್ನ ಪ್ರಾರ್ಥನೆ

ಶ್ರೀ ವಾಟಾಳ್ ನಾಗರಾಜ್.—ಇವರು ಈ ಹಿಂದೆ ಆಡಳಿತದಲ್ಲಿದ್ದರು. ಈಗ ಅವರು ಆಡಳಿತಕ್ಕೆ ಬಂದಿದ್ದಾರೆ. ನಮಗೆ ಎಷ್ಟು ದುರ್ದೈವವಾಗಿದೆ ಎಂದರೆ ಯಾರು ವಿರೋಧ ಪಕ್ಷ, ಯಾರು ಆಡಳಿತ ಪಕ್ಷ ಎಂಬ ಸಂಶಯ ಬಂದಿದೆ. ನಾನೇನು ಗೊಂದಲ ಮಾಡುವುದಕ್ಕೆ ಹೊರಟಿಲ್ಲ. ಮಾತನಾಡುವಾಗ ಪ್ರಾಮಾಣಿಕವಾಗಿ ಮಾತನಾಡಬೇಕು ವೈಯಕ್ತಿಕವಾಗಿ ಮಾತನಾಡಬೇಕೆಂದು ಯಾರಿಗೂ ಇಲ್ಲ. ಇಲ್ಲಿ ವೈಯಕ್ತಿಕವಾಗಿ ಆರೋಪಣೆ ಮಾಡತಕ್ಕ ಪ್ರಶ್ನೆ ಬರುವುದಿಲ್ಲ, ಆದರೆ ಹಿಂದೆ ಇದ್ದಂತಹ ಸರ್ಕಾರದಲ್ಲಿ ಏನೇನು ನಡೆದಿದೆ ಎಂಬುದನ್ನು ಉಲ್ಲೇಖ ಮಾಡಬೇಕಾಗುತ್ತದೆ. ಹಿಂದಿದ್ದ ಸರ್ಕಾರದವರು ಈ ರೀತಿ ಮಾಡಿದ್ದರು ಎಂದು ಹೇಳತಕ್ಕದ್ದು ಕ್ರಮಬದ್ಧ. ಈ ಸಭೆಯಲ್ಲಿ ಅದನ್ನು ಹೇಳಲೇಬೇಕಾಗು ತ್ತದೆ. ಏಕೆಂದರೆ ಇದೇ ಆಡಳಿತ. ವೈಯಕ್ತಿಕ ಆರೋಪಣೆ ಬಗ್ಗೆ ಯಾರೂ ಗಮನ ಕೊಡತಕ್ಕದ್ದು ಅಲ್ಲ.

ಅಧ್ಯಕ್ಷರು.—ಮಾನ್ಯ ಸಿಂಧ್ಯರವರು ಏನು ಮಾನ್ಯ ರಾಜ್ಯಪಾಲರ ಭಾಷಣದ ಆಯ್ದ ಭಾಗವನ್ನು ಓದಿದರು ಅದನ್ನು ಸಂಪೂರ್ಣವಾಗಿ, ಆ ಧೋರಣೆಯನ್ನು ಆ ನಿಲುವನ್ನು ಇಡೀ ಸದನ ಒಪ್ಪುತ್ತದೆ. ಪ್ರಜಾಪ್ರಭುತ್ವದಲ್ಲಿ ವಿರೋಧ ಪಕ್ಷಕ್ಕೆ ಗುರುತರವಾದ ಜವಾಬ್ದಾರಿ ಇದೆ. ಆ ಜವಾಬ್ದಾರಿಯನ್ನು ನಿರ್ವಹಿಸುವುದಕ್ಕೆ ಜನ ಅಣತಿ ಕೊಟ್ಟು ಕಳುಹಿಸಿಕೊಟ್ಟಿದ್ದಾರೆ. ಆದುದರಿಂದ ಆ ಜವಾಬ್ದಾರಿಯನ್ನು ನಿರ್ವಹಿಸಲು ಒತ್ತು ಕೊಡುವುದಕ್ಕೆ ನಾನು ಇಲ್ಲಿ ಕುಳಿತಿದ್ದೇನೆ. ಆದುದರಿಂದ ನಾನು ಮಾನ್ಯ ಸದಸ್ಯರಲ್ಲಿ ಪ್ರಾರ್ಥಿಸುತ್ತೇನೆ, ನೀವು ಭಾಷಣ ಮಾಡತಕ್ಕ ಕಾಲದಲ್ಲಿ ಯಾವುದಾದರೂ ಗುರುತರವಾದ ಆಪಾದನೆ ಗಳನ್ನು ವ್ಯಕ್ತಿಗತವಾಗಿ ಮಾಡುತ್ತಾ, ಲೋಕಾಭಿರಾಮವಾಗಿ ಲೂಟಿ ಹೊಡೆದರು ಎಂದು ಹೆಸರು ಗಳನ್ನು ಹೇಳಿಕೊಂಡು ಮಾತನಾಡುವುದಕ್ಕೆ ಸ್ವಲ್ಪ ವಿದಾಯ ಹೇಳಿ ಇದ್ದುದರಲ್ಲಿ ಬಜೆಟಿಗೆ ಸಂಬಂಧ ಪಟ್ಟ ಹಾಗೆ ಮಾತನಾಡಿದರೆ ನಾವು ಹಣಕಾಸಿನ ಮಂತ್ರಿಗಳಿಗೆ ಸಹಾಯ ಮಾಡಿದಂತಾಗುತ್ತದೆ. ಇದನ್ನು ಮಾನ್ಯ ಸದಸ್ಯರು ಗಮನದಲ್ಲಿಟ್ಟುಕೊಳ್ಳಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ನಾನು ತಮಗೆ ಸಹಾಯ ಮಾಡುವುದಕ್ಕೆ ಒಂದು ಮಾತು ಹೇಳುತ್ತೇನೆ. ಚಂದ್ರೇಗೌಡರ ಮೇಲೆ ಹೇಳಿದೆನೇ ಇಲ್ಲ, ಸಿಂಧ್ಯರವರ ಮೇಲೆ ಹೇಳಿದೆನೇ ಇಲ್ಲ. ತಾವು ಹೇಳಿದ್ದನ್ನು ಕೇಳಿದ್ದೇನೆ. ನಾನು ಹೇಳುವುದನ್ನು ಕೇಳಿ. ಪಾಂಡೆಯವರು ಹೆಚ್. ಯು. ಡಿ. ಮಿನಿಸ್ಟರ್ ಇದ್ದಾಗ ಪತ್ರಿಕೆಗಳಲ್ಲಿ ಸಾಕಷ್ಟು ಬಂತು.

ಅಧ್ಯಕ್ಷರು.—ಪತ್ರಿಕೆಗಳಲ್ಲಿ ಬಂತು ಎಂಬ ಪ್ರಶ್ನೆ ಈಗ ಪ್ರಕೃತ ಅಲ್ಲ, ಅದು ಅಪ್ರಕೃತ. ನೀವು ನಿಮ್ಮದೇ ಆದದ್ದು ಏನಾದರೂ ಇದ್ದರೆ ಅದರೆ ಬಗ್ಗೆ ಭಾಷಣ ಮಾಡಿ. ಅವರು ಬಜೆಟ್ಟನ್ನು ಏನು ಮಂಡಿಸಿಲ್ಲ.

ಶ್ರೀ ಆರ್. ವಿ ದೇಶಪಾಂಡೆ.—ಹೆಚ್. ಯು. ಡಿ. ಮಿನಿಸ್ಟರ್ ಎಂದು ನನ್ನ ಬಗ್ಗೆ ಹೇಳಿದ್ದರಿಂದ ಹೇಳಬೇಕಾಗಿದೆ. ನಾನು ೧೯೭೧ರಿಂದ ರಾಜಕೀಯದಲ್ಲಿದ್ದೇನೆ. ಇಲ್ಲಿಗೆ ೧೯ ವರ್ಷವನ್ನು ರಾಜಕೀಯದಲ್ಲಿ ಕಳೆದಿದ್ದೇನೆ. ಒಂದು ಪತ್ರಿಕೆಯೂ ನನ್ನ ವಿರುದ್ಧ ಬರೆದಿಲ್ಲ. ನಾನು ಹೆಚ್.ಯು ಡಿ, ಮಿನಿಸ್ಟರ್ ಇದ್ದಾಗ ಎನ್. ಆರ್. ಐ. ಬಗ್ಗೆ ಚರ್ಚೆ ನಡೆಯಿತು. ಆದರೆ ದೇಶಪಾಂಡೆ ಬಗ್ಗೆ ಆಪಾದನೆ ಬಂದಿಲ್ಲ. ಸರ್ಕಾರದಿಂದಲೂ ಆಪಾದನೆ ಬಂದಿಲ್ಲ. ನನ್ನ ವಿರುದ್ಧ ಯಾವ ಆಪಾದನೆಯೂ ಇಲ್ಲ. ಒಂದು ವೇಳೆ ಇದ್ದರೆ ಅದರ ಬಗ್ಗೆ ಚರ್ಚೆ ಮಾಡಲಿ, ನಾನು ಒಪ್ಪಿಕೊಳ್ಳುತ್ತೇನೆ.

ಶ್ರೀ ಕೆ. ಶಿವಮೂರ್ತಿ.—ನಮ್ಮ ನಾಯಕರು ಹೇಳಿದರು ತಮ್ಮ ಬಗ್ಗೆ ಸಾಕಷ್ಟು ಇದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ತಮ್ಮ ಬಗ್ಗೆ ಸಾಕಷ್ಟು ಇದೆ ಎಂದು ಆ ಕಡೆ ಬೆಟ್ಟು ಮಾಡಿ ತೋರಿಸಿದರು ನಾನು ಬಜೆಟ್ ಮೇಲೆ ಏನು ಹೇಳದಿದ್ದರೂ ನಮ್ಮ ಹಣಕಾಸಿನ ಮಂತ್ರಿಗಳಿಗೆ ಎಲ್ಲಾ ಗೊತ್ತಿದೆ. ಹಿಂದೆ ದೇಶದ ಜನತೆಗೆ ಯಾರು ತಪ್ಪು ಮಾಡಿದ್ದಾರೆಂಬುದನ್ನು ಹೇಳಲಿ. ಅವರು ಮಾಡಿದ್ದಾರೆಯೋ ಅಥವಾ ಬೇರೆಯವರು ಮಾಡಿದ್ದಾರೆಯೋ ಹೇಳಲಿ. ಯಾರ್‍ಯಾರು ತಪ್ಪಿತಸ್ಥರು ಇದ್ದಾರೆ ಅವರ ಬಗ್ಗೆ ಎನ್‌ಕ್ವೈರಿ ಮಾಡಿಸಿ ಎಂದು ಹೇಳಿದೆನೇ ಹೊರತು ನಾನು ಯಾರ ಬಗ್ಗೆಯೂ ಅಲಿಗೇಷನ್ ಮಾಡಲಿಲ್ಲ. ನಾನೇನು ಸ್ಪೆಷಲ್ ಕೋರ್ಟಿನಲ್ಲಿ ನಿಂತು ಎವಿಡೆನ್ಸ್ ಕೊಡುವುದಿಲ್ಲ. ನಮ್ಮಂಥ ಬಡ ಪಾಪಿಗಳಿಗೆ ಎವಿಡೆನ್ಸ್ ಕೊಡುವುದು ಕಷ್ಟ. ಕೋರ್ಟಿನಲ್ಲಿ ಎವಿಡೆನ್ಸ್ ಕೊಡುವುದು ಬಡ ಪಾಪಿಗಳಿಗೆ ಸಾಧ್ಯವಿಲ್ಲ. ಹಿಂದೆ ಏನಾಯಿತು, ಎಷ್ಟು ಸೋರಿ ಹೋಯಿತು, ಎಷ್ಟು ಕಳ್ಳತನ ಆಯಿತು, ಜಲಗಳ್ಳರು ನೆಲಗಳ್ಳರು ಎಂಬುದನ್ನೆಲ್ಲ ಹೇಳಿದೆ. ಮಾನ್ಯ ಬೈರೇಗೌಡರಿಗೆ ಅದೆಲ್ಲ ಗೊತ್ತು ಈ ಬಗ್ಗೆ ಕೂಲಂಕುಷವಾಗಿ ವಿಚಾರಣೆ ಮಾಡಿ ಶಿಕ್ಷೆ ವಿಧಿಸಬೇಕೆಂದು ಹೇಳಿದೆ. ಇಷ್ಟು ಹೇಳಿ ಬಜೆಟಿಗೆ ಬೆಂಬಲ ವ್ಯಕ್ತಪಡಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಧನ್ಯವಾದಗಳು.

೬-೩೦ ಪಿ. ಎಂ.

† ಶ್ರೀ ವಿ. ಮುನಿಯಪ್ಪ (ಶಿಡ್ಲಘಟ್ಟ).—ಸನ್ಮಾನ್ಯ ಅಧ್ಯಕ್ಷರೆ, ನಾನು ೧೯೯೦-೯೧ನೇ ಸಾಲಿನ ಆಯವ್ಯಯವನ್ನು ಸ್ವಾಗತಿಸುತ್ತೇನೆ, ವಿಶೇಷ ಗಮನ ಹರಿಸಿ ಎಲ್ಲಾ ಕ್ಷೇತ್ರಗಳಿಗೂ ಅನ್ವಯವಾಗುವಂತೆ ಸಮತೋಲನ ಮಾಡಿ ಬಜೆಟ್ ಮಂಡಿಸಿದ ಮಾನ್ಯ ಹಣಕಾಸಿನ ಸಚಿವರನ್ನು ಅಭಿನಂದಿಸಿ ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಹಣಕಾಸಿನ ಸಚಿವರು ವಿಶೇಷವಾಗಿ ರಾಜ್ಯದ ಬಡಜನರಿಗೆ ಹಲವಾರು ಕಾರ್ಯಕ್ರಮಗಳನ್ನು ಕೊಟ್ಟಿದ್ದಾರೆ. ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಪಟ್ಟ ಹಾಗೆ ಹೆಂಡ ಮಾರಾಟ ನಿಷೇಧ ಏನಿದೆ ಅದರಿಂದ ಕಾರ್ಮಿಕರಿಗೆ ಮತ್ತು ಮಹಿಳೆಯರಿಗೆ ನಮ್ಮ ಸರ್ಕಾರಕೊಟ್ಟ ವರಪ್ರಸಾದವಾಗಿದೆ. ಸರ್ಕಾರಕ್ಕೆ ಬರತಕ್ಕ ಹಣವನ್ನೂ ಬಿಟ್ಟು ಇಂಥ ಒಂದು ಕಾರ್ಯಕ್ರಮವನ್ನು ಹಾಕಿ ಬಡಜನರಿಗೋಸ್ಕರ ದೃಢನಿರ್ಧಾರ ತೆಗೆದುಕೊಂಡಿದ್ದಾರೆ, ಇಡೀ ರಾಜ್ಯದಲ್ಲಿ ಎಲ್ಲಾ ಬುದ್ಧಿಜೀವಿಗಳು ನಮ್ಮ ಸರ್ಕಾರದ ಬಗ್ಗೆ ವಿಶೇಷವಾಗಿ ಮೆಚ್ಚುಗೆಯನ್ನು ವ್ಯಕಪಡಿಸುತ್ತಿದ್ದಾರೆ ಮಹಾಸ್ವಾಮಿ. ಹಿಂದಿದ್ದ ಸರ್ಕಾರಗಳು ಅನುತ್ಪಾದಕ ಯೋಜನೆಗಳಿಗೆ ಹೆಚ್ಚಿನ ಒತ್ತನ್ನು ಕೊಟ್ಟು ಉತ್ಪಾದಕ ಯೋಜನಗಳಿಗೆ ಹಣ ಕಡಿಮೆ ಮಾಡಿ ರಾಜ್ಯದ ಜೀವನಾಡಿಯಾದ ವಿದ್ಯುಚ್ಛಕ್ತಿ ಬಗ್ಗೆ ಸಮಯಕ್ಕೆ ಸರಿಯಾಗಿ ಹಣ ಒದಗಿಸದೆ ಟಾರ್ಗೆಟ್ ಏನಿತ್ತು ಅದರ ಬಗ್ಗೆ ಆಸಕ್ತಿ ವಹಿಸದೆ ವಿದ್ಯುತ್ ಸರಬರಾಜು ಕಾರ್ಯದಲ್ಲಿ ಕುಂಠಿತವಾಗಿ ಇಡೀ ರಾಜ್ಯದ ಜನತೆ ತೊಂದರೆಗೆ ಒಳಗಾಗಿತ್ತು. ಹಿಂದಿನ ಸರ್ಕಾರ ನಮ್ಮ ರಾಜ್ಯದಲ್ಲಿ ವಿಶೇಷವಾಗಿ ಉಚಿತ ಬಟ್ಟೆ, ಉಚಿತ ಪುಸ್ತಕ, ತಾಳಿ ಭಾಗ್ಯ, ಸೀರೆ ಪಂಚೆ ಯೋಜನೆಗಳನ್ನು ತಂದು ಅನುತ್ಪಾದಕ ವೆಚ್ಚ ಜಾಸ್ತಿ ಮಾಡಿತ್ತು. ನಮ್ಮ ಸರ್ಕಾರ ವಿಶೇಷ ಗಮನ ಹರಿಸಿ ಯಾರಿಗೆ ಅವಶ್ಯಕತೆ ಇದೆ ಅವರಿಗೆ ಮಾತ್ರ ಸಹಾಯ ಮಾಡಿ ಉಳ್ಳವರಿಗೆ ಮಾಡದೆ ಒಳ್ಳೆಯ ಕ್ರಮ ಕೈಗೊಂಡಿದೆ. ೧೦-೧೫ ವರ್ಷಗಳಿಂದ ಇದ್ದಂಥ ಸ್ಟೈಫಂಡರಿ ಗ್ರಾಜುಯೇಟ್‌ಗಳು ಸರ್ವೀಸ್ ಸೌಲಭ್ಯ ಇಲ್ಲದೆ ದುಡಿಯುತ್ತಿದ್ದರು ಅಂಥ ಜನರಿಗೆ ಸರ್ವೀಸ್ ರೆಗ್ಯುಲರೈಸ್ ಮಾಡಿ ನಮ್ಮ ಸರ್ಕಾರ ಜೀವದಾನ ಕೊಟ್ಟಿದೆ. ಇದಕ್ಕಾಗಿ ನಿಜವಾಗಿ ನಮ್ಮ ಸರ್ಕಾರವನ್ನು ಹೃತ್ಪೂರ್ವಕವಾಗಿ ಅಭಿನಂದಿಸು

ತ್ತೇನೆ. ವಿಶೇಷವಾಗಿ ಒಂದು ಸೂಚನೆಯನ್ನು ಆಯವ್ಯಯ ಪತ್ರದಲ್ಲಿ ಹೇಳಿದ್ದಾರೆ. ಸರ್ಕಾರಿ ಅಧಿಕಾರಿಗಳ ನಿವೃತ್ತಿ ವಯಸ್ಸನ್ನು ೫೮ ರಿಂದ ೫೫ಕ್ಕೆ ಇಳಿಸುವ ಬಗ್ಗೆ ಸೂಚನೆ ಕೊಟ್ಟಿದ್ದಾರೆ. ನಾನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ದಿಟ್ಟವಾದ ಹೆಜ್ಜೆಯನ್ನಿಟ್ಟುಕೊಂಡು ನಿವೃತ್ತಿ ವಯಸ್ಸನ್ನು ೫೫ಕ್ಕೆ ಇಳಿಸಿ ರಾಜ್ಯದಲ್ಲಿರತಕ್ಕ ಯುವಕ ನಿರುದ್ಯೋಗಿಗಳಿಗೆ ಆಶಾಕಿರಣವಾಗಿ ಮುಂದೆ ಬರಬೇಕು ಮತ್ತು ಕೂಡಲೇ ಇದನ್ನು ಕಾರ್ಯಗತಗೊಳಿಸಬೇಕೆಂದು ಕಳಕಳಿಯಿಂದ ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ನಮ್ಮ ರಾಜ್ಯದ ಆಯವ್ಯಯ ಒಳ್ಳೆಯ ಪ್ರಗತಿಯ ದಿಕ್ಕಿನತ್ತ ಕೊಂಡೊಯ್ಯುವ ಹೆಚ್ಚಿನ ಅಂಶಗಳನ್ನು ಒಳಗೊಂಡಿದೆ. ಸರ್ಕಾರ ಮಾಡತಕ್ಕ ಯೋಜನೆಗಳಿಗೆ ಸರಿಯಾದ ಹಣವನ್ನು ನಿಗದಿ ಮಾಡಿ ನಿಗದಿತ ಅವಧಿಯೊಳಗೆ ಮುಗಿಸಲು ಅವಕಾಶ ಮಾಡಿಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದಿನ ಸರ್ಕಾರ ನಾನಾ ಯೋಜನೆಗಳನ್ನು ಕಾಗದದ ಮೇಲೆ ತೋರಿಸಿ ಅದನ್ನು ಕಾರ್ಯಗತ ಮಾಡದಿದ್ದುದರಿಂದ ಜನತೆ ಹೋದ ಚುನಾವಣೆಯಲ್ಲಿ ಉತ್ತರ ನೀಡಿದ್ದಾರೆ. ಈಗಿನ ಸರ್ಕಾರ ಜನತೆಯ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಮತ್ತು ಉತ್ಪಾದಕ ವೆಚ್ಚದ ಕಡೆ ಆಸಕ್ತಿ ವಹಿಸಿ ಜನತೆಯ ಮೆಚ್ಚುಗೆಗೆ ಪ್ರಶಂಸೆಗೆ ಒಳಗಾಗಿದೆ. ವಿಶೇಷವಾಗಿ ಸಮಗ್ರ ಗ್ರಾಮೀಣಾಭಿವೃದ್ಧಿ, ನೀರಾವರಿ ವಿಸ್ತರಣೆ, ವಿದ್ಯುಚ್ಛಕ್ತಿ ಉತ್ಪಾದನೆಗೆ ಒತ್ತು ನೀಡಿರುವುದು ಸ್ವಾಗತಾರ್ಹವಾದುದು. ರಾಜ್ಯದ ಗ್ರಾಮೀಣ ಪ್ರದೇಶದ ಸರ್ವಾಂಗೀಣ ಪ್ರಗತಿಗೆ ನಮ್ಮ ಸರ್ಕಾರ ದಿಟ್ಟ ಹೆಜ್ಜೆಯನ್ನು ಇಟ್ಟಿದೆ ಮಹಾಸ್ವಾಮಿ. ಹಾಗೂ ಈ ವಿಚಾರದಲ್ಲಿ ಸರ್ಕಾರ ಒಂದು ವಿಶೇಷ ಗಮನ ಹರಿಸಿ ಹಣಕಾಸಿನ ಸಮಸ್ಯೆ ನಮ್ಮ ರಾಜ್ಯದಲ್ಲಿ ಏನಿದೆ ಅದರ ಬಗ್ಗೆ ಅಧ್ಯಯನ ಮಾಡಲು ವಿಶೇಷವಾದ ಸಮಿತಿಯನ್ನು ರಚಿಸಿ ಆ ಸಮಿತಿ ಮುಖಾಂತರ ರಾಜ್ಯದ ಆಗುಹೋಗುಗಳ ಬಗ್ಗೆ ಚರ್ಚೆ ಮಾಡಿ ಸಮಿತಿ ಕೊಡತಕ್ಕ ವರದಿಯ ಆಧಾರದ ಮೇಲೆ ಸರ್ಕಾರ ತೀರ್ಮಾನ ತೆಗೆದುಕೊಳ್ಳತಕ್ಕ ಸೂಚನೆ ಆಯವ್ಯಯ ಮಂಡನೆಯಲ್ಲಿದೆ. ಹಣಕಾಸಿನ ಸಮಸ್ಯೆ ಬಗ್ಗೆ ಚರ್ಚೆ ಮಾಡುವ ಸಮಯದಲ್ಲಿ ಸರ್ಕಾರಕ್ಕೆ ನನ್ನ ಕಳಕಳಿ ಏನೆಂದರೆ ಗ್ರಾಮಾಂತರ ಪ್ರದೇಶದ ನೈಜ ಚಿತ್ರವನ್ನು ತಿಳಿದಿರುವಂತಹ. ಗ್ರಾಮಾಂತರ ಪ್ರದೇಶದ ರೈತರ ಸಮಸ್ಯೆ ತಿಳಿದಿರುವಂತಹ, ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡಿರುವ ಅಧಿಕಾರಿಗಳು ಯಾರಿದ್ದಾರೆ ಅಂತಹವರನ್ನು ಈ ಹಣಕಾಸಿನ ಸಮಿತಿಯಲ್ಲಿ ಹಾಕಿ ರಚನೆ ಮಾಡಿದರೆ ಒಳ್ಳೆಯದಾಗುತ್ತದೆಂದು ಹೇಳುತ್ತೇನೆ. ಈ ಸಮಿತಿ ಮಾಡಿರುವ ಬಗ್ಗೆ ನಮ್ಮ ಕ್ಷೇತ್ರದ ಜನರ ಪರವಾಗಿ ಸರ್ಕಾರವನ್ನು ಖಂಡಿತಾ ಅಭಿನಂದಿಸುತ್ತೇನೆ ಇವೊತ್ತು ಈ ಆಯವ್ಯಯವನ್ನು ನೋಡುವಾಗ ನಮ್ಮ ಗ್ರಾಮಾಂತರ ಪ್ರದೇಶದಲ್ಲಿನ ರೇಷ್ಮೆ ಬೆಳೆಗಾರರು ನೂಲು ಬಿಚ್ಚುವವರು, ಮಧ್ಯಮವರ್ಗದ ಜನರು ಯಾರು ಇದ್ದಾರೆ ಅವರ ಬಗ್ಗೆ ಸ್ವಲ್ಪ ಯೋಚನೆ ಮಾಡುವ ಪರಿಸ್ಥಿತಿ ಬಂದಿದೆ. ಈ ವಿಚಾರವನ್ನು ಸೂಕ್ಷ್ಮವಾಗಿ ತಮ್ಮ ಗಮನಕ್ಕೆ ತರುತ್ತೇನೆ. ಇವತ್ತು ರೇಷ್ಮೆ ಉದ್ಯಮ ನಮ್ಮ ರಾಜ್ಯದಲ್ಲಿ ಬಹಳ ದೊಡ್ಡ ಉದ್ಯಮ. ನಮ್ಮ ರಾಜ್ಯದಲ್ಲಿ ಸುಮಾರು ೧೦ ಲಕ್ಷ ಜನ ರೇಷ್ಮೆ ಬೆಳೆಗಾರರಿದ್ದಾರೆ. ಹಾಗೂ ೧೨ ರಿಂದ ೧೫ ಸಾವಿರ ಜನ ರೇಷ್ಮೆ ನೂಲು ಬಿಚ್ಚುವವರು ಇದ್ದಾರೆ. ಹಾಗೂ ಈ ರೇಷ್ಮೆ ಉದ್ಯಮಿಯಲ್ಲಿ ಸುಮಾರು ೫೦ ರಿಂದ ೬೦ ಲಕ್ಷ ಜನರು ಪರೋಕ್ಷವಾಗಿ ತಮ್ಮನ್ನೇ ತಾವು ತೊಡಗಿಸಿಕೊಂಡು ಕೆಲಸ ಮಾಡುತ್ತಿದ್ದಾರೆ. ಇಂತಹ ಉದ್ಯಮದಲ್ಲಿ ಬೇರೆ ಕಾರ್ಮಿಕ ಜನರೂ ತಮ್ಮ ಕೆಲಸವನ್ನು ತೊಡಗಿಸಿಕೊಂಡಿರುವಾಗ ಸರ್ಕಾರ ಈ ಉದ್ಯಮದ ಮೇಲೆ ಸ್ವಲ್ಪ ಟ್ಯಾಕ್ಸ್ ಹಾಕಿರುವುದನ್ನು ನೋಡಿದೆ. ಇದರಿಂದ ಗ್ರಾಮಾಂತರ ರೈತವರ್ಗದ ಬಡ ಜನರಿಗೆ, ನೂಲನ್ನು ಬಿಚ್ಚುವವರಿಗೆ ಹೆಚ್ಚಿನ ಹೊರೆಯಾಗುತ್ತದೆ. ಆದ್ದರಿಂದ ಈ ಟ್ಯಾಕ್ಸ್ ವಿಷಯದಲ್ಲಿ ಸರ್ಕಾರದ ಪುನರ್ ಪರಿಶೀಲನೆ ಅಗತ್ಯ ಎಂದು ನಾನು ಹೇಳುತ್ತೇನೆ. ಇವತ್ತು ಈ ಹಂತದ ಟ್ಯಾಕ್ಸ್‌ನ್ನು ರದ್ದು ಮಾಡಬೇಕೆಂದು ಹೇಳುತ್ತೇನೆ. ಬಟ್ಟೆ ಮಾರಾಟ ಮಾಡುವ ಹಂತದಲ್ಲಿ ಇವತ್ತು ಟ್ಯಾಕ್ಸ್ ಇದ್ದು ಈ ಹಂತದಲ್ಲಿ ಟ್ಯಾಕ್ಸ್ ಬೇಡ ಎಂದು ನನ್ನ ವಾದ. ಬಟ್ಟೆ ಮೇಲೆ ಟರ್ನ್ ಓವರ್ ಟ್ಯಾಕ್ಸ್ ಕೂಡಾ ಇರುವುದರಿಂದ ಕಚ್ಚಾ ರೇಷ್ಮೆ ಮೇಲೆ ಮಧ್ಯದಲ್ಲಿ ಏನು ಟ್ಯಾಕ್ಸ್ ಹಾಕಿದ್ದೀರಿ ಅದನ್ನು ಕೈಬಿಡಬೇಕೆಂದು ಹೇಳುತ್ತೇನೆ. ರೇಷ್ಮೆಯ ಮೂಲ ಉತ್ಪಾದಕನ ಕಷ್ಟ ಹೇಳತೀರದು. ರೇಷ್ಮೆಯ ಗೂಡನ್ನು ತೆಗೆದುಕೊಂಡು ಹೋದಾಗ ನೂಲು ಬಿಚ್ಚುವವನ ಜೊತೆ ಮೊದಲೇ ಅಡ್ಜಸ್ಟ್ ಮಾಡಿಕೊಂಡು ಆಕ್ಷನ್ ಕರೆಯಲಾಗುತ್ತಿದೆ. ಇಂತಹ ಶೋಷಣೆ ಕೇಳುವವರು ಯಾರು? ಸರ್ಕಾರ ಮೂಲ ಉತ್ಪಾದಕನ ರಕ್ಷಣೆಗೆ ಬರಬೇಕೆಂದು ಹೇಳುತ್ತೇನೆ. ಮತ್ತೆ ಹಿಂದಿನ ಸರ್ಕಾರದಲ್ಲಿ ಟ್ರಾಕ್ಟರ್‌ಗಳ ಮೇಲಿನ ಟ್ಯಾಕ್ಸ್ ಬಗ್ಗೆ ಯಾರು ಬೋನೋಫೈಡ್ ಅಗ್ರಿಕಲ್ಚರ್ ಸರ್ಟಿಫಿಕೇಟ್ ಕೊಡುತ್ತಾರೆ ಅವರಿಗೆ ಪೂರ್ಣ ಟ್ಯಾಕ್ಸ್ ಮನ್ನಾ ಮಾಡಲಾಗುತ್ತಿತ್ತು. ಅಗ್ರಿಕಲ್ಚರ್ ಸರ್ಟಿಫಿಕೇಟ್ ಇಲ್ಲದ ಇತರೆ ಟ್ರಾಕ್ಟರ್‌ಗಳಿಗೆ ಲಿಮಿಟೆಡ್ ಟ್ಯಾಕ್ಸ್ ಹಾಕುವ ಪದ್ಧತಿ ಇತ್ತು. ಆದರೆ ಈಗ ಸಾರಾಸಗಟು ಎಲ್ಲಾ ಟ್ರಾಕ್ಟರ್ ಹಾಗೂ ಟ್ರೇಲರ್ಸ್ ಮೇಲೆ ಪ್ರತ್ಯೇಕವಾಗಿ ಲೈಫ್ ಟ್ಯಾಕ್ಸ್ ವ್ಯವಸ್ಥೆ ಜಾರಿಗೆ ತಂದಿದ್ದೀರಿ. ದಯಮಾಡಿ ಇದನ್ನು ಓವರ್ ಲುಕ್ ಮಾಡಿ ರೈತರ ರಕ್ಷಣೆಗೆ ಬರಬೇಕೆಂದು ನಾನು ಹೇಳುತ್ತೇನೆ. ನಾನು ಇನ್ನು ಹೆಚ್ಚಿನ ಅಮೂಲ್ಯವಾದ ವೇಳೆಯನ್ನು ತೆಗೆದುಕೊಳ್ಳು

ವುದಕ್ಕೆ ಇಷ್ಟಪಡುವುದಿಲ್ಲ. ಒಂದೆರಡು ವಿಷಯಗಳನ್ನು ಮಾತ್ರ ಸರ್ಕಾರದ ಗಮನಕ್ಕೆ ತರುತ್ತೇನೆ. ಹಿಂದಿನ ಸರ್ಕಾರದಲ್ಲಿ ಏನು ಹಸಿರು ಕಾರ್ಡ್, ಫುಡ್‌ಗ್ರೈನ್ಸ್ ಮೇಲೆ ಸಬ್ಸಿಡಿ ಕೊಡುವ ಯೋಜನೆಯನ್ನು ತರಲಾಗಿತ್ತು, ಆ ಪ್ರಕಾರ ಆ ವರ್ಷದಲ್ಲಿ ಏನು ಸಬ್ಸಿಡಿ ನಿಗದಿ ಮಾಡಲಾಗಿದ್ದು ಅದನ್ನು ಬಿಡುಗಡೆ ಮಾಡದೇ ಇವತ್ತಿನದಿವಸ ತಾಲ್ಲೂಕು ಮಟ್ಟದಲ್ಲಿರುವ ವ್ಯವಸಾಯ ಉತ್ಪನ್ನ ಮಾರಾಟ ಸಹಕಾರ ಸಂಘಗಳು ಸಂಪೂರ್ಣವಾಗಿ ಸ್ಥಗಿತವಾಗಿವೆ. ಈ ಸಹಕಾರ ಸಂಘಗಳ ಮೂಲ ಉದ್ದೇಶ ಏನು ಇಟ್ಟುಕೊಂಡು ಪ್ರಾರಂಭವಾದವು ಆ ಕೆಲಸ ಮಾಡಲು ಆಗುತ್ತಿಲ್ಲ. ರೈತರಿಗೆ ಬೇಕಾಗತಕ್ಕ ರಾಸಾಯನಿಕ ಗೊಬ್ಬರ, ಔಷಧಿಗಳು, ಕೃಷಿ ಉಪಕರಣಗಳನ್ನು ದಾಸ್ತಾನು ಮಾಡಿ ಸಮಯಕ್ಕೆ ಸರಿಯಾಗಿ ಒದಗಿಸಬೇಕೆಂದು ಏನು ಗುರಿಯನ್ನು ಇಟ್ಟುಕೊಂಡು ಕೆಲಸ ಮಾಡುತ್ತಿದ್ದ ಸಂಘಗಳು ಈ ಸಬ್ಸಿಡಿ ವಿತರಣಾ ವ್ಯವಸ್ಥೆಯಲ್ಲಿ ಸಿಕ್ಕಿಹಾಕಿಕೊಂಡು ನರಳುತ್ತಿವೆ. ಇದಕ್ಕೆ ಕಾರಣ ಇಷ್ಟೇ ಸರ್ಕಾರದಿಂದ ಪ್ರತಿಯೊಂದು ತಾಲ್ಲೂಕು ಮಟ್ಟದ ಸಹಕಾರ ಸಂಘಗಳಿಗೂ ೮ ರಿಂದ ೧೦ ಲಕ್ಷ ರೂಪಾಯಿ ಸಬ್ಸಿಡಿ ಹಣ ಹೋಗಬೇಕಾಗಿದೆ.

ಸಹಕಾರ ಸಂಘಗಳಲ್ಲಿ ಏತಕ್ಕೆ ಗೊಬ್ಬರ ದಾಸ್ತಾನು ಮಾಡುವುದಿಲ್ಲ ಅಂದರೆ ಸಹಕಾರ ಸಂಘಗಳಲ್ಲಿ ಹಣವಿಲ್ಲ. ಸರ್ಕಾರದಿಂದ ಬರಬೇಕಾದ ಹಣ ಬರಲಿಲ್ಲ. ಸಹಕಾರ ಸಂಘಗಳಲ್ಲಿದ್ದ ಬಂಡವಾಳದಲ್ಲಿ ಫುಡ್‌ಗ್ರೈನ್ಸ್ ತರಲಾಗಿದೆ. ಬ್ಯಾಂಕುಗಳಿಂದ ಸಾಲ ತಂದು ಆಹಾರ ಧಾನ್ಯಗಳನ್ನು ವಿತರಣೆ ಮಾಡುವುದಕ್ಕೆ ಆಗುವುದಿಲ್ಲ. ರಾಸಾಯನಿಕ ಗೊಬ್ಬರ ಮತ್ತು ರೈತನಿಗೆ ಬೇಕಾದ ಉಪಕರಣಗಳನ್ನು ದಾಸ್ತಾನು ಮಾಡುವುದು ಕಷ್ಟವಾಗಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಹಿಂದಿನ ಸರ್ಕಾರದವರು ರೈತರ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಿದರು. ವಿಫಲ ಬಾವಿಗಳಿಗೆ ಹಣವನ್ನು ಮಂಜೂರು ಮಾಡಿದರು. ಆ ಹಣವನ್ನು ಅದೇ ವರ್ಷದಲ್ಲಿ ಆಯವ್ಯಯದಲ್ಲಿ ನಿಗದಿ ಮಾಡಿ ಯಾವಾಗ ಮಂಜೂರು ಮಾಡಲಾಯಿತೋ ಆ ತಕ್ಷಣ ಹಣವನ್ನು ಬಿಡುಗಡೆ ಮಾಡಬೇಕಾಗಿತ್ತು ಆ ಎಲ್ಲಾ ಹೊರೆ ಈಗಿನ ಸರ್ಕಾರದ ಮೇಲೆ ಬಿದ್ದಿದೆ. ಇಂತಹ ಸಂದರ್ಭದಲ್ಲಿ ಇತ್ತೀಚೆಗೆ ನಾನು ಪಿ.ಎಲ್.ಡಿ. ಬ್ಯಾಂಕ್‌ಗೆ ಹೋದಾಗ ಗೊತ್ತಾಯಿತು. ಪಿ.ಎಲ್.ಡಿ. ಬ್ಯಾಂಕಿನಲ್ಲಿ ಸಹ ಸರ್ಕಾರದಿಂದ ಬರಬೇಕಾದ ಹಣ ಬಂದಿಲ್ಲ. ಸ್ಟೇಟ್ ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿನ ಅಧ್ಯಕ್ಷರು ಸುಮಾರು ೯೦ ಕೋಟಿ ರೂಪಾಯಿ ಹಣ ಹಿಂದಿನ ಸರ್ಕಾರ ಕೊಟ್ಟಿದ್ದು, ಬಡ್ಡಿ ರಿಯಾಯಿತಿ ಏನು ಮಾಡಿತ್ತು ಅದು ಲ್ಯಾಂಡ್ ಡೆವಲಪ್‌ಮೆಂಟ್ ಬ್ಯಾಂಕಿಗೆ ಬಾಕಿ ಬರಬೇಕು, ಅದು ಬರದಿದ್ದರೆ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳಿಗೆ ಹಣವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಈ ವಿಚಾರವನ್ನು ರಾಜ್ಯ ಭೂ ಅಭಿವೃದ್ಧಿ ಬ್ಯಾಂಕಿನ ಅಧ್ಯಕ್ಷರು ನಾನು ನಮ್ಮ ತಾಲ್ಲೂಕಿನ ಸಮಸ್ಯೆಗಳ ಬಗ್ಗೆ ಕುರಿತು ಚರ್ಚೆ ಮಾಡಲಿಕ್ಕೆ ಹೋದಾಗ ಅವರು ನಮಗೆ ತಿಳಿಸಿದರು. ಇಂತಹ ಪರಿಸ್ಥಿತಿಯಲ್ಲಿ ನಾವೇನು ಬಜೆಟ್ ಮಾಡುತ್ತೇವೆ, ಆಗ ಮುಂದೆ ಏನು ಹೊಸ ಸ್ಕೀಮ್‌ಗಳನ್ನು ಇಂಟರ್‌ಡ್ಯೂಸ್ ಮಾಡುತ್ತೇವೆ ಅದಕ್ಕೆ ತಕ್ಕಂತೆ ಹಣವನ್ನು ಸಹ ನಿಗದಿ ಮಾಡಬೇಕು. ಈ ಸ್ಕೀಮ್‌ಗಳಿಗೆ ಎಷ್ಟು ಹಣ ಬೇಕಾಗಿದೆ ಅಷ್ಟನ್ನು ಬಿಡುಗಡೆ ಮಾಡಿ ಆ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತರುವಂತಹ ವ್ಯವಸ್ಥೆಯಾಗಬೇಕು. ಅದು ಆದರೆ ನಮ್ಮ ರಾಜ್ಯದ ಅಭಿವೃದ್ಧಿಯಾಗುತ್ತದೆ. ಇವತ್ತು ನಮ್ಮ ರಾಜ್ಯದಲ್ಲಿ ಹಲವಾರು ಕೊರತೆಗಳಿಗೆ. ತಾವೇನು ಬಜೆಟ್ ಮಾಡಿದ್ದೀರಿ ಅದರಲ್ಲಿ ಹೆಚ್ಚಾಗಿ ಉತ್ಪಾದನಾ ವಸ್ತುಗಳಿಗೆ. ಉತ್ಪಾದನಾ ಕಾರ್ಯಕ್ರಮಗಳಿಗೆ ತಾವು ಒತ್ತು ನೀಡಿದ್ದೀರಿ. ತಾವೇನು ಗುರಿ ಇಟ್ಟಿದ್ದೀರಿ ಅದಕ್ಕೆ ದೊರೆಯಬೇಕಾದ ಹಣವನ್ನು ನಿಗದಿ ಮಾಡಿದ್ದೀರಿ. ಆ ಗುರಿಯ ಒಳಗಡೆ ನಾವು ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೆಂದು ನಾನು ನಂಬಿಕೊಂಡಿದ್ದೇನೆ. ಈ ವರ್ಷ ನಮ್ಮ ಸರ್ಕಾರ ಅದನ್ನು ಮಾಡುತ್ತದೆಂದು ನಾನು ತಿಳಿದುಕೊಂಡಿದ್ದೇನೆ. ನಮ್ಮ ಜಿಲ್ಲೆಯಾದ ಕೋಲಾರದ ಬಗ್ಗೆ ತಮಗೆ ಒಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇಡೀ ರಾಜ್ಯದಲ್ಲಿ ಕೋಲಾರ ಜಿಲ್ಲೆ ಬಹಳ ಹಿಂದುಳಿದಿರತಕ್ಕ ಜಿಲ್ಲೆಯೆಂದು ಬೇರೆ ಮಾತು ಹೇಳಬೇಕಾಗಿಲ್ಲ. ಇಡೀ ರಾಜ್ಯದಲ್ಲಿ ನಮ್ಮ ಜಿಲ್ಲೆ ಸಂಪೂರ್ಣವಾಗಿ ಮಳೆಯ ಆಶ್ರಯದಲ್ಲಿ ಮುಂದುವರಿಯಬೇಕಾಗಿದೆ. ಕೊಳವೆಬಾವಿಗಳ ನೀರಿನ ಆಶ್ರಯದಲ್ಲಿ ನೀರನ್ನು ಮೇಲೆ ತೆಗೆದು ವ್ಯವಸಾಯ ಮಾಡಿ ಜೀವನ ಮಾಡುತ್ತಿದ್ದೇವೆ. ನಮ್ಮ ಜಿಲ್ಲೆಯ ರೈತರ ಪರಿಸ್ಥಿತಿ ಬಹಳ ದುಸ್ತರವಾಗಿದೆ ಇದಕ್ಕೆ ಕಾರಣ ಇಷ್ಟೆ. ನಮ್ಮ ಜೀವನಾಡಿ, ರೈತರ ಜೀವನಾಡಿ ಮಾನವನ ಜೀವನಾಡಿ ವಿದ್ಯುಚ್ಛಕ್ತಿ. ವಿದ್ಯುಚ್ಛಕ್ತಿಯಿಂದ ನಾವು ಬದುಕಬೇಕಾಗಿದೆ. ವಿದ್ಯುಚ್ಛಕ್ತಿ ಇಲ್ಲದಿದ್ದರೆ ಸಂಪೂರ್ಣವಾಗಿ ಎಲ್ಲಾ ಹಾಳಾಗುತ್ತದೆ. ವಿದ್ಯುಚ್ಛಕ್ತಿ ಇಲ್ಲದಿದ್ದರೆ ಮನುಷ್ಯನ ಜೀವನವೇ ಇಲ್ಲ. ಅಂತಹ ಪರಿಸ್ಥಿತಿ ಬಂದು ಒದಗಿದೆ. ಅಂತಹ ಪರಿಸ್ಥಿತಿ ನಮ್ಮ ಕೋಲಾರ ಜಿಲ್ಲೆಯಲ್ಲಿದೆ. ನಾನು ನಮ್ಮ ಸರ್ಕಾರವನ್ನು ಕಳಕಳಿಯಿಂದ ಪ್ರಾರ್ಥಿಸಿಕೊಳ್ಳುವುದೇನೆಂದರೆ ವಿಶೇಷವಾಗಿ ನಮ್ಮ ಕೋಲಾರ ಜಿಲ್ಲೆಗೆ ಹೆಚ್ಚಿನ ಒತ್ತು ನೀಡಿ, ವಿಶೇಷವಾದ ಕಾರ್ಯಕ್ರಮಗಳನ್ನು ನೀಡುವಂತಹ

ಯಾವುದಾದರೂ ಒಂದು ಯೋಜನೆಯನ್ನು ಕೊಟ್ಟು ನಮ್ಮ ಜಿಲ್ಲೆಯನ್ನು, ರೈತರನ್ನು ರಕ್ಷಣೆ ಮಾಡ ಬೇಕೆಂದು ಸರ್ಕಾರದಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಂಡು ನಾನು ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು.—ದಿನಾಂಕ ೨೧-೩-೧೯೯೦ರಂದು ಸದನದಲ್ಲಿ ತಿಳಿಸಿದಂತೆ ಹೊಸದಾಗಿ ರಚಿತವಾಗಿರುವ ಕರ್ನಾಟಕ ವಿಧಾನಸಭೆಯ ನಿಯಮಾವಳಿಗಳ ಸಮಿತಿಗೆ ಈ ಕೆಳಕಂಡ ಸದಸ್ಯರನ್ನು ನಾಮನಿರ್ದೇಶನ ಮಾಡಿರುತ್ತೇನೆ.

೧. ಶ್ರೀ ಎಂ. ವೀರಪ್ಪಮೊಯಿಲಿ	ಕಾನೂನು ಮತ್ತು ಸಂಸದೀಯ ವ್ಯವಹಾರ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯ ಮಂತ್ರಿಗಳು.
೨. ಶ್ರೀ ಡಿ. ಬಿ. ಚಂದ್ರೇಗೌಡ	ವಿರೋಧ ಪಕ್ಷದ ನಾಯಕರು
೩. ಶ್ರೀ ಬಿ. ಎಸ್. ಯಡಿಯೂರಪ್ಪ	ಭಾರತೀಯ ಜನತಾಪಕ್ಷದ ಅಧ್ಯಕ್ಷರು ಮತ್ತು ಶಾಸಕರು
೪. ಶ್ರೀ ಸಿ. ಭೈರೇಗೌಡ	ಶಾಸಕರು
೫. ಶ್ರೀ ಮಲ್ಲಾರಗೌಡ ಎಸ್, ಪಾಟೀಲ್	ಸರ್ಕಾರಿ ಮುಖ್ಯ ಸಚೇತಕರು, ವಿಧಾನಸಭೆ
೬. ಶ್ರೀ ಎಂ. ವಿ. ವೆಂಕಟಪ್ಪ	ಶಾಸಕರು
೭. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ	ಶಾಸಕರು

ಬಿಸಿನೆಸ್ ಅಡ್ವೈಸರಿ ಕಮಿಟಿ ಮೀಟಿಂಗ್ ನಡೆದಾಗ, ನಾಳೆ ಆಯವ್ಯಯದ ಮೇಲಿನ ಚರ್ಚೆ ಮುಕ್ತಾಯವಾಗಬೇಕು, ನಾಳೆಯೇ ಹಣಕಾಸಿನ ಸಚಿವರು ಆಯವ್ಯಯ ಚರ್ಚೆಗೆ ಅವರು ಉತ್ತರ ಕೊಡಬೇಕೆಂದು ತೀರ್ಮಾನವಾಗಿತ್ತು. ಆದರೆ ನನ್ನ ಲಿಸ್ಟ್‌ನ ಪ್ರಕಾರ ಬಹಳ ಜನ ಮಾನ್ಯ ಸದಸ್ಯರು ಈ ಚರ್ಚೆಯಲ್ಲಿ ಭಾಗವಹಿಸುವ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಸದನ ಒಪ್ಪುವುದಾದರೆ ನಾಳೆ ಬೆಳಿಗ್ಗೆ ನಾವು ಸಮಾವೇಶಗೊಂಡು ನಾಳೆ ಮಧ್ಯಾಹ್ನದವರೆಗೆ ಈ ಚರ್ಚೆಯಲ್ಲಿ ಎಷ್ಟು ಜನ ಮಾನ್ಯ ಸದಸ್ಯರು ಭಾಗವಹಿಸುವುದಕ್ಕೆ ಸಾಧ್ಯವಾಗುತ್ತದೆ ಅವರಿಗೆ ಅನುವು ಮಾಡಿಕೊಟ್ಟು ಅನಂತರ ಮಾನ್ಯ ಹಣಕಾಸಿನ ಸಚಿವರು ೨೮ನೇ ತಾರೀಖು ಚರ್ಚೆಗೆ ಉತ್ತರ ಕೊಡುವುದಕ್ಕೆ ಸಭೆ ಒಪ್ಪುವುದಾದರೆ ಆಗ ಬಹುದು.

(ಮಾನ್ಯ ಸದಸ್ಯರೆಲ್ಲರೂ ಆಗಬಹುದೆಂದು ತಮ್ಮ ಒಪ್ಪಿಗೆ ಸೂಚಿಸಿದರು)

† ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ).—ಕರ್ನಾಟಕ ಪವರ್ ಕಾರ್ಪೋರೇಷನ್ನಿನ ಗ್ರಾಜುಯೇಟ್ ಇಂಜಿನಿಯರುಗಳು ೨೬ನೇ ತಾರೀಖು ಮುಷ್ಕರ ಹೂಡುವ ಬಗ್ಗೆ ಅಲ್ಲಿಯ ಮ್ಯಾನೇಜಿಂಗ್ ಡೈರೆಕ್ಟರ್ ಅವರು ಒಂದು ಸ್ಟೇಟ್‌ಮೆಂಟನ್ನು ಕೊಡಿದ್ದಾರೆ. Essencial Serviceses Act ನ್ನು revoke ಮಾಡಿ ಅದರ ಪ್ರಕಾರ ಸ್ಟ್ರೈಕ್ ಅನ್ನು ಬ್ಯಾನ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಜೊತೆಗೆ ಅವರು ಹೇಳಿದ್ದಾರೆ, ಈ ಮುಷ್ಕರ ನಡೆಯುವುದರಿಂದ ದಿವಸಕ್ಕೆ ಒಂದು ಕೋಟಿ ಮತ್ತು ಕೈಗಾರಿಕಾ ಕ್ಷೇತ್ರದಲ್ಲಿ ೧೧ ಕೋಟಿ ಒಟ್ಟು ೧೨ ಕೋಟಿ ರೂಪಾಯಿ ರಾಜ್ಯದ exchequer ಮೇಲೆ ಪ್ರತಿದಿನ ಬರ್ಡನ್ ಇದೆ. ಇದರ ಸಂಬಂಧದಲ್ಲಿ ಅವರು ಸ್ಟ್ರೈಕ್ ಬ್ಯಾನ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಮಾನ್ಯ ಮಂತ್ರಿಗಳು ಬೆಳಿಗ್ಗೆ ಇದರ ಬಗ್ಗೆ ಒಂದು ಹೇಳಿಕೆಯನ್ನು ಕೊಡುವುದಾಗಿ ಹೇಳಿದ್ದರು, ತಾವು ಕೂಡ ಅದನ್ನು ಒಪ್ಪಿ ಕೊಂಡಿದ್ದೀರಿ. ಮಾನ್ಯ ಸಚಿವರು ಹೇಳಿಕೆ ಕೊಡುವುದಕ್ಕೆ ತಯಾರಿದ್ದಾರೆ, ತಾವು ಅದಕ್ಕೆ ಅವಕಾಶ ಕೊಡಬೇಕೆಂದು ಕೋರುತ್ತೇನೆ.

ಶ್ರೀ ವಾಟಾಳ್ ನಾಗರಾಜ್.—ಇದರ ಜೊತೆಗೆ ಅವರು ೨೪ನೇ ತಾರೀಖಿನಿಂದ ಮುಷ್ಕರ ಹೋಗು ವುದಾಗಿ ಏನು ಸೂಚನೆಯನ್ನು ಕೊಟ್ಟಿದ್ದಾರೆ. ಈ ಚಳುವಳಿಯ ಕರೆಯಿಂದ ೨೪ನೇ ತಾರೀಖಿನ ದಿವಸ ಇಡೀ ರಾಜ್ಯದಲ್ಲೇ ಕಗ್ಗತ್ತಲು ಕವಿಯುತ್ತದೆ ಎನ್ನುವ ಭೀತಿ ಇದೆ. ಈ ಪ್ರಶ್ನೆ ಉದ್ಭವವಾದರೆ ಸರ್ಕಾರದ ನಿರ್ಧಾರ ಏನು?